ಬಳ್ಳಾರಿ ಮುನಿಸಿಪಾಲಿಟಿ ರುಡವಾಲಿ ಕಸಬಳಿಯುವವರು, ಇತರ ಸಣ್ಣಪುಟ್ಟ ವರ್ಕರನ್ನಳಿಗೊಂಡ ಮುನಿಸಿಪಲ್ ಕೆಲಸಗಾರರ ಸಂಘವು ೨೫-1-೫4 ನೆಯ ಸಾಯಂಕಾಲ ಸಮಾವೇಶವಾಗಿತ್ತು-ಭಾಷಣ ಮತ್ತು ಚರ್ಚೆಗಳಲ್ಲಿ- ಈಗ ಬಂದಿರುವ ಹೆಲ್ತ್ ಸ್ಕೀಮರವರೂ-ಕೆಲಸಗಾರರನ್ನಾಗಲಿ-ಅವರ ಸಂಘವನ್ನಾಗಲಿ – ಸಂಘದ ಪ್ರತಿನಿಧಿಗಳನ್ನಾಗಲಿ ನೆಂಬದೆ – ತಮ್ಮ ಸ್ಯಾನಿಟರಿ ಇನ್ಸ್‌ಪೆಕ್ಟರು ಮತ್ತು ಕೆಳ ನವರ ಮಾತುಗಳನ್ನು ನಂಬಿ ಕೈಯ್ಯಮುತ್ತು ಅನೀತಿ ವರ್ತನೆಗಳಿಗೆ ಯಥಾ ಸ್ಥಕಾರಣ ಅವಕಾಶಕೊಟ್ಟರುವರೆಂದು ಆಪಾದಿಸಿದರು. ಕೊನೆಯಲ್ಲಿ ಅರು ತೀರ್ಮಾನಗಳಾದವು. ಅವುಗಳ ಸಾರಾಂಶವು ಕೆಳಗಿದೆ.

1. ಸರ್ಕಾರದವರು ಉಚಿತವಾಗಿ ಕೊಟ್ಟ ನಿವೇಶನದ ಮೇಲೆ ಕಟ್ಟಿಸಿಕೊಂಡ ಮನೆಗಳಿಗೆ ಆದರಲ್ಲೂ ಮುನಿಸಿಪಾಲಟಿ ಕೆಳ ದರ್ಜೆ ನವಕರರಿಗೆ ಮನೆ ಗಂಡಾಯ ವಿಧಿಸಿರುವುದು ನ್ಯಾಯವಲ್ಲ ಆದನ್ನು ವಾಪಸುಮಾಡಿ ಈಗ ಹಿಡಿದಿರುವುದನ್ನು ಹಿಂದಕ್ಕೆ ಕೊಡಬೇಕು

2. ಕಳೆದ ವರ್ಷ ಸಂಪು ಹೂಡಿದಾಗ (Strike) ತಲಾ 4/- ಪ್ರಕಾರ ಹೆಚ್ಚಿಗೆ ಕೊಟ್ಟಂತಾಗಲಿ ವಾಗ್ದಾನದಂತೆ ಯೂನಿಫಾರಂ ಅಲೋಯನ್ಸ್, ಸೋಪ್ ಮತ್ತಿತರ ಪರಿಕರಗಳನ್ನು ಕೊಟ್ಟಿಲ್ಲ. ಕೊಡುವ ಸೋಪ್-ಕೆಲಸಗಾರರಿಗೆ ಸೇರುವ ರೀತಿಯೇ ಎಲ್ಲೋ ಇದ್ಯರ್ಥವಾಗುತ್ತದೆ. ಇದನ್ನು ಸರಿಪಡಿಸಬೇಕು.

3. ಪ್ರತಿ ತಿಂಗಳು ಸಂಬಳ ಕೊಡುವ ವೇಳೆಗೆ ಒಬ್ಬರಿಂದಲೇ ಇತರರ ಹೆಬ್ಬೆಟ್ಟಿನ ಗುರುತುಗಳು ತೆಗೆದುಕೊಳ್ಳುವ ಪರಿಪಾಠವಿರುವ ಕಾರಣ ರಿಜಿಸ್ಟರ್‌ನಲ್ಲಿರುವ ಸಂಖ್ಯೆಗೂ ನಿಜವಾಗಿ ಕೆಲಸದಲ್ಲಿ ತೊಡಗಿರುವವರ ಸಂಖ್ಯೆಗೂ ವ್ಯತ್ಯಾಸವಿರಬೇಕೆಂದು : ಈ ಸಂಘಕ್ಕೆ ಅನುಮಾನವುಂಟು. ಬಳಿಕ ಕಂಬಂದಿಂದ ಬಂದಿರುವ ಈ ದುಸ್ಥಿತಿಯು ನಿರ್ಮೂಲನೆಯಾಗಬೇಕು

4 ಇತ್ತೀಚೆಗೆ ಸರ್ಕಾರದ ಡೆಮೋಗ್ರಾಫಿಕ ಸರ್ವೆಯನ್ವಯ-ನಿಬಂಧನೆಗಳನ್ನುಲ್ಲಂಘಿಸಿ ಕೆಲಸಗಾರರು ದಿನಕ್ಕೆ 10-12 ಗಂಟೆ ಕೆಲಸ ಮಾಡಬೇಕಾದಿದೆ. ನಗರ ಬೆಳ್ಳಿತೆಯ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಲು ನಾವು ತಯಾರಿದ್ದೇವೆ. ಆದರೆ ಹೆಚ್ಚು ಕೆಲಸ ಮಾಡಿಸಿ ನಮ್ಮ ಆರೋಗ್ಯ ಹಾಳುಮಾಡಬಾರದು.

5. ಕೆಲಸಗಾರರು ಅಸ್ಪೃಶ್ಯರಿಂದ ಮನೆಸ್ಯವರ್ಗಕ್ಕೆ ಸೇರಿ ಮನುಷ್ಯರೋಗ್ಯ ವರ್ತನೆಗೆ ಅರ್ಹರಿರುವ ಕಾರಣ ಸ್ಯಾನಿಟರಿ ಇನ್ಸ್‌ಪೆಕ್ಟರರೂ, ಮೇಸ್ತ್ರಿಗಳೂ ಯಾವಾಗಲು ಗೌರವ-ಅಸಭ್ಯ ಶಬ್ದಗಳಲ್ಲಿ ಬೈಯುವುದು ನಿಲ್ಲಿಸಿ ಮೇಲೆ ಸಿಲ್ಲಬೇಕು.

6. ಕೆಲಸಗಾರರ ಸಂಖ್ಯೆಯನ್ನು ಸುಧಾರಿಸಲು ಅವರ ಆರೋಗ್ಯಗಳ ತೆಥ್ಯಾಂಶಗಳ ಬಗ್ಗೆ ಒಳ್ಳೆ ಹೊಸ್ಪಟ್ಟೆ (ಡಿವಿಜನಿಯಾಡಲು ಈ ಕೆಳಗೆ ಕಾಣಿಸಿದ ಮಹನೀಯರ ಸಮಿತಿಯನ್ನು ರಚಿಸಬೇಕೆಂದು ಈ ಸಂಘವು ಸೂಚಿಸಿಕೊಮುತ್ತದೆ

1. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಥವಾ ಅವರ ಪ್ರತಿನಿಧಿ.

2. ಜಿಲ್ಲಾ ಫೋಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಅಥವಾ ಅವರ ಪ್ರತಿನಿಧಿ.

3 ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿ.

4. ಒಬ್ಬ ಮುನಿಸಿಪಲ್ ಕೌನ್ಸಿಲರ್.

5. ಕೆಲಸಗಾರ ಪ್ರತಿನಿಧಿ

ಲಲಿತಕಲಾ ಸಂಘದ ಕಾರ್ಯಕ್ರಮ.

ಪುರಂದರ ದಾಸರು ಮತ್ತು ತ್ಯಾಗರಾಜರ ಪುಣ್ಯ ದಿನೋತ್ಸವಗಳು ೨-2-54 ನೆಯ ಬುಧವಾರದಿಂದ ಪ್ರಾರಂಭವಾದ ವು. ಶ್ರೀ ಗೋಪಾಲಕೃಷ್ಣಾಚಾರ್ ಮುನಿಸಿಪಲ್ ಕಮೀಶನರ್ ಅಧ್ಯಕ್ಷತೆಯಲ್ಲಿ ಶ್ರೀ ಗೂಳಿ ಕೃಷ್ಣಮೂರ್ತಿ ಆಚಾರ್ಯರು, ಪುರಂದರದಾಸರ ಚರಿತೆಯನ್ನು ಹೇಳಿದರು ದಾಸರ ಪದಗಳ ಸ್ಪರ್ಧೆ ಏರ್ಪಾಯಿತು. ೩ ನೆಯ ದಿನ ಶ್ರೀ ಜಿ. ತಿಮ್ಮಪ್ಪನವರಧ್ಯಕ್ಷತೆಯಲ್ಲಿ, ಶ್ರೀ ಎಸ್. ಸಂಜೀವರಾಯರು ತ್ಯಾಗರಾಜರ ಜೀವನ ಚರಿತೆಯನ್ನು ಹೇಳಿದರು. ಬಾಲ-ಬಾಲಿಕೆಯರು ತ್ಯಾಗರಾಜ ಕೀರ್ತನೆಗಳಲ್ಲಿ ಪ್ರಥಮವಾಗಿ ಭಾಗವಹಿಸಿದರು. ಶುಕ್ರವಾರ, ಶನಿವಾರ, ಭಾನುವಾರ ಈ ಸಂಘದ ಆಶ್ರಯದಲ್ಲಿ ಅಗಡಿ ಛತ್ರದಲ್ಲಿ ಸಂಗೀತ ಕಾರ್ಯಕ್ರಮವೇರ್ಪಡಿಸಿತ್ತು. ಸಂಘದ ಮಾನ್ಯ ಸದಸ್ಯರೂ, ಸಂಗೀತ ವಿದ್ವಾನರೂ ಆದ ಶ್ರೀ ಬಿ. ವೆಂಕಟಪ್ಪ ಶ್ರೀ ನರಸಿಂಹಮೂರ್ತಿ ಮತ್ತು ಅನೇಕ ಸ್ಥಳೀಯ ವಿದ್ವಾಂಸರು, ಶ್ರೀ ವೆಂಕಣ್ಣಾಚಾರ್ಯ, ಶ್ರೀ ಕೆ. ಶಂತಾರಾಮಶಾಸ್ತ್ರಿ, ಹರದಾಸ್, ಜಯರಾಂ, ನರಿಯಣ್ಣ ಮತ್ತು ವಾಸುದೇವ ಜಾಲಿ (ಮೃದಂಗ) ಮತ್ತು ಅವರ ಶಿಷ್ಯವೃಂದದ ಸಹಕಾರದಿಂದ ಎಲ್ಲ ಕಾರ್ಯಕ್ರಮವೂ ಸಾಂಗವಾಗಿ ನೆರವೇರಿತು

Matinee at "PRABHAT"

6 th Jan. 3-30 P. M.
7 th ,, 3-30 ,,
8 st ,, 9-30 A. M.
3-30 P. M.

3 Days
4 SHOWS.

This WOman is Dangerous ?

Columbia Presents

Feat: Elganor Parker, Anthony Dexter, Patrica Madena

ಐದನೆಯ ವಾರ

ಸಾವಿರಾರು ಜನರೋಡಿ ಆಕರ್ಷಿಸಿದ್ದಾರೆ.
೨ ಲಕ್ಷ ವೆಚ್ಚದಿಂದ ತಯಾರಿಸಿದ ಚಿತ್ರ.
ಈ ಸುಸಂದರ್ಭ ಕಳೆದುಕೊಳ್ಳಬೇಡಿ.

—: ಬಳ್ಳಾರಿ ಪ್ರಭಾತದಲ್ಲಿ :—

ವಿಜಯ ಪ್ರೊಡಕ್ಷನ್ಸ್ ರವರ] **ಚಂದ್ರ ಹಾರ** [ತೆಲುಗು ಚಿತ್ರ

ತಾರಾಗಣ:-ಯುವ. ನಿ. ರಂಗನಾಥ್, ಯುವ. ಟಿ. ರಾಮರಾವ್, ಕೆ.ಲಂಗಿ, ಶ್ರೀರಂಜನಿ, ಸಾವಿತ್ರಿ ನಟಿಸಿದರು

★ ವೀರ ಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.
ಪ್ರಕಾಶಕರು :- ಶ್ರೀ ಬಿ. ನಾ. ವೈಜವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಶಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರದೇಶದವರಿಗೆ ೫ ರೂಪಾಯಿ.
,, ಸ್ವದೇಶಿಯರಿಗೆ ೪-೪-೦ ರೂಪಾಯಿ.
ಬಿಡಿ ಸಂಚಿಕೆ ೬ ಆಣೆ

ಕರ್ನಾಟಕ ರಾಜ್ಯ ನಿರ್ಮಾಣ ಸಾಧನೆ

ಸಚಿವಾಗ್ರಹ ಬೇಡವೆಂದು ಶ್ರೀ ಕೆ. ಹನುಮಂತಯ್ಯ

"ಕರ್ನಾಟಕ ರಾಜ್ಯ ನಿರ್ಮಾಣವನ್ನು ಸಾಧಿಸಲು ಬಲವಾದ ಸಂಘಗ್ರಹ ಉಗ್ರ ಭಾಷಣಗಳು ಮೊದಲಾದ ಚಳುವಳಿ ಬೇಕಾಗಿಲ್ಲ. ಕನ್ನಡಿಗರು ಈ ಮಾರ್ಗಗಳನ್ನೂ ಅನುಸರಿಸುತ್ತಿದ್ದು ಒಳತ್ತು. ಕನ್ನಡಿಗರು ತಮ್ಮ ಎಲ್ಲ ಬೇಡಿಕೆಗಳನ್ನೂ ವಿಶಾಲ್ಯಾಂಧ್ರದಿಂದ ರಾಜ್ಯಗಳ ಪುನರ್ವಿಂಗಡಣೆ ಕಮಿಷನ್ನಿನ ಮುಂದಿಡಬೇಕು. ಭಾರತದ ರಾಷ್ಟ್ರಪತ್ಯಕ್ಕೆ ಧಕ್ಕೆ ಬರುವಂತೆ ಯಾರೂ ವರ್ತಿಸಕೂಡದು." ಎಂದು ಮೈಸೂರು ಸರ್ಕಾರದ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇತ್ತೆ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣ ಮಾಡುತ್ತಾ ನುಡಿದರು.

ಉ. ಪ್ರದೇಶ ಸರ್ಕಾರ ಗೋಧಿ ಮಾರಲಿದೆ

ಉತ್ತರ ಪ್ರದೇಶದ ಸರ್ಕಾರದವರು ಮಾಡಿರುವ ೫೦ ಸಾವಿರ ಟನ್ ಗೋಧಿಯಲ್ಲಿ ೩೦ ಸಾವಿರ ಟನ್ನಷ್ಟು ಗೋಧಿಯನ್ನು ಕೊಳ್ಳಲು ಒಪ್ಪಿಕೊಂಡಿದ್ದಾರೆ. ಈ ಗೋಧಿ ಉತ್ಪನ್ನಗಳನ್ನು ಧಾರವಾಡದಲ್ಲಿ ಎಲ್ಲಿಗೆ ಬೇಕಾದರೂ ರವ್ಯ ಮಾಡಲು ಸರ್ಕಾರವು ನಿರ್ಣಯಗಳವರಿಗೆ ಅನುಮತಿ ಕೊಡಲಾಗಿದೆ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
೬ತಿಂಗಳಿಗೆ ೩—೪—೦	Six months 3—8—0
ಆರು ತಿಂಗಳ ಕನಿಷ್ಠ.	Subscription will not be
ಚಂದಾ ಸ್ವೀಕರಿಸುವುದಿಲ್ಲ.	accepted for less than 6 months

To 8-2-34

Sri.

Edited Printed & Published by T.B. Keshwa Rao, at Nava Bharat Printing Press, Bellary.

ನವಚೈತನ್ಯ

ಸೋಮವಾರ
ಫಿಬ್ರವರಿ
೨೨, ೧೯೫೪

ವರ್ಷ 17 | ಸಂಚಿಕೆ 36

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ಸಾಂಪತ್ರಿಕೆ.
ಉತ್ಪತ್ಸಹ ! ಜಾಗೃತ !! ಶಾಪ್ಯವರಾನ್ನಿ ಬೋಧಕ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇತವರಾವು

ಕಾಶ್ಮೀರ ಸಮಸ್ಯೆ ಬಗ್ಗೆ ಡಾ. ಲೋಹಿಯವರ ಸಲಹೆ

ಪ್ರಜಾ ಸಮಾಜವಾದೀ ಪಕ್ಷದ ಪ್ರಧಾನ ಕಾರ್ಯನರ್ಶಿಗಳಾದ ಡಾ। ರಾಮ ಮನೋಹರ ಲೋಹಿಯಾರವರು ಮುಂಬಯಿಯಲ್ಲಿ ಪತ್ರಿಕಾ ಸಮ್ಮೇಲನದಲ್ಲಿ ಮಾತನಾಡುತ್ತಾ ಕಾಶ್ಮೀರ ಸಮಸ್ಯೆಯು ಯಶ್ಕ ರಾಷ್ಟ್ರಸಂಘದ ಮಧ್ಯಸ್ಥಿಕೆಯಿಂದ ಪರಿಹಾರವಾಗುವದೆಂಬುದು ಹುಚ್ಚುತನ ಭಾರತ ಪಾಕಿಸ್ತಾನಗಳು ತಾವು ತಾವೇ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಈ ವರೆಗೆ ಅನೇಕ ಸಲ ನಡೆದ ಮಾತುಕತೆಗಳು ಯಾವ ಫಲಿತಾಂಶವನ್ನೂ ಕೊಟ್ಟಿರುವದಿಲ್ಲ. ಮೂಲ ಭೂತ ಸಮಸ್ಯೆಯು ಇತ್ಯರ್ಥವಾಗಬೇಕಾದರೆ ಈ ಕೆಳಗಿನ ನನ್ನ ಹಲವು ಸಲಹೆಗಳು ಹೆಚ್ಚಿನ ಸಹಾಯಕವಾದಾವೆಂದು ನನಗನ್ನಿಸುತ್ತದೆ (1) ಕಾಶ್ಮೀರವೀಡೀ ಅಥವಾ ಅದರ ದೊಂದು ಭಾಗ ಭಾರತಕ್ಕೆ ಸೇರಬೇಕು. (2) ಕಾಶ್ಮೀರದ ಇಡೀ ಪ್ರದೇಶ ಯಾ ಅದರದೊಂದು ಭಾಗ ಪಾಕಿಸ್ತಾನಕ್ಕೆ ಸೇರುವದು. (3) ಕಾಶ್ಮೀರದ ಮೇಲೆ ಎರಡೂ ಸರಕಾರಗಳ ಸಂಯುಕ್ತ ಹಿಡಿತವನ್ನು ಸ್ಥಾಪಿಸುವದು.

ಇರಾನಿಗೆ ಬ್ರಿಟಿಷ್ ರೈಲ್ವೆ ಎಂಜಿನ್‌ಗಳು

ಇರಾನಿಗೆ ೨೪ ರೈಲ್ವೆ ಎಂಜಿನ್ನುಗಳನ್ನು ಮಾರಲು ಬ್ರಿಟನ್ ಈ ದಿನ ಒಪ್ಪಂದವೊಂದಕ್ಕೆ ಸಹಿ ಹಾಕಿತು. ಒಪ್ಪಂದಕ್ಕೆ ಈದಿನ ಟೆಹರಾನಿನಲ್ಲಿ ಇರಾನಿನ ವಿದೇಶಾಂಗ ಮಂತ್ರಿ ಮಿ। ಅಬ್ದುಲ್ಲಾ ಎಂತೆಷಾಂತವರೂ ಬಟ್ಟಿನ ರಾಯಭಾರ ಪ್ರತಿನಿಧಿಯಾದ ಮಿ।। ಡೇಜ್ ರೈಟ್‌ರವರು ಸಹಿ ಹಾಕಿದರು.

ಮುನಿಸಿಪಲ್ ಕೆಲಸಗಾರರ ಬೇಡಿಕೆಗಳು

ಮುನಿಸಿಪಲ್ ಹೆಲ್ತ್ ಆಫೀಸರ್ ಶ್ರೀ. ಸಂಪತ್ತಯ್ಯಂಗಾರರ ಸಮಾಧಾನ

ಮುನಿಸಿಪಲ್ ಕೆಲಸಗಾರರು ಕಳೆದ ೩ ದಿನಗಳು 31 ತಾರೀಖು ಸಮುದ್ದೇಶವಾಗಿ ಮಾಡಿದ ಅಪಾದನೆಗಳು ತೀರ್ಮಾನಿಸಿದ ನಿರ್ಣಯಗಳ ಸಂಬಂಧವಾಗಿ ತಕ್ಕ ಸಮಾಧಾನ ಮತ್ತು ಸ್ಪಷ್ಟೀಕರಣೆಯನ್ನು ಕೊಡಲು 12-2-54 ರಲ್ಲಿ ಒಂದು ಸಭೆಯನ್ನು ಕರೆದಿದ್ದರು. ಡಿಸ್ಟ್ರಿಕ್ಟ್ ಫೇಂಬರ್ ಆಫ್ ಕಾಮರ್ಸ್ ಕಾರ್ಯದರ್ಶಿ ಶ್ರೀ ಬಿ ವಿ ಶೇಷಗಿರಿ ರಾವ್, ಜಿಲ್ಲಾ ಕಾರ್ಮಿಕ ಸಂಘದ ಕಾರ್ಯದರ್ಶಿ ಶ್ರೀ ಟಿ. ಎ. ಕೇಶವಯ್ಯಂಗಾರ್, ಮುನಿಸಿಪಲ್ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಂ. ಮಾದಪ್ಪ ಮತ್ತು ಮುನಿಸಿಪಾಲಿಟಿಯ ಕಾರ್ಮಿಕ ಪ್ರತಿನಿಧಿಗಳು ಸಭೆಗೆ ಬಂದಿದ್ದರು.

ಮುನಿಸಿಪಲ್ ಹೆಲ್ತ್ ಆಫೀಸರರು ಕಳೆದ ಆಕ್ಟೋಬರ್‌ನಿಂದ ಇಲ್ಲಿಯವರೆಗಿನ ಕಾರ್ಯಭಾರವನ್ನು ವಿವರಿಸಿ ನಗರ ಸ್ವಚ್ಛತೆಯ ಕಾರ್ಯದಲ್ಲಿ ಎಲ್ಲರ ಸಹಕಾರವನ್ನು ಕೇಳಿದರು. ಸ್ವಚ್ಛತಾ ಕೆಲಸಗಾರರು ಸ್ವಾರ್ಜಿತ ದಿನವನ್ನು ಮುಗಿಸಿ, ವಾರ್ಷಿಕ್ಕಾಗಿ 2 ಗಜಿಯಂತೆ 6 ದಿನಗಳ ನಗರದ ಶುದ್ಧಿಯ ಬಾಗದಲ್ಲಿ ಸ್ವಚ್ಛತೆಯ ಕೆಲಸದಲ್ಲಿ ತೊಡಗುವರೆಂದು ಹೇಳಿದರು. ಕೆಲಸಗಾರರು 6, 7 ಗಂಟೆ ಕೆಲಸ ಮಾಡುವರಂಗಲ್ಲಿ, ನಿಯಮಾನುಸಾರವಾಗಿ 8 ಗಂಟೆ ಕೆಲಸ ಮಾಡುವಂತೆ ಮೇಲಾಧಿಕಾರಿಗಳಿಗೆ ಸೂಚನೆ ಕೊಡುವುದಾಗಿ ಹೇಳಿದರು. ಅನುಬಾಧ್ಯ ಕೆಲಸಕಾರ್ಯಗಳಲ್ಲಿ ಪಡಿಲತ್ತೆ, ಔದಾಸೀನ್ಯವು ಸಹ್ಯವಲ್ಲವೆಂದೂ ಕೆಲಸಗಾರರ, ತಮ್ಮ ಕರ್ತವ್ಯ ನಿರ್ವಾಹಕ್ಕೆ ಮೇಲಾಧಿಕಾರಿಗಳ ಪ್ರೀತ್ಯಾದರಗಳಿಗೆ ಪಾತ್ರರಾಗುವುದವಶ್ಯವೆಂದೂ, ಕೆಲಸಗಾರ ಸಂಖ್ಯೆಯನ್ನು ರಿಜಿಸ್ಟರ್ ಮಾಡಿಸಿ ನ್ಯಾಯವಾದ ಬೇಡಿಕೆಗಳ ಬಗ್ಗೆ ಶಾಂತಯುತ ಅಂದೋಲನ ನಡಾವಳಿಯನ್ನು ಮಾಡಬಹುದೆಂದೂ ಹೇಳಿದರು. ನಗರಪಿತರು ಕೆಲಸಗಾರರೊಡನೆ ಅದರಲ್ಲೂ ಹೆಲ್ತ್ ಕೆಲಸಗಾರರೊಡನೆ ಸಭ್ಯವರ್ತನೆಯಿಂದ ನಡೆಯುತ್ತ ಕೆಟ್ಟ ಬೈಗಳನ್ನು ಪಯೋಗಿಸದಿರುವ ಅವಶ್ಯಕತೆಯನ್ನು ಒಪ್ಪಿದರು.

2/- ರೂ ಮೂಸಿಕ ಸಂಬಳದಲ್ಲಿ ಹೆಚ್ಚಳ. 2/- ರೂ ಅಡಿಷನಲ್‌ಗಾಗಿ ಒಟ್ಟು 4/- ರೂ ಮೂಸಿಕ ಹೆಚ್ಚಿರುವುದನ್ನು ಸೂಚಿಸುತ್ತ, ಈ ಸಂಬಂಧದ ಮುನಿಸಿಪಲ್ ತೀರ್ಮಾನವನ್ನು ಸರ್ಕಾರದವರು ಒಪ್ಪಿಲ್ಲವೆಂದರು.

ಕಳೆದವರ್ಷ ಜುಲೈ ಮತ್ತು ಆಕ್ಟೋಬರಗಳಲ್ಲಿ ಎರಡು ಸಲ ಮಾತ್ರ ಸೋಪು ಕೊಡಲಾಗಿದೆ. ಇದಕ್ಕೆ ಎಷ್ಟು ಹಣ ಮಂಜೂರಾಗಿತ್ತೆಂಬುದು ತನಗೆ ಗೊತ್ತಿಲ್ಲವೆಂದರು. ಸ್ವತಃ ತಿಂಗಳೂ ಸಂಬಳ ಕೊಡಬೇಕಾದ ಕಾಲಕ್ಕೆ ಸೋಪು ಕೊಡುವಂಬುದು ಎಲ್ಲರಿಗೂ ಸಮಾನವಾಗಿ ನಿಶ್ಚಯಿಸಿದ ಕೆಲಸ ಕಾರ್ಯದರ್ಶಿಗಳು ಸ್ವೀಕರಿಸಿದರು ಒಪ್ಪಿಕೊಂಡು ಇನ್ನು ಮೇಲೆ ಅಂತಹ ಪದ್ಧತಿಯನ್ನು ಜರುಗಿಸುವುದಿಲ್ಲವೆಂದರು.

ಒಬ್ಬರಿಂದ ಹೆಚ್ಚು ಹೆಬ್ಬಟ್ಟನ್ನು ತಗುಲು ಗುರುತು ಮಾಡಿಕೊಳ್ಳುವುದು ಮತ್ತು ಕೆಲಸಕ್ಕೆ ಹಾಜರಿಪುಸ್ತಕ ಕೊಡುವ ಅವಶ್ಯಕತೆಯಿಲ್ಲವೆಂದರು. ರಜಾದ ದಿನಗಳಲ್ಲಿ ಕೆಲಸಮಾಡಿದ್ದಕ್ಕೆ ಪ್ರತಿ ತಿಂಗಳು ಸಂಬಳ ಕೊಡುವ ಕಾಲಕ್ಕೆ ತಪ್ಪದೆ ಹಾಜರಿರಬೇಕೆಂದೂ, ಅನಾವಶ್ಯಕ ಅಕಸ್ಮಿಕ ಭೇಟಿಕೊಟ್ಟು ಕೆಲಸಗಾರರ ಸಂಪತ್ತಿನ ಬಗ್ಗೆ ತನಿಖೆ ಮಾಡಬೇಕೆಂದೂ, ಸ್ವತಃ ಧಿಗಾರಿಗಳು ಸೂಚಿಸಿದುದನ್ನು ಒಪ್ಪಿಕೊಂಡರು. ಬುಟ್ಟಿ ಪಾಕೆಟ್ ಮತ್ತು ಇತರ ಪರಿಕರಗಳನ್ನೊದಗಿಸುವ ಕ್ರಮವು ಸರಿಯಾಗಿಲ್ಲವೆಂದೂ, ಅದರಲ್ಲಿ ಸಾಕಷ್ಟು ತನಿಖೆಯೇ ಆಲ್ಲದೆ ನಿರ್ದಿಷ್ಟ ಕಾಲಕ್ಕೆ ಒದಗಿಸುವ ಕ್ರಮವು ಸಾಧ್ಯವಾಗಬೇಕೆಂದು ಸೂಚಿತವಾದುದನ್ನು ಹೆಲ್ತ್ ಆಫೀಸರರು ಒಪ್ಪಿದರು

ಮೆಟ್ರನ್‌ಗಳ ರಜಾ ಮತ್ತಿತರ ರಜಾಗಳ ಬದಲಿಯಲ್ಲಿರುವವರು ಟೆಂಪರರಿಯೆಂದೂ, ಒಂದು ವರ್ಷಕ್ಕಿಂತ ಹೆಚ್ಚು ಸರ್ವೀಸು ಮಾಡಿದವರಿಗೆ 'ಪರ್ಮಿನೆಂಟ್' ಎಂದು ಹೆಲ್ತ್ ಆಫೀಸರರು ಸೂಚ್ಯ ಹೇಳಿದರು ಮುನಿಸಾಲಿಟಿಯ ಸ್ಯಾಂಕ್ಷನ್ಡ್ ಸ್ಟ್ರೆಂಗ್‌ನಲ್ಲಿ ಅನೇಕರು ಬೇರೆ ವರ್ಗ ಸರ್ವೀಸ್ ನಲ್ಲಿರುವಂತೆ ಕಾಣಿಸಿಕೊಂಡಿರುವರೆಂದೂ ಅವರು ರಜಾ ಮತ್ತು ಇತರ ಸೌಕರ್ಯಗಳಿಂದ ವಂಚಿತರಾಗಿರುವರೆಂಬುದನ್ನು ಹೆಲ್ತ್ ಆಫೀಸರರ ಗಮನಕ್ಕೆ ತರಲಾಯಿತು. ಅದನ್ನು ಸರಿಪಡಿಸಲಾಗುವುದೆಂದರು. ಮೆಗ್ಗಾನ್ ಆಸ್ಪತ್ರೆಯ ವಿಷಯ ತನಗೆ ಸಂಬಂಧಿಸುವುದಲ್ಲವೆಂದರು. ನಗರ ವಿಸ್ತಾರ ದೃಷ್ಟಿಯಿಂದಾಗಿ ಸಂಖ್ಯೆಯನ್ನು ಹೆಚ್ಚಿಸಲು ಶಿಫಾರ್ಸು ಮಾಡಿರುವುದಾಗಿ ಹೇಳಿದರು. ಸಭೆಗೆ ಬಂದು ಸಹಕರಿಸಿದ್ದಕ್ಕೆ ಎಲ್ಲರನ್ನೂ ವಂದಿಸಿದರು.

ಸಮಾಜದ ವಿಜ್ಞಾನದ ವ್ಯಾಸಂಗ ಅಗತ್ಯ

ರಾಧಾಕೃಷ್ಣರ ಕರೆ

ಸಮಾಜ ವಿಜ್ಞಾನ ಶಾಸ್ತ್ರಗಳ ವ್ಯಾಸಂಗಕ್ಕೆ ಆಗ್ನೇಯ ಏಷ್ಯಾ ರಾಷ್ಟ್ರಗಳು ಹೆಚ್ಚಿನ ಗಮನ ಕೊಡಬೇಕಾಗಿ ಭಾರತದ ಉಪರಾಷ್ಟ್ರಪತಿಯೂ, ಪ್ರಪಂಚ ಸಂಸ್ಥೆಯ ವೈಜ್ಞಾನಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರೂ ಆದ ಡಾ|| ಎಸ್. ರಾಧಾಕೃಷ್ಣನ್‌ರವರಿಂದು ದೆಹಲಿಯ ಆಗ್ನೇಯ ಏಷ್ಯಾ ಸಮಾಜ ವಿಜ್ಞಾನ ಶಿಕ್ಷಣ ರೌಂಡ್ ಟೇಬಲ್ ಸಮ್ಮೇಳನವನ್ನು ಆರಂಭಗೊಳಿಸುತ್ತಾ ಹೇಳಿದರು.

"ನಾವು ಪ್ರಬುದ್ಧವಾಗಿಯೂ, ಸ್ವತಂತ್ರವಾಗಿಯೂ ಬೆಳೆಯಲು ಮತ್ತು ಪ್ರೀತಿ ಮತ್ತು ಒಲೈಯತನದಲ್ಲಿ ನಾವು ಕಂಗೊಳಿಸಲು ಸಾಮಾಜಿಕ ವಿಜ್ಞಾನಗಳ ಶಿಕ್ಷಣವು ಸಹಾಯಕವಾಗುತ್ತದೆ. ನಾವು ಮಾನವತೆಯ ಸಾರ್ವತ್ರಿಕ ಪುನರುಜ್ಜೀವನಕ್ಕಾಗಿ ಕೆಲಸ ಮಾಡಬೇಕಾಗಿದೆ" ಎಂದೂ ಡಾ|| ರಾಧಾಕೃಷ್ಣನ್ ಹೇಳಿದರು.

ಪಾಕಿಸ್ತಾನ, ಬರ್ಮಾ, ಇಂಡೋನೇಷ್ಯಾ ಫಾಯ್ಲೆಂಡ್, ಮಲಯಾ, ಸಿಂಗಪುರ, ಸಿಲೋನ್ ಮತ್ತು ಭಾರತಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಐದು ದಿನಗಳ ಕಾಲ ಸಮ್ಮೇಳನ ನಡೆಯುವುದು.

ಪ್ರಪಂಚವು ರಕ್ಷಿಸಲ್ಪಡಬೇಕಾದರೆ, ಜಗತ್ತಿನ ಮಹಾ ರಾಷ್ಟ್ರಗಳವರು ನಾಗರಿಕತೆಯ ಮುನ್ನಡೆಯಲ್ಲಿ ಸ್ಪೇಜಯುತ ಸ್ಪರ್ಧೆಗಾರರಾಗಿಯೂ, ಶಾಂತಿಯ ಕಲೆಗಳಲ್ಲಿ ಅರ್ಹ ಪ್ರತಿಸ್ಪರ್ಧಿಗಳಾಗಿಯೂ ಒಬ್ಬರನ್ನೊಬ್ಬರು ಬೆಂಬಿಸಿ ನಡೆಯಬೇಕೆಂದೂ ಶ್ರೀ ರಾಧಾಕೃಷ್ಣನ್ ನುಡಿದರು.

ತಿರು-ಕೊಚ್ಚಿಯಲ್ಲಿ ಚುನಾವಣೆ ಪ್ರಚಾರ

ತಿರುಕೊಚ್ಚಿಯಲ್ಲಿ ನಡೆಯಲಿರುವ ಚುನಾವಣೆಯ ಪರವಾಗಿ ಎಲ್ಲ ಪಕ್ಷಗಳ ಧುರೀಣರು ಅಲ್ಲಿ ತಮ್ಮ ನರ್ಚಸ್ಸನ್ನು ಬೀರುತ್ತಲಿದ್ದಾರೆ. ಶ್ರೀ ಜವಾಹರಲಾಲರು ಕಾಂಗ್ರೆಸ್ಸಿನ ಪರವಾಗಿ ಪ್ರಚಾರ ಭಾಷಣ ಮಾಡಿ ಬಂದರೆ. ಕಾಂಗ್ರೆಸ್ಸಿನಂತಹ ದೊಡ್ಡ ಸಂಸ್ಥೆಗೆ ಬೆಂಬಲವೀಡಿ ವುದರಿಂದ ದೇಶದ ಕಲ್ಯಾಣ ಸಾಧಿಸಿದಂತಾಗುವದೆಂದು ಜನತೆಯನ್ನು ದ್ವೇಷಿಸಿ ಮಾತನಾಡಿದರು ಕಾಂಗ್ರೆಸ್ಸಿನ ಪ್ರಬಲ ವಿರೋಧಿ ಪಕ್ಷವಾದ ಕಮ್ಯೂನಿಸ್ಟ್ ಪಕ್ಷವೂ ಆಂತಿಮ ಹೋರಾಟವನ್ನು ನಡೆಸುತ್ತಿದೆ ಕಮ್ಯೂನಿಸ್ಟ್ ಧುರೀಣರಾದ ಶ್ರೀ ಎ. ಕೆ. ಗೋಪಾಲನ್ನರು ಕಾಂಗ್ರೆಸ್ಸಿನಂತಹ ಸಾಮ್ರಾಜ್ಯಶಾಹೀ ಸರಕಾರಕ್ಕೆ ಮತ ಕೊಡಬೇಡಿರೆಂದು ಘೋಷಿಸಿದ್ದಾರೆ. ಹೀಗೆ ಪಕ್ಷಗಳು ಮುಖಂಡರು ತಮ್ಮ ಶಕ್ತಿಯನ್ನು ತಿರುಕೊಚ್ಚಿಯಲ್ಲಿ ಕೇಂದ್ರೀಕರಿಸಿದ್ದರಿಂದ ಅಲ್ಲಿನ ಚುನಾವಣಾ ಫಲಿತಾಂಶವು ಕುತೂಹಲಜನಕವಾಗಿರುತ್ತದೆ. ಈಗಿನ ವಾತಾವರಣವನ್ನು ಲಕ್ಷಿಸುವಾಗ ಕಾಂಗ್ರೆಸ್ಸಿಗೇನೇ ಯಶಸ್ಸಾಪ್ತವಾಗಬಹುದೆಂದು ತೋರುತ್ತದೆ. ಆದರೂ ಬಹುಮತದಿಂದ ಸುರಕ್ಷಿತವಾದ ಮತ್ತು ಶಾಶ್ವತವಾದ ಸರಕಾರವನ್ನು ಸ್ಥಾಪಿಸುವದು ಕಾಂಗ್ರೆಸ್ಸಿಗೆ ಸಾಧ್ಯವಾಗುವದು ಕಷ್ಟಸಾಧ್ಯವಾಗಿದೆ. ಹೇಗಿದ್ದರೂ ಇದೊಂದು ಪ್ರೇಕ್ಷಣೀಯ ರಾಜಕೀಯ ನಾಟಕವೆ ಸರಿ!

ಭಾರತೀಯರಿಗೆ ಸ್ಥಾನಗಳ ನಿಗದಿ

ಇತ್ತೀಚೆಗೆ ಆದ ಭಾರತ-ಸಿಲೋನ್ ಒಪ್ಪಂದ ಪ್ರಕಾರ ಸಿಲೋನಿನ ಪ್ರತಿನಿಧಿಗಳ ಸಭೆಯಲ್ಲಿ ಭಾರತೀಯ ವಂಶಜರಿಗೆ ನಾಲ್ಕೈದು ಸ್ಥಾನಗಳನ್ನು ನಿಗದಿ ಮಾಡಲು ಸಿಲೋನಿನ ಡಿಲಿಮಿಟೇಷನ್ ಕಮೀಷನ್ ಸಲಹೆ ಮಾಡಿದೆ.

ಕುಂಭಮೇಳದ ದುರಂತ

50ಲಕ್ಷಕ್ಕೂ ಮಿಕ್ಕಿನ ಜನಕೂಡಿದ ಕುಂಭಮೇಳದಂತಹ ಮಹಾಜಾತ್ರೆಯಲ್ಲಿ 500ಜನಕ್ಕೂ ಮಿಕ್ಕಿ ಮಡಿದ 1000ಕ್ಕೂ ಮಿಕ್ಕಿ ಗಾಯಗೊಂಡ ವಿಷಾದಕರವಾದ ವಾರ್ತೆ ಬಂದಿರುತ್ತದೆ. ಕುಂಭಮೇಳದ ಇಷ್ಟದೊಡ್ಡ ಜನಸಮುದಾಯವನ್ನು ಹತೋಟಿಯಲ್ಲಿಟ್ಟುಕೊಳ್ಳುವದು ಸುಲಭ ಸಾಧ್ಯವಾದ ವಿಚಾರವಲ್ಲ ಭಾರತದ ಪ್ರಧಾನಿ ಶ್ರೀ ನೆಹ್ರೂರವರು ಸ್ವತಹ ಈ ಮಹಾಜಾತ್ರೆಯನ್ನು ಸಂದರ್ಶಿಸಿ ರಕ್ಷಣಾ ಖಾತೆಯವರ ವ್ಯವಸ್ಥೆಯನ್ನು ಪರಿಶೀಲಿಸಿರುವರು. ಇಂತಹ ದುರ್ಘಟನೆಯ ಪ್ರವೃತ್ತಿ ಪ್ರಕೋಪದಿಂಗಿರದೆ ಕೇವಲ ನೂಕಲು ನುಗ್ಗಾಟಗಳಿಂದ ಆಗಿದೆಂದು ತಿಳಿದುಬರುತ್ತದೆ. ಇದಕ್ಕಿಂತಲೂ ಯೋಗ್ಯ ವ್ಯವಸ್ಥೆಯ ಮುಂದಾಲೋಚನೆಯನ್ನು ಅಧಿಕಾರಿವರ್ಗದವರು ಕೈಕೊಂಡಿದ್ದರೆ ಈ ದುರಂತ ನಿಲ್ಲಬಹುದಾಗಿತ್ತೋ ಏನೋ! ಆದ ದುರ್ಘಟನೆಯಿಂದಲಾದರೂ ನಮ್ಮ ಕಾರ್ಯಕರ್ತರು ಜಾಗ್ರತರಾಗಬೇಕು. ಮುಂಬರುವ ಜಾತ್ರೆಯಲ್ಲಿ ಪೂರ್ವಭಾವಿಯಾಗಿ ಜೀವಹಾನಿಯಾಗದ ರೀತಿಯಲ್ಲಿ ರಕ್ಷಣಾಕಾರ್ಯವನ್ನು ಕೈಕೊಳ್ಳಬೇಕು. ರಾಷ್ಟ್ರಪತಿಗಳೂ ಕೇಂದ್ರದ ಮಂತ್ರಿಗಳೂ ಈ ಜಾತ್ರೆಯಲ್ಲಿ ಭಾಗವಹಿಸಿಯೂ ಗಂಗಾಜಲ ಸ್ನಾನಮಾಡಿಯೂ ಪುನೀತರಾಗಿದ್ದಾರೆ. ಅಲ್ಲಿನ ವಿದ್ಯಮಾನಗಳಿಂದ ಯಾವ ರೀತಿಯ ಮುಂಜಾಗ್ರತೆ ವಹಿಸಿಬಹುದೆನ್ನುವ ಬಗ್ಗೆ ಸರಿಯಾದ ಕಲ್ಪನೆ ಮಾಡಿಕೊಂಡಾರೆಂದು ನಾವೆ ಊಹಿಸಬಹುದಾಗಿದೆ.

ಭಾರತದ ಸಾಧನೆ ಕುರಿತು ರಾಷ್ಟ್ರಪತಿ

ಭಾರತವು ಕಳೆದ ವರ್ಷದಲ್ಲಿ ಅನೇಕ ಕಾರ್ಯಗಳನ್ನು ಸಾಧಿಸಿದೆ. ಆರ್ಥಿಕ ಪ್ರಗತಿ ನಡೆದಿದೆ. ಎವರೆಸ್ಟ್ ಸಿಖರದ ಆರೋಹಣ ಮತ್ತು ಕೋರಿಯಾದಲ್ಲಿ ಭಾರತೀಯ ಸೈನಿಕರ ಸಾಧನೆ ಇವುಗಳು ಗಮನಾರ್ಹ ಎಂಬುದಾಗಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪಾರ್ಲಿಮೆಂಟ್‌ನಲ್ಲಿ ನುಡಿದರು.

ಬಳ್ಳಾರಿ ಸಬಾರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 133 of 1950. E. P. 50 of 53.

ಅರ್ಜದಾರರು :-

ಗಟ್ಟು ವೆಂಕಯ್ಯಶೆಟ್ಟಿ, ತಂದೆ ವೀರಯ್ಯಶೆಟ್ಟಿ, ವಯಸ್ಸು 42 ವೈಶ್ಯ, ವ್ಯಾಪಾರ, ನಿವಾಸಸ್ಥಾನ ಅದವಾನಿ.

Vs

ತೀರ್ಪಿನ ಪ್ರಕಾರ ಶಾಲಗಾರರು:-

1) ಲಕ್ಷ್ಮಿವೆಂಕಟೇಶ್ವರ ಜಿನ್ನಿಂಗ್ ಫ್ಯಾಕ್ಟರಿ ಅದವಾನಿ.
2) ಲಕ್ಷ್ಮಿವೆಂಕಟೇಶ್ವರ ಜಿನ್ನಿಂಗ್ ಫ್ಯಾಕ್ಟರಿಯ ಮ್ಯಾನೇಜರ್ ಕಟ್ಟಾ ಅರಳಯ್ಯ, ತಂದೆ ತಿಪ್ಪಯ್ಯ, ವೈಶ್ಯ, ವಯಸ್ಸು 55.
3) ವೆಂಕಪ್ಪ ವಯಸ್ಸು 33 | ಇವರೆಲ್ಲ ಎರಡನೆಯ ಪ್ರತಿವಾದಿ
4) ತಿಪ್ಪಣ್ಣ ,, 30 | ಕಟ್ಟಾ ಅರಳಯ್ಯನ ಮಕ್ಕಳು.
5) ಹೇಮಣ್ಣ ,, 25 |
6) ರಾಮಣ್ಣ ,, 22 |

(ಇವರೆಲ್ಲಾ ವ್ಯಾಪಾರ ವೃತ್ತಿಯ ವೈಶ್ಯರಿದ್ದು ಅದವಾನಿಯಲ್ಲಿಯೂ, ಸಿರುಗುಪ್ಪ ತಾಲೂಕು ಬರಗಲದಿನ್ನೆಯಲ್ಲಿಯೂ, ವಾಸಿಸುತ್ತಿರುವರು.)

ಮೇಲ್ಕಾಣಿಸಿದ ಅರ್ಜದಾರನು ಈ ಕೋರ್ಟಿಗೆ ಅರ್ಜಿ ಇಟ್ಟಿದ್ದು, ಶೆಡ್ಯೂಲಿನಲ್ಲಿ ಕಾಣಿಸಿದ ಆಸ್ತಿಗಳನ್ನು ಮಾರಿ ತನ್ಮೂಲಕ ಡಿಕ್ರಿ ತಾಲದ ಹಣವನ್ನು ಪಡೆಯಲು ತನ್ನನ್ನು ಡಿಕ್ರಿ ಹೋಲ್ಡರನಾಗಿ ಮಾನ್ಯ ಮಾಡಲು ಕೇಳಿರುತ್ತಾನೆ. ಇದರ ಸಂಬಂಧೀ ಅಮಲು ಅರ್ಜಿಯು ಕರ್ನೂಲು ಸಬ್ ಕೋರ್ಟಿನಿಂದ ಇಲ್ಲಿಗೆ ಪುನಃ ವರ್ಗಾಯಿಸಲ್ಪಟ್ಟಿದ್ದು ನಿಮ್ಮ ಹಾಜರಿಗಾಗಿ 1-3-'54 ಕ್ಕೆ ವಾಯ್ದೆ ಹಾಕಲಾಗಿದೆ. ಆ ದಿವಸ ನೀವು ಖುದ್ದಾಗಿಯಾಗಲಿ, ಅಥವಾ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದಲ್ಲಿ ತಿಮ್ಮನ್ನು ಎಕ್ಸ್‌ಪಾರ್ಟಿಯಾಗಿ ಮಾತಿ ಅಮಲು ಚಲಾವಣೆಯು ನಡೆಯುವುದೆಂದು ಈ ಮೂಲಕ ತಿಳಿಸಲಾಗಿದೆ.

ಡಿ. ಯಸ್ ಹನುಮಂತರಾವ್
ಯಸ್. ಗುರುರಾಜರಾವ್
ಅರ್ಜದಾರನಲಿಮ್ಸ್‌ಕೇಟ್ಸ್.

— ಡೆಪ್ಯುಟಿ ಕಮಿಶನರು ಗಮನ ಕೊಡಲಿ —

— ಹರಿಜನರ ಕುಡಿಯುವ ನೀರಿನ ಭವನಕ್ಕೆ —

ಹೊಸಪೇಟೆ ತಾಲೂಕು ಗುಂಡ್ಲವದ್ದಿ ಗೇರಿ ನಲ್ಲಾಪುರ ಈ ಗ್ರಾಮಗಳಲ್ಲಿ ಹರಿಜನರಿಗೆ ಕುಡಿಯುವ ನೀರಿನ ಭಾವಿಗಳಿಲ್ಲದೆ ಊರಿನ ಭಾವಿಗಳ ಬಳಿ ಹಿಂದೂಗಳ ಕರುಣೆಗೆ ಪಾತ್ರರಾಗಬೇಕಾದ್ದಿದೆ ಗುಂಡ್ಲವದ್ದಿಗೇರಿಯವರು 1951 ರಿಂದ ಆರ್ಜಿ ಇಡುತ್ತಿರುವರು — ಹರಿಜನ ವೆಲ್ಫೇರ್ ಡಿಪಾರ್ಟುಮೆಂಟಿನವರು-ಈ ಭವನಕ್ಕೆ ನೋಡಿಹೋಗಿರುತ್ತಾರೆ. ಆದರೆ ಇದುವರೆವಿಗೂ ಯಾವ ಚರ್ಯೆ ತೆಗೆದುಕೊಂಡಿಲ್ಲ— ಮನುಷ್ಯರಿಗೇ ಇತ್ಯ ಕಷ್ಟ ವಿರಬೇಕಾದ್ರೆ– ಹರಿಜನರು ದನಗಳನ್ನು ಕಟ್ಟುವದಕ್ಕೇ ಅನಕಾಶವಿಲ್ಲದಂತೆ. ಭಾವಿಗಳಿಗಾಗಿ ಮುಂಜೂರಾವ ಹಣವು ಸೊಕಷ್ಟಿದೆ ಏತಕ್ಕೆ ಖರ್ಚುಮಾಡಬಾರದು ಈ ವಿಷಯದಲ್ಲಿ ಡೆ. ಕಮೀಶನರು ಗಮನ ಕೊಡಬೇಕಾಗಿ ವಿನಂತಿ!

ಡಿ. ನರಸಿಂಹದಾಸ್

AT PRABHAT

From 17-2-53

HOUSE OF WAX

(3—Dimension — Warner color)

Prease Note:— No Enhanced Rates Daily 2 Shows

Polarized Glassess will be supplied to the patrons for HIRE of 0-3-0 Each from Chair class to Upper class, for Bench and Floor class 0-2-0 will be charged.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕಿಯರು :— ಶ್ರೀಮತಿ ಸರೋಜಿನಿ ಮಂಹಿಷಿ, ಎಂ. ಎ

ಪ್ರಕಾಶಕರು :— ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ನಿರ್ಮಿಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

" ಸ್ಥಳೀಯರಿಗೆ 4-8-0 ರೂಪಾಯಿ

ಬಿಡಿ ಸಂಚಿಕೆ 6 ಆಣೆ

ಬಳ್ಳಾರಿ ಸೇರ್ಪಡೆಗೆ ವಿರೋಧದ ಬಗ್ಗೆ ಖಂಡನೆ

ಜಿಲ್ಲಾ ಕಾಂಗ್ರೆಸ್ ಸಮಿತಿ ನಿರ್ಣಯ

ಬಳ್ಳಾರಿ ತಾಲ್ಲೂಕು ಮತ್ತು ಬಳ್ಳಾರಿ ಟೌನು ಮೈಸೂರಿಗೆ ಸೇರಿರವದರ ವಿರುದ್ಧ ಬಳ್ಳಾರಿಯ ಕೆಲಮಂದಿ ಆಂಧ್ರರು ಜಳದಳ ನಡೆಸುತ್ತಿರುವುದನ್ನು ಖಂಡಿಸಿ ಇಂಥಾ ಬೇಜವಾಬ್ದಾರಿಯುತ ಚಳವಳಿ ನಿಲ್ಲಬೇಕೆಂದು ಅಭಿಪ್ರಾಯಪಡುವ ನಿರ್ಣಯವೊಂದು ಫೆ. 10ರಲ್ಲಿ ಇಲ್ಲಿ ನಡೆದ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿಯು ಅಂಗೀಕರಿಸಿತು.

ಸಮಿತಿಯು ಅಧ್ಯಕ್ಷಶ್ರೀ ಟಿ. ಸುಬ್ರಹ್ಮಣ್ಯಂಕರವರು ಅಧ್ಯಕ್ಷತೆ ವಹಿಸಿದ್ದರು

ತುಂಗಭದ್ರಾ ಸ್ಕಾಂಕ್ಟ್ ಪ್ರದೇಶದ ಅಭಿವೃದ್ಧಿ ಮತ್ತು ಈ ಆಣೆಕಟ್ಟಿನಿಂದ ನೆಲೆಯಿಲ್ಲವಾದ ಹಲ್ಲಿ ಜನರ ಪುನರ್ವಸತಿ ಕಾರ್ಯಗಳು ಈಗ ಹೆಚ್ಚು ಕಮ್ಮಿ ನಿಂತೇ ಹೋಗಿನೆಯೆ ದೂ. ಈ ಕಾರ್ಯಗಳು ಆದಷ್ಟು ಬೇಗ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದೂ, ಕೇಂದ್ರ ಮತ್ತು ಮೈಸೂರು ಸರ್ಕಾರಗಳನ್ನೂ ತುಂಗಭದ್ರಾ ಬೋರ್ಡನ್ನು ಕೋರುವ ನಿರ್ಣಯವೂ ಅಂಗೀಕೃತವಾಯಿತು.

ಫೆ 28ರೊಳಗೆ ಅದಸ್ಯ ಹೆಚ್ಚು ಸದಸ್ಯತ್ವವನ್ನು ಕಾಂಗ್ರೆಸ್ಸಿಗೆ ಸೇರ್ಪಡೆಸಿಕೊಡಿಸಲು ತೀರ್ಮಾನಿಸಲಾಯಿತು.

ಗಡಿನಿರ್ಧಾರಕ್ಕಾಗಿ ಉಪಸಮಿತಿ ನಿರ್ಮಾಣ

ಅನಂತಪುರ ಮತ್ತು ಕರ್ನೂಲ್ ಜಿಲ್ಲೆಗಳ ಪ್ರದೇಶದಲ್ಲಿ ಮೈಸೂರು ಮತ್ತು ಆಂಧ್ರಪ್ರಾಂತಗಳ ಗಡಿ ನಿರ್ಧಾರಕ್ಕೆಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಿ ಹೈಸಮರ್ ಕಮಿಷನ್ನಿನ ಮುಂದಿಡಲು ಅಧಿಕಾರಿಗಳು ಮತ್ತು ಖಾಸಗಿ ಪ್ರತಿನಿಧಿಗಳುಳ್ಳ ಉಪಸಮಿತಿಯೊಂದನ್ನು ನೇಮಿಸುವಂತೆ ಮೈಸೂರು ಸರ್ಕಾರವನ್ನು ಕೋರಲಾಯಿತು.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರರಗಳು. Subscription Rates.

ವರ್ಷಕ್ಕೆ 6—0—0	One Year 6—0—0
ಆರು ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.

22-2-54

Edited Printed & Published by T.B. Keshava Rao, at Nava Bharat Printing Press, Bellary.

ಕರ್ಮವೀರ

ಸೋಮವಾರ
ಮಾರ್ಚ್
೧೫, ೧೯೫೫

ವರ್ಷ 17
ಸಂಚಿಕೆ 35

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕರು
ಟಿ. ಬಿ. ಕೇಶವರಾವು

ಬಳ್ಳಾರಿಯಲ್ಲಿ ಆಂಧ್ರರ ಅಪಪ್ರಚಾರ

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂಬ ನ್ಯಾಯ ಮತ್ತು ಯೋಗ್ಯರೀತಿಯ ಪ್ರಚಾರಕ್ಕೆ ಅಧಿಕ ಸಂಖ್ಯಾಕರ ಅಡ್ಡಿ ಇಲ್ಲ ಆದರೆ ಈಗ ಅಪಪ್ರಚಾರವು ಮೈಸೂರು ಸರ್ಕಾರದ ವಿರುದ್ಧ ವಿಷಕಾರುವದಿದ್ದು. ಅಡಳಿತದ ಮತ್ತು ಅಧಿಕಾರಿಗಳ ಬಗ್ಗೆ ಸತ್ಯಕ್ಕೆ ದೂರವಾದ ಅಂಶೆ-ಅಂಕೆ ಸಂಖ್ಯೆಗಳನ್ನು ಜವಾಬ್ದಾರೀ ಜನರೇ ಕೊಡಲಾರಂಭಿಸಿದರೆ ಆದನ್ನು ನಿಲ್ಲಿಸಲು ನಿಜಾಂಶಗಳನ್ನು ಜನತೆಯ ಮುಂದಿಡಲು ಸರ್ಕಾರದ ಪ್ರಯತ್ನವೂ, ಸಲಹೆ ಸಹಕಾರಗಳೂ ಬೇಕಾಗುತ್ತವೆ. ಕಳೆದ ಭಾನುವಾರ ಕಲ್ಲಿಸಿದ ಆಂಧ್ರರ ಸಭೆಯ ವರದಿಯು ಪ್ರಕಟಿಸಿಗೆ ಯೋಗ್ಯವಿಲ್ಲ ಮಾಜಿ ಮದ್ರಾಸ್ ರೆವಿನ್ಯೂಮಂತ್ರಿ ಶ್ರೀ ಸೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸುರಿತ ವಕೀಲರಾದ ಶ್ರೀ ಡಿ. ವೇಣುಗೋಪಾಲಾಚಾರ್ಯರು "ಮೈಸೂರು ಸರ್ಕಾರದವರು ಬರುವ ಜುಲೈನಿಂದ ಸರ್ಕಾರಿ ನೌಕರರ ಸಂಬಳವನ್ನು ಕಡಿಮೆ ಮಾಡುತ್ತಾರೆ...." ಎಂದು ಹೇಳಿದರು ಶ್ರೀ ಶಾಸ್ತ್ರಿ ರಾಜಗೋಪಾಲರೆಡ್ಡಿರು ಹನುಮಂತಯ್ಯನವರ ರಾಜ್ಯಭಾಕದ ಟೀಕೆ ಮಾಡುತ್ತ ವ್ಯಕ್ತಿ ಸಂಬಂಧ ಟೀಕೆಯಲ್ಲಿ ಹದ್ದು ಮೀರಿದರು.

ಶಾಸನಸಭೆ ಸದಸ್ಯ ಶ್ರೀ ಗಂಗಪ್ಪನವರು ಮೈಸೂರು ಶಾಸನ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಿದರು.

ಅಧ್ಯಕ್ಷರಾದ ಶ್ರೀ ರೆಡ್ಡಿಯವರು ಶ್ರೀ ನಿಜಲಿಂಗಪ್ಪನವರ ಹೇಳಿಕೆಯನ್ನು ಸ್ವಾಗತಿಸಿ ಸದಹದ್ದಿನ ಆಂಧ್ರ-ಕರ್ನಾಟಕಗಡಿ ನಿರ್ಣಯ ಸಮಸ್ಯೆಯಲ್ಲಿ ಬಳ್ಳಾರಿಯೂ ಸೇರಬೇಕೆಂದರು.

ವಾತಾವರಣದಲ್ಲಿ ಸಹ್ಯದಯತೆಯಿಷ್ಟು ಅಸಹ್ಯವುಂಟು. ದ್ವೇಷವುಂಟು. ಅಪಪ್ರಚಾರವುಂಟು. ಅಜ್ಞಾನಿಗಳು ದಾರಿತಪ್ಪಿ ನಡೆಯುವ ಸಂಭವವೂ ಉಂಟು ಈ ಕಾರಣ ಬಳ್ಳಾರಿ ಜಿಲ್ಲಾ ಪ್ಲೆಬಿಸ್ಸೈಟ್ ಕಮಿಷನರ್‌ನ ಮೊನ್ನೆಯ ನಿರ್ಣಯಕ್ಕೆ ಸರ್ಕಾರವು ಮೀಸಲು ಗಮನವನ್ನು ಕೊಟ್ಟು ಪೀಪ್ರೈವಾಗಿ ಕಾರ್ಯಾನ್ವಿತರಾ-ಬೇಕೆಂದು ಇಲ್ಲಿಗಾವಿಸಲಾಗಿದೆ. ಅಡಳಿತದಲ್ಲಿ ದಯೆಯಿಟ್ಟೇ ಲಿಲ್ಲ ಪೆ ಸುವ್ಯವಸ್ಥೆ ಅನುಶಾಸನ ಬೇಕೆಂದರೆ. ಅನಾಯಕತ್ವ ಮತ್ತು ವರ್ಗ ವೈಷಮ್ಯದ ನಾಯಕರಿಗೆ ಕಾರಣಾಜಿಂದ ಪಾಠ ಕಲಿಸ ಬೇಕಾಗುತ್ತದೆ.

ಭಾರತೀಯ ಟಿಕ್ಸ್‌ಟೈಲ್ ಕೈಗಾರಿಕೆ ಮಾರ್ಚಿಗೆ ೧೦೦ ವರ್ಷ ತುಂಬುತ್ತೆ

ಭಾರತೀಯ ಟೆಕ್ಸ್‌ಟೈಲ್ ಕೈಗಾರಿಕೆಗೆ ಈ ವರ್ಷ ಮಾರ್ಚ್ ತಿಂಗಳಿಗೆ ನೂರು ವರ್ಷ ತುಂಬುತ್ತದೆ.

ಬೊಂಬಾಯಿಲ್ಲಿ ಅಖಿಲ-ಭಾರತ ಸಮ್ಮೇಳನವೊಂದನ್ನೂ. ಮಾರ್ಚ್ 18 ಮತ್ತು 19 ರಲ್ಲಿ ಒಂದು ಕೈಗಾರಿಕಾ ವಸ್ತು ಪ್ರದರ್ಶನವನ್ನೂ ನಡೆಸಿ ಈ ಸಮಾರಂಭವನ್ನು ಭವ್ಯವಾಗಿ ನಿರವೇರಿಸಲು ಬೊಂಬಾಯಿ ಸಿಲ್ಕ್‌ಟೆಕ್ಸ್‌ಟೈಲ್ ಅಸೋಸಿಯೇಷನ್ನು ಭರ್ಜರೀ ಸಿದ್ಧತೆಗಳನ್ನು ಮಾಡುತ್ತಿದೆಯೆಂದು ಗೊತ್ತಾಗಿದೆ.

ವೀರದಲ್ಲಿ ಪ್ರಪ್ರಥಮ ಟೆಕ್ಸ್‌ಟೈಲ್ ಕಾರ್ಖಾನೆಯು ಬೊಂಬಾಯಿಯಲ್ಲಿ 1854ರಲ್ಲಿ ಆರಂಭವಾಯಿತು. ಅಗಿನಿಂದ ಟೆಕ್ಸ್‌ಟೈಲ್ ಕೈಗಾರಿಕೆ ಕ್ರಮ ಕ್ರಮವಾಗಿ ಬೆಳೆದು ಈಗಿನ ಸ್ಥಿತಿ ಮುಟ್ಟಿದೆ.

ಭಾರತದಲ್ಲಿ ಎರಡನೇ ಅತಿ ಭಾರೀ ಉದ್ಯಮವಾಗಿದೆ. ಟೆಕ್ಸ್‌ಟೈಲ್ ಕೈಗಾರಿಕೆ ನೂರಲನೆಯದು ರೈಲ್ವೆಗಳು. ಈಗ ದೇಶದಾದ್ಯಂತ ಸುಮಾರು 450 ಟೆಕ್ಸ್‌ಟೈಲ್ ಮಿಲ್ಲುಗಳಿವೆ. ಇವುಗಳಲ್ಲಿ 75 ಕಾರ್ಖಾನೆಗಳು ಮದ್ರಾಸ್ ಪ್ರಾಂತದಲ್ಲಿವೆ.

ದೂರಪ್ರಾಚ್ಯ ಅಂಧರ ಸಮ್ಮೇಳನ

ದೂರಪ್ರಾಚ್ಯ ಅಂಧರ ಸಮ್ಮೇಳನವೊಂದು ಜಪಾನಿನಲ್ಲಿ 1955 ರ ಮೇ ತಿಂಗಳಲ್ಲಿ ಪೂರಪ್ರಾಚ್ಯ ಅಂಧರ ಯೋಗಕ್ಷೇಮ ಕೌನ್ಸಿಲಿನ ಜಪಾನ್ ಸಮಿತಿ ಆಶ್ರಯದಲ್ಲಿ ನಡೆಯುವುದು.

ಹೊಸಪೇಟೆ ಡಿ॥ ಮುನ್ಸೀಫ್ ಕೋರ್ಟಿನಲ್ಲಿ

O. P. 8/54

ಮಂಗಲಿ ಯೀದನ್ನ ಸಾ. ಕೂಡ್ಲಿಗಿ — ಅರ್ಜದಾರ

ಮೇಲಿನ ಅರ್ಜಿದಾರ ತನಗೆ ಪೋತಿ ಚಿನ್ನ ಲಕ್ಷ್ಮಿಪ್ಪನ S. B. ಅಕೌಂಟ್ ನಂ. 60999 ಇರತಕ್ಕ ಪೊತ್ತ 550 ರೂ. ತಾನು ವಾರಸನಿಮ್ಮದರಿಂದ ಹಣ ಬರಮಾಡಿಕೊಳ್ಳಲು ವಾರ್ಸು ಸರ್ಟಿಫಿಕೇಟಿಗಾಗಿ ಅರ್ಜಿ ಇಟ್ಟಿರುತ್ತಾನೆ. ಇದಕ್ಕೆ ಯಾರಾದರೂ ಆಕ್ಷೇಪಣೆ ಮಾಡತಕ್ಕವರು 17-3-54 ರಲ್ಲಿ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದೆಂದು ಈ ಮೂಲಕ ತಿಳಿಸಲಾಗಿದೆ.

ಕೆ. ಲಿಂಗಮಲ್ಲಾರಿ ಶಾಸ್ತ್ರಿ
ಅರ್ಜದಾರರ ವಕೀಲ

ಕೆಲಸ ಕಡಿಮೆ — ಸಂಬಳ ಹೆಚ್ಚಬೇಕು

ಈ ಭೋದನೆಯ ನಿವಾರಣೆಗೆ ರಾಜಾಜಿ ಕೊಟ್ಟ ಸಲಹೆ

ಇಂದಿನ ಎಲ್ಲರಲ್ಲೂ ಕಳ್ಳತನವಿದೆ. ಧನಿಕನು ಕೊಡುವ ತೆರಿಗೆಯನ್ನು ಕದಿಯುತ್ತಿದ್ದರೆ ಮಜೂರರು ತಮ್ಮ ಕೆಲಸವನ್ನೇ ಕದಿಯುತ್ತಿರುವರು, ಎಂದು ರಾಜಾಜಿ ಹಿಂದೊಮ್ಮೆ ಹೇಳಿದ್ದರು. ಹೀಗೆ ಎಷ್ಟು ಕದ್ದರೂ, ಹೇಗೆ ಇದ್ದರೂ ಈ ಕಾಲದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಇಲ್ಲ, ಸುಖವಿಲ್ಲ. ಪ್ರತಿದಿನ ವರ್ತಮಾನಪತ್ರಿಕೆಗಳಲ್ಲಿ ಒಂದಲ್ಲ ಒಂದು ಕೈಗಾರಿಕಾ ವಿವಾದಗಳನ್ನು ನಾವು ಕೇಳುತ್ತಿರುವೆವು. ಹೆಚ್ಚು ಸಂಬಳ, ಕಡಿಮೆ ಕೆಲಸದ ಕೇಳಿಕೆಗಳೇ ಈ ವಿವಾದಗಳ ಬಾಹ್ಯಸ್ವರೂಪವಾಗಿದ್ದರೂ, ವಾಸ್ತವಿಕವಾಗಿ ಮಾನವನ ಉದ್ವೇಗವೇ ಅತೀ ಕಡಿಮೆ ಕೆಲಸವಲ್ಲ ಅತೀ ಹೆಚ್ಚಿನ ಪ್ರತಿಫಲ ಪಡೆಯುವುದೆಂದು ತೋರುವುದು ಆದುದರಿಂದ ಒಂದು ವಿವಾದ ಇತ್ಯರ್ಥವಾದರೂ, ಪುನಃ ಅದೇ ವಿವಾದ ತಲೆ ದೋರಿದಿದ್ದು. ಏಕೆಂದರೆ ಮನುಷ್ಯನ ಸ್ವಭಾವ, ಪ್ರವೃತ್ತಿ ಆ ರೀತಿ ಇದೆ. ಮತ್ತು ವಿವಾದದ ಮೂಲನಿವೃತ್ತಿಯ ಕಡೆ ನಾವು ಗಮನಕೊಟ್ಟಿಲ್ಲ. 'ಕೆಲಸ ಕಡಿಮೆಯಾಗಬೇಕು, ಸಂಬಳ ಹೆಚ್ಚಾಗಬೇಕು. 'ಎಂಬ ಕೇಳಿಕೆಯನ್ನು ಮಜೂರರು ಭಂಡವಾಳಗಾರನುಮುಂದೆ ಇಡುತ್ತಲೇ ಹೋಗುತ್ತಿರುವುದೇ ಮುಖ್ಯಕಾರಣ. ವೈಯಕ್ತಿಕವಾಗಿ ತನಗೂ ತನ್ನ ಕಾರ್ಖಾನೆ ಕೈತಿರೂ ಯಾವ ತರದ ಸಂಬಂಧವೂ ಇರುವುದಿಲ್ಲ, ತಾನು ಮಡಿಯುತ್ತಿರುವುದು ಸರಕಿಗಾಗಿ 'ಎಂಬ ಪರಕೀಯಭಾವನೆ ನಮ್ಮ ಮಜೂರರಲ್ಲಿ ಬೆಳೆದು ಬಂದಿರುವುದು ತಾವು ಕೆಲಸ ಮಾಡುತ್ತಿರುವ ಕಾರ್ಖಾನೆ ತನ್ನದೇ ಎಂಬ ಭಾವನೆ ಆತರಲ್ಲಿ ಮೂಡಿದರೆ ಕೆಲಸ ಹೆಚ್ಚಿದರೂ, ಪ್ರತಿಫಲ ಕಡಿಮೆಯಾದರೂ ವಿವಾದ ಅಥವಾ ಜಗಳವಿರುತ್ತಿರಲಿಲ್ಲವೆಂಬುದು ಖರೆ. ಇದರ ಪ್ರತ್ಯಕ್ಷ ಅನುಭವಕ್ಕೆ ಗದ್ದಿಉಳುವ ಒಕ್ಕಲು, ಕಾರ್ಖಾನೆಯ ಕೆಲಸಗಾರರ ಮನೋವೃತ್ತಿಯನ್ನು ಹೋಲಿಸೋಣ. ಒಂದೇ ಜನ ಈ ಎರಡು ಕ್ಷೇತ್ರಿಗಳಿಗೆ ಕಾಲಿಟ್ಟಾಗ ಬೇರೆ ಬೇರೆ ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಕೃಷಿಕನು ಗದ್ದೆಯಲ್ಲಿ ಜೀವರಸವಿರುವಾಗ ಗಂಟೆ ನೋಡಿ ಕೆಲಸ ಮಾಡುವುದಿಲ್ಲ; ರಾತ್ರಿ ಹಗಲು ದುಡಿಯಲು ಸಿದ್ಧನಿರುವನು. ಏಕೆ ತಾನು ಎಷ್ಟು ಕಷ್ಟಪಡುತ್ತೇನೋ ಅಷ್ಟೇ ಉತ್ತತ್ತಿ ಹೆಚ್ಚುವುದು, ಅಷ್ಟೇ ಹೆಚ್ಚು ಲಾಭ ದೊರೆಯುವುದು ಎಂಬುದನ್ನು ಅವನು ಬಲ್ಲನು; ಗದ್ದೆಯೂ ತನ್ನ ಭೂಮಿ, ತಾನೇ ಅದರ ಅಧಿಕಾರಿ ಎಂಬ ತೃಪ್ತಿಯೂ ಅವನಲ್ಲಿ ಇರುವುದು. ಅದರೆ ಅವನೆ ಒಂದು ಕೈಗಾರಿಕಾ ಕಾರ್ಖಾನೆಯನ್ನು ಸೇರಿದರೆ ಅಲ್ಲಿ ಅವನ ರೀತಿಯೇ ಬೇರೆಯಾಗುತ್ತದೆ. ಅಲ್ಲಿಯ ಯಂತ್ರಗಳು ಅವನವಲ್ಲ. ತಯಾರಿಸಿದ ಸಾಮಾನುಗಳು ಅವನವಲ್ಲ ಅವನು ಮನೆಕೊಟ್ಟು ಕೆಲಸಮಾಡಲಿ, ಸೋಮಾರಿಯಾಂದೂಹಾಕಲಿ, ಅವನಿಗೆ ಸಿಗುವ ಸಂಬಳವೇ ಸಿಗುವುದು. ಅದುರಿಂದ ಅವನಿಗೆ ಬೇರಾವ ದರಲ್ಲೂ ಆಸಕ್ತಿ ಇರದೆ ಬರೇ ಸಂಬಳವನ್ನೇ ಕಣ್ಣಿಟ್ಟುಕೊಳ್ಳುವನು, ಆ ಸಂಬಳವನ್ನು ಅತೀ ಕಡಿಮೆ ಕೆಲಸದಲ್ಲಿ ಪಡೆಯಲು ಪ್ರಯತ್ನಿಸುವನು. ಅಥವಾ ಅತೀ ಕಡಿಮೆ ಕೆಲಸದಿಂದ ಅತೀಹೆಚ್ಚಿನ ಪ್ರತಿಫಲ ಪಡೆಯಲು ಅವನು ಬಯಸುತ್ತಾನೆ ಈ ಒಯಕೆ ಈಡೇರದಿದ್ದರೆ ಅವನ ಅತೃಪ್ತಿಯೆ ಕೈಗಾರಿಕಾ ಕ್ಷೇತ್ರದಲ್ಲಿ ಅಶಾಂತಿಗೆ ಕಾರಣ.

ಕೆಲಸಗಾರರ ವ್ಯಾಪಾರಿಯೇ ಕಾರ್ಖಾನೆಯ ಮೇಲೆ ಹಕ್ಕುಬಾಧ್ಯತೆಯುಳ್ಳವರೆಂದು ಪರಿಗಣಿಸಿ, ಲಾಭವನ್ನು ಅವರೊಳಗೆ ಹಂಚಿ ಹಾಕಿದರೆ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿಯುಂಟಾಗಿ ಉತ್ಪಾದನೆಗೆ ನಕ್ಕೇರಬಹುದೆಂಬ ಭಾವನೆ ಕೆಲವರಲ್ಲಿದೆ ಆದರೆ "ಕೆಲಸಗಾರರೇ ಕಾರ್ಖಾನೆಯ ಮ್ಯಾಲಕರೆಂದು ಎಷ್ಟೇ ಘೋಷಿಸಿದರೂ ಬೇಕಾದರೆ ಕಾರ್ಖಾನೆಯ ಮೇಲ್ಕಾಯಿಯ ಚಿತ್ರಪಟವನ್ನು ಅದರ ಕೆಳಗೆ ತೂಗುಹಾಕಿದರೂ—ಕೈಗಾರಿಕೆಗಳಲ್ಲಿ ಶಾಶ್ವತ ಶಾಂತಿ ಬರಲಾರದು" ಎಂದು ರಾಜಾಜಿ ವೆಲ್ಫೇರ್ ಆಫೀಸರುಗಳ ಸಮ್ಮೇಳನದಲ್ಲಿ ಹೇಳಿದ ಮಾತು ನಿಜ ಬೋನಸ್ ರೂಪದಲ್ಲಿ ಲಾಭದ ಪಾಲನ್ನು ಮ್ಯಾಲಕರು ಮಜೂರರಿಗೆ ಒಮ್ಮೆ ಕೊಟ್ಟೊಡನೆ ಅವರಿಗೆ ಸಂತೋಷವಾಗುವುದು. ಆದರೆ ಅದರ ಬೆನ್ನ ಹಿಂದೆಯೇ ಮ್ಯಾಲಕರು ಸಾಕಷ್ಟು, ಸಾಧ್ಯವಿರುವಷ್ಟು ಬೋನಸ್ ಕೊಡುತ್ತಿಲ್ಲವೆಂಬ ಆಪಾದ ಉಂಟಾಗಿ, ವಿವಾದವಾಗಿ ಪುನಃ ನ್ಯಾಯಸ್ಥಾನಕ್ಕೆ ಹೋಗುವುದು. ಅದೇ ರೀತಿ ತುಟ್ಟಿಭತ್ತೆ ಕೊಡಬೇಕೆನ್ನುವ, ಕೊಟ್ಟುದುದನ್ನು ಏರಿಸಬೇಕೆನ್ನುವ, ಏರಿಸಿದುದನ್ನು ಎಂದೆಂದಿಗೂ ಇರಗೊಡಿಸುವಂತೆ ಅದನ್ನು ಸಂಬಳದೊಂದಿಗೆ ಲಿನೀಕರಿಸಬೇಕೆಂಬ ನಾನಾರೀತಿಯ ಬೇಡಿಕೆ, ಒಡಂಬಡಿಕೆಗಳ ಪ್ರವಾಹದಲ್ಲಿ ಶಾಶ್ವತ ಶಾಂತಿ ಕಂಡುಬರುವುದಿಲ್ಲ. ಇದಕ್ಕೆ ಕಾರಣವೇನು ಪರಿಹಾರವೇನು?

ರಾಜಾಜಿ ಹೇಳುವಂತೆ ಇದರ ಕಾರಣ ಗಮನೀಯವೂ ಗೂಢವೂ ಆಗಿರುವುದು. ಮಾನವ ಕೋಟಿಯ ಸುಖಸಂತೋಷವನ್ನು ಹುಟ್ಟಿಸಬೇಕೆಂದು ಸುಖಕ್ಕೆ ಅನುವಾಗಬಲ್ಲ ಸಾಮಾನುಗಳ ಉತ್ಪಾದನೆಯನ್ನು ನಾವು ಮಾಡುತ್ತಿರುವೆವು. ಇಂತಹ ಉತ್ಪಾದನೆಗೆ ನಾನಾರೀತಿಯ ಸ್ವಭಾವ ಅಭಿರುಚಿಯುಳ್ಳ ಜನರು ಒಮ್ಮುಗೂಡಿ ಕೆಲಸ ಮಾಡಬೇಕಾಗುವುದು. ಇದರಿಂದ ಘರ್ಷಣೆ ಆಗಿಯೇ ಆಗುವುದು. ಈ ಘರ್ಷಣೆಯೇ ಬಹುಮುಖ್ಯ ಸಮಸ್ಯೆಯಾಗಿ ಪರಿಣಮಿಸಿ ಅಶಾಂತಿ ಹುಟ್ಟುವುದು.

ಜನತೆಯಲ್ಲಿ ಶಿಷ್ಟರೂ, ದುಷ್ಟರೂ ಇದ್ದೇ ಇರುವರು. ದುಷ್ಟತನ ಇಂದು ಹುಟ್ಟಿಬಂದ ಸ್ವಭಾವವಲ್ಲ. ಪೂರ್ವಜರೂ ಧರ್ಮಶಾಸ್ತ್ರದಲ್ಲಿ ದುಷ್ಟತನವಿದೆ ಎಂಬುದನ್ನು ಪರಿಗಣಿಸಿರುವರು. ದುಷ್ಟತನವನ್ನು ವೈತ್ಯಶಕ್ತಿಗೆ ಪ್ರತಿಬಿಂಬಿಸಿ ಅದರ ನಿಗ್ರಹಕ್ಕೆ ಸರಮಾತ್ಮನು ಆಗಾಗ ಅವತಾರವೆತ್ತುವನು ಎಂಬುದನ್ನು ನಾವು ಓದಿರುವೆವು. ಇಂತಹ ವಿರೋಧ ಸ್ವಭಾವ ಅನಿವಾರ್ಯ ಅಂತೆಯೆ ಮ್ಯಾಲಕ ಮಜೂರರೊಳಗಣ ತಿಕ್ಕಾಟವೂ ಇಂತಹ ವಿರೋಧ ಸ್ವಭಾವದಿಂದಲೇ ಹುಟ್ಟಿದುವಾಗಿರುತ್ತದೆ. ಅದನ್ನು ಕೃಮಸಡಿಸುವ ಪ್ರಯತ್ನ ಎಷ್ಟೆಂದರೂ ವಿಫಲವಾಗದಿರದು.

ಹಿಂದೆ ಮನುಷ್ಯನಿಗೊಂದಿಗಳು ದೈತ್ಯರೂ ವನ್ಯಪ್ರಾಣಿಗಳೂ ಆಗಿರುವಾಗ, ಅಂತಹ ಕುಹಕಶಕ್ತಿಗಳನ್ನು ಎದುರಿಸಲು ಮಾನವರೆಲ್ಲ ಒಂದಾಗತ್ತಿದ್ದರೆನ್ನಬಹುದು. ಆದರೆ ಆಧುನಿಕ ಯುಗದಲ್ಲಿ ಅಂತಹ ಅನಿವಾರ್ಯಕಾರಿ ವಿರೋಧಶಕ್ತಿಗಳಿಲ್ಲ ವಾದುದರಿಂದ. ಪ್ರಪಂಚ ತಕ್ಕಮಟ್ಟಿಗೆ ಸುರಕ್ಷಿತವಾಗಿರುವುದು ಆದರೆ ಎದುರಾಟ, ತಿಕ್ಕಾಟಕ್ಕೆ ಇನ್ನೊಂದಾವುದಾದರೂ ಕಾರಣಬೇಕಲ್ಲ ಅದಕ್ಕಾಗಿ ಜನತೆ ಜನತೆಯೊಳಗೆ, ವ್ಯಾಪಾರಿಕ ಮಜೂರರೊಳಗೆ ಅಸಹಕಾರ, ಅವಿಧೇಯತೆಯ ಘರ್ಷಣೆ ಉಂಟಾಗಬೇಕಾಯಿತು. ಇದು ಸ್ವಾಭಾವಿಕ ಇದೇ ಅಶಾಂತಿಯ ಕಾರಣ. ದೊಡ್ಡ ಕೈಗಾರಿಕೆಗಳ ಬದಲಿಗೆ ಗುಡಿಕೈಗಾರಿಕೆಗಳನ್ನೇ ನಾವು ಅಭಿವೃದ್ಧಿಗೊಳಿಸಿ

ಕೊನೆಯ ಪುಟಕ್ಕೆ

ನಮ್ಮ ತರುಣರು ಮತ್ತು ನಮ್ಮ ಹಳ್ಳಿಗಳು

ಶಿಕ್ಷಣ ಪಡೆದವರ ಅಲಕ್ಷ್ಯದಿಂದಾಗಿಯೇ ಹಳ್ಳಿಗಳು ನಶ್ಯಕ್ಕೀಡಾಗಿವೆ ಅವರು ಪಟ್ಟಣ ವಾಸವನ್ನೇ ಆರಿಸಿಕೊಂಡಿರುವರು. ಸೇವಾ ಬುದ್ಧಿಯಿಂದ ಪ್ರೇರೀಪಿತರಾದವರು ಹಳ್ಳಿಗರ ಮಧ್ಯೆ ನೆಲೆಸುವಂತಾಗಬೇಕೆಂದೂ, ಹಳ್ಳಿಗರ ಸೇವೆ ಮಾಡುವುದರಲ್ಲಿಯೇ ತಮ್ಮ ವಿದ್ಯಾಭ್ಯಾಸದ ಫಲಪ್ರದವಾಗುವುದನ್ನೂ ಕಂಡುಕೊಳ್ಳುವಂತಾಗಬೇಕೆಂದೂ, ಅವರೀರ್ವರ ನಡುವೆ ಸಂಬಂಧ ಬೆಳೆಸಲು ಗಾಂಧೀಜಿಯವರಿಗೆ ಒಂದು ಪ್ರಯತ್ನವಾಗಿದೆ. ಹಕ್ಷಪಕ್ಷಗಳ ವಿಚಾರಗಳ ತಾಳಲಾಟ, ಅವರ ಜಗಳ, ದ್ವೇಷ ಸೂಯೆ, ನಿರಕ್ಷರತೆ, ಕ್ರೌರ್ಯ, ಭೇದ-ಭಾವ ಅಲಕ್ಷ್ಯ, ಅಸಹ್ಯವರ್ತನೆ, ಅರ್ಥರಹಿತವಾದ ಹಳೆಯ ರೂಢಿಗಳಿಗೆ ಅಂಟಿಕೊಳ್ಳುವದು ಇವೆ ಮೊದಲಾದ ದೋಷಗಳು ಹಳ್ಳಿಯ ಜೀವನದಲ್ಲಿ ಅಂತರ್ಗತವಾಗಿವೆ ಎಲ್ಲ. ಸೇವಾ ಬುದ್ಧಿಯಿಂದ ಹಳ್ಳಿಗರ ಮಧ್ಯೆ ನೆಲೆಸಿರುವವರು, ತಾವು ಎದುರಿಸಬೇಕಾದ ಅಡೆತಡೆಗಳನ್ನು ನೋಡಿ ದಿಗಿಲುಗೊಳ್ಳುವುದಿಲ್ಲ. ಹಳ್ಳಿಗರು ತಮ್ಮನ್ನು ನೋಡಿ ನೋಡಿ ಗಂಟಿಕ್ಕಾವರೆಂದೂ, ಮತ್ತಿತರ ಅಡೆತಡೆಗಳನ್ನು ಎದುರಿಸಬೇಕಾಗುವುದೆಂದೂ ಅವರಿಗೆ ಮೊದಲೇ ಗೊತ್ತಿತ್ತು. ಆದ್ದರಿಂದ ತಮ್ಮ ಕಾರ್ಯದಲ್ಲಿ ಮತ್ತು ತಮ್ಮಲ್ಲಿ ಧೃಢ ನಂಬಿಕೆಯುಳ್ಳವರು ಮಾತ್ರ ಹಳ್ಳಿಗರ ಸೇವೆ ಮಾಡಬಲ್ಲರು, ಮತ್ತು ಅವರ ಜೀವನದ ನೀಲಿ ತಮ್ಮ ವರ್ಚಸ್ಸನ್ನು ಬೀರಬಲ್ಲರು ಇವರ ಮಧ್ಯೆ ಕಳೆದ ಒಂದು ನಿಜವಾದ ಜೀವನವೇ ಒಂದು ಪ್ರತ್ಯಕ್ಷ ನಿದರ್ಶನವಾಗಿದ್ದು, ತನ್ನ ಸುತ್ತಮುತ್ತಿಲಿನ ಜೀವನದ ಮೇಲೆ ತನ್ನ ಪರಿಣಾಮದ ಪ್ರಭಾವವನ್ನು ಅದು ತೋರಿಸಿಯೇ ತೋರಿಸುತ್ತದೆ.

ಧನದ ಬಿನ್ನ ಪತ್ತಿಹೋಗುವವರಿಗೆ ಹಳ್ಳಿಯ ಜೀವನದಲ್ಲಿ ಯಾವ ಆಕರ್ಷಣೆಯೂ ಕಾಣುವದಿಲ್ಲವೆಂಬ ವಾತನ್ನು ನಾನು ಒಪ್ಪುತ್ತೇನೆ. ಸೇವಾಭಾವದ ಕಿಡಿ ಆವರ ಹೃದಯದಲ್ಲಿ ಹೊತ್ತಿರದಿದ್ದರೆ, ಹೊಶತನವು ಮಾಯವಾದ ಮೇಲೆ ಹಳ್ಳಿಯ ಜೀವನವು ಕಿರಿಕಿರಿ, ಯಾಗಬಹುದು. ಹಳ್ಳಿಗೆ ಹೋದ ಯಾವ ಯುವಕನೂ, ತೊಂದರೆಗಳು ಕಾಣಿಸಿ ಕೊಡೊಡನೆ ತನ್ನ ಪ್ರಯತ್ನವನ್ನು ಬಿಡಬಾರದು. ತಾಳ್ಮೆಯಿಂದ ಪ್ರಯತ್ನಿಸಿದಲ್ಲಿ, ಪಟ್ಟಣವಾಸಿಗಳಿಗಿಂತ ಹಳ್ಳಿಗರು ಬೇರೆಯಲ್ಲವೆಂಬುದೂ, ನಿಮ್ಮ ಅಂತಃಕರಣಕ್ಕೆ ಅವರ ಹೃದಯ ಮಾರ್ದನಿಗೊಡುವದೆಂಬುದೂ ಲಕ್ಷಕ್ಕೆ ಬರದಿರಲಾರದು. ಮಹಾ ವಿಭೂತಿಗಳೊಡನೆ ಸಂಬಂಧ ಬೆಳೆಸಲು ಹಳ್ಳಿಗಳಲ್ಲಿ ಅವಕಾಶವಿಲ್ಲವೆಂಬುದು ನಿಷ್ಪಂದೇಶಹ. ಹಳ್ಳಿಗರ ಭಾವನೆಯಲ್ಲಿ ಬದಲಾವಣೆಯಾದಂತೆ, ಹಳ್ಳಿಗಳಲ್ಲಿ ಸಂಚರಿಸಿ, ಹಳ್ಳಿಗರೊಂದಿಗೆ ನಿತ್ಯ ಸಂಪರ್ಕವನ್ನಿಟ್ಟುಕೊಳ್ಳಬೇಕೆಂಬುದರ ಅವಶ್ಯಕತೆ ಮಂದಾಳುಗಳಿಗೆ ಮನವರಿಕೆಯಾಗಿದೆಯು ನೀಲಾಗಿ ಜೈಪ್ರಕಾಶ್, ರಾಮಮನೋಹರ್ ಲೋಹಿಯಾ, ಕೃಷ್ಣಮೆನನ್, ಕಾಕಾ ಕಾಲೇಲ್ಕರ್, ನಾನಕ್, ದಾದಾ, ತುಕಾರಾಮ, ವೀರಪಳ್ಳಿಯವರ ಮತ್ತು ಇವರಲ್ಲಿ ಪ್ರಮುಖರಾದವರು ಸಾಧುಸಂತರ ಕೃತಿಗಳ ಮುಖಾಂತರ ಮುಖ ವಿಭೂತಿಗಳ ಸಹವಾಸ ಬಯಸಿದೀ ಲಭಿಸುತ್ತದೆ. ಜೀವನದಲ್ಲಿಯ ಶಾಶ್ವತಮೌಲ್ಯಗಳ ಸ್ವೀಕಾರಕ್ಕೆ ನಿಮ್ಮ ಮನಸ್ಸನ್ನು ಶೃತಿಗೊಳಿಸಿಕೊಳ್ಳಬೇಕಾದುದೇ ತೊಂದರೆ

ಆದ್ದರಿಂದ ನನ್ನ ದೇಶದ ತರುಣರಿಗೆ ನಾನು ಕೊಡುವ ಸಲಹೆ ಇಷ್ಟೇ-ಪ್ರಯತ್ನ ಬಿಡಬೇಡಿರಿ; ಎದೆಬಡಿದೆ ನಿಮ್ಮ ಪ್ರಯತ್ನವನ್ನು ನೀವು ಮಾಡಿರಿ; ಹಳ್ಳಿಗಳನ್ನು ವಾಸಯೋಗ್ಯ ಮಾಡಿರಿ; ಹಳ್ಳಿಗಳ ಬಗ್ಗೆ ಎಲ್ಲರೂ ಪ್ರೇಮ ತೋರಿಸುವಂತೆ ಅವುಗಳಲ್ಲಿ ಮಾರ್ಪಾಡು ಮಾಡಿರಿ. ಹಳ್ಳಿಗರಿಗೆ ಒಪ್ಪಿಗೆಯಾದ ರೀತಿಯಲ್ಲಿ ಅವರ ಸೇವೆ ಮಾಡುವದರಿಂದ ಇದನ್ನೆಲ್ಲವನು ಸಾಧಿಸಬಹುದು ಪ್ರತಿಯೊಬ್ಬನು ತನ್ನ ಶ್ರಮದಿಂದ ಹಳ್ಳಿಗಳನ್ನು ಸ್ವಚ್ಛಗೊಳಿಸಬಹುದು ಮತ್ತು ತನ್ನ ಶಕ್ತ್ಯಾನುಸಾರ ಅವರಜೀವನದಲ್ಲಿ ಹರಡಿರುವ ನಿರ್ಭರತೆಯ ಕತ್ತಲೆಯನ್ನು ಹೊಡೆದಟ್ಟಬಹುದು. ಅವರ ಜೀವನ ರುಚಿಯಾಗಿ, ವ್ಯವಸ್ಥಿತವಾಗಿ ಅವರು ಉದ್ಯೋಗಶೀಲರಾದರೆ, ಈ ಒಳ್ಳೆಯ ಚಟ್ಟ ಅವರು ಕೆಲಸಮಾಡುತ್ತಿರುವ ಹಳ್ಳಿಗಳಲ್ಲಿ ಒಬ್ಬರಿಂದೊಬ್ಬರಿಗೆ ಅಂಟುತ್ತ ಹೋಗುವದರಲ್ಲಿ ಸಂಶಯವಿಲ್ಲ.

—ಮಹಾತ್ಮಾ ಗಾಂಧೀ

೬೦೦ ವಿದ್ಯಾರ್ಥಿಗಳ ಉಪವಾಸ ಮುಷ್ಕರ

ಹಿಜ್ಜಳಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ಪ್ರೊಫೆಸ್ಸರಾಗಿ ಡಾ|| ಜೆ. ಸಿ. ಘೋಷ್‌ರವರೇ ನೇಮಿಸಲ್ಪಟ್ಟಿರುವುದನ್ನು ವಿರೋಧಿಸಿ ಆ ಸಂಸ್ಥೆಯ ೬೦೦ ವಿದ್ಯಾರ್ಥಿಗಳು ಇಂದು ಬೆಳಿಗ್ಗೆಯಿಂದ ಉಪವಾಸ ಮುಷ್ಕರವನ್ನು ಹೂಡಿದ್ದಾರೆ. ತಮ್ಮ ಬೇಡಿಕೆ ಈಡೇರುವವರೆಗೆ ವಿದ್ಯಾರ್ಥಿಗಳ ತರಗತಿಗೆ ಹೋಗಕೂಡದೆಂದು ವಿದ್ಯಾರ್ಥಿ ಕ್ರಿಯಾಸಮಿತಿಯು ಆದೇಶವಿತ್ತಿದೆ.

ಕಲ್ಕತ್ತ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕವಾಗಿರುವ ಡಾ|| ಘೋಷ್‌ರನ್ನು ಕೇಂದ್ರ ಸರ್ಕಾರವು ಅವರ ಪ್ರಸ್ತುತ ಹುದ್ದೆಯಿಂದ ನಿವೃತ್ತಿಗೊಳಿಸಲಿಲ್ಲ ಈ ಬಗ್ಗೆ ವಿದ್ಯಾರ್ಥಿ ನಿಯೋಗವೊಂದು ಪ್ರ. ಮಂತ್ರಿಯವರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರೆಂದೂ ಸದರಿ ವಿಷಯದಲ್ಲಿ ತಾವು ಏನು ಮಾಡಲೂ ಸಾಧ್ಯವಿಲ್ಲವೆಂದೂ ಅವರು ತಿಳಿಸಿದುದಾಗಿಯೂ ಹೇಳಲಾಗಿದೆ.

ತುಂಗಭದ್ರಾ ಅಣೆಕಟ್ಟು ಈವರ್ಷ ಪೂರ್ಣಗೊಳ್ಳುವುದು

ಹೈದರಾಬಾದ್ ಶಾಸನಸಭೆಯ ಈವರ್ಷದ ಪ್ರಥಮ ಅಧಿವೇಶನವನ್ನುದ್ದೇಶಿಸಿ ಮಾತನಾಡುತ್ತಾ ರಾಜ್ಯಪ್ರಮುಖರಾದ ನೈಜಾಮರವರು, ಕಳೆದ ವರ್ಷ ಹೈದರಾಬಾದ್ ಸರ್ಕಾರವು ನಾನಾ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಸಾಧಿಸಿದ ಪ್ರಗತಿಯನ್ನು ತಿಳಿಸಿದರು. ಈವರ್ಷದ ಜೂನ್‌ನಲ್ಲಿ ತುಂಗಭದ್ರಾ ಅಣೆಕಟ್ಟಿನ ಕಾರ್ಯವು ಪೂರ್ತಿಗೊಳ್ಳುವುದು ಮತ್ತು ನೀರಾವರಿಗಾಗಿ ಕಾಲುವೆಗಳನ್ನು ಕಟ್ಟುವ ಕೆಲಸದತ್ತ ಹೆಚ್ಚಿದ ಲಕ್ಷ್ಯ ಕೊಡಲಾಗುವುದು ಎಂದು ಅವರು ಹೇಳಿದರು. ತುಂಗಭದ್ರ ಬೆದ್ಮಚ್ಚಕ್ಕೆ ಯೋಜನೆಯನ್ನು ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ. ಯೊಂದೂ ಅವರು ತಿಳಿಸಿದರು.

ಕುರುಗೋಡು ಹೋಬಳಿ ಹರಿಜನ — ಕಾನ್ಫರೆನ್ಸ್

ಅಧ್ಯಕ್ಷರು :- ಜನಾಬ್ ಟಿ. ಹೆಚ್. ಅಮೀರ್ B A. ಅಸಿಸ್ಟೆಂಟ್ ಕಮೀಶನರ್.

ಬಳ್ಳಾರಿ ತಾಲೂಕು ಕುರುಗೋಡು ಹೋಬಳಿ ಹರಿಜನರ ಸಭೆಯು ಎಲಿಮೆಂಟರಿ ಶಾಲೆ ಆವರಣದಲ್ಲಿ 20-3-54 ಶನಿವಾರ ಮಧ್ಯಾಹ್ನ 3 ಕ್ಕೆ ಸಮಾವೇಶವಾಗುವುದು. ಈ ಭಾಗದ ಹರಿಜನರ ಸಮಸ್ತ ಕುಂದು ಕೊರತೆಗಳು ಚರ್ಚಿಸಲ್ಪಟ್ಟು ನಿರ್ಣಯಗಳಾಗುತ್ತವೆ. ಮೈಸೂರು ಸರ್ಕಾರದ ನೀತಿ- ನಿಲುಮೆ- ಮಾಡಲಿರುವ ಸಹಾಯವನ್ನು ಸಭೆಗೆ ಬರುವ ಅಧಿಕಾರಿಗಳು ಸ್ಪಷ್ಟವಾಗಿ ಹೇಳಲಿರುವರು. ಹರಿಜನರಷ್ಟೇ ಅಲ್ಲದೆ ಅವರ ಅಭಿವೃದ್ಧಿಯಲ್ಲಿ ಆಸಕ್ತರಾಗಿರುವ ಇತರರೂ ಸಭೆಗೆಬಂದು ಸಹಾಯ ಮಾಡಲು ಕೋರಲಾಗಿದೆ

ಎನ್. ನುರಿಬಸವನಗೌಡ
ಸ್ವಾಗತ ಸಮಿತಿ ಅಧ್ಯಕ್ಷ

ಟಿ. ಬಿ. ಕೇಶವರಾವ್
ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿ.

—ಬಳ್ಳಾರಿ ಪ್ರಭಾತ್ ದಲ್ಲಿ—

2 ನೇವಾರ

ವಾಹಿನಿ ಯವರ

ಪೆದ್ದ ಮನುಷ್ಲು [ತೆಲುಗು]

ತಾರಾಗಣ:- ಶ್ರೀರಂಜನಿ, ರೇಲಂಗಿ ಗೌರಿನಾಥಶಾಸ್ತ್ರಿ ಲಿಂಗಮೂರ್ತಿ ಕಾಶ್ಯಪ. ಎ. ವಿ. ಸುಬ್ಬಾರಾವ್. ನಂಗರ ಸಿ. ಹೆಚ್. ಕುಟುಂಬರಾವ್ ರೇಲಂಗಿ ನಟಿಸಿದ್ದಾರೆ.....

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಜವಾಲ ಬಿ ಎ.
"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ವೀಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರದೇಶದವರಿಗೆ 5 ರೂಪಾಯಿ.
,, ಸ್ವದೇಶದವರಿಗೆ 4-8-0 ರೂಪಾಯಿ
ಬಿಡಿ ಸಂಚಿಕೆ 6 ಆಣೆ

ಒಂದನೇ ಪುಟದಿಂದ

ಸಿದ್ದರೆ ನ್ಯಾಯಶಃ ಇಂತಹ ವಿಶೇಷ ತರದ ತಿಕ್ಕಾಟಕ್ಕೆ ಕಾರಣಾಗುತ್ತಿರಲಿಲ್ಲವೆಂದು ನಂಬಬಹುದು. ಇದಕ್ಕೆ ರಾಜಾಜಿ ಸಮರ್ಥವಾದ ಕಾರಣ ಕೊಟ್ಟಿದ್ದಾರೆ.

ದೊಡ್ಡ ಕಾರ್ಖಾನೆಯಲ್ಲಿ ಯಾವುದಾದರೊಂದು ಸಾಮಾನಿನ ತಯಾರಿಕೆಯಲ್ಲಿ ವೈಯಕ್ತಿಕವಾಗಿ ಮಜೂರನೊಬ್ಬನ ಶ್ರಮವು ದಪಾಲು ಸಾಗರದ ಒಂದು ಬಿಂದುವಿನ ಸ್ಥಿತಿ ಮಾತ್ರ. ಅಸಾಮಾನಿನ ಪರಿಪೂರ್ಣ ತೆಯಲ್ಲಿ ಅವನ ಪಾಲು ತೀರಾ ಸಣ್ಣದಾಗಿರುವುದು.

ಉದಾಹರಣೆಗಾಗಿ ಸೈಕಲ್ ತಯಾರಿಕೆಯ ಕಾರ್ಖಾನೆಯಲ್ಲಿ ಒಬ್ಬನ ಕೆಲಸ ಕಡಿಯನ್ನು ತುಂಡು ಮಾಡುವುದಾದರೆ ಇನ್ನೊಬ್ಬನದು ತಗಡನ್ನು ಬಗ್ಗಿಸುವುದು. ಇನ್ನೊಬ್ಬನದು ಒಣ್ಣ ಮಿಶ್ರ. ಮಾಡುವುದು-ಹೀಗೆ ಸಾವಿರಾರು ಜನರು ಒಂದೊಂದು ತರದ ಕೆಲಸವನ್ನಾಡುತ್ತಿದ್ದು ಕೊನೆಗೆ ಸೈಕಲ್ಲಾಗುವಾಗ ಯಾವ ಕೆಲಸಗಾರನಿಗೂ ಅದು ತನ್ನ ಶ್ರಮದ ಫಲವೆಂಬ ಆತ್ಮತೃಪ್ತಿ ಹುಟ್ಟುವುದೇ ಇಲ್ಲ. ಯಾರೋ ಒಬ್ಬ ಎಂಜಿನಿಯರನಿಗಾಗಿ ತಾನು ದುಡಿಯುತ್ತಿರುವೆವೆಂಬ ಅಭಿಪ್ರಾಯ ಅವನಲ್ಲಿ ಹುಟ್ಟುವುದು ಸಹಜ. ಇಂತಹ ಅಭಿವ್ಯಾಯವೈಪರೀತ್ಯಗಳಿಗೆ ಇಂದು ಕಾರ್ಖಾನೆಯ ಸರ್ವ ಭಾಗಿ. ತನ್ನ ಅಂತಃಕರಣ ಪೂರ್ವವಾದ ಶ್ರಮವು ಪರಿಪೂರ್ಣಗೊಳಿಸಬೇಕು ಉತ್ಪಾದನೆ ಹೆಚ್ಚಬೇಕು ಎಂಬ ಉದಾತ್ತ ತತ್ವಕ್ಕೆ ಅವನಲ್ಲಿ ತೀಗೆ ಮೂಡಬೇಕು ಎಂದು ರಾಜಾಜಿ ಶಿಕ್ಷಣತಜ್ಞರ ಬದಲಿಗೆ ಗುಡಿಕೈಗಾರಿಕೆಗಳಲ್ಲಿ ಒಬ್ಬ ಬಡಗಿ ಒಂದು ಕುರ್ಚಿಯನ್ನೋ, ಬೀರುವನ್ನೋ ತಯಾರಿಸಿ ಪರಿಪೂರ್ಣಗೊಳಿಸಿದರೆ ಅದು ತನ್ನ ಶ್ರಮದ ಫಲವೆಂಬ ಆದರ ಅವನಲ್ಲಿ ಹುಟ್ಟುವುದಲ್ಲದೆ ಅವನು ಮಾಡುತ್ತಿರುವ ಕೆಲಸದಲ್ಲೂ ಅವನು ಸಂತೋಷಪಡುತ್ತಾನೆ. ಈ ತೃಪ್ತಿ ಸಂತೋಷದ ಕುಯಿಲಿನಲ್ಲಿ ಅವನು ಕೆಲಸದ ಕಾಲುಯನ್ನು, ಪಡೆಯುವ ಸಂಬಳಕ್ಕೆ ವಿಶೇಷ ಪ್ರಾಧಾನ್ಯ ಕೊಡುವುದಿಲ್ಲ. ಅತೆಯೇ ಕೆಲಸ ಕಡಿಮೆಯಾಗಬೇಕು. ಸಂಬಳ ಹೆಚ್ಚಾಗಬೇಕು ಎಂಬ ರಣಕಹಳೆಯೂ ಅವನಲ್ಲಿ ಮೂಡುವುದಿಲ್ಲ. ಕಮ್ಯುನಿಸ್ಟರ ಕುಟಿಲೋಪಾಯಗಳೂ ಅವನಲ್ಲಿ ಪರಿಣಾಮವನ್ನುಂಟು ಮಾಡುವುದಿಲ್ಲವೆಂಬುದು ನಿಜ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.		Subscription Rates.	
ವರ್ಷಕ್ಕೆ	6—0—0	One Year	6—0—0
6 ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri.

15-3-54

Edited Printed & Published by T.B. Keshava Rao, at Nava Bharat Printing Press, Bellary.

ಸುಧಾಕರ

ಸೋಮವಾರ
ಏಪ್ರಿಲ್
೧೨, ೧೯೫೫

ವರ್ಷ 17 | ಸಂಚಿಕೆ 36

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಹ್ಯುಪಸರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವು

ಪ್ರಾಚೀನ ಭಾರತದ ಕಲೆಯ ವೈಶಿಷ್ಟ್ಯ

ಜಗತ್ತಿನ ಪ್ರಾರಂಭ ಕಾಲದಿಂದಲೂ ಕಲೆಯ ಭವ್ಯ ಶಿಖರವನ್ನೇರಿ ರಾರಾಜಿಸುತ್ತಿರುವ ದೇಶವೆಂದರೆ ಭಾರತವೊಂದೇ. ಎಲ್ಲಾ ವಿಧವಾದ ಉತ್ತಮ ಕಲೆಗೂ, ವಿಜಯ ವೈಜಯಂತಿಯನ್ನು ಮತ್ತು ಕಾರ್ಯಕ್ಕೂ ಭಾರತವು ಅಂದು ತವರೂರು. ಇಂದು ಯಾವ ದೇಶ ತಾನು ನಾಗರೀಕವೆಂದೂ ಕಲೆಯ ನಿಲಯವೆಂದೂ ಹೇಳಿ ಹೆಗ್ಗಳಿಕೆ ಕೊಳ್ಳುತ್ತಾ ಇದೆಯೋ ಅದು ಒಂದಲ್ಲ ಒಂದು ರೀತಿಯಿಂದ ಭಾರತಕ್ಕೆ ಋಣಿಯಾಗಿರಲೇ ಬೇಕು. ಇಂದು ನಾವು ಆ ಭವ್ಯ ಭಾರತದ ಹಿರಿಮೆಯನ್ನು ನೆನಪು ಕೊಂಡರೆ ಎಂತಹವನಿಗೂ ಕೋವಿಂಚವಾಗದಿರದು

ದೇವರಿಗೆ ಪೂಜಿಸಲು

ಮಾನವನ ಮನಸ್ಸನ್ನು ಪರಿಪೂರ್ಣಗೊಳಿಸಿ ಆನಂದ ಗೊಳಿಸುವ ಭವ್ಯತೆಯು ತವರೂರು ನಮ್ಮ ದೇಶ. ನಮ್ಮ ಪೂರ್ವಜರು ಯಾವುದೇ ಕೃತಿವಸ್ತುವನ್ನು ನೋಡಿದಾಗ್ಗೂ, ಅದು ದೇವರ ಸ್ವರೂಪ ಪೆಂಬ ಭಾವನೆ ಅವರಲ್ಲಿ ಮೂಡುತ್ತಿತ್ತು. ಎಲ್ಲ ಉತ್ತಮ ಕಲೆಯೂ ಸಹ ಇಂದಿಗೂ ದೇವರ ಹೆಸರಿನಲ್ಲಿಯೇ ಉಳಿದಿದೆ. ಅವರಲ್ಲಿ ಸ್ಪರ್ಧತೆ ಎಂಬುದು ಇರಲಿಲ್ಲ ಎನ್ನುವುದನ್ನೂ ದೇವರಿಗಾಗಿಯೇ ಮಿಸಲಾಗಿತ್ತಿದ್ದರು.

ಈಗಲೂ ನಾವು ಎಲ್ಲೋರ ಅಜಂತ ಸೋಮನಾಥಪುರ, ಹಳೆಬೀಡು ಇಲ್ಲಿಯ ದೇವಸ್ಥಾನಗಳನ್ನು ನೋಡಿದಿ ನಮ್ಮ ಪೂರ್ವಿಕರ ಸ್ಥಾನವ ಅವರಿಗೆ ನಮಸ್ಕರಿಸುತ್ತಾಗಿ, ನಮ್ಮ ಅವರ

ಅಂತರವೇ ಮರೆತು ನಾವೂಳಗಿನಕಾಲ ಪ್ರವಾಹಗಳೆಲ್ಲಿ ಕಣ್ಮುಗಳನ್ನು ಕೋಲಿ ಸುವಂತಹ ಕಲ್ಯಾಣ ಮಂಟಪಗಳೂ, ಗಗನ ಚುಂಬಿ ಗೋಪುರಗಳೂ, ಜನವನ್ನು ತಮ್ಮ ಭಾವದಿಂ ಪರವಶಗೊಳಿಸುವ ವಿಗ್ರಹಗಳೂ ಕಲೆಗಳ ಅರಮನೆಯೇ ಸಾರಿಯಲ್ಲಿ ಬಿಗ್ಗತ್ತಿವ ಬೃಹದಾಕಾರದ ದೇವಸ್ಥಾನಗಳೂ ಇವುಗಳನ್ನು

ಕಂಡಾಗ ಯಾವ ಮಾನವನ ಮನ ಆನಂದ ಪರವಶವಾಗದಿದ್ದೀತು? ಇಂದಿಗೂ ನೂರಾರು ಜನ ಆ ಭವ್ಯ ಕಲೆಯನ್ನು ಕಂಡು ತಮ್ಮ ಕಷ್ಟಮಯ ಜೀವನಕ್ಕೆ ಶಾಂತಿಯನ್ನೂ, ಸಹನೆಯನ್ನೂ ಪಡೆದಿದ್ದಾರೆ.

ಅಮರ ಕೀರ್ತಿ

ಸಾವಿರಾರು ವರ್ಷಗಳು ಕಳೆದರೂ ನಿರ್ಮಿಸಿದ ಶಿಲ್ಪಿ ಮಡಿದು ಎಷ್ಟೋ ವರ್ಷಗಳು ಕಳೆದರೂ, ಅವರ ಕೀರ್ತಿ ಪತಾಕೆ ಅಚ್ಚಳಿಯದಂತೆ ನಿಂತಿವೆ ಈ ಕಲೆಯ ಕಾರಣಗಳು. ಮನುಷ್ಯನು ತನ್ನ ಮನೋಭಾವವನ್ನು ಇನ್ನೊಬ್ಬನಿಗೆ ತಿಳಿಸಲು ಎಷ್ಟೋ ಕಷ್ಟ, ಇಂತಹುದರಲ್ಲಿ ನಿರ್ಜೀವವಾದ ಕಲ್ಲಿನಲ್ಲಿ ವಸುಷ್ಯನ ಕಣ್ಣಿಗೆ ಕಟ್ಟುವಂತೆ, ಸಜೀವವಸ್ತುವೆಯನ್ನಾಗಿ ನಿರ್ಮಿಸಿದ ಶಿಲ್ಪಿಯ ಶಕ್ತಿ ಎಷ್ಟು ಹೊಗಳಿದರೂ ಅರಿಯಲೂ ಅಸಾಧ್ಯ.

ರಾಷ್ಟ್ರಪತಿ ಭವನಕ್ಕೆ ಮೈಸೂರು ಸಲಗ

ವಿಶೇಷ ಸಮಾರಂಭ ಸಮಯಗಳಲ್ಲಿ ಉಪಯೋಗಿಸಲು ರಾಷ್ಟ್ರಪತಿ ಭವನದಲ್ಲಿ ಎರಡು ಭಾರಿ ಸಲಗಗಳನ್ನು ಇಡಲಾಗುವುದು. ಈ ಸಲಗಗಳಿಗಾಗಿ ಮೈಸೂರು ಮತ್ತು ತಿರುವಾಂಕೂರುಗಳನ್ನು ಕೇಳಲಾಗಿದೆ.

ಆನೆಗಳಿಗೆ ಬೇಕಾಗುವ ಆಹಾರವನ್ನು ಬೆಳೆಯಲು ರಾಷ್ಟ್ರಪತಿ ಭವನದಲ್ಲಿ 2 ಎಕರೆ ಜಮೀನನ್ನು ಪ್ರತ್ಯೇಕವಾಗಿಡಲಾಗುವುದು. ಪ್ರತಿಯೊಂದು ಆನೆಗೂ ತಿಂಗಳಿಗೆ 200 ರೂಗಳು ಖರ್ಚಾಗುವುದೆಂದು ಅಂದಾಜಾಗಿದೆ.

ಹೊಸಪೇಟೆ ಡಿII ಮುII ಕೋರ್ಟಿನಲ್ಲಿ

O P. 12/54

ಪಿ. ಎಮ್. ಸದಾಶಿವ ಮೂರ್ತಿ, ತಂ ಪಿ. ಎಮ್. ಶಿದ್ದಯ್ಯ, ಮೇಜರ್ ಲಿಂಗಾಯತರು, ಹೊಳಗುಂದಿ, ಹಡಗಲಿ ತಾಲೂಕು. ..... ವಾದಿ

Vs

ಪಿ. ಎಮ್. ನೀಲಮ್ಮ ಗೆಂಡ ಚಂದ್ರಯ್ಯ, ಮೇಜರ್, ಲಿಂಗಾಯತ, ಹೊಳಗುಂದಿ, ಹಡಗಲಿ ತಾಲೂಕು. — ಪ್ರತಿವಾದಿ

ಮೇಲಿನ ನಂಬರಿನಲ್ಲಿ ಅರ್ಜಿದಾರನು ಅವರ ಅಲಿಭಕ್ತ ತಂದೆ ಪಿ. ಯಂ. ಚಂದ್ರಯ್ಯ ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿಯಲ್ಲಿ ರೂ 1000/- ಕ್ಕೆ ಇನ್ಸುರು ಮಾಡಿದ ಮೊತ್ತವನ್ನು ತೆಗೆದು ಕೊಳ್ಳುವುದಕ್ಕೆ (*Succession Certificate*) ಗಾಗಿ ಅರ್ಜಿ ಇಟ್ಟಿರುತ್ತಾನೆ. ಯಾರದಾದರೂ ತಕರಾರು ಇದ್ದಲ್ಲಿ 14-4-54 ಕ್ಕೆ ಖುದ್ದಾಗಲಿ ವಕೀಲರ ಮೂಲಕವಾಗಲಿ ಆ ದಿವಸ 11 ಗಂಟೆಗೆ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದು.

ಎ. ಆರ್. ಕೃಷ್ಣ ರಾವ್
ಅರ್ಜಿದಾರರ – ಅಡ್ವೊಕೇಟ್.

ಮಹಾತ್ಮಾ ಗಾಂಧಿಜಿಯವರ ಅಹಿಂಸಾ ತತ್ವವೊಂದೇ

ಶಾಂತಿ ಸಾಧನೆಗೆ ಮಾರ್ಗದಾಯಕ

ಪ್ರಪಂಚದ ಜನಾಂಗಗಳಿಗೆ ಪ್ರಧಾನಿ ನೆಹರೂರವರ ಕರೆ

ಎ. ಬಾಂಬ್ ಮತ್ತು ಹೆಚ್. ಬಾಂಬ್ ಬೇಕೋ ಅಥವಾ ಶಾಂತಿ ಸಾಧನೆ ಬೇಕೋ ?

ಪ್ರಪಂಚದ ಐಕ್ಯತೆ ಮತ್ತು ಸೌಹಾರ್ದ ಭಾವನೆಯನ್ನು ಸಾಧಿಸುವುದು ಇಂದು ಬಹಳ ಅಗತ್ಯವಾಗಿದೆ. 'ಏಕ ಪ್ರಪಂಚವನ್ನು ಜನಾಂಗಗಳು ಪರಸ್ಪರ ಸಹೋದರ ಭಾವನೆ ಮತ್ತು ಸಹಕಾರದಿಂದ ರೂಪಿಸಬೇಕು ಏಕ ಪ್ರಪಂಚದ ಧ್ಯೇಯವನ್ನು ಸೌಹಾರ್ದ ಮನೋಭಾವದಿಂದ ಜನಾಂಗಗಳು ಕಾರ್ಯರೂಪಕ್ಕೆ ತರಬೇಕು.

ಎಂದು ಭಾರತದ ಪ್ರಧಾನಿ ಪಂಡಿತ ನೆಹರೂರವರು ಇಂದು ಬೊಂಬಾಯಿ ರಾಜ್ಯದ ಸಮಾಜ ಕಲ್ಯಾಣ ಮಂಡಳಿಯ ಸುವರ್ಣ ಮಹೋತ್ಸವದ ಆರಂಭ ಭಾಷಣದಲ್ಲಿ ನುಡಿದರು

ಪ್ರಧಾನಿ ನೆಹರೂರವರು ಬೊಂಬಾಯಿಗೆ ಈ ಬೆಳಿಗ್ಗೆ ಆಹಮದಾಬಾದಿನಿಂದ ವಿಮಾನದಲ್ಲಿ ಬಂದರು. ಅವರನ್ನು ಬೊಂಬಾಯಿ ರಾಜ್ಯಪಾಲರಾದ ಶ್ರೀ ಗಿರಿಜಾ ಶಂಕರ ವಾಜಪೇಯಿ ಮೊದಲಾದವರು ಸ್ವಾಗತಿಸಿದರು.

ವಿಜ್ಞಾನದ ಶಕ್ತಿ

ಪ್ರಧಾನಿ ನೆಹರೂರವರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು:-

ಆಧುನಿಕ ಪ್ರಪಂಚದಲ್ಲಿ ವೈಜ್ಞಾನಿಕ ಸಂಶೋಧನೆಗಳು ಹೆಚ್ಚಾಗಿ ನಡೆದಿವೆ. ಅಟಂಬಾಂಬ್, ಹೈಡ್ರೋಜನ್ ಬಾಂಬ್ ಮೊದಲಾದ ಭೀಕರ ಅಸ್ತ್ರಗಳನ್ನು ತಯಾರಿಸಲಾಗಿದೆ. ವೈಜ್ಞಾನಿಕ ಸಂಶೋಧನೆಗಳನ್ನು ಮಾನವನು ಪ್ರಪಂಚದ ವಿನಾಶ ಕಾರ್ಯಕ್ಕೆ ಉಪಯೋಗಿಸಬೇಕೋ ಅಥವಾ ಮಾನವ ಕೋಟಿಯ ಹಿತ ಸಾಧನೆಗಾಗಿ ಮತ್ತು ಸುಖ ಶ್ರೇಯಸ್ಸಿಗೆ ಉಪಯೋಗಿಸಬೇಕೋ ಎಂಬುದು ದೊಡ್ಡ ಸಮಸ್ಯೆ ಆಗಿದೆ. ವಿನಾಶಕಾರಕ ಭೀಕರ ಅಸ್ತ್ರಗಳನ್ನು ತಯಾರಿಸುವುದು ಸರಿಯಿಲ್ಲ. ಇಂದು ಸ್ವಾತಂತ್ರ್ಯ ಪಡೆದ ಅವರಿಗೆ, ಈದರ ಬದಲು ಪ್ರಪಂಚವು ಗಾಂಧಿಯವರ ಅಹಿಂಸಾ ತತ್ವ ಮತ್ತು ಸಹಕಾರ ತತ್ವ ಅನುಸರಿಸಬೇಕು. ಗಾಂಧಿಜಿ ಸೂಚಿಸಿದ ಶಾಂತಿಯ ದಾರಿ ಇದರಿಂದಲೇ ಪ್ರಪಂಚಕ್ಕೆ ಕ್ಷೇಮ ಇದನ್ನು ಇಂದಿನ ಪ್ರಪಂಚವು ಜರೂರು ಅಳವಡಿಸಿಕೊಳ್ಳಬೇಕು ವಿನಾಶಕಾರಕ ಬಾಂಬುಗಳ ತಯಾರಿಕೆ ನಿಲ್ಲಬೇಕು.

ಸಹಕಾರ ಸತ್ಪಥದಿಂದ ಜೀವನದ ಎಲ್ಲ ಅಂಗಗಳಿಗೂ ಅನ್ವಯಿಸಬೇಕು ಕಾರ್ಮಿಕರು ಮತ್ತು ಉದ್ಯೋಗದಾತರ ನಡುವಿನ ಸಂಬಂಧಗಳು ಸಹಕಾರ ತತ್ವದ ಆಧಾರದ ಮೇಲೆ ಇರಬೇಕು. ಸಹಕಾರ ಮತ್ತು ಶಾಂತಿ ಸಂಸ್ಥೆಗಳ ಅಭಿವೃದ್ಧಿ ಸಹಕಾರ ಮತ್ತು ಜನಗಳ ಪರಸ್ಪರ ಪ್ರೇಯಸ್ಸನ್ನು ಮತ್ತು ಪ್ರಗತಿ ಸಾಧನೆ ಇವೆಲ್ಲವುಗಳಿಗೂ ಸಹಕಾರ ತತ್ವದ ಆಚರಣೆಯು ಅವಶ್ಯವಾಗಿದೆ.

ಬ್ರಿಟಿಷನಲ್ಲಿ ಕೈಗಾರಿಕೆ ಯುಗದ ಕ್ರಾಂತಿಯೂ ಅನಂತರದ ಅದ್ಭುತ ಅಭಿವೃದ್ಧಿಯೂ ಸಹಕಾರ, ಶಾಂತಿ ಮತ್ತು ಸಂಸ್ಥೆಗಳ ಪ್ರಗತಿಗೆ ದೊಡ್ಡದೊಂದು ನಿದರ್ಶನವಾಗಿದೆ. ಸಹಕಾರ ಮತ್ತು ಶಾಂತಿ ಸಂಸ್ಥೆಗಳ ಕಾರ್ಮಿಕರ ಸದಸ್ಯಗಳ ಹಣವಾಗಲಿ ಬಂಡವಾಳಗಾರರ ಸಹಾಯವಾಗಲಿ ವಿಶೇಷವಾಗಿ ಅವಶ್ಯವಿಲ್ಲವೆಂದು ಅವರು ಹೇಳಿದರು.

ಬಳ್ಳಾರಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ

ಬಳ್ಳಾರಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯು ಹರ್ಲಾಪುರ್ಲಿ ತಾ 27-3-51 ಮತ್ತು ತಾ || 28-3-51 ರಲ್ಲಿ ಕೂಡ್ಲಿಗಿಯ ಮೇಯರ್ ಸ್ಕೌಟ್ಸ್ ಬಾಯ್ಸ್ ಸ್ಕೂಲಿನಲ್ಲಿ ನಡೆಸಿದ ಶಿಕ್ಷಣ ತರಗತಿಗಳನ್ನು ನಡೆಸುತ್ತಿರುವ ಉಪಾಧ್ಯಾಯರಿಗೂ ಮತ್ತು ಪುಸ್ತಕ ಭಂಡಾರದ ಅಧಿಕಾರಿಗಳಿಗೂ ಶಿಕ್ಷಣವನ್ನು ನಿರ್ದೇಶಿಸಲಿತ್ತು. ಈ ಶಿಬಿರದ ಉದ್ಘಾಟನೆಯನ್ನು ಸ್ಥಳೀಯ ಸೈನ್ಯದಳದ ಶ್ರೀ ಜೆಚ್ ಸಿ ಸದ ಶಿವಮೂರ್ತಿಯವರು ಸ್ಕೌಡಶಾಲೆಯ ಮುಖ್ಯ ಕಮಿಷನರಾದ ಶ್ರೀ ಜೆಚ್ ಎಂ ಸಿದ್ದಲಿಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ವಯಸ್ಕರ ಶಿಕ್ಷಣ ಸಮಿತಿಯ ಸ್ಥಾನಿಕ ಕಾರ್ಯದರ್ಶಿಗಳಾದ ಶ್ರೀ ಎಂ ಸಿದ್ಧಲ್ಲ ವ್ಯವಸ್ಥಾಪಕರಾದ ಶ್ರೀ ಎಲ್. ಎ ಸದಾಶಿವರಾಯರು ಮತ್ತು ತಾಲ್ಲೂಕು ಸಂಘಟನಾಧಿಕಾರಿ ಶ್ರೀ ಜೆಚ್. ಕೆ ವೀರಭದ್ರಪ್ಪನವರು 26 ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ತರಗತಿಗಳ ಪುಸ್ತಕ ಮಂಜೂರಾದ ವಯಸ್ಕರ ಶಿಕ್ಷಣ ಕಾರ್ಯಾಲಯ ಕಾರ್ಯ ಚಟುವಟಿಕೆಗಳ ಬಗ್ಗೆ ಕೂಲಂಕಷವಾಗಿ ಶಿಕ್ಷಣವನ್ನು ನಿರ್ದೇಶಿಸಿದ್ದರು

ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎಂ ಅಜ್ಜಯ್ಯನವರು ನೆರವೇರಿಸಿ ತಾಲ್ಲೂಕು ಸಂಘಟನಾಧಿಕಾರಿಗಳಿಗೆ ಸನ್ಮಾನ ಮಾಡಿದರು.



ಹೈಡ್ರೋಜನ್ ಬಾಂಬುಗಳ ಸ್ಫೋಟ

ಕಳೆದ ಮಾರ್ಚ್ ೧೬ನೇ ದಿನಾಂಕ ಶಾಂತಸಾಗರದ ಬಳಿಯ ಹವಳದ್ವೀಪಸ್ತೋಮವಾದ ಮಷಲ್ ದ್ವೀಪದಲ್ಲಿ ಅಮೇರಿಕೆಯು ಪರೀಕ್ಷೆಗಾಗಿ ಸ್ಫೋಟ ಮಾಡಿದ ಜಲಜನಕ ಬಾಂಬು ಇದುವರೆಗೆ ಪ್ರಯೋಗಿಸಿದ ಪರಮಾಣು ಗುಂಡುಗಳಿಗಿಂತ ಅತಿ ಭೀಕರವಾದದ್ದೆಂದು ತಿಳಿದುಬರುತ್ತದೆ. ಅದರ ಸ್ಫೋಟಕ ಶಕ್ತಿಯು ೧೫೦-೧೫೦ ಲಕ್ಷ ಟನ್ ತ್ರಿಕೂಯ ಟೀರಾಟ್‌ನ್ಯ (ಟಿ. ಎನ್. ಟೀ.= ಟ್ರೈನೈಟ್ರೋ ಟೋಲ್ಯುಎನ್) ದ ಶಕ್ತಿಗೆ ಸಮಾನವಾಗಿತ್ತೆಂದು ತೋರಿಬಂದಿತು. ಸ್ಫೋಟವು ೧೭೬ ಮೈಲು ದೂರದವರೆಗೆ ತೀವ್ರವೇಗ ಅತಿ ಪ್ರಬಲವಾದ ಧೃಷ್ಟತರಂಗ (ಪ್ರೆಷರ್ ವೇವ್) ವನ್ನು ಹುಟ್ಟಿಸಿತು.

ಬಳಿಯಿಂದ ೧೩೫ ಮೈಲು ದೂರದಲ್ಲಿದ್ದ ಒಂದು ಜಪಾನಿ ಮೀನುಗಾರಿಕೆ ಹಡಗಿದಲ್ಲಿಯ ಸುಮಾರು ೨೩ ಜನ ಕೆಲಸಗಾರರ ಮೇಲೆ ಜೋರಾದ ಬಿಳಿಯ ಚಿಕಿತ್ಸಾ ಬೂದಿ (ರೇಡಿಯೋ ಎಕ್ಟಿವ್) ಭಸ್ಮವು ಸಿಂಪಡಿಸಲ್ಪಟ್ಟಿತು. ಅವರೆಲ್ಲರ ಕೈಮೈ ಸುಟ್ಟವು. ಅವರಲ್ಲೊಬ್ಬನು ಹೇಳುವಪ್ರಕಾರ, ಜಲಜನಕ ಗುಂಡು ಸೂರ್ಯನಂತೆ ತೇಜೋಮಯವಾಗಿ ಅನೇಕ ನಿಮಿಷಗಳ ವರೆಗೆ ಉರಿಯುತ್ತಿತ್ತು. ಬಳಿಕ ಸ್ಫೋಟವು ಕಡಿಮೆಯಾಗುತ್ತ ಕಾರು ಕೆಂಪಗಾದ ಕಬ್ಬಿಣದ ತುಂಡಿನಂತೆ ತೋರಿ, ಸ್ವಲ್ಪ ಹೊತ್ತಿನಲ್ಲಿ ಹಳದಿ ಬಣ್ಣದ್ದಾಗಿ, ನಂತರ ಪುನಃ ಕೆಂಪುವರ್ಣ ಹೊಂದಿತು ಕೊನೆಗೆ ನೆಲಗೋಪುರಾಕಾರದ (ಪಿಲ್ಲರ್ ಆಫ್ ಡಸ್ಟ್—ಶಿಖರ) ಪರಮಾಣುವೇಗವು ಅತಿ ಎತ್ತರವನ್ನು ಏರಿಕೊಂಡಿತು. ಇದನ್ನೆಲ್ಲ ನೋಡಿ ಅವರು ಇದ್ದಲ್ಲಿ ಬಿದ್ದು ಬಾಧಿಸರಿಯಲು ತೊಡಗಿದರು. ಈ ಬಾಧೆಯಿಂದಲೇ ಉಂಟಾದ ವೇದನೆಯು ಅಸಹನೀಯವಾಯಿತು. ತೇಜೋಧ್ವರ ಬಾಂಬಿಯು ತೋ ಕಾಸು ಪ್ರೈಮರಿವ್) ಮತ್ತು ಹೈಡ್ರೋಜನ್ (ಜೇರಿಯಮ್) ಜೋಡಣೆಯ ಸಂಯುಕ್ತ ದ್ರವ್ಯಗಳಿಂದ ಕೂಡಿದ್ದು ಎಂದು ಸಂಬಂಧಿಸಿದ ವಿಜ್ಞಾನಿಗಳು ಹೇಳುತ್ತಾರೆ ಈ ದ್ರವ್ಯಗಳು ಎಲುಬಿನೊಳಗಿನ ನಿರ್ಮಾಣಕ ನೇಣ (ಮೆರ್ರೋ) ಕ್ಕೆ ಘಾತಕವಾಗಿರುತ್ತವೆ ಆದರಿಂದ ಈ ಬಾಂಬಿಗೆ ಮಾನವ ಭಕ್ಷಕ (ಡೆತ್-ಮಿತ) ಎಂಬ ಹೆಸರೂ ಕೊಡಲ್ಪಟ್ಟಿದೆ.

ಹಿರೋಷಿಮಾದಮೇಲೆ ಒಗೆಯಲ್ಪಟ್ಟ ಅಣುಬಾಂಬು ೨೦ ಸಾವಿರ ಟನ್ ಟೀ. ಎನ್. ಟೀ. ಯಷ್ಟು ಶಕ್ತಿಯುಳ್ಳದಾಗಿತ್ತು. ಆದರೆ ಈ ಹೊಸ ಜಲಜನಕ ಗುಂಡಿನ ಸ್ಫೋಟವು ಅದಕ್ಕಿಂತ ೬೦೦-೭೦೦ ಪಟ್ಟು ವಿನಾಶಕ ಮತ್ತು ೧೯೫೪ ನೇ ನವೆಂಬರ್ ೧ನೇ ದಿನಾಂಕದ ಜಲಜನಕಾಸ್ತ್ರದ ಸ್ಫೋಟಕ್ಕಿಂತ ೩ ಪಟ್ಟು, ಪ್ರಬಲವಾಯಿತೆಂದೂ ಸ್ಫೋಟದ ದುಷ್ಪರಿಣಾಮವು ವಿಜ್ಞಾನಿಗಳು ನಿರೀಕ್ಷಿಸಿದುದಕ್ಕಿಂತ ಅನೇಕ ಪಟ್ಟು ಅಧಿಕವಾಯಿತೆಂದೂ ತಿಳಿದು ಬರುತ್ತದೆ. ಈ ಗುಂಡಿಗೆ ಕೆಲವು ವಿಜ್ಞಾನಿಗಳು ಒಂದೊಂದು ಸಲ ಫಲೋ-ಸ್ಯೂ ಕ್ಲೈಯಿಂಗ್ ಜೋಟ್ ಎಂದು ಕರೆಯುತ್ತಾರೆ ೧೦ ಕೋಟಿ ಎನ್ ಟೀ. ಟನ್‌ಗಳ ಸ್ಫೋಟಕ ಶಕ್ತಿಯ. ಇಂತಹ ಜೊಂಟುಗಳನ್ನು ಕಾಲ್ಪ ಲೋತ್ಪಾದಿಸಬಲ್ಲೆವು ಎಂದು ಅಮೆರಿಕೆಯು ವಿಜ್ಞಾನಿಗಳು ಬೆದರಿಸುತ್ತಿದ್ದಾರೆ.

ಇತ್ತೀಚೆಗೆ ರಶ್ಯಾದಲ್ಲಿಯೂ ಜಲಜನಕ ಬಾಂಬುಗಳ ಸ್ಫೋಟ ನಡೆಯುತೆಂದೂ, ಈ ಪ್ರಗತಿಯನ್ನು ಅಮೇರಿಕೆಯು ವಿಜ್ಞಾನಿಗಳು ಕಂಡು ಹಿಡಿದರೆಂದೂ ಜಪಾನಿ ಪತ್ರಿಕೆಯೊಬ್ಬರು ಕಳೆದ ಮಾರ್ಚ್ ೨೫ನೇ ದಿನಾಂಕ ಟೋಕಿಯೋದಲ್ಲಿ ನುಡಿದರು. ಸ್ಫೋಟವಾದ ಕೆಲವು ದಿನಗಳ ನಂತರ ತೇಜೋಧೂಳು ಜಪಾನಿನ ಸೀಲೆ ಸುಯಿತೆಂದೂ, ಆ ಮೇಲೆ ಅದು ಭೂಪ್ರದೇಶದ ಮೂಡಿ, ಒಂದು ವಾರದ ತರುವಾಯ ಅನೇಕ ಜಪಾನದಲ್ಲಿ ಸುರಿಯಿತೆಂದೂ, ಅದೇ ರೀತಿಯಲ್ಲಿ ಮುಂದಿನ ವಾರಗಳಲ್ಲಿ ಅದು ಆ ದೇಶದಮೇಲೆ ಬೀಳುವದೆಂದೂ, ಅವನು ಹೇಳಿದನು. ಸೈಬೇರಿಯದಿಂದ ಹೊರಟ ತೇಜೋಧೂಳಿನ ಭಸ್ಮವು ಜಪಾನದಲ್ಲಿ ಬಿದ್ದದ್ದರಿಂದಲೇ ರಶ್ಯವೂ ಜಲಜನಕ ಗುಂಡುಗಳನ್ನು ಪರೀಕ್ಷೆಗಾಗಿ ಸ್ಫೋಟಿಸಿರಬಹುದೆಂದು ಅಮೇರಿಕನ್ ವಿಜ್ಞಾನಿಗಳು ಕಂಡು ಹಿಡಿದರು ಎಂದಾತ ಅವನು ನುಡಿದನು.

ಈಗಿನ ಜಲಜನಕಾಸ್ತ್ರಸ್ಫೋಟದ ಅನುಭವದ ಫಲವಾಗಿ ಅಮೇರಿಕೆಯು ಪರಿಕಾರವು, ಇನ್ನು ಮುಂದಿನ ಪರೀಕ್ಷೆಗಳಲ್ಲಿ ಸಾಗರದ ದ್ವೀಪದಿಂದ ೪೫೦ ಮೈಲು ದಾಟಿ ಸಾರ್ವಾ (ರೇಡಿಯೋ) ದೊಳಗಿನ ಪ್ರದೇಶವು ಆವಾಸಯೋಗ್ಯವಲ್ಲವೆಂದು ಸಾರುವಂತಾಗಿ ನಿರ್ಣಯಿಸಿದೆ.

ಅಮೇರಿಕೆಯು ಹೀಗೆಯೇ ಇನ್ನು ಮುಂದೆ ಜಲಜನಕ ಬಾಂಬುಗಳ ಸ್ಫೋಟವನ್ನು ನಡೆಸುತ್ತ ಹೋದರೆ, ಅದರ ಪರಿಣಾಮ

4 ಪುಟಕ್ಕೆ

ಕೋಲಿನ ಒಂದು ಸೈನ್ಯ

ಹೈಡ್ರೋಜನ್ ಬಾಂಬುಗಳ ಸ್ಫೋಟ

3 ನೇ ಪುಟದಿಂದ

ವಾಗಿ ಕ್ರಮೇಣ ಎಲ್ಲ ಸಾಗರಗಳಲ್ಲಿಯೂ ನದಿಗಳಲ್ಲಿಯೂ ಶ್ರವಾಹಗಳಿ ಮೂಲಕ ಜಲಪ್ರಾಣಿಗಳು ವಿಕಿರಣಶೀಲ ಭಸ್ಮದ ಪ್ರಭಾವಕ್ಕೆ ಒಳಗಾಗುವ ಕಾರಣದಿಂದ ಅವುಗಳನ್ನು ತಿನ್ನುವ ಜನರೆಲ್ಲರೂ, ಪ್ರಾಣ ಘಾತಕ ವಿಷವು ತಗಲುವ ಗಂಡಾಂತರಕ್ಕೆ ಈ ಡಾಗಬಹುದೆಂದು ಜಪಾನ್ ಬ್ರಿಟನ್ ಮತ್ತು ಅನೇಕದೇಶಗಳು ತಮ್ಮ ಅಂಜಿಕೆಯನ್ನು ವ್ಯಕ್ತಪಡಿಸಿವೆ.

ಮುಂಜಿ ನಡೆಯುವ ಯುದ್ಧಗಳಲ್ಲಿ ಪರಮಾಣು ಫೂಳು, ಪಟ್ಟಣಗಳ ಮೇಲೆ ಬಿದ್ದರೆ, 3-4 ವರುಷಗಳವರೆಗೆ ಜನರು ಈ ನಗರಗಳಲ್ಲಿ ಬಾಳಿ ಬದುಕುವದು ಅಧಾನ್ಯವಾಗುವನೆಂದು ಜಪಾನಿ ವಿಜ್ಞಾನಿಗಳಲ್ಲೊಬ್ಬನಾದ ಡೊಕ್ಟರ್ ಒಚ್ಚು ಕಸು ಸುಡಿದನು.

ಈ ಹೊತ್ತು ಅಮೇರಿಕೆಯ ಬಳಿಯರು ಸಂಥ ಜಲಜನಕ ಬೊಂಬುಗಳಷ್ಟು ವಿನಾಶಕ ಗುಂಡುಗಳನ್ನು ತೃತೀಯ ಜಾಗತಿಕ ಯುದ್ಧದಲ್ಲಿ ಶತ್ರುವು ಅಮೇರಿಕೆಯ ಮೇಲೆ ಬೆಗೆದರೆ, ಆದರಿಂದ ಕಲ್ಪನಾತೀತ ಅನಾಹುತವಾದೀತೆಂದು ಸಂಯುಕ್ತ ಸಂಸ್ಥಾನದ ನಾರಿಗಳ ಸಂರಕ್ಷಣ ಆಡಳಿತಗಾರ ವಾಲ, ಪಿಟ್ಸೆರ್ನ್ನನು ವಿವರಿಸಿತ್ತಾನೆ. ಅವನ ಎಣಿಕೆಯ ಪ್ರಕಾರ ಅಮೇರಿಕೆಯ 67 ಮಹಾ ಪಟ್ಟಣಗಳ ಮೇಲೆ ಈ ಬೊಂಬುಗಳು ಬಿದ್ದರೆ, 90 ಲಕ್ಷ ಜನರು ಕೂಡಲೇ ಮರಣಹೊಂದುವರು, ಮತ್ತು 220 ಲಕ್ಷ ಜನರಿಗೆ ತೀವ್ರ ಗಾಯಗಳಾಗುವವು. ಗಾಯಾಳುಗಳಲ್ಲಿ ಅರ್ಧಕಿಂತ ಎಷ್ಟೋ ಹೆಚ್ಚು ಜನರಿಗೆ ವೈದ್ಯಕೀಯ ಉಪಚಾರಕೊಡಲು ತೀರ ಅಸಾಧ್ಯವಾಗುವದು. ಯಾಕಂದರೆ ಇಡೀ ಶಕ್ತಿಮ ಗೋಲಾರ್ಧದ ಚಿಕಿತ್ಸಾಲಯಗಳಲ್ಲಿ ಅವಾಗ ಬೇಕಾಗುವಷ್ಟು ಹಾಸಿಗೆಗಳನ್ನು ಒದಗಿಸುವದು ಅನಾಧ್ಯವೇ. ಹಾಗೂ 90 ಲಕ್ಷ ಹೆಣಗಳನ್ನು ಹೂಣಿಯುವ ಅಥವಾ ದಹನ ಮಾಡುವ ಸಮಸ್ಯೆಯು ಕಠಿನವಾಗುವುದು.

ಮೇಲೆ ಹೇಳಿದ ಸುದ್ದಿಗಳು ಪ್ರಕಟವಾಗಿ ಕೆಲವು ದಿನಗಳಲ್ಲಿಯೇ ಮಾರ್ಚ್ 26 ನೆ ಶಾಂತಸಾಗರದಲ್ಲಿ ಇನ್ನೊಂದು ಜಲಜನಕ ಬೊಂಬಿನ ಪ್ರಯೋಗ ಮಾಡಲಾಯಿತೆಂದು ಸಂಯುಕ್ತ ಸಂಸ್ಥಾನದ ಪರಮಾಣು ಸಮಿತಿಯು ತಿಳಿಸುತ್ತದೆ. ಅದು ಹಿಂದಿನ ಬಾಂಬಗಿಂತ ಸಣ್ಣದಿದ್ದರೂ, ಅದರ ಸ್ಫೋಟವು "ಅತ್ಯಂತ ಯಶಸ್ವಿ" ಆಯಿತೆಂದು ಹೇಳುತ್ತಾರೆ.

ಜಲಜನಕ ಕೇತ್ತಾತು (ಕೋಬೊಲ್ಟ) ಮತ್ತು ಇತರ ಪ್ರಶ್ನೆಗಳನ್ನು ಆಕಾಶಬಾಬ (ರೊಕೆಟ್) ವಿಮಾನದ ಮೂಲಕಮುಖ್ಯಾಲು ಗುಂಟೆಯಲ್ಲಿ ಜಗತ್ತಿನ ಯಾವತ್ಕೂಕಡೆಯಂದ ಇನ್ನೊಂದು ಬಾಗಕ್ಕೆ ವೈಯಲು ಸಾಧ್ಯವಾಗುವಂದ, ತೃತೀಯ ಜಾಗತಿಕ ಯುದ್ಧವು ಅನಿವಾರ್ಯವೆಂದು ವೀ-2 ಆಕಾಶಬಾಣ ಅಸ್ತ್ರವನ್ನು ಶೋಧಮಾಡಿದ ಪ್ರಸಿದ್ಧ ಜರ್ಮನ್ ವಿಜ್ಞಾನಿಯಾದ ಪ್ರೊ ಫೆಸ್ಸರ್ ಹೆರ್ಮನ್ ಓಬರ್ತನು ಹೇಳುತ್ತಾನೆ.

MATINEE AT "PRABHAT" BELLARY.

M G M,s

★ LOST ★

Fea:— ABBOT & COSTELLO.

—ಬಳ್ಳಾರಿ ಪ್ರಭಾತ್‌ದಲ್ಲಿ—

[ಬರ್ಡ್‌ವಾರ್] ಚಾಚಾ ಚೌದರಿ (ಹಿಂದಿ)

ತಾರಾಗಣ:- ರಾಜಪಿರಂಜನಿ, ದುರ್ಗಕೋಟೆ, ಷಣ್ಮಿಕಲ ನಟಿಸಿದ.

ಹಾಸ್ಯಚಿತ್ರ

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
6 ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ		Subscription will not be	
ಚಂದಾಸ್ವೀಕರಿಸುವುದಿಲ್ಲ.		accepted for less than 6 months	

To

Sri.

12-4-54

Edited Printed & Published by T.B. Keshava Rao, at Nava Bharat Printing Press, Bellary.

ನಾಡಿಪಾಡಿ

ಸೋಮವಾರ
ಏಪ್ರಿಲ್
೨೬, ೧೯೫೫

ವರ್ಷ 17 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 37 | ಉತ್ತಿಷ್ಠಕ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಬಿ. ಕೇಶವರಾವು

ಸಾರ್ವಜನಿಕ ರಂಗದಿಂದ ವಿಶ್ರಾಂತಿ ಪಡೆದಿಲ್ಲ ಎಂಬುದಾಗಿ ರಾಜಾಜಿ

ಮದ್ರಾಸಿನ ಮಾಜಿ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಈ ದಿನ ಪಿ.ಟಿ.ಐ. ಬಾತ್ಮೀದಾರರೊಬ್ಬರಿಗೆ ನೀಡಿದ ವಿಶೇಷ ಭೇಟಿಯಲ್ಲಿ ರಾಜಕೀಯದ ವಿಚಾರವಾಗಿ ಚರ್ಚಿಸಲು ಅಸಮ್ಮತಿಯನ್ನು ವ್ಯಕ್ತಪಡಿಸಿದರಾದರೂ ತಾವು ಸಾರ್ವಜನಿಕ ಜೀವನದಿಂದ ವಿಶ್ರಾಂತವಾಗಿಲ್ಲವೆಂದೂ, ಕಾಂಗ್ರೆಸ್ ಹೈಕಮಾಂಡಿನ ಆಜೀವ ಸದಸ್ಯರು ತಾವೆಂದು ಭಾವಿಸಿಕೊಂಡಿದ್ದು ಮುದಾಗಿಯೂ ತಿಳಿಸಿದರು.

ಈಗ ವಾಲ್ಮೀಕಿ ರಾಮಾಯಣದಲ್ಲಿ ತಮ್ಮ ಆಸಕ್ತಿ ಕೇಂದ್ರೀಕೃತವಾಗಿದೆಯೆಂದೂ ಆದು ಸಾರ್ವಲಮಹಾಕಾವ್ಯ ವೊಂದೇ ಅಲ್ಲದೆ ಎಲ್ಲ ನೀತಿಯ ರಾಜಕಾರಣಿಗಳಿಗೂ ಉಗ್ರ ಯುಕ್ತವಾದ ವಿಷಯಗಳನ್ನು ಒಳಗೊಂಡಿದೆಯೆಂದೂ ರಾಜಾಜಿ ಹೇಳಿದರು.

ಸೈಕಲ್ ಡಿಕ್ಕಿ. ಪರಿಣಾಮ ಹಣ ತೆಗೆದುಕೊಂಡು ಸರಾರಿ

ಬಳ್ಳಾರಿ ಮೇಲ್ ಕಾರ್ಟರ್ ಶ್ರೀ ಶಿವನಾರಾಯಣ್ ಎಂಬುವರು ಬೆಂಗಳೂರು ರಸ್ತೆಯಲ್ಲಿ 164 ರೂಗಳ ಎರಡು ಟೆಲಿಗ್ರಾಂ ಮನಿಯಾರ್ಡರುಗಳನ್ನು ಏಪ್ರಿಲ್ 13 ರಂದು ಸಲ್ಲಿಸಲು ಹೋಗುತ್ತಿದ್ದಾಗ ಯಾರೋ ಒಬ್ಬರು ಸೈಕಲ್ ಡಿಕ್ಕಿ ಹೊಡೆದು ಬಿದ್ದಾಗ ಇನ್ನೊಬ್ಬರು ಹಣ ಅಪಹರಿಸಿಕೊಂಡು ಓಡಿದರೆಂದು ತಿಳಿದು ಬಂದಿದೆ.

ಮುದ್ರಾಸಿನಲ್ಲಿ ಕಾಂಗ್ರೆಸ್ ಪಕ್ಷ ಬಲಗೊಂಡಿದೆ

ಕಾಂಗ್ರೆಸ್ ಸರಕಾರ ಮದರಾಸ್ ಸಂಸ್ಥಾನದ ಶಾಸನ ಸಭೆಯಲ್ಲೂ ಮತ್ತು ಹೊರಗೂ ಹಿಂದಿಗಿಂತ ಹೆಚ್ಚು ಶಕ್ತಿಯುತವಾಗಿದೆ. ಎಂದು ಮಾಜೀ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಪುರಾಣದ ಅಗ್ನಿಶಾಸ್ತ್ರ ಸುಳ್ಳಲ್ಲ

ಬರ್ಮಾನ್‌ನಲ್ಲಿ ಮುನ್ಸಿಪಲ್ ಕಮಿಶನ್ನರ ಮನೆಯ ವಿವಿಧ ಭಾಗಗಳಲ್ಲಿ ಹೊಗೆ ಇಲ್ಲದ ಬೆಂಕಿ ಒದ್ದೆ ವಸ್ತುಗಳ ಮೇಲೂ ಉರಿಯುತ್ತಿದೆ. ಈ ವಿಚಿತ್ರವನ್ನು ನೋಡಲು ಸಾವಿರಾರು ಜನಬರುತ್ತಿದ್ದರು ಈ ಬೆಂಕಿ ಹೆಚ್ಚುವುದೂ ಇಲ್ಲ. ನೊಂದುವುದೂ ಇಲ್ಲ. ಯಾವುದೋ ಮಂತ್ರದಿಂದ ಇದು ಉಂಟಾಗಿರಬಹುದೆಂದು ಅಂದಾಜು ಮಾಡಲಾಗಿರುವದು. ಕಮೀಶನರು ಈ ವಿಪತ್ತಿನಿಂದ ಪಾರಾಗಲು ಶಾಸ್ತ್ರೋಕ್ತ ಪೂಜಾ ಯಜ್ಞಗಳಲ್ಲಿ ತೊಡಗಿರುವರು.

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

O. S. 185/53 I. A. 148/54.

ರಾಮಾನಾಯಿಡು ತಂದೆ ವೆಂಕಟಪ್ಪ ನಾಯಿಡು, ವಯಸ್ಸು 50 | ನಾಯಿಡು ಕುಲ ಜಿರಾಯ್ತಿ, ವ್ಯಾಪಾರ, ನೆಲ್ಲೂರು ಪಾಳ್ಯಂ ಗ್ರಾಮ | ವಾದಿ ಆತ್ಮಕೂರು ತಾಲ್ಲೂಕು, ನೆಲ್ಲೂರು ಜಿಲ್ಲಾ |

Vs

ಜಯನ್ನೋರ್ ಬಸಪ್ಪ ತಂದೆ ಜಯನ್ನೋರು ಜಂಬಪ್ಪ ವಯಸ್ಸು 45 | ಪ್ರತಿ ಲಿಂಗಾಯ್ತಿ, ಜಿರಾಯ್ತಿ, ಚೇಳ್ಳಗುರ್ಕಿ ಗ್ರಾಮ, ಬಳ್ಳಾರಿ ತಾಲೂಕು | ವಾದಿ

I. A. 148/54 ಪ್ರಕಾರಕ್ಕೆ ಪ್ರತಿವಾದಿಯು ತನ್ನ ಮೇಲಾದ ಎಕ್ಸ್‌ಪಾರ್ಟ್ ಡಿಕ್ರಿಯನ್ನು ರದ್ದು ಪಡಿಸಲು ಅರ್ಜಿ ಇಟ್ಟಿದ್ದು ಅಕರ ವಿಚಾರಣೆಯು 27-5-54 ಕ್ಕೆ ಇದೆ. ಈ ವಿಷಯದಲ್ಲಿ ಯಾರಿಗಾದರೂ ತಕರಾರು ಇದ್ದಲ್ಲಿ ಖುದ್ದಾಗಲಿ ವಕೀಲರ ಮೂಲಕವಾಗಿ ಯಾಗಲಿ ಆ ದಿನ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ತಾವರು ಪಡಿಸತಕ್ಕದ್ದು.

ಬಿ. ಕಲ್ಲುರಾವ್
ಪ್ರತಿವಾದಿಯ-ಆಡೊಕ್ಕೇಟ್

— ಬಳ್ಳಾರಿ ಪ್ರಭಾತ್‌ದಲ್ಲಿ —

೨೩-೪-೫೫ ಶುಕ್ರವಾರದಿಂದ

ಮಹಾತ್ಮ ಪಿಕ್ಚರ್ಸ್‌ರವರ ಆಕರ್ಷಕ ಕನ್ನಡ ಚಿತ್ರ

★ ಮುಟ್ಟಿದ್ದೆಲ್ಲಾ ಚಿನ್ನ ★

ತಾರಾಗಣ:- ಪ್ರತಿಮಾದೇವಿ, ಕಾಮಿನಿ, ವೀರಭದ್ರಪ್ಪ, ನರಸಿಂಹರಾಜ ಬಾಲಕೃಷ್ಣ, ಮಹಾಬಲರಾವು.

ಪಂಡಿತ ಜವಹರಲಾಲ್ ನೆಹರೂರವರಿಗೆ

ದೇಶಕ್ಕೆ ದೇಶವೇ ಬೆಂಬಲ ಕೊಡಬೇಕು

ಅಮೇರಿಕಾ, ಪಾಕೀಸ್ತಾನ ಸೈನಿಕ ಸಹಾಯ ಒಪ್ಪಂದಕ್ಕೆ ಇದೇ

—: ಯೋಗ್ಯ ಉತ್ತರ :—

ನಮ್ಮ ಇಚ್ಛೆಯ ವಿರುದ್ಧ ಮತ್ತು ನಮ್ಮ ಹಾಗೂ ಏಶಿಯದ ಇತರ ನೆರೆ ರಾಷ್ಟ್ರಗಳ ತೀವ್ರ ವಿರೋಧವನ್ನು ಕೂಡ ಲೆಕ್ಕಿಸದ ಪಾಕಿಸ್ತಾನ ಅಮೇರಿಕೆಗಳು ಸೈನಿಕಸಹಾಯ ಒಪ್ಪಂದ ಮಾಡಿಕೊಂಡುದು ಈಗ ಖಂಡಿತವಾದಂತಾಗಿದೆ.

ಈ ಒಪ್ಪಂದದಿಂದಾಗಬಹುದಾದ ಪ್ರತಿಕ್ರಿಯೆಗಳ ಬಗ್ಗೆ ನಿಸ್ಸಂಧಿಗ್ಧವಾದ,ದೂರಾಲೋಚನೆಮಾಡಿ ಸೌಜನ್ಯ ಶಬ್ದಗಳಿಂದ ಆದರೆ ಗಂಭೀರವಾಣಿಯಿಂದ ಲೋಕಸಭೆಯಲ್ಲಿಯೂ ಸಾರ್ವಜನಿಕ ವ್ಯಾಖ್ಯಾನಗಳಲ್ಲಿಯೂ ವಿವೇಚಿಸಿದ್ದು, ಮತ್ತು ಅಮೇರಿಕೆಯ ಅಧ್ಯಕ್ಷರು ಬರೆದ ಪತ್ರಕ್ಕೆ ದಿಟ್ಟತನದ ಮತ್ತು ಸ್ಪಷ್ಟೋಕ್ತಿಯ ಉತ್ತರಕೊಟ್ಟದ್ದು ಇತಿಹಾಸದಲ್ಲಿ ನಮೂದಿಸಲ್ಪಡುವ ಸಂಗತಿಗಳಾಗಿವೆ.

ನೆನ್ನೆ ರಕ್ತನಾಳಗಳಲ್ಲಿ ದೇಶಾಭಿಮಾನದ ಬಿಸಿಯಾದ ಕೂಡಾ ರಕ್ತವಿಡುವ ಭಾರತೀಯನು ಜಾತಿ, ಮತ, ಪಂಥ ಪಂಗಡಗಳಿಗಿಂತಲೂ ಭಾರತವೇ ತಾರತಮ್ಯ ಭಾವವನ್ನು ತೋರಿಸಿದ ಶ್ರೀ ನೆಹರೂರವರ ಬೆಂಬಲಕ್ಕೆ ನಾವಿಂದು ಆಧುನಿಕ ಕಾಲದಲ್ಲಿ ಅತಿ ವಿಸ್ತಾರವೂ ಜೀವಂತವೂ ಸಾರ್ವಾಭೌಮ್ಯವನ್ನು ಕೈಗೊಂಡಿರುವಂತಹವನ್ನಾದ ಜಗತ್ತಿನ ಅತ್ಯಾಧುನಿಕ ಸೈನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದುದೂ ಆದ ಅಮೇರಿಕೆಯೊಂದಿಗೆ ಹೀಗೆ ಹದಗೆಟ್ಟ ಅರ್ಥಿಕ ಪರಿಸ್ಥಿತಿಯಲ್ಲಿರುವ ಒಂದು ದಿವಾಳಿತನಕ್ಕೆ ಹತ್ತಿರವಾಗಿರುವ ಭಾರತವು ಸಮಗ್ರವಾಗಿ ಅದರಲ್ಲಿ ವಿಶೇಷವಾಗಿ ಕಾಶ್ಮೀರ ಪ್ರಕರಣದಲ್ಲಿ ವೈರಿಭಾವನೆ ತಾಳಿರುವಂಥದ್ದೂ ಆದ ಪಾಕೀಸ್ತಾನವು ಮಾಡಿಕೊಂಡ ಈ ದುಷ್ಟ ಒಪ್ಪಂದವು ಏಶಿಯಾದಲ್ಲಿ ಶಾಂತಿ ಭಂಗವಾಗುವದಕ್ಕೆ ಎಡೆಮಾಡಿ ಕೊಟ್ಟಿದೆ.

ಭಾರತದಲ್ಲಿಯ ಎಲ್ಲಾ ವೃತ್ತ ಪತ್ರಿಕೆಗಳೂ ಜನತೆಯೂ ಡಾಣಾಡಂಗೂರವಾಗಿ ಈ ದುಷ್ಟ ಒಡಂಬಡಿಕೆಯನ್ನು ನಿಷೇಧಿಸಿದ್ದುದು ಬಹಿರಂಗದಲ್ಲಿ ಪ್ರಪಂಚದಲ್ಲಿಯ ಲೋಕ ರಾಜ್ಯ ಪದ್ಧತಿಯ ಕೈವಾರ ತಾನೆಂದು ನಟಿಸುತ್ತಿರುವ ಮತ್ತು ಶಾಂತಿ ಸಾಧಕನು ತಾನೆಂದು ಹೆಮ್ಮೆ ಪಡುತ್ತಿರುವ ಅಮೇರಿಕೆಯು ಈ ಭಾತುಳ ಮಾರ್ಗದ ಖಂಡನೆಯೇ ಸರಿ.

ತನ್ನ ಸ್ವಾತಂತ್ರ್ಯವನ್ನು ಅಮೇರಿಕೆಗೆ ಅಡವಿಟ್ಟು, ಆರ್ಥಿಕ ಹೊಂದರೆಗೀಡಾಗಿರುವ ಪಾಕಿಸ್ತಾನವು ದುಡ್ಡಿನಾಶೆಯಿಂದ ಅಮೇರಿಕೆಯ ಅನುಯಾಯಿತ್ವವನ್ನು ಸ್ವೀಕರಿಸಲು ನಿಜವಾಗಿ ಸ್ವತಂತ್ರವಿರುವಂತೆ, ಪಾಕಿಸ್ತಾನದೊಡನೆ ತನ್ನ ಇಚ್ಛೆಗೆ ಸರಿದೋರಿದಂತೆ ವರ್ತಿಸಲು ಅಮೇರಿಕೆಯೂ ಸ್ವತಂತ್ರವಿದೆ. ಆದರೆ ಈ ದುಷ್ಟ ಒಡಂಬಡಿಕೆಯಿಂದಯುದ್ಧಕ್ಕೆ ಆಮಂತ್ರಣ ಇತ್ತಂತಾಗುವದರಿಂದಲೂ ಮತ್ತು ಸಾಮಾನ್ಯವಾಗಿ ವಿಶೇಷವಾಗಿ ಪಾಕಿಸ್ತಾನದ ನೆರೆ ರಾಷ್ಟ್ರಗಳಾದ ಭಾರತ ರಷಿಯಾ ಅಫಘಾನಿಸ್ತಾನ, ಚೀನೀ ಪ್ರಜಾರಾಜ್ಯ ಮೊದಲಾದ ದೇಶಗಳಿಗೆ ನಿರಂತರ ಗಂಡಾಂತರವುಂಟಾಗುವದರಿಂದಲೂ, ಬೇಕಾದಾಗ ಈ ದೇಶಗಳಲ್ಲಿಯ ಶಾಂತಿ ಸುವ್ಯವಸ್ಥೆಗಳಿಗೆ ಭಂಗತರುವಂಥನಾಗಿರುವದರಿಂದಲೂ ಈ ಏಶಿಯಾ ಒಪ್ಪಂದದ ಮೂಲಕ ಈ ದೇಶಗಳು ಉದ್ವಿಗ್ನವಾಗಿವೆ.



ಇದೊಂದು ನಿರ್ಮೂಲ್ಯ ಕಾರ್ಯವೆಂದು ಪರಿಗಣಿಸುವದು ಶಕ್ಯವಿಲ್ಲ. ಕೌಶಿಂಗ್ಯನ್ನದಿಂದ ದೊರೆತ ನೂತನ ನರ್ಸದ ಕಾಣಿಕೆ ಎಂದು ಕರಾಚಿಯು ಭಾವಿಸಬಹುದು ಆದರೆ ಈ ಕ್ರಮದಿಂದ ನೆರೆರಾಷ್ಟ್ರಗಳಮೇಲೆ ಈಗಾಗಲೇ ಉಗ್ರ ಪ್ರತಿಕ್ರಿಯೆಗಳಾಗಿವೆ. ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಪಾಕಿಸ್ತಾನದ ಸ್ವಾತಂತ್ರ್ಯವನ್ನು, ಪಾಕಿಸ್ತಾನದ ಈಗಿನ ಹಳೆಯ ಜನರು ಮೂರಿಕೊಂಡು ಅವಹೇಳನೆಗೆ ಗುರಿಯಾದುದಣ್ಣಾಗಿ ಪಾಕಿಸ್ತಾನದಲ್ಲಿಯ ಹಲಕೆಲವು ಪತ್ರಿಕೆಗಳೂ ತರುಣರೂ ಈ ಒಡಂಬಡಿಕೆಯ ವಿರುದ್ಧ ಕೂಗಾಟ ನಡೆಸಿದ್ದಾರೆ. ಈ ವಿರೋಧಾಭಿಪ್ರಾಯದವರನ್ನು ಪಾಕಿಸ್ತಾನದಲ್ಲಿಯ ಸರ್ವಾಧಿಕಾರಿಗಳು ಹತ್ತಿಕ್ಕಬಹುದು. ಆದರೆ ಈ ಅಡಳಿತಗಾರರು ತಮ್ಮ ನೆರೆ ರಾಷ್ಟ್ರಗಳ ಸೌಹಾರ್ದಭಾವಕ್ಕೆ ಒಮ್ಮೆ ಎರವಾದರೆ ಮತ್ತೀನು ಕೊಟ್ಟರೂ ಅದು ಮರಳಿ ಬರಲಾರದು.

ಭಾರತೀಯರಾದ ನಾವು ಇದರಿಂದ ಧೃತಿಗೆಡಬಾರದು ಯಾಕೆಂದರೆ ದೂರದೃಷ್ಟಿಯುಳ್ಳ ಸೂಕ್ಷ್ಮ ಮುನ್ನೋಟವುಳ್ಳ ನುತ್ತು ಇಡೀ ಏಶಿಯಾದ ಧುರೀಣರೆಂದು ಮನ್ನಿಸಲ್ಪಟ್ಟ ಪಂ. ನೆಹರು ಅವರ ಮಾರ್ಗದರ್ಶನ ನಮಗಿದೆ. ನಾವೆಲ್ಲ ಭಾರತೀಯರು ನಮ್ಮ ಜಾತಿ, ಮತ, ಪಂಥಗಳ ಭೇದಭಾವನೆಯನ್ನು ಮರೆತು ಏಳಿ ಪುರುಷನಂತೆ ಏಕರಾಷ್ಟ್ರದ ಮನೋಭಾವನೆಯಿಂದ ಪ್ರೇರಿತರಾಗಿ ಪ್ರತಿಕೂಲ ಪರಿಸ್ಥಿತಿಯು ಬಂದಾಗ ನಮ್ಮ ಮಾತೃ ಭೂಮಿಯ ಉದ್ಧಾರಕ್ಕಾಗಿ ಅವರ ಜೊಂಗಾವಲಿಗೆ ನಿಲ್ಲಬೇಕು. ಇಷ್ಟೊಂದು ಪರಿಶ್ರಮದಿಂದ ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಸಂರಕ್ಷಿಸುವದಕ್ಕೋಸ್ಕರ, ನಮ್ಮ ನಮ್ಮೊಳಗೆ ತೀವ್ರವಾದ ಮತ ಭೇದಗಳಿದ್ದರೂ ಇಂದಿನ ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅವೆಲ್ಲವನ್ನು ಬದಿಗಿಟ್ಟು ಒಕ್ಕಟ್ಟಾಗಬೇಕೆಂದು ನನ್ನ ಆಗ್ರಹದ ಪ್ರಾರ್ಥನೆಯಿದೆ. ಈ ಪರಿಸ್ಥಿತಿಯ ಗಾಂಭೀರ್ಯವನ್ನರಿತು ನಮ್ಮ ಸರಕಾರವು ಯೋಗ್ಯ ಕ್ರಮವನ್ನು ಕೂಡಲೆ ಕೈಕೊಳ್ಳಬೇಕು. ಮುಂಜಾಗ್ರತೆ ವಹಿಸುವದೆಂದರೇನೇ ಸನ್ನದ್ಧರಾಗಿರುವದು. ನಮ್ಮ ಮೇಲೆ ಆಗಬಹುದಾದ ಯಾವುದೇ ದಾಳಿಯನ್ನೆದುರಿಸಲು ನಾವು ಸಿದ್ಧತೆಯಲ್ಲಿರಬೇಕು.

ನಮ್ಮ ಶಾಲೆ ಕಾಲೇಜುಗಳಲ್ಲಿ ಕಡ್ಡಾಯದ ಸೈನಿಕ ಶಿಕ್ಷಣವನ್ನು ಪ್ರಾರಂಭಿಸುವ ಕಾಲವೀಗ ಒದಗಿ ಬಂದಿದೆಯೆಂದು ನಾನು ತಿಳಿಸುತ್ತೇನೆ. ದೃಢಕಾಯರಾದ ನಾಗರೀಕರೆಲ್ಲರಿಗೂ ಸೈನಿಕ ಶಿಕ್ಷಣವುಚಿತ್ತಾಯದ್ದಾಗಬೇಕು.

ನಾವು ಶಾಂತತಾನಾದಿಗಳೇನೋ ಆಹುದು ನಮ್ಮನೆಗೆ ರಾಷ್ಟ್ರಗಳ ಮೇಲೆ ಬಾಳೆ ಮಾಡುವ ಹೊಂಚು ಹಾಕಿದರೆ, ಇಲ್ಲವೆ ನಮ್ಮಲ್ಲಿಯ ಶಾಂತಿಯನ್ನು ಹಿಂಸಾವೃತ್ತಿಯಿಂದ ಕದಡಲು ಹವಣಿಸಿದರೆ, ನಾವು ಸುಮ್ಮನೆ ಕೈಕಟ್ಟಿಕೊಂಡು ಕುಳಿತು ಬಹುಕಷ್ಟದಿಂದ ಗಳಿಸಿದ ನಮ್ಮ ಸ್ವಾತಂತ್ರ್ಯವನ್ನು ಕಳೆದು ಕೊಳ್ಳುವಾದೀತೇ?

ಮದ್ರಾಸು ಹೊಸ ಮಂತ್ರಿ ಮಂಡಲದಲ್ಲಿ ಯಾರು ಯಾರು ?

ಶ್ರೀ ಕೆ. ಕಾಮರಾಜ ನಾಡಾರ್‌ರವರು ಮುಖ್ಯಮಂತ್ರಿಗಳಾಗಿ ಸಾರ್ವಜನಿಕ ಪೋಲೀಸ್ ಮತ್ತು ಗೃಹಕಾಟೆಗಳ ಆಡಳಿತ ಹೊಣೆಯನ್ನು ಹೊತ್ತಿದ್ದಾರೆ. ಶ್ರೀ ನಾಡಾರರು ನಿಸ್ಸೀಮ ದೇಶಭಕ್ತ. 1923ರಲ್ಲಿ ತ್ರಿಯುತರು ವೈಜ ಸತ್ಯಾಗ್ರಹ ಕಾಲದಲ್ಲಿ ರಾಮನಾಡಿನಿಂದ ಅಸಂಖ್ಯಾತ ಯುವಕರಲ್ಲಿ ದೇಶಭಕ್ತಿಯನ್ನು ಒಡಮೂಡಿಸಿ ನಾಗಪುರಕ್ಕೆ ಕಳುಹಿಸಿದರು. 1921ರಲ್ಲಿ ಶ್ರೀ ನಾಡಾರರು ರಾಜಕೀಯವನ್ನು ಪ್ರವೇಶಿಸಿದರು 1930ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಬಂಧಿತರಾಗಿ 2 ವರ್ಷ ಸೆರೆಮನೆಯಲ್ಲಿದ್ದ ಇವರು ಕ್ರಮೇಣ ಟಿ ಎನ್ ಸಿಯ ಕಾರ್ಯದರ್ಶಿಗಳಾದರು 1937ರಲ್ಲಿ ಇವರು ಮದ್ರಾಸು ಶಾಸನ ಸಭೆಗೆ ಸತ್ತೂರ್ ಮತದಾರ ಕ್ಷೇತ್ರದಿಂದ ಆರಿಸಿ ಬಂದಿದ್ದರು. ಕೇಂದ್ರ ಶಾಸನಸಭೆಗೆ 1952ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಇವರು ಆರಿಸಿ ಹೋಗಿದ್ದಾರೆ.

ಶ್ರೀ ಎ. ಬಿ. ಸೆಟ್ಟಿರು ವೈದ್ಯಕೀಯ ಸಾರ್ವಜನಿಕ ಆರೋಗ್ಯ, ಸಹಕಾರ ಮತ್ತು ನಿವೃತ್ತಿ ಅಧಿಕಾರಿಗಳ ಯೋಗಕ್ಷೇಮ ಖಾತೆಗಳ ಮೇಲ್ವಿಚಾರಣೆಯ ಅಧಿಕಾರವನ್ನು ಸಹಕೊಂಡಿದ್ದಾರೆ. ಹಳೆ ಶಾಸನ ಸಭೆಯಲ್ಲಿ ಇವರು, 1929ರಿಂದ 1936ರಲ್ಲಿ ವರೆಗೆ ಶ್ರೀ ಸೆಟ್ಟಿರು ಸದಸ್ಯರಾಗಿದ್ದರು. ಇವರು ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರ ಮಂತ್ರಿಮಂಡಲದಲ್ಲೂ ಶ್ರೀ ಕುಮಾರಸ್ವಾಮಿ ರಾಜಾರವರ ಮಂತ್ರಿಮಂಡಲದಲ್ಲೂ ಮತ್ತು ನಿನ್ನೆಯ ಶ್ರೀ ರಾಜಾಜಿಯವರ ಸಚಿವ ಸಂಪುಟದಲ್ಲೂ ಮಂತ್ರಿಗಳಾಗಿದ್ದರು. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾರ್ಯಕರ್ದಿಂದ ಪ್ರಜೋಡ ಬಹುಮತದೊಡನೆ ಆರಿಸಿಹೋದ ಶ್ರೀ ಸೆಟ್ಟಿರು, ಆಹಳಿತ ದಕ್ಷರಾಗಿದ್ದಾರೆ.

ಶ್ರೀ ಎಂ. ಭಕ್ತವತ್ಸಲಂರವರ ಕೈಗೆ ಕೃಷಿ, ಕಾಡು, ಹಳ್ಳಿಗಾಡುಗಳ ರಕ್ಷಣೆ, ವಿಶೇಷ ವ್ಯವಸಾಯ, ಸಹಾಜಜಿಕ ಯೋಜನೆ· ರಾಷ್ಟ್ರೀಯ ಸಾಮುದಾಯಿಕ ಯೋಜನೆ ಕೈಗಾರಿಕೆ ಮತ್ತು ಕಾರ್ಮಿಕರ ರಕ್ಷಣಾಧಿಕಾರ ದೊರಕಿದೆ. ಇವರು 1932ರ ಸತ್ಯಾಗ್ರಹದಲ್ಲಿ ಬಂಧಿತರಾಗಿದ್ದರು. ಕೇಂದ್ರದ ಪ್ರಥಮ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಮಂತ್ರಿಗಳೂ ಆಗಿದ್ದರು. ರಾಜಾಜಿ ಮಂತ್ರಿ ಮಂಡಲದಲ್ಲಿದ್ದವರು ನ್ಯಾಯವಾಯ ಮಂತ್ರಿಗಳಾದ್ದರು.

ಶ್ರೀ ಸಿ. ಸುಬ್ರಮಣ್ಯಂರು ಆಹಾರ, ಆರ್ಥಿಕ, ವಿದ್ಯೆ, ಚುನಾವಣೆ, ಸುದ್ದಿ ಮತ್ತು ಕಾನೂನು ಖಾತೆಗಳ ಮಂತ್ರಿಗಳಾಗಿದ್ದಾರೆ. ಇವರು 1930ರಲ್ಲಿ ಕಾಂಗ್ರೆಸ್ಸನ್ನು ಸ್ಥಾಪಿಸಿದರು ಕೊಯಂಬತ್ತೂರಿನಿಂದ ಇವರು ಕಳೆದ ಚುನಾವಣೆಯಲ್ಲಿ ವಿಜಯಿಗಳಾದರು. ರಾಜಾಜಿ ಕಾಲದಲ್ಲಿ ವಿದ್ಯೆ ಆಹಾರ ಮತ್ತು ಆರ್ಥಿಕ ಖಾತೆಯ ಮಂತ್ರಿಗಳಾಗಿದ್ದರು.

ಶ್ರೀ ಎಂ. ಎ. ಮಾಣಿಕ್ಯನೇಲು ನ್ಯಾಕರ್‌ರವರು ಭೂಕಂದಾಯ, ವಾಣಿಜ್ಯ ತೆರಿಗೆ ಮತ್ತು ಹಳ್ಳಿಯ ಉದ್ಧಾರ ಖಾತೆಯ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಕಾಮನವೀಲ್ ಪಕ್ಷದಿಂದ 1952ರ ಚುನಾವಣೆಯಲ್ಲಿ ಮದ್ರಾಸು ಎಸೆಂಬ್ಲಿಗೆ ಆರಿಸಿಬಂದ ಇವರು ವಕೀಲರೂ ಆಗಿದ್ದು ದಕ್ಷಿಣ ಆರ್ಕಾಟ್ ಜಿಲ್ಲೆಯವರಾಗಿದ್ದಾರೆ. ಶ್ರೀ ಸಿ. ಆರ್. ಮಂತ್ರಿಮಂಡಲದ ಕಾಲದಲ್ಲೂ ಇವರು ಕಂದಾಯ ಮಂತ್ರಿಗಳಾಗಿದ್ದರು.

ಶ್ರೀ ರಾಜಪಣ್ಣಾಗ ರಾಜೇಶ್ವರ ಸೇತುಪತಿಯವರು, ರಾಮನಾಥಪುರಂ ಮತದಾನ ಕ್ಷೇತ್ರದಿಂದ 1952ರಲ್ಲಿ ಮದ್ರಾಸ ಎಸೆಂಬ್ಲಿಗೆ ಆರಿಸಿ ಬಂದರು. ಇವರುಸ್ವಕೃತ ಸಾರ್ವಜನಿಕ ಕಾಮಗಾರಿ, ಇಂಜಿನಿಯರಿಂಗ್ ಕಾಲೇಜು, ನಿಯಂತ್ರಣ, ಸರಕಾರಿ ಪ್ರೆಸ್ ಮೊದಲಾದುವುಗಳ ಅಧಿಕಾರವನ್ನು ಕೈಕೊಂಡಿದ್ದಾರೆ. ಈ ಹಿಂದೆ ಇವರು ರಾಮನಾಡ್ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿದ್ದರು.

ಶ್ರೀ ಬಿ. ಪರಮೇಶ್ವರನ್‌ರವರ ಕೈಗೆ ಹರಿಜನ ಉದ್ಧಾರ, ಹಿಂದೂಧಾರ್ಮಿಕ ಉಂಬಳಿ, ರಜಿಸ್ಟ್ರೇಷನ್ ಮತ್ತು ಐ.ನಿ.ರೋಧ ಅಧಿಕಾರವು ಸಿಕ್ಕಿದೆ. ಇವರು ಸನ್ಮಾನ್ಯ ಮದ್ರಾಸಿನ ಮೇಯರ್ ಆಗಿದ್ದರೆ. ತ್ರಿಯುತರು ಶ್ರೀ ಕುಮಾರಸ್ವಾಮಿ ರಾಜಾರ ಮಂತ್ರಿಮಂಡಲದಲ್ಲೂ ಮಂತ್ರಿಗಳಾಗಿದ್ದರು. ಇವರ ದೇಶಪ್ರೇಮ, ಕಾರ್ಯದಕ್ಷತೆ ಯಾರೂ ಮೆಚ್ಚುವಂಥಹದು.

ಶ್ರೀ ಎಸ್. ಎಸ್. ರಾಮಸ್ವಾಮಿ ಪಡಯಾಚಿ ಇವರು ಮೂಲತಃ ದಕ್ಷಿಣ ಆರ್ಕಾಟ್ ಜಿಲ್ಲೆಯ ವೈಶ್ಯ ಕುಟುಂಬಕ್ಕೆ ಸೇರಿದವರು. 1949ರಲ್ಲಿ ಕಡಲೂರಿನ ನಗರಸಭೆಯ ಅಧ್ಯಕ್ಷರಾಗಿದ್ದರು. ಕಳೆದ ಚುನಾವಣಾ ಕಾಲದಲ್ಲಿ ಹುಟ್ಟಿಕೊಂಡ ತಮಿಳುನಾಡು ಪ್ರಮುಖ ಪಕ್ಷದ ಮುಂದಾಳುವಾಗಿ 19 ಸ್ಥಾನಗಳನ್ನು ಗೆದ್ದರು.

ಬಳ್ಳಾರಿಯ ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ

O. S. 133/50 E. P. 50/53

ಗಟ್ಟು ನೆಂಕಯ್ಯ ಶೆಟ್ಟಿ, ತಂದೆ ವೀರಯ್ಯ ಶೆಟ್ಟಿ } ಡಿಕ್ರಿ
ವಯಸ್ಸು 42, ವೈಶ್ಯ, ವರ್ತಕ, ಆದವಾನಿ. } ಹೋಲ್ಡರ್

Vs

1) ಲಕ್ಷ್ಮೀ ವೆಂಕಟೇಶ್ವರ ಜಿನ್ನಿಂಗ್ ಫ್ಯಾಕ್ಟರಿ ಆದವಾನಿ.
2) ಲಕ್ಷ್ಮೀ ವೆಂಕಟೇಶ್ವರ ಜಿನ್ನಿಂಗ್ ಫ್ಯಾಕ್ಟರಿ ಮ್ಯಾನೇಜರ್, ಕಟ್ಟಾ ಅರವಯ್ಯ ತಂದೆ ತಿಪ್ಪಯ್ಯ - ವಯಸ್ಸು 55 ವೈಶ್ಯ.
3) ವೆಂಕಪ್ಪ, ವಯಸ್ಸು 33 }
4) ತಿಪ್ಪಣ್ಣ ,, 30 } ಇವರೆಲ್ಲಾ ಕಟ್ಟಾ ಅರವಯ್ಯನ
5) ಹೇಮಣ್ಣ ,, 25 } ಮಕ್ಕಳು.
6) ರಾಮಣ್ಣ ,, 22 }

ಇವರೆಲ್ಲಾ ವೈಶ್ಯ ಕುಲದ ವರ್ತಕರಾಗಿ ಆದವಾನಿಯಲ್ಲೂ, ಸಿರುಗುಪ್ಪೆ ತಾಲೂಕು ಬರಗಲದಿನ್ನೆಯಲ್ಲೂ ವಾಸಮಾಡುತ್ತಿರುವರು.

ತೀರ್ಪಿಗೆ ಸಂಬಂಧಿಸಿದ ಸಾಲಗಾರರಿಗೆ ವಿಕ್ರಯದ ನೋಟೀಸು

ಮೇಲ್ಕಾಣಿಸಿದ ದಾವೆಯಲ್ಲಿ ಡಿಕ್ರಿ ಹೋಲ್ಡರ್ ಸ್ವಿರಾಸ್ತಿಗಳ ಮಾರಾಟಕ್ಕೆ ಅರ್ಜಿ ಇಟ್ಟಿರುವ ಕಾರಣ – ವಿಕ್ರಯದ ವಿಧಾನವನ್ನು ನಿರ್ಣಯಿಸಲು 11-6-1954ಕ್ಕೆ ವಾಯ್ದೆ ಹಾಕಲಾಗಿದೆಯೆಂದು ನಿಮಗೆ ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ }
} ಡಿ. ಯಸ್. ಹನುಮಂತರಾವ್
13-4-54 } ಯಸ್. ಗುರುರಾಜರಾವ್
ಡಿಕ್ರಿ ಹೋಲ್ಡರರ – ಆಡ್ವೋಕೇಟ್‌ರು

— ಹರಿಜನರ ಏಳಿಗೆ —

ಪ್ರಚಾರಕಾರ್ಯ

ಕೊಸಪೇಟೆ ದಿಲ್ಲಿ ಹರಿಜನ ಸೇವಕ ಸಂಘದ ಶ್ರೀ ಬಿ. ದುರುಗಯ್ಯ ಶ್ರೀ ಡಿ ನರಸಿಂಹದಾಸ್ ಇವರು 21 ರಿಂದ 24 ರವರಿಗೆ ಶಿರುಗುಪ್ಪ ತಾಲೂಕು ಚಾನ ವಾಸಪುರ,ಮಣೂರು ಸೂಗೂರು,ಏರಿಗೆರೆ ಈ ಗ್ರಾಮಗಳನ್ನು ಸಂದರ್ಶಿಸಿ ಹರಿಜನರ ಕುಂದು ಕೊರತೆಗಳನ್ನು ವಿಚಾರಿಸಿ ಸಭೆಗಳನ್ನು ಮಾಡಿದರು ಗೃಹನಿರ್ಮಾಣ ಭೂಮಿಗಳ ಪಟ್ಟಿ ಸರ್ವರ್ ಹಿಂದೂಗಳ ಅತ್ಯಾಚಾರ ಈ ಸಮಸ್ಯೆಗಳ ಪರಿಹಾರವಾಗಿ ಹರಿಜನರು ತಮ್ಮಲ್ಲಿನ ದುರಾಚಾರಗಳನ್ನು ಬಿಡಬೇಕೆಂದು ನಿಶ್ಚಿತವಾಯಿತು.

Dr. Modi's Free Eye Operation Camp at Bellary.

Dr. M, C. Modi, Eye Surgeon, will conduct free eye operation coamp at Bellaryon 1st May. All the patients who are advised for operation and received red slips will be operated in Municipol Highschool at Bellary on 1st May. The entire treatment is free.

ಡಾ|| ಮೋದಿಯವರ ಕಣ್ಣಿನ - ಉಚಿತ ಆಪರೇಶನ್

ನೋತಿಬಿಂದು, ಮೆಳ್ಳಿಗಣ್ಣು, ಕಣಿಕೇ ಹುಣ್ಣು, ದುರುಸೂಂಸ, ಕಾಜಬಿಂದು, ಕರಿಗುಡ್ಡಿಯಮೇಲಿನ ಹೂಪ್ಪು, ಪರಿ, ಇರಳಗಣ್ಣು ಕಣ್ಣು ರಿಪ್ಪೆಗಳ ಬೇನೆ ಇವುಗಳ ವೇ: 1 ರಿಂದ ಬಳ್ಳಾರಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಮಾಡಲಾಗುತ್ತದೆ.

ಸ್ವೀಕಾರ ವಿಮರ್ಶೆ

"ಪರಿಶೋಧನ" (ಸಾರಸ್ವತ ದ್ವಿಮಾಸಪತ್ರಿಕೆ)

ಬಳ್ಳಾರಿ ಜಿಲ್ಲೆ ಕಾಮಲಾಪುರದ ಶ್ರೀ ಟಿ. ರಾಮಚಂದ್ರ ಇವರು ಈಗ ಮದ್ರಾಸಿನಿಂದ ಆಂಧ್ರಭಾಷೆ ಯಲ್ಲಿ 'ಪರಿಶೋಧನ' ಎಂಬ ಉಚ್ಚ ಕೋಟಿಯ ಸಾಹಿತ್ಯಮಾಸ ಪತ್ರಿಕೆಯನ್ನು ಹೊರಡಿಸುವ ಸಾಹಸಮಾಡಿ ಉಗಾದಿಯ ದಿನ ಪ್ರಥಮಾಂಕವನ್ನು ತೆಗೆದಿರುತ್ತಾರೆ. ಮದ್ರಾಸಂಥ ಸಾಕಾರ್ಯಗಳುಳ್ಳ ನಗರದಲ್ಲಿಇಂಥ ಸರ್ವಾಂಗ ಸುಂದರವಾದ ಮಾಸ ಪತ್ರಿಕೆಯನ್ನು ಹೊರತರುವುದು ಸುಲಭ ಪ್ರಥಮ ಪೀಠಿಕೆಯ "ಮನಸಿ ಮಾಟಲು" ಎಂಬ ಸಂವಾದಕರ ಹೇಳಿಕೆಯಲ್ಲಿ ಅವರ ಸಾಹಸವು ವ್ಯಕ್ತವಾಗುತ್ತದೆ

ಪತ್ರಿಕೆಗಳನ್ನು ಹೊರಡಿಸುವುದು ಸುಲಭ, ಆದರೆ ಕೆಲವರ್ಷಗಳಾದರೂ ಅವುಗಳನ್ನು ಕಾಪಾಡಿಕೊಂಡು ಬರುವುದು ದುಷ್ಕಾರ್ಯವಾದ ಕಾರ್ಯ. ಜನರ ಬೆಂಬಲವು ಎಲ್ಲ ತರದ ಒತ್ತಾಯಗಳಿಲ್ಲದೆ ಲಭಿಸಲಾರದು. ಈ ಕಾರಣ ಜನಪ್ರಿಯವಾದ ಪತ್ರಿಕೆಗಳನ್ನು ಅಂದರೆ ಸಾಧಾರಣ ಜನತೆಗೆ ಬೇಕಾದ ಶಿನಿಮಾನಟಿಯರ ರಹಸ್ಯಜೀವನ ವೈಂಗ್ಯ ಚಿತ್ರಗಳು ವಿಷಯಾಸಕ್ತ ಕಥೆಗಳು ಸಾಹಸ ಅನೀತಿಪ್ರಸಂಗಗಳು ಸುಳ್ಳಿನಕಂತೆಗಳು ತುಂಬಿದ ಸಾಹಿತ್ಯವುಗಳೇ ಈಗ ಸ್ವಾವಲಂಬಿಯಾಗಿವೆ.

ಭಾರತೀಯ ರಂಗದಲ್ಲಿ ಸಾಕ್ಷರತ್ವವು ಬಹಳ ಕಡಮೆ. ಅದರಲ್ಲಿ ಉಚ್ಚಕೋಟಿಯ ಸಾಹಿತ್ಯವನ್ನು ಸ್ವಾಗತಿಸುವವರು ಇನ್ನೂ ಕಡಮೆ ಪ್ರಗತಿಮಾರ್ಗದಲ್ಲಿರುವ ಆಂಧ್ರರಾಷ್ಟ್ರದಲ್ಲಿ ಈ ಪತ್ರಿಕೆಗೆ ಸಾಕಷ್ಟು ಆಶ್ರಯವು ದೊರೆತು ಇದು ಬದುಕಿಬಾಳಲೆಂದು ಆಶಿಸುತ್ತೇವೆ.

★ ವೀರವಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಕಮಲಾದೇವಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಭೈರವಾಲ ಬಿ. ಎ.

"ವೀರವಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರದೇಶದವರಿಗೆ 5 ರೂಪಾಯಿ.

" ಸ್ವದೇಶದವರಿಗೆ 4-8-0 ರೂಪಾಯಿ

ಬಿಡಿ ಸಂಚಿಕೆ 6 ಆಣೆ

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
೬ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.

26-4-54

Edited Printed & Published by T.B. Keshava Rao, at Nava Bharat Printing Press, Bellary.

ನವಚೈತನ್ಯ

ಸೋಮವಾರ
ಮೇ
೧೦, ೧೯೫೪

ವರ್ಷ 17 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 39 | ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಜಿ. ಕೇಶವರಾವ

೧೫ ಲಕ್ಷ ಎಕರೆ ಜಮೀನಿಗೆ ನೀರು

ಆಷ್ಟಾನ್ ಜಲಾಶಯದಿಂದ ಒದಗಲಿದೆ

ಆಷ್ಟಾನ್ ಬಳಿಯಲ್ಲಿ ಆಣೆಕಟ್ಟಿನ ನಿರ್ಮಾಣ ಕಾರ್ಯ ಮುಗಿದ ನಂತರ ಈಗ ನಿರ್ಮಾಣವಾಗಿರುವ 15 ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಒದಗಿಸಲಾಗುವುದೆಂದು ಕೇಂದ್ರ ಸಚಿವ ಮೇಜರ್ ಜನರಲ್ ಸರ್ದಾರ್ ಹುಕುಮ್ ಸಿಂಗ್ ಅವರು ಹೇಳಿದ್ದಾರೆ. ಈ ಆಣೆಕಟ್ಟು ಇನ್ನು 18 ತಿಂಗಳಲ್ಲಿ ಸಂಪೂರ್ಣವಾಗುವುದು.

ಬಳ್ಳಾರಿ ಜಿಲ್ಲೆಯ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ

ಬಳ್ಳಾರಿ ಜಿಲ್ಲೆಗೆ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯನ್ನು ಮೇ 1ರಂದು ಸರ್ಕಾರವು ಪುನರ್ರಚನೆಗೊಳಿಸಿದ್ದಾರೆ. ಬಳ್ಳಾರಿ ಜಿಲ್ಲಾಧಿಕಾರಿಗಳು ಚೇರ್ಮನರು ಸಾಲ್ಯಾನ ಅಧಿಕಾರಿಗಳಿದ್ದಾರೆ. ಶ್ರೀ ಗಳ ದೇ ಕೂಣಿಸು ಬ್ರಮಣ್ಯ, ಅಬ್ದುಲ್ ರಜಾಕ್ ಸಾಹೇಬ್, ಕೊಟ್ರಬಸವಣ್ಣ ಗೌಡ ಕೊಟ್ರಬ್ಬ, ರೇವಣಸಿದ್ದ ಗೌಡ ಮತ್ತು ಹೊಸಂಡಿ ಕೃಷ್ಣಪ್ಪ ಇವರು ಏಳು ಸದಸ್ಯರು.

ಬಳ್ಳಾರಿ ಜಿಲ್ಲೆಯಲ್ಲಿ

ಹೊಟ್ಟು ಸೊಪ್ಪಲನೆಯ ಸ್ಥಳ ಮೈಸೂರಿನ ಬಳ್ಳಾರಿ ಜಿಲ್ಲೆಯೂ ಸೇರಿದೆ. ಈ ನಂದಿ ಪ್ರಕಾರ ಬಳ್ಳಾರಿಯ 1953-54ರ ಒಟ್ಟು 3,000 ಎಕರೆಗಳಲ್ಲಿ ಗೋಧಿ ವ್ಯವಸಾಯ ನಡೆದಿದೆಯೆಂದು ಗೊತ್ತಾಗಿದೆ.

ಹೊಸಪೇಟೆಯಲ್ಲಿ ಏ 26-ರೇಶದಲ್ಲಿರುವ ಹಿಂದೀ ಪ್ರಚಾರಕರಿಲ್ಲರ ಪ್ರತಿನಿಧಿಗಳ ಸಮ್ಮೇಳನವೊಂದು ಹೊಸಪೇಟೆಯಲ್ಲಿ ಮೇ 12 ರಲ್ಲಿ ನಡೆಯುವುದು.

ಮೈಸೂರೊಳಗೊಂಡ ಕರ್ನಾಟಕ ಪ್ರಾಂತ ರಚನೆಗೆ

ಒಕ್ಕಲಿಗರ ಸಂಘದ ವಿರೋಧ

ಮೈಸೂರು ಸಂಸ್ಥಾನದ ಒಕ್ಕಲಿಗರ ಸಂಘದಪ್ರತಿನಿಧಿ ಸಂಸ್ಥೆಯಾದ ಒಕ್ಕಲಿಗರ ಸಂಘವು ಈ ಕರ್ನಾಟಕ ಪ್ರಾಂತ ರಚನೆಯನ್ನು ಸಲ್ಲಿಸಿ ಮೈಸೂರಿನೊಳಗೊಂಡ ಕರ್ನಾಟಕ ಪ್ರಾಂತ ರಚನೆಗೆ ತನ್ನ ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ರಾಜಕೀಯ ಆರ್ಥಿಕ ವಿತ್ತ ಜನ ಸಂಖ್ಯೆಯ ದೃಷ್ಟಿಯಿಂದ ಈಗಿನ ಮೈಸೂರು ಕರ್ನಾಟಕವಾಗಿದೆ. ಕೇವಲ ಮೈಸೂರಿನ ಮೇರೆಯನ್ನು ವಿಸ್ತರಿಸುವುದರಿಂದ ಯಾವುದೇ ಮೈಸೂರಿನ ಪ್ರಗತಿಗೆ ಧಕ್ಕೆ ಬರುತ್ತದೆ. ಅಲ್ಲದೇ ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ರಚನೆಯಿಂದ ರಾಷ್ಟ್ರದ ಏಳಿಗೆಗೂ ಮತ್ತು ಭದ್ರತೆಗೂ ಪಕ್ಷ ಧಕ್ಕೆ ಬರುವ ವರೆಲ್ಲಿ ಸಂಶಯವಿಲ್ಲವೆಂದು ತಿಳಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ಒಕ್ಕಲಿಗ ಕೋಮಿನವರ ಜನಸಂಖ್ಯೆ ಸುಮಾರು 20 ಲಕ್ಷ ಸಂಸ್ಥಾನದಲ್ಲಿ ಇತ್ಯ ಹಿರಿದಾದ ಸಂಗಡ ಯಾವುದೂ ಇಲ್ಲ ವಿಧಾನ ಕಾಂಜರವರ ಭಾಷಣವನ್ನು ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ಏ. 28 ರಂದು ನಡೆಸಲಾಗುವುದು.

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 14/54

ಕೆ. ಕೃಷ್ಣಮೂರ್ತಿರಾವ್ ಅರ್ಜಿದಾರ

ಇದರಿಂದ ಎಲ್ಲರಿಗೂ ತಿಳಿಸುವುದೇನೆಂದರೆ:- ಮೇಲಿನ ನಂಬರಿನಲ್ಲಿ ಅರ್ಜಿದಾರನು, ಮೈಸಪಟ್ಟಿ ಹನುಮಂತಾರ ಪಾಂಡುರಂಗರಾಯನಿಗೆ ಈ ಕೆಳಗೆ ವಿವರಿಸಿದ ಇನುಸರೆನ್ಸ್ ಕಂಪೆನಿಯಿಂದ ಬರಕಸ್ತ ಮೊತ್ತ ಬರಮಾಡಿಕೊಳ್ಳಲು ಒಂದು ವಾರದ ಸರ್ಟಿಫಿಕೇಟ್ ಕೊಡುವಂತೆ ಅರ್ಜಿ ದಾಖಲು ಮಾಡಿರುತ್ತಾರೆ.

ಸದರಿ ಅರ್ಜಿ 27-5-54ಕ್ಕೆ ವಾಯಿದೆ ಹಾಕಿರುತ್ತಾರೆ. ಯಾರಾದರೂ ತಕರಾರು ಮಾಡುವುದಾದರೆ ವಕೀಲರುದ್ವಾರ ಅಗಲೀ ಖುದ್ದಾಗಲೀ ಮೇಲ್ಕಂಡ ತಾರೀಖು ಹಾಜರಾಗಿ ತಕರಾರು ತಿಳಿಯಪಡಿಸತಕ್ಕದ್ದು. ತಪ್ಪಿದಲ್ಲಿ ಎಕ್ಸಪಾರ್ಟೆಯಾಗಿ ತೀರ್ಮಾನಿಸಲ್ಪಡುವದು.

S. NO.	ಪಾಕಿದಾರರ ಹೆಸರು.	ಪಾಲಿಸಿ ನಂಬರು	ಮೊತ್ತ
1.	ದಿ ವಾರ್ಡನ್ ಇನ್ಷುರೆನ್ಸ್ ಕಂಪೆನಿ	51386	ರೂ. 1000-0-0

ಅಗ್ನಿಹೊತ್ರಿ ಕೃಷ್ಣಭಟ್ಟರು
ಅರ್ಜಿದಾರನ ಅಡ್ವೋಕೇಟ್

ಕರ್ನಾಟದ ರೈಲ್ವೆ ಮಾರ್ಗಗಳು ಸಮರ್ಪಕವಾಗಿಲ್ಲ

ಕರ್ನಾಟಕದಲ್ಲಿ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸರಿಯಾದ ರೈಲ್ವೆ ಸೌಕರ್ಯವೇ ಇಲ್ಲ. ಇದರಿಂದಾಗಿ ನಮ್ಮ ಪ್ರಾಂತದ ವ್ಯಾಪಾರ ಬಹಳ ಹಿಂದುಳಿದಿದೆ. ಮಂಗಳೂರು ಹಾಸನ ಮಾರ್ಗ ಚಿಕ್ಕಮಗಳೂರಿಗೆ ಮುಂದೆ ಕಡೂರು ತಲಪಿದೆ. ಮಂಗಳೂರು ಭದ್ರಾವತಿ-ಹುಬ್ಬಳ್ಳಿ ಹಾಗು ಭದ್ರಾವತಿ ಬಳ್ಳಾರಿ ಲೈನ್ ಹಾಕಿದರೆ ಕರ್ನಾಟಕದ ಪರ್ವಿಂಗಾಹಾಂ ನಗರವಾದ ಭದ್ರಾವತಿ ಬೆಳೆಯಲು ಸಾಧಕವಾಗುತ್ತದೆ. ಅಲ್ಲದೆ ಬೆಂಗಳೂರು-ಹುಬ್ಬಳ್ಳಿ ಮಾರ್ಗ ಹಾಗು ಬೆಂಗಳೂರು ಮೈಸೂರು ಮಾರ್ಗವನ್ನು ಬ್ರಾಡ್ ಗೇಜ್ ಆಗಿಪರಿವರ್ತಿಸಬೇಕು.

ವ್ಯಾವಾರ ವಾಣಿಜ್ಯದಲ್ಲಿ ಸಹಜವಾಗಿ ದಕ್ಷಿಣ ಕರ್ನಾಟಕ ತನ್ನ ನೆರೆಕೊರೆಯ ಪ್ರಾಂತಕ್ಕಿಂತ ಹಿಂದುಳಿದಿದೆ. ಇದಕ್ಕೆ ಐತಿಹಾಸಿಕ ಹಾಗು ರಾಜಕೀಯ ಕಾರಣಗಳೂ ಇವೆಯೆನ್ನಿಸ್ಸಯ.

ಅದರಲ್ಲೇ ಮುಖ್ಯವಾದ ಮತ್ತೊಂದು ಕಾರಣವಿದೆ ಅದು ಸಂಚಾರ ಸೌಲಭ್ಯಗಳ ಆಭಾವ್ಯ. ಕರ್ನಾಟಕದ ವಿಸ್ತೀರ್ಣಕ್ಕೆ ಮತ್ತು ಜನಸಾಂದ್ರತೆಗೆ ತಕ್ಕಂತೆ ಒಂದು ಪ್ರದೇಶದಿಂದ ಮತ್ತೊಂದು ಸುದಿಯನ್ನು ತಲಪಲು ಸರಿಯಾದ ಬಾಟಾ ಮಾರ್ಗವಿಲ್ಲ. ಇನ್ನು ರೈಲ್ವೆ ಲೈನುಗಳಂತೂ ಸಮನೆ ಕರ್ನಾಟಕವನ್ನು ಹಾದು ಹೋಗಿನಿ. ಅಷ್ಟೆ! ಮದ್ರಾಸ್ ಬೊಂಬಾಯಿ ಮಹಾನಗರಗಳ ನಡುವೆ ಕರ್ನಾಟಕ ಪ್ರದೇಶವಿರುವುದರಿಂದ ಈ ರೈಲ್ವೆ ಲೈನುಗಳ ಕನ್ನಡ ನಾಡನ್ನು ದಾಟಿಹೋಗಲೇ ಬೇಕು. ಆದರಿಂದ ನಮ್ಮಲ್ಲೂ ರೈಲ್ವೆಗಳಿವೆ ಎಂದು ಹೇಳಿಕೊಳ್ಳಬಹುದು ಅಷ್ಟೆ. ಆದರೆ ನಿಜವಾಗಿಯೂ ಕನ್ನಡಿಗರ ಅಗತ್ಯತೆಗೆ ತಕ್ಕಂತೆ ರೈಲ್ವೆ ಸಂಚಾರ ಮಾರ್ಗವಿಲ್ಲವೆಂದು ನಾವು ಧಾರಾಳವಾಗಿ ಹೇಳಿಬಿಡಬಹುದು.

ಈಗಿರುವ ರೈಲ್ವೆ ಮಾರ್ಗಗಳು

ಈಗ ಕರ್ನಾಟಕದಲ್ಲಿ ಮುಖ್ಯವಾಗಿರುವ ರೈಲ್ವೆ ಮಾರ್ಗಗಳೆಂದರೆ ಎರಡೇ ಎರಡು ಒಂದು ಬೆಂಗಳೂರು-ಪೂನಾ ಮಾರ್ಗ. ಮತ್ತೊಂದು ಬೆಂಗಳೂರು ಮೈಸೂರು ಮಾರ್ಗ ಇನ್ನು ಇದಕ್ಕಂಟಿಕೊಂಡಿರುವಂತೆ ಶಿವಮೊಗ್ಗ, ಅರಸೀಕೆರೆ ಜಾಡಾರ ಮತ್ತು ಉತ್ತರ ಕರ್ನಾಟಕದಲ್ಲಿ ಗದಗ್ ಹೋದಲಾಪುರ ಲೈನುಗಳಿವೆ.

ಇವುಗಳಲ್ಲದೆ ಹಿಂದೂಪುರದವರೆಗೆ ಲೈನಿದೆ. ಮದ್ರಾಸಿನ ಸೊಡ್ಡ ರೈಲು ಮೈಸೂರಿನ ಗಡಿಯನ್ನು ಮುಟ್ಟುತ್ತದೆ ಮತ್ತು ಅದೇ ರೀತಿ ರಾಯಚೂರು ಮಾರ್ಗದಲ್ಲೂ ಹಾಗೂ ಮಂಗಳೂರು ಜಿಲ್ಲೆಯಲ್ಲೂ ಅಲ್ಪಸ್ವಲ್ಪ ರೈಲ್ವೆ ಮಾರ್ಗಗಳಿವೆ. ಏನೇ ಆಗಲಿ ಇವು ಯಾವುವೂ ಕರ್ನಾಟಕದ ಸಂಚಾರ ಸೌಲಭ್ಯಕ್ಕೆ ಅಷ್ಟಾಗಿ ಸೌಕರ್ಯ ವಿಲ್ಲವೆಂಬುದು ನಿರ್ವಿವಾದ.

ಇದೀಗ ಸ್ವತಂತ್ರ ಭಾರತ ನಿರ್ಮಿತವಾದ ನಂತರ ಅನೇಕಾನೇಕ ಹೊಸ ರೈಲ್ವೆ ಮಾರ್ಗಗಳನ್ನು ನಿರ್ಮಿಸಲಾಗುತ್ತಿದೆ. ಮತ್ತು ಈ ಮುಂಚೆ ನಿಲಿಸಿದ್ದ ಹಳೇ ಮಾರ್ಗಗಳನ್ನು ಪುನಃ ತೆರೆಯಲಾಗುತ್ತಿದೆ. ಆದರೆ ಇವು ಯಾವುದೂ ಸಹ (ಹಾಸನ-ಮಂಗಳೂರು ರೈಲ್ವೆ ಮಾರ್ಗವನ್ನು ಹೊರತು) ಕರ್ನಾಟಕಕ್ಕೆ ಸಂಬಂಧಪಟ್ಟ ದ್ದಾಗಿಲ್ಲದಿರುವುದು ಅತ್ಯಂತ ಶೋಚನೀಯ.

ಇಂದು ಕರ್ನಾಟಕದ ವ್ಯಾಪಾರ ವಾಣಿಜ್ಯ ದೃಷ್ಟಿಯಿಂದ ಅತ್ಯಗತ್ಯವಾಗಿ ಅನೇಕ ಹೊಸ ಮಾರ್ಗಗಳು ಆಗಬೇಕಾಗಿವೆ. ಆದರೆ ಕನ್ನಡಿಗರು ಕೇಂದ್ರದವರನ್ನು ಬಲವಂತಪಡಿಸುವ ಸಮರ್ಥ್ಯವಿಲ್ಲದಿರುವುದರಿಂದ ನಮ್ಮ ಬೇಡಿಕೆಗಳಿಗೆ ನಕಾರಾತ್ಮಕ ಉತ್ತರ ಬರುತ್ತಿದೆ.

ಹೊಸ ಮಾರ್ಗಗಳು

ಮಂಗಳೂರು-ಹಾಸನ ರೈಲ್ವೆ ಮಾರ್ಗದ ಬಗ್ಗೆ ಸರ್ವೆ ನಡೆಯುತ್ತಿದೆ ದಿಟ ಇದು ಸಂತೋಷಪಡಬೇಕಾದ ಸಂಗತಿ. ಆದರೆ ಮುಂಚಿನಿಂದಲೂ ಇಪ್ಪ ಬೇಡಿಕೆ ಹಾಸನ-ಮಂಗಳೂರು ಮಾರ್ಗವಲ್ಲ ಚಿಕ್ಕಮಗಳೂರು ಮಂಗಳೂರು ಮಾರ್ಗ ಮಂಗಳೂರು ಚಿಕ್ಕಮಗಳೂರಿಗಿರುವಷ್ಟು ವಾಣಿಜ್ಯ ಸಂಬಂಧ ಹಾಸನ-ಮಂಗಳೂರಿಗಿಲ್ಲ. ಕಾರಣ ಚಿಕ್ಕಮಗಳೂರು ಕಾಫಿ ಕೇಂದ್ರ ಸ್ಥಳ

ಆದರೂ ಸಹ ಹಾಸನ-ಮಂಗಳೂರು ಲೈನು ಹಾಕುವುದು ಸಹ ಒಳ್ಳೆಯದೆ ಆದರೆ ಅದನ್ನು ಬೇಲೂರು-ಚಿಕ್ಕಮಗಳೂರು ಮಾರ್ಗವಾಗಿ ಕಡೂರಿಗೆ ಸೇರಿಸಬೇಕಾದುದು ಅತ್ಯಾವಶ್ಯಕ ಮಲೆನಾಡಿನ ಹಿತದೃಷ್ಟಿಯಿಂದ ಇದು ಆಗಲೇಬೇಕಾದ ಕಾರ್ಯ ಮಂಗಳೂರಿನಿಂದ ಕರ್ನಾಟಕವನ್ನು ತಲುಪುವಂತಹ ಮತ್ತೊಂದು ರೈಲ್ವೆ ಮಾರ್ಗದ ಅವಶ್ಯಕತೆ ಇದೆ ಅದು ಮಂಗಳೂರು-ಉಡುಪಿ ಮಾರ್ಗವಾಗಿ ಭದ್ರಾವತಿಯನ್ನು ತಲುಪಬೇಕು.

ಮೈಸೂರು ರೈಲ್ವೆಯವರಿಗೆ ಆರಂಭದಲ್ಲಿ ಒಂದು ಆಸೆಯಿತ್ತು. ಈಗ ತಾಳಗುಪ್ಪದಲ್ಲಿ ನಿಲ್ಲುವ ರೈಲನ್ನು ಭಟ್ಕಳ್ ವರೆಗೆ ಮುಟ್ಟಬೇಕೆಂಬುದು ಕಾರಣ. ಮೈಸೂರಿನ ಅಭಿವೃದ್ಧಿಗೆ ಒಂದು ಬಂದರು ಅತ್ಯಾವಶ್ಯಕವಾಗಿತ್ತು ಇಂದಲ್ಲ ನಾಳೆ ಕರ್ನಾಟಕ ಪ್ರಾಂತ ಆಗಲೇಬೇಕಾಗಿರುವುದು ಈಗ ಈಮುಂತು ಅಶ್ಯಕ್ಯಕ.

ಆದುದರಿಂದ ಮಂಗಳೂರೂ, ಭದ್ರಾವತಿ ತಲುಪಿದ ರೈಲ್ವೆ ಮಾರ್ಗ ಕಾರವಾರದ ಮೂಲಕವಾಗಿ ಹುಬ್ಬಳ್ಳಿ. ಕೇಂದ್ರಕ್ಕೆ ತಲುಪಬೇಕು. ಆಗ ಪಶ್ಚಿಮದ ತುಟ್ಟ ತುದಿಯಿಂದ ಕರ್ನಾಟಕದ ಮತ್ತೊಂದು ಮೂಲೆಗೆ ರೈಲ್ವೆಸೌಕರ್ಯ ಏರ್ಪಡಿಸಿದಂತಾಗುವುದು.

ಇದನ್ನು ಳಿದರೆ ಇನ್ನೊಂದು ಅತಿ ಮುಖ್ಯ ಸಾರ್ಗವೆಂದರೆ ಮೈಸೂರು ಕೊಯಂಬತ್ತೂರು ರೈಲ್ವೆ ಇದು ದಕ್ಷಿಣಾಪಥದ ವ್ಯಾಪಾರ ಸಂಬಂಧವನ್ನು ಹೆಚ್ಚಿಸಬೇಕಾದುದಕ್ಕೆ ಅತ್ಯಾವಶ್ಯಕ.

ಮೈಸೂರ ರೈಲ್ವೆ ನಮ್ಮ ಕೈನಲ್ಲಿದ್ದಿದ್ದರೆ ಈ ಮಾರ್ಗ ಇಷ್ಟು ಹೊತ್ತಿಗೆ ಆಗಿಯೇ ಬೋಗುತ್ತಿತ್ತು. ಇದೂ ಅಲ್ಲದೆ ಮಂಗಳೂರಿನಿಂದ ಕೊಡಗು ಮಾರ್ಗವಾಗಿ ಮೈಸೂರಿಗೆ ತಲವದೆ ಒಂದು ಹೊಸ ಮಾರ್ಗವನ್ನೂ ಸಹ ರಚಿಸಬೇಕು.

ಬಳ್ಳಾರಿ ಮೈಸೂರಿಗೆ ಸೇರಿತು ಬಳ್ಳಾರಿಯಲ್ಲಿ ರೈಲಿದೆ. ಆದರೆ ಬೆಂಗಳೂರಿಗೆ ನೇರವಾಗಿ ತಲಪುವಂತಹ ಒಂದು ಮಾರ್ಗ ಮಾತ್ರ ನಮಗಿಲ್ಲ. ಇದೇ ಇಂದಿನ ಕನ್ನಡಿಗರ ಪರಿಸ್ಥಿತಿ. ಈಗ ಚಿತ್ರದುರ್ಗದವರೆಗಿರುವ ರೈಲ್ವೆ ಲೈನನ್ನು ಬಳ್ಳಾರಿಯವರೆಗೆ ಮುಂದುವರಿಸಬಹುದು. ಅಥವ ಅದಕ್ಕಿಂತ ಉತ್ತಮವಾದುದು ಭದ್ರಾವತಿ, ದಾವ

4 ನೆಪುಟಕ್ಕೆ

★ ವಿನೋಬಾಜಿಯವರ ದೃಷ್ಟಿ ★

ಮೊನ್ನೆ ಸರ್ವೋದಯಪುರಿಯಲ್ಲಿ ಸರ್ವೋದಯ ಕಾರ್ಯಕರ್ತರ ಪರಿಷತ್ತು ಕೂಡಿ ದಾಗ್ಗೆ ನಡೆದ ವಿಚಾರಗಳು ಮತ್ತು ಸ್ವೀಕೃತವಾದ ನಿರ್ಣಯಗಳು, ನಿಃಸ್ವಾರ್ಥೀ ಕಾರ್ಯಕರ್ತರಿಗೆ ಮಾರ್ಗದರ್ಶಕವಾಗಿವೆ.

ವಿನೋಬಾಜಿಯವರು ಸರ್ವೋದಯ ಕಾರ್ಯಕರ್ತರಿಗೆ ನೂರು ಬೀಜಮಂತ್ರಗಳನ್ನು ಹೇಳಿದ್ದಾರೆ. ಅಹಿಂಸೆ, ಲೋಕನೀತಿ ಮತ್ತು ಆಯ್ಕೆಗಳಿಂದ ದೂರ ಇರುವುದನ್ನು ತಮ್ಮ ಕಾರ್ಯಕರ್ತರು ಸಾಧಿಸಬೇಕೆಂದು ವಿಧಿಸಿದ್ದಾರೆ. ಮತ್ತು ತಮ್ಮ ಶೇಷಾಯುಷ್ಯವನ್ನು ಸರ್ವೋದಯಕ್ಕಾಗಿಯೇ ಮೀಸಲಾಗಿಡುವ ಪ್ರತಿಜ್ಞೆಯನ್ನು ಆ ಪರಿಷತ್ತಿನಲ್ಲಿ ಕಾರ್ಯಕರ್ತರು ಸ್ವೀಕರಿಸಿದ್ದಾರೆ.

ಇದು ಬಹು ಸ್ತುತ್ಯ ಕಾರ್ಯವಾಗಿದೆ. ನಮ್ಮ ಇಂದಿನ ವಾತಾವರಣಕ್ಕೆ ಇಂತಹ ನಿಃಸ್ವಾರ್ಥೀ ಕಾರ್ಯಕರ್ತರ ಅವಶ್ಯಕತೆಯು ಬಹಳವಾಗಿದೆ ಇಂಥವರು ಊರಿಗೊಬ್ಬರು, ಇಲ್ಲವೆ ನಿಟ್ಟಿಗೊಬ್ಬೊಬ್ಬರು ಇದ್ದರೆ ಸಾಕು. ಅವರ ಸಾನ್ನಿಧ್ಯದ ಮೂಲಕ ಅನ್ಯಾಯಕ್ಕೆ ಕೈಹಾಕುವವನಿಗೆ ಬೇಕಾದಷ್ಟು ತಡೆಹಾಕಲು ಸಾಧ್ಯವಿದೆ.

ಮಹಾತ್ಮಾ ಗಾಂಧೀಜಿಯವರು, ಕಾಂಗ್ರೆಸ ಸಂಸ್ಥೆಯನ್ನೇ ನಿಃಸ್ವಾರ್ಥೀ ಕಾರ್ಯಕರ್ತರ ಆಗಿರುವಂತಾಗಿ ಮಾಡಲು ಹೊರಟಿದ್ದರು. ಹಾಗೆ ಅದು ಆಗಿಯೂ ಆಯಿತು. ಸ್ವಾತಂತ್ರ್ಯವು ಭಾರತಕ್ಕೆ ಸಿಗುವವರೆಗೆ ಕಾಂಗ್ರೆಸ್ಸು ಕೇವಲ ತಪಸ್ವಿಗಳ ಗೂಡಾಗಿತ್ತು. ಗಾಂಧೀ ಟೊಪ್ಪಿಗೆಯನ್ನು ಆಗ ಕಂಡರೆ ಹೆದರುತ್ತಿದ್ದರು.

ಅವರೆ ಯಾವುದೇ ಸಂಸ್ಥೆಯು ಕೊನೆಯವರೆಗೆ ಒಂದೇ ರೀತಿಯಾಗಿ ಇರುವುದಿಲ್ಲ ಪರಿಸ್ಥಿತಿಯ ಮೇರೆಗೆ ಅದು ಮಾರ್ಪಾಟು ಹೊಂದುತ್ತದೆ ಮತ್ತು ಅಧಿಕಾರವನ್ನು ಕೈಕೊಂತರೆ ಯಾವುದೇ ಸಂಸ್ಥೆಯ ಆ ಶುದ್ಧ ಸ್ವರೂಪವು ಮಾಯವಾಗದೆ ಇರದು.

ಎಲ್ಲಿಯವರೆಗೆ ತ್ಯಾಗದ ಮಂತ್ರವನ್ನು ಕಾಂಗ್ರೆಸ್ಸು ಮುಂದಿಟ್ಟುಕೊಂಡಿತ್ತೋ ಅಲ್ಲಿಯವರೆಗೆ ಅದು ಶುದ್ಧವಾಗಿ ಉಳಿದಿತ್ತು. ಅಧಿಕಾರದಲ್ಲಿ ಅದು ಪ್ರವೇಶಿಸಿದ ಕೂಡಲೆ ಅದು ಆ ಸ್ಪೃಹಣೀಯ ನಿಲುಮೆಯನ್ನು ಕಳೆದುಕೊಂತು ಬಿಟ್ಟಿತು. ಆ ಮೇಲೆ, ಹಿಂದೆ ಅದು ಮಾಡುತ್ತಿದ್ದ ನ್ಯಾಯ ರಕ್ಷಣೆಯ ಕಾರ್ಯವು ಅದರಿಂದ ಆಗದೆಂತಾಯಿತು.

ಅದ್ದರಿಂದ, ಅದರಿಂದ ಬೇರೆಯಾದ ಮತ್ತೊಂದು ಸಂಸ್ಥೆಯು. ಹಿಂದೆ ಕಾಂಗ್ರೆಸ್ಸು ಮಾಡುತ್ತಿದ್ದ ಕಾರ್ಯವನ್ನು ಮಾಡಲು ಆವಶ್ಯವಾಯಿತು ಅದೇ ಈ ಸರ್ವೋದಯ ಸಂಸ್ಥೆಯೆಂದು ಹೇಳಲು ಏನೂ ಅಭ್ಯಂತರವಿಲ್ಲ.

ಕಾಂಗ್ರೆಸು ಅನ್ಯಾಯ ಮಾಡುತ್ತಿದೆ. ಎಂದು ಹೇಳುವ ಬೇರೆ ಕೆಲವು ಸಕ್ಷಗಳು ಭಾರತವಲ್ಲಿ ಇವೆ. ಅವರೆ ಅವುಗಳಿಂದ ನ್ಯಾಯ ರಕ್ಷಣೆಯ ಕಾರ್ಯವು ಆಗಲಾರದು. ಏಕೆಂದರೆ ಅವು ಕೂಡ ಅಧಿಕಾರದ ಬೆನ್ನನ್ನೇ ಹತ್ತಿವೆ. ಕಾಂಗ್ರೆಸ್ಸಿನ ಕೈಯಲ್ಲಿ ಇಂದು ಇರುವ ಅಧಿಕಾರ ಸೂತ್ರಗಳನ್ನು ತಾವು ತೆಗೆದುಕೊಳ್ಳಬೇಕೆಂದು ಅವು ಯತ್ನಿಸುತ್ತಿವೆ ಅಂತ ಮೇಲೆ ಅಧಿಕಾರದ ಬೆನ್ನು ಹತ್ತಿದ ಅವುಗಳಿಂದಲೂ, ರಕ್ಷಣೆಯ ಕಾರ್ಯವು ಆಗಲಾರದು

ಅನಿವಾರ್ಯವಾಗಿಯೇ ವಿನೋಬಾಜಿಯವರು ಅಹಿಂಸೆ, ಲೋಕನೀತಿ ಮತ್ತು ಆಯ್ಕೆಗಳಿಂದ ದೂರ ಇರುವುದು ಈ ಮೂರು ಮಾತುಗಳನ್ನು ತಮ್ಮ ಕಾರ್ಯಕರ್ತರಿಗೆ ಹೇಳಿಕೊಟ್ಟಿದ್ದಾರೆ.

ಸರ್ವೋದಯಪುರಿಯಲ್ಲಿ ಪಂ. ಜವಾಹರಲಾಲ ನೆಹರೂ ಅವರಿಗೂ ವಿನೋಬಾಜಿಯವರಿಗೂ ಹಲವಲೆವು ವಿಷಯಗಳ ಬಗ್ಗೆ ಚರ್ಚೆಯಾಗಿದೆ, ಡಾ. ರಾಜೇಂದ್ರಪ್ರಸಾದ, ಶ್ರೀ. ಎಸ್. ರಾಧಾಕೃಷ್ಣನ್ನರೂ ಅಲ್ಲಿಗೆ ಬಂದು ಭಾಷಣ ಮಾಡಿದರು. ಆವರೆಲ್ಲರೂ ವಿನೋಬಾಜಿಯವರ ಭೂದಾನಯಜ್ಞದ ಕಾರ್ಯವನ್ನು ಬಹುವಾಗಿ ಪ್ರಶಂಸಿಸಿದ್ದಾರೆ. ವಿನೋಬಾ ಭಾವೇಯವರ ಬಗ್ಗೆ ಈ ಎಲ್ಲ ಮುಖಂಡರಿಗೂ ಪರಮಾದರವಿದೆ. ಏಕೆಂದರೆ ವಿನೋಬಾಜಿಯವರು ಮಹಾತ್ಮಾಗಾಂಧಿಯವರ ನಂತರ ಅವರ ತತ್ವಗಳನ್ನು ಎಲ್ಲರಿಗಿಂತ ಹೆಚ್ಚು ಆಚರಣೆಯಲ್ಲಿ ತಂದವರಾಗಿದ್ದಾರೆ. ಇಷ್ಟೇ ಅಲ್ಲದೆ ಮಹಾತ್ಮಾಜಿಯವರು ಕೂಡ ವಿನೋಬಾಜಿಯವರ ಮೇಲೆ ಬಹಳ ವಿಶ್ವಾಸ, ಮಮತೆಯುಳ್ಳವರಾಗಿದ್ದರು ಹಲಕೆಲವು ವೇಳೆ ಅವರಿಂದ ಮಹಾತ್ಮಾಜಿಯವರು ಮಾರ್ಗದರ್ಶನವನ್ನು ಕೂಡ ಪಡೆಯುತ್ತಿದ್ದರು.

ಎಲ್ಲವೂ ನಿಜ ಪಂ. ಜವಾಹರಲಾಲರು ಅಲ್ಲಿ ಮಾಡಿದ ಭಾಷಣವನ್ನು ನೋಡಿದರೆ ಅವರು ಎಷ್ಟೊಂದು ತೊಡಕಿನಲ್ಲಿ ಸಿಕ್ಕಂತೆ ಮಾಡಿದ್ದಾರೆ ಎಂಬುದು ಕಂಡು ಬರುತ್ತದೆ. ವಿನೋಬಾಜಿಯವರ ದಾರಿ ಅಥವಾ ಮಾತುಗಳು ಅಗತ್ಯವಾದವುಗಳೆಂದು ಹೇಳಲು ಅವರು ಇಚ್ಛಿಸಲಿಲ್ಲ.

ಆದರೆ ಅವುಗಳನ್ನು ಕೃತಿಯಲ್ಲಿ ತರಲು ತಮ್ಮ ಪ್ರಯತ್ನ ಸನಿವೆಂದು ಹೇಳಲೂ ಅವರಿಗೆ ಬರಲಿಲ್ಲ. "ಈ ವಿಷಯವು ಮಹತ್ವದ್ದಾಗಿದ್ದು ಸಾಧ್ಯವಿದ್ದ ಮಟ್ಟಿಗೆ ಅದನ್ನು ಕೃತಿಯಲ್ಲಿ ತರಲು ನಾವು ಯತ್ನಿಸಬೇಕಾಗಿದೆ, ಎಂಬರ್ಥದ ಅಭಿಪ್ರಾಯವನ್ನು ಅವರು ವಿನೋಬಾಜಿಯವರ ದೃಷ್ಟಿಯ ಬಗ್ಗೆ ಪಡಬೇಕಾಯಿತು.

ತಾತ್ವಿಕ ವಿಚಾರಕ್ಕೂ ವ್ಯವಹಾರ್ಯತೆಗೂ ಕೂಡುವುದು ಕಠಿಣ. ಆದರೆ ತತ್ವವಿವೇಚನೆಯು ನಡೆಯತಕ್ಕದ್ದೇ. ಅದು ನಮ್ಮ ಗುರಿಯಾಗಿರಬೇಕು. ಅತ್ಯಕಡೆಗೆ ಜನರು ಸಾಗುವಂತೆ ಪ್ರಚೋದನೆ ಗೈಯಲು ಅತರಹದ ಯೋಗ್ಯತೆಯುಳ್ಳವರು ಗುಂಪೊಂದು ಬೇಕೇಬೇಕು.

ವ್ಯವಹಾರದಲ್ಲಿ ಮಾತ್ರ ಜನರು ಕಣ್ಣುಮುಚ್ಚಾಣಿಕೆಯ ಆಟವನ್ನು ನಡೆಸತಕ್ಕವರೇ. ಅವರಲ್ಲಿ ತೊಡಗಿದವರಿಗೆ ಉತ್ತೇಜನ ಸಿಕ್ಕದಂತೆ ಮಾಡಲು ಬರುತ್ತದೆ. ಅದಕ್ಕಾಗಿ ಜನತೆಯ ಮನಸ್ಸನ್ನು ಒಂದೇ ಸವನೆ ಕಟೆಯುತ್ತ ಹೋಗಬೇಕಾಗುವುದು ಅವರೆ ಜಗತ್ತಿನಲ್ಲಿಯ ಅನ್ಯಾಯವನ್ನು ಮತ್ತು ಹಿಂಸೆಯನ್ನು ಪೂರ್ಣವಾಗಿ ನಿಲಿಸಲು ಸಾಧ್ಯವೇ ಇಲ್ಲ. ಅನ್ಯಾಯ, ಹಿಂಸೆಗಳ ಪ್ರಮಾಣಕ್ಕಿಂತ ನ್ಯಾಯ ಅಹಿಂಸೆಗಳ ಪ್ರಮಾಣವು ಹೆಚ್ಚಾಗುವಂತೆ ಮಾಡಿದರೆ ನಮ್ಮ ಕರ್ತವ್ಯವಾಯಿತೆಂದು ತಿಳಿಯಬೇಕಾದ ಪ್ರಸಂಗವಾಗಿದೆ. ಅಂತಹ ವಾತವರಣವ ಯುಗಕ್ಕೇ ನಮ್ಮ ಪೂರ್ವಜರು ಕೃತಯುಗವೆಂದು ಕರೆದಿದ್ದಾರೆ.

ವಿನೋಬಾ ಭಾವೇಯವರು ನಡೆಸಿದ ಈ ಅಸಾಮಾನ್ಯ ಕೆಲಸವು ಬರಿಬರುತ್ತ ಬೆಳೆಯುತ್ತ ನಡೆಯಲೆಂದೂ, ಅವರಿಂದ ಸಿದ್ಧರಾದ ಜನರ ತಂಡವು, ಸುತ್ತಲೂ ಹೆದರಿಸುತ್ತಿರುವ ಅನ್ಯಾಯ, ಹಿಂಸಾವೃತ್ತಿಗಳನ್ನು ಕಡಿಮೆ ಮಾಡಲು ಸಮರ್ಥವಾಗಲೆಂದೂ ನಾವು ಹಾರೈಸುತ್ತೇವೆ.

ಣಗೆರೆ ಮುಖಾಂತರ ಬಳ್ಳಾರಿ ತಲುಪುವುದು. ಇದರಿಂದಾಗಿ ಕರ್ನಾಟಕದ ಬರ್ಮಿಂಗ್ ಹ್ಯಾಂ ನಗರವಾದ ಭದ್ರಾವತಿ ದೊಡ್ಡ ರೈಲ್ವೆ ಜಂಕ್ಷನ್ ಆಗಿ ನಮ್ಮ ನಾಡಿನ ವ್ಯಾಪಾರದ ಏಳಿಗೆಯಾಗುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ ಇವುಗಳ ಜತೆಗೆ ಬೆಂಗಳೂರು-ಸೇಲಂ ಮಾರ್ಗವನ್ನು ಕೂಡ ರಚಿಸಿದರೆ ಅನುಕೂಲವೇ ಸರಿ.

ದೊಡ್ಡ ರೈಲು

ಇಡೀ ಕನ್ನಡನಾಡಿನಲ್ಲಿ ಸುಮಾರು 1500 ಮೈಲಿ ಉದ್ದದ ರೈಲ್ವೆ ಮಾರ್ಗವಿರುವುದು. ಭಾರತದಾದ್ಯಂತ 40 ಸಾವಿರ ಮೈಲಿಗೂ ಹೆಚ್ಚು ರೈಲ್ವೆ ಮಾರ್ಗವಿದೆ. ಅಂತಹದರಲ್ಲಿ ಕರ್ನಾಟಕದ ವಿಸ್ತೀರ್ಣಕ್ಕೆ ಈ 1500 ಮೈಲಿ ಸಾಕೇ ?

ಕನ್ನಡನಾಡಿನಲ್ಲಿ ಇರುವ ದೊಡ್ಡ ರೈಲ್ವೆ ಲೈನುಗಳು (ಬ್ರಾಡ್‌ಗೇಜ್) ಬೆಂಗಳೂರಿನಿಂದ ಕುಪ್ಪಂವರೆಗೆ ಮತ್ತು ರಾಯಚೂರು ಮಾರ್ಗವಾಗಿ ಪೆರಸಪಲ್ಲಿವರೆಗೆ ಅಷ್ಟೆ. ಇದರ ದೂರವನ್ನು ಕಳೆದರೆ ಇನ್ನೆಲ್ಲೂ ದೊಡ್ಡ ರೈಲ್ವೆ ಮಾರ್ಗ ಇಲ್ಲವೇ ಇಲ್ಲ.

ಇನ್ನು ಎಲೆಕ್ಟ್ರಿಕ್ ರೈಲ್ವೆಯಂತೂ ಇಡೀ ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಬೆಂಗಳೂರು-ಮೈಸೂರು ಲೈನನ್ನು ವಿದ್ಯುಚ್ಛಕ್ತಿ ಲೈನಾಗಿ ಪರಿವರ್ತಿಸಬೇಕೆಂದು ಮುಂಚಿ ಮೈಸೂರು ಸರ್ಕಾರ ಆಲೋಚಿಸಿತ್ತು. ಅದರ ಇದೆಲ್ಲಾ ಈಗ ಕೇಂದ್ರಕ್ಕೆ ಸೇರಿದ ವಿಷಯ ತಾನೆ ಇನ್ನು ಈ ಯೋಜನೆ ಕಾರ್ಯರೂಪಕ್ಕೆ ಬರುವ ಮಾತು ಸಧ್ಯಕ್ಕಂತೂ ಇಲ್ಲವೆನ್ನಬಹುದು.

ಬೆಂಗಳೂರು - ಮೈಸೂರು ಮತ್ತು ಬೆಂಗಳೂರು - ಹುಬ್ಬಳ್ಳಿ ಪೂನಾ ಮಾರ್ಗದಲ್ಲಿ ಸಂಚಾರ ಬಹಳ ಜಾಸ್ತಿಯಾಗಿರುವ ಕಾರಣ ಆಮೇಲಿನಿಂದ ಇದನ್ನು ಬ್ರಾಡ್ ಗೇಜ್‌ಗೆ ಪರಿವರ್ತಿಸಬೇಕು. ಮತ್ತು ಬೆಂಗಳೂರು- ಚಿಕ್ಕಬಳ್ಳಾಪುರದ ಮಾರ್ಗ ಏಟರ್ ಗೇಜಿಗೆ ಪರಿವರ್ತಿಸಬೇಕು ? ಆದರೆ ಇವನ್ನೆಲ್ಲಾ ಮಾಡುವವರಾರು.

ದಿಟ್ಟತನವಾಗಿಯೂ ಇಷ್ಟು ಹೊಸ ಮಾರ್ಗಗಳಾದರೂ ರಚಿಸಲ್ಪಟ್ಟರೆ ಕರ್ನಾಟಕದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ರೈಲ್ವೆ ರಚಿಸಿದಂತಾಗಿತು. ಮತ್ತು ಕರ್ನಾಟಕದ ವ್ಯಾಪಾರ ಅಭಿವೃದ್ಧಿಗೆ ಅನುಕೂಲವಾದೀತು.

ಕೈಮಗ್ಗದ ಬಟ್ಟೆಗಳ ರಪ್ತು

ಇಂಡಿಯಾ ಸರ್ಕಾರದವರು ರಫ್ತಿನ ಓಪನ್ ಜನರಲ್ ಲೈಸನ್ಸ್ ನಿಂದ ಕೆಲವೊಂದರಲ್ಲಿ ಕೈಮಗ್ಗದ ಬಟ್ಟೆಗಳನ್ನೂ ಸೇರಿಸಲು ನಿರ್ಧರಿಸಿರುವರು. ಏಪ್ರಿಲ್ 21ರ ಭಾರತದ ಗೆಜೆಟ್ಟಿನ ವಿಶೇಷ ಪ್ರಕಟಣೆಯಲ್ಲಿ ಈ ನಿರ್ಧಾರವನ್ನು ಪ್ರಕಟಿಸಲಾಗಿದೆ.

ಇದುವರೆಗೂ ಲೈಸನ್ಸ್ ತೆಗೆದುಕೊಂಡು ಕೈಮಗ್ಗದ ಬಟ್ಟೆಗಳನ್ನು ರಪ್ತು ಮಾಡಬೇಕಾಗಿತ್ತು. ಇನ್ನು ಮುಂದೆ ಯಾವ ಲೈಸನ್ಸೂ ಇಲ್ಲದೆ ಕೈಮಗ್ಗದ ಬಟ್ಟೆಯನ್ನು ರಪ್ತು ಮಾಡಲು ಅವಕಾಶ ಕೊಡಲಾಗಿದೆಯೆಂದು ಈ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಯಾಣಿಕರಿಗೆ ವಿಶ್ರಾಂತಿ ಕೊಠಡಿಗಳು

ಮೂರನೆಯ ತರಗತಿಯ ಪ್ರಯಾಣಿಕರಿಗೆ ಯಾವುದೇ ನಿಲ್ದಾಣದಲ್ಲಿ ವಿಶ್ರಾಂತಿ ಕೊಠಡಿಗಳನ್ನು ಸಾಮಾನ್ಯ ದರದಲ್ಲಿ ಒದಗಿಸಲಾಗುವುದೇ ಎಂಬ ಪ್ರಶ್ನೆಗೆ ಉತ್ತರ ಕೊಡುತ್ತ ಭಾರತದ ರೈಲ್ವೆ ಮತ್ತು ಸಾರಿಗೆ ಶಾಖೆಯ ಉಪಮಂತ್ರಿ ಶ್ರೀ ಓ ವಿ ಅಲಗೇಶನ್‌ರವರು, ಈ ವರ್ಷದಲ್ಲಿ ಲಕ್ನೋ ಮತ್ತು ದೆಹಲಿಯ ಮುಖ್ಯ ನಿಲ್ದಾಣಗಳಲ್ಲಿಯೂ ಪಶ್ಚಿಮ ರೈಲ್ವೆಯ ಗಾಂಧಿದಾಮ ನಲ್ಲಿಯೂ ಇಂತಹ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸುವ ಆಲೋಚನೆ ಇದೆಯೆಂದು ಹೇಳಿದರು. ಅವುಗಳು ಈ ವರ್ಷ ಸಾರ್ವಜನಿಕರ ಉಪಯೋಗವಾಗಿ ಸಿದ್ಧವಾಗುವುದೆಂದೂ ಅವರು ತಿಳಿಸಿದರು.

— ಬಳ್ಳಾರಿ ಪ್ರಭಾತ್‌ದಲ್ಲಿ —

9-5-54 ರಿಂದ

ಸಂಸಾರ

ತೆಲುಗು ಚಿತ್ರ

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. - Subscription Rates.

ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 10-5-54

Sir.

Edited Printed & Published by T.B. Keshava Rao, at Nava Bharat Printing Press, Bellary.

ನವಭಾರತ

ಸೋಮವಾರ
ಜೂನ್
೧೪, ೧೯೫೪

ಪರ್ಷ 17
ಸಂಚಿಕೆ 39

ಬಳ್ಳಾರಿಯ ಉಚ್ಚಳ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ಬಳ್ಳಾರಿ ಮುನಿಸಿಪಾಲಿಟಿಯ ಅನುಚಿತವರ್ತನೆ

ಶ್ರೀಮನ್ಮಹಾರಾಜರವರು ಬಳ್ಳಾರಿ ಜಿಲ್ಲೆಯಲ್ಲಿ ಜೂನ್ 30ನೇ ತಾರಿಖಿನಿಂದ ಮೂರು ದಿವಸಗಳವರಿಗೆ ಸಂಚರಿಸುವ ಸಮಯದಲ್ಲಿ ಬಳ್ಳಾರಿ ಪೌರಸಭೆಯವರು ಅವರಿಗೆ ಮಾನಪತ್ರವನ್ನರ್ಪಿಸಿ ಗೌರವಿಸುವುದು ಉಚಿತವಾಗಿತ್ತು. ಅವರೆ ಅಲ್ಲಿನ ಸದಸ್ಯರ ಸೈಕಿ ಹದಿಮೂರು ಮಂದಿ ರಾಜಕೀಯದ ಭಿನ್ನಾಭಿಪ್ರಾಯಗಳನ್ನು ತಂದೊಡ್ಡಿ, ಮೈಸೂರಿನ ಮಹಾರಾಜರಿಗೆ ಭಿನ್ನವತ್ತಳೆ ಕೊಡಕೂಡದೆಂದು ನಿರ್ಣಯ ಮಾಡಿರುವದು ಮೈಸೂರಿನ ಜನರಿಗೆ ಸಖೇದಾಶ್ಚರ್ಯವನ್ನುಂಟುಮಾಡಿದೆ. ಶ್ರೀಮನ್ಮಹಾರಾಜರವರು ನಿಯಮಬದ್ಧ ಅರಸರಾಗಿ ರಾಜಕೀಯ ಗೊಂದಲಗಳಿಂದ ದೂರವಿದ್ದಾರೆ. ಮೇಲಾಗಿ ಮುಂದೆ ರೂಪುಗೊಳ್ಳುವ ಕರ್ನಾಟಕ ಪ್ರಾಂತಕ್ಕೆ ಅವರು ಮುಖ್ಯಸ್ಥರಾಗಿರುವುದರಿಂದ ಅವರಿಗೆ ಸಲ್ಲಬೇಕಾದ ಮರ್ಯಾದೆಗೆ ಕುಂದುಕ ತಂದು ದುಕನ್ನಡ ನಾಡಿನ ಪ್ರಜೆಗಳಿಗೆ ನೋವನ್ನುಂಟುಮಾಡಿದೆ. ಇದರಲ್ಲಿ ವೈಯಕ್ತಿಕ ಪ್ರಶ್ನೆಯೇನೂ ಇಲ್ಲವೆಂದೂ, ಬಳ್ಳಾರಿ ತಾಲ್ಲೂಕನ್ನು ಮೈಸೂರಿಗೆ ಸೇರಿದ ಪ್ರತಿಭಟನಾರ್ಥವಾಗಿ ಈರೀತಿ ಮಾಡಲಾಯಿತೆಂದು ಒಂದು ವಿವರಣೆ ಬಂದಿರುವುದಾಗಿಯೂ ಮೇಲೆ ಬರೆದಂತಿದೆ. ಅದಕ್ಕೂ ಇದಕ್ಕೂ ಏನು ಸಂಬಂಧ? ಬಳ್ಳಾರಿ ನಗರವೂ ತಾಲ್ಲೂಕೂ ಮೈಸೂರಿಗೆ ಸೇರತಕ್ಕದ್ದೆಂದು ನ್ಯಾಯ ಪರಿಪೂರ್ಣ ರುತೀರ್ಮಿತ್ತಿರುವಾಗ ಅದನ್ನು - ಪುನಃ ಕೆಡಕಿ, ಇಲ್ಲಸಲ್ಲದ ವಾದವನ್ನು ಹುಟ್ಟಿಸುವುದರಿಂದ ಪ್ರಯೋಜನವೇನು ? ತಮ್ಮ ಮೂಗಿನ ನೇರಕ್ಕೆ ಕೆಲಸ ನಡೆಯಲಿಲ್ಲವೆಂದು ನೇರವಾದ ಮಾರ್ಗವನ್ನೇ ಬಿಟ್ಟು ವರ್ತಿಸುವುದು ಯಾವ ನ್ಯಾಯ? ಬಳ್ಳಾರಿ ಪೌರಸಭೆಯ ಸದಸ್ಯರು ಜನರ ಪ್ರತಿನಿಧಿಗಳಿಂದ ಚುನಾಯಿತರಾದವರು. ಇಂತಹ ಮುಖ್ಯ ವಿಷಯದಲ್ಲಿ ತಮ್ಮ ತೀರ್ಮಾನ ಕೊಡುವುದಕ್ಕೆ ಮೊದಲು ಬಳ್ಳಾರಿ ಪುರಜನರ ಅಭಿಪ್ರಾಯವನ್ನು ಕೇಳಬಹುದಾಗಿತ್ತು. ಯಾವುದೋ ವೈಯಕ್ತಿಕ ದ್ವೇಷದಿಂದ ಶ್ರೀಮನ್ಮಹಾರಾಜರ ಬರುವಿಕೆಯನ್ನು ಆದರಿಸದೆ, ಅವರ ಮೇಲೆ ಮುನಿಸಿಕೊಳ್ಳುವುದು ನಮ್ಮೇನೋ ಸರಿ ಅನಿಸಲಿಲ್ಲ. ಪೌರಭೆಯವರು ಭಿನ್ನವತ್ತಳೆ ಕೊಡದೆ ಇದ್ದರೆ, ಜನರಾದರೂ ಸರಿ, ನ್ಯಾಯವನ್ನು ಎತ್ತಿ ಹಿಡಿದು ಶ್ರೀಮನ್ಮಹಾರಾಜರ ಆಗಮನವನ್ನು ಸಂಭ್ರಮಗೊಳಿಸಬೇಕು. ಮೈಸೂರು ಪ್ರಜೆಯನ್ನು ಬೆಳಗಿಸಿದ ಅರಸರ ಗುಣಗಾನ ಮಾಡಿ ಬಳ್ಳಾರಿ ಜನರಿಗೂ ಇರುವ ನಿಕಟ ಬಾಂಧವ್ಯವನ್ನು ಬೇರೂರುವಂತೆ ಮಾಡಬೇಕು. ಪೌರಸಭೆಯ ಈ ನಿಲುಮೆಯನ್ನು ಖಂಡಿಸಬೇಕು. ಪ್ರತಿಷ್ಠಿತವಜನ್ನಿಸಲ್ಲಿಯೂ ಕಾರ್ಪೊರೇಟ್‌ಸೇಯರುಗಳು ಸಭೆ ಸೇರಿಸಿ ತಮ್ಮನ್ನು ಕೇಳದೆ, ತಮ್ಮ ಅಭಿಪ್ರಾಯವನ್ನು ಸಂಗ್ರಹಿಸದೆ ಮಾಡಿದ ಆ ತೀರ್ಮಾನಕ್ಕಾಗಿ ಪ್ರತಿಭಟನಾ ಸಭೆಗಳನ್ನೇರ್ಪಡಿಸಿ

4 ನೇ ಪುಟಕ್ಕೆ

Public Notice:

All records including those relating to Small Cause Suits, Original Suits, Appeals, Execution Petitions, Insolvency Petitions, Notices and reply notices relating to the period from 1-8-1926 to 31-12-1945 will be destroyed on 15th July 1954 without any further notice either personal or public to my clients. If they are interested in preserving any of their documents, records or files, they are reuested to take them back before that date after which they will not be available.

To : The Edittor,
Nava Bharat,
Bellary.

D. L. Chety,
Aavocate, Bellary.

— ಸಾರ್ವಜನಿಕ — ಪ್ರಕಟನೆ —

ನನ್ನ ಕಕ್ಷಿದಾರರಿಗೆಲ್ಲ ಈ ಮೂಲಕ ತಿಳಿಯಪಡಿಸುವುದೇನಂದರೆ:-

1 - 8 - 1926 ರಿಂದ 13 - 12 - 1945 ಸಮಯದವರಿಗಿನ ರಿಕಾರ್ಡುಗಳು ಅಂದರೆ ಸ್ಮಾಲಕಾಸ್ ಸೂಟ್ಸು – ಒರಿಜಿನಲ್ ಸೂಟ್ಸು - ಅಪೀಲುಗಳು ಅಮಲು ಅರ್ಜಿಗಳು, ಇನ್‌ಸಾಲ್ವೆನ್ಸಿ ಅರ್ಜಿಗಳು - ನೋಟೀಸುಗಳು ರಿಪ್ಲೈ ನೋಟೀಸುಗಳು ವಗೈರೆ ಇವುಗಳನ್ನೆಲ್ಲ 15 ನೆಯ ಜುಲೈ 1945 ರ ದಿನಾಂಕ ಇನ್ನಾವ ತರದ ಮುಖಶ : ಆಥವಾ ಬಹಿರಂಗ ಪ್ರಕಟನೆ ನಮ್ಮಕ್ಷಿದಾರರಿಗೆ ಕೊಡದೆ, **ನಾಶಮಾಡಲಾಗುತ್ತದೆ** ಈ ಡಾಕುಮೆಂಟು, ರಿಕಾರ್ಡು ಫೈಲುಗಳನ್ನು ಯಾರಾದರೂ ರಕ್ಷಿಸಿ ಇಡಲಿಚ್ಛಿಸುವುದಾದರೆ - ಮೇಲ್ಕಾಣಿಸಿದ ತಾರೀಪಿನೊಳಗೆ ನಮ್ಮಿಂದ ತೆಗೆದುಕೊಂಡು ಹೋಗಬೇಕು. ಅವಧಿ ಮೀರಿದರೆ ಅವು ದೊರೆಯಲಾರವು —

1 - 6 - 54
ಬಳ್ಳಾರಿ.

ಡಿ. ಎಲ್. ಚೆಟ್ಟಿ
ಅಡ್ವೋಕೇಟ್ ಬಳ್ಳಾರಿ.

ಬಳ್ಳಾರಿ ಪೌರಸಭೆ ರದ್ದಿಗೆ ಕಾರಣವೇ ಇಲ್ಲವೇ?

ಮೈಸೂರು ಸರ್ಕಾರವು ಬಳ್ಳಾರಿ ಮುನಿಸಿಪಾಲಿಟಿಯನ್ನು ಏಕೆ ರದ್ದು ಪಡಿಸಬಾರದೆಂದು, ತಾ|| 27-4-54 ರಲ್ಲಿ ಕೊಟ್ಟ ನೋಟೀಸಿನ ಪರಿಶೀಲನೆಯು ತಾ|| 10-5-54 ರ ಮುನಿಸಿಪಲ್ ಕೌನ್ಸಿಲಿನ ಸ್ಪೆಷಲ್ ಸಭೆಯು ನಡೆದು ಕೌನ್ಸಿಲು ಯಾವ ವಿಷಯದಲ್ಲೂ ಏನೂ ತಪ್ಪುಮಾಡಿಲ್ಲವೆಂದೂ ಕೌನ್ಸಿಲಿನ ಸದಸ್ಯರ ಬಹುಮತಾಭಿಪ್ರಾಯವನ್ನು ಮಂಡಿಸಿಕೊಳ್ಳುವುದು ದ್ರೋಹವೆಲ್ಲವೆಂದೂ ಉತ್ತರ ಕೊಡಲು ನಿರ್ಧರಿಸಲಾಯಿತು.

ಈ ಸಭೆಗೆ ಬಂದ 25 ಸದಸ್ಯರಲ್ಲಿ 21 ಸದಸ್ಯರು ಅಂಧ್ರ ವಾದದ ಪರವಾಗಿಯೂ 4 ಜನ ಸದಸ್ಯರು ನಗರ ಹಿತವನ್ನಲಕ್ಷಿಸಿಯೂ ತಮ್ಮ ಮತ ಕೊಟ್ಟರು. ಪ್ರಚಾರ ಮಾಡಲು ಮತ್ತು ರಾಜಕೀಯ ತೀರ್ಮಾನಗಳನ್ನು ತರಲು ತಮಗೆ ಹಕ್ಕುಂಟೆಂದು ವಾದಿಸಿ ಇತರ ಮುನಿಸಿಪಾಲಿಟಿಗಳ ಉದಾಹರಣೆಯನ್ನು ಆಂಧ್ರ ವಾದಿಗಳು ಕೊಟ್ಟರು ಮೈಸೂರು ರಾಜ್ಯದಲ್ಲಿ ವಿಲೀನವಾದ ನಂತರ ಬಳ್ಳಾರಿಯು ಹೀಗಾಗಿದೆ ಯೆಂದೂ ಅದಕ್ಕೆ ಆರ್ಥಿಕ ನೆರವು ಸಂಭವಿಸಿದೆಯೆಂದೂ ಒತ್ತಿ ಹೇಳಿದ್ದಾರೆ. ಮೈಸೂರು ಸರ್ಕಾರವು ಕೇಳಿರುವ ಪ್ರಶ್ನೆಗಳು ಅಸಂಬದ್ಧವಾಗಿದ್ದು ಕ್ಷುಲ್ಲಕವಾಗಿವೆಯೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

''ತಾಯಿನಾಡು'' ಪತ್ರಿಕೆ ತರಿಸಲು ಕೌನ್ಸಿಲಿನ ಸಮ್ಮತಿಯಿಲ್ಲದಿದ್ದರೂ, ಅಧಿಕಾರಿಗಳು ಅದನ್ನು ತರಿಸಿ, ಕೌನ್ಸಿಲಿನ ಹಣಕೊಟ್ಟೂ ಕೌನ್ಸಿಲ್ಲನ್ನೇ ಉಲ್ಲಂಘಿಸಿದ್ದಾರೆಂದೂ ಹಲವರು ವಾದಿಸಿದರು.

ಕಂದಾಯ ಮತ್ತು ಸುಂಕಗಳ ವಸೂಲಿ ಕೌನ್ಸಿಲಿನ ಜವಾಬ್ದಾರಿಯಲ್ಲ

ಕಂದಾಯ ಮತ್ತು ಸುಂಕಗಳ ವಸೂಲಿಯು ಸರಿಯಾಗಿಲ್ಲವೆಂದೂ, ಕೌನ್ಸಿಲು ಕರ್ತವ್ಯ ಲೋಪ ಮಾಡಿದೆಯೆಂದೂ ಸರ್ಕಾರ ಮನವರಿಕೆ ಅಕ್ಷೇಪಣೆಗೆ ಕೌನ್ಸಿಲು ಉತ್ತರ ಕೊಡುತ್ತಾ, ಕಂದಾಯ ಮತ್ತು ತೆರಿಗೆಗಳ ವಸೂಲಾತಿಯು ಪೌರಸಭೆಯ ಜವಾಬ್ದಾರಿಯಲ್ಲವೆಂದೂ ಸರಕಾರದಿಂದ ನೇಮಿಸಿರುವ ಅಧಿಕಾರಿ ವರ್ಗದ್ದೆಂದೂ, ಈ ಬಗ್ಗೆ ಮುನಿಸಿಪಲ್ ಕಮಿಷನರನ್ನು ಏನರನೆ ಕೇಳಬೇಕೆಂದೂ ನಿರ್ಣಯ ಮಾಡಿದೆ.

ರಸ್ತೆಗಳ ನಿರ್ಮಾಣ, ಉಸುವಾರಿ, ಸುವ್ಯವಸ್ಥೆ, ನಗರ ನಮ್ಮುಲ್ಯದ ರಕ್ಷಣೆ ಮತ್ತು ನೀರು ಸರಬರಾಜಿನ ವಿಷಯಗಳನ್ನು ಪೌರಸಭೆ ಅಲಕ್ಷಿಸಿದೆಯೆಂದು ಸರ್ಕಾರವು ಮಾಡಿರುವ ಆಪಾದನೆಗೆ ಉತ್ತರವಾಗಿ, ಕೌನ್ಸಿಲು ಮದ್ರಾಸು ಸರ್ಕಾರದ ಆಡಳಿತದಲ್ಲಿದ್ದಾಗ ಸರ್ಕಾರವು ಕೊಡುತ್ತಿದ್ದ ಸೌಕರ್ಯಗಳನ್ನು ಮೈಸೂರು ಸರ್ಕಾರವು ಕೊಡುತ್ತಿಲ್ಲವಾದರಿಂದ ಈ ದುರ್ಸ್ಥಿತಿಗೆ ಇಳಿದಿದೆ ಯೆಂದೂ, ಪೌರಸಭೆಯದೇನೂ ತಪ್ಪಿಲ್ಲವೆಂದೂ ಪೌರಸಭೆ ವಿಶೇಷ ಮುತುವರ್ಜಿಯಿಂದ ಈ ಕೆಲಸಗಳನ್ನು ನಡೆಸುತ್ತಿದೆಯೆಂದೂ ತಿಳಿಸಿತು.

ಸಬ್ ಕಮಿಟಿಗಳ ಸಭೆಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಸರ್ಕಾರ ಮಾಡಿದ್ದ ಆಪಾದನೆಗೆ ಉತ್ತರವಾಗಿ ಕೌನ್ಸಿಲು, ಸಮಿತಿಗಳ ಸಭೆಗಳು ನಡೆಯಲು ನಿರ್ದಿಷ್ಟ ಕಾಲಾವಧಿಯೇನೂ ಕಾನೂನಿನಲ್ಲಿ ನಿಗದಿಯಾಗಿಲ್ಲವೆಂದೂ ತೆಲಸವಿದ್ದಲ್ಲಿ ಸಮಿತಿಗಳು ಸೇರುವುವೆಂದೂ ಯಾವ ಪರಿಶೀಲನ ವಿಷಯವೂ ಇಲ್ಲದ್ದರಿಂದ ಸಮಿತಿಗಳು ಸೇರಿಲ್ಲವೆಂದೂ ನುಡಿದಿದೆ. ಅಪಾಯಿಂಟ್‌ಮೆಂಟ್ ಸಮಿತಿಯ ಕೆಲಸವು ಮಾತ್ರ ಮೈಸೂರು ಸರ್ಕಾರದಿಂದ ನೇಮಿತವಾದ ಎಕ್ಸಿಕ್ಯುಟಿವ್ ಅಧಿಕಾರಿಗಳ ದರ್ಪತರ್ಜನೆಯಿಂದ ಮುಗ್ಗಟ್ಟಿಗೆ ಬಿದ್ದಿದೆಯೆಂದೂ ಈ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಮೂರು ಕೊಟ್ಟರೂ ಸರ್ಕಾರ ಯಾವ ಕಾರ್ಯಕ್ರಮವನ್ನು ಕೈಗೊಂಡಿಲ್ಲವೆಂದೂ ಅಪಾದಿಸಿದೆ.

ಮೈಸೂರಿಗೆ ಬಳ್ಳಾರಿ ಸೇರಕೂಡದೆಂದು ವಿರೋಧಿಸಿ ಪೌರಸಭೆಯು ಮಾಡಿದ ನಿರ್ಣಯವು ಅದರ ಅಧಿಕಾರದ ದುರುಪಯೋಗವಲ್ಲವೆಂದೂ, ನಗರದ ಸ್ಥಿತಿಗತಿಗೆ ಸಂಬಂಧಿಸಿದ ಪ್ರಮುಖ ವಿಷಯವೊಂದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಪೌರಸಭೆಗೆ ಅಧಿಕಾರ ವಿದೆಯೆಂದೂ ವಿವರಿಸಲಾಗಿದೆ.

ಇದೇ ರೀತಿ ಇತರ ಹಲವು ಆಪಾದನೆಗಳನ್ನು ನಿರಾಕರಿಸಲಾಗಿದೆ.

ಗೌರೀಶಂಕರ ಶಿಖರ ಆರೋಹಣಕ್ಕೆ ಯತ್ನ

ರೇಮಾಂಡ್ ಲ್ಯಾಂಬರ್ಟ್‌ರ ಯೋಜನೆ

ಎವರೆಸ್ಟ್ ಶಿಖರಕ್ಕೆ ಪಶ್ಚಿಮದಲ್ಲಿರುವ 23,440 ಅಡಿ ಎತ್ತರದ ಗೌರೀಶಂಕರ ಶಿಖರವನ್ನು ಹತ್ತಲು ಸ್ವಿಟ್ಜರ್‌ಲೆಂಡಿನ ಪರ್ವತಾರೋಹಿ ರೇಮಾಂಡ್ ಲ್ಯಾಂಬರ್ಟ್ ನೇಪಾಳ ಸರ್ಕಾರದ ಅನುಮತಿ ಕೋರಿವ್ವಾರೆಂದು ಇಲ್ಲಿ ಗೊತ್ತಾಗಿದೆ.

ರೇಮಾಂಡ್ ಲ್ಯಾಂಬರ್ಟ್‌ರೂ ನೆಪ್ಟಾ ತೇನ್‌ಸಿಂಗ್‌ರೂ 1952ರ ಚಳಿಗಾಲದಲ್ಲಿ ಎವರೆಸ್ಟ್ ಶಿಖರದ ತುದಿಗೆ 900 ಅಡಿಗಳ ಸಮೀಪದವರೆಗೂ ಹೋಗಿದ್ದರು. ಆದರೆ ಬರುಗಾಳಿ ಮತ್ತು ವಿಪರೀತ ಚಳಿಯಾಗಿ ಅವರು ವಾಪಸು ಬರಬೇಕಾಯಿತು.

ಗೌರೀಶಂಕರ ಶಿಖರಾರೋಹಣ ಪ್ರಯತ್ನಕ್ಕೆ ಲ್ಯಾಂಬರ್ಟ್‌ರವರು ತೇನ್‌ಸಿಂಗ್‌ರವರನ್ನು ಆಹ್ವಾನಿಸುವರು ಎಂದು ಗೊತ್ತಾಗಿದೆ.

ಪ್ರವಾಸಿಗರನ್ನು ಆಕರ್ಷಿಸಲು ಕ್ರಮ

ಅಸ್ಸಾಮಿಗೆ ಪ್ರವಾಸಿಗರನ್ನು ಆಕರ್ಷಿಸಲು ಅಸ್ಸಾಮಿನ ಅರಣ್ಯ ಮೃಗಗಳ ಚಿತ್ರಗಳನ್ನು ದೇಶದ ಎಲ್ಲಾ ಪ್ರಮುಖ ನಿಮಾನ ನಿಲ್ದಾಣಗಳಲ್ಲೂ ಪ್ರದರ್ಶಿಸಲಾಗುವುದು. ಇದಕ್ಕಾಗಿ ಪ್ರಾಂತ ಸರ್ಕಾರ ಕೇಂದ್ರ ಸರ್ಕಾರ ಅನುಮತಿಯನ್ನು ಈಗಾಗಲೇ ಪಡೆದಿದೆ.

ಬಳ್ಳಾರಿ ಪುರಸಭೆಗೆ ವಾಣಿಜ್ಯ ಸಂಘದ ಉತ್ತರ

ಬಳ್ಳಾರಿ ಪುರಸಭೆಯು ಮೇ 10ನೇ ತಾರೀಖು ಮಾಡಿದ ತೀರ್ಮಾನದಲ್ಲಿ ಮೈಸೂರು ಸರ್ಕಾರ, ಬಳ್ಳಾರಿ ಪೌರಸಭೆಯ ನ್ನೇಕೆ ರದ್ದುಗೊಳಿಸಬಾರದು ಎಂಬ ಪ್ರಶ್ನೆ ಮಾಡುವುದರಲ್ಲಿ ಬಳ್ಳಾರಿ ವಾಣಿಜ್ಯ ಸಂಘವನ್ನು ಹೀಯಾಳಿಸಿ ಆಪಾದನೆಗಳನ್ನು ಮಾಡಿದ್ದಿತು.

ವಾಣಿಜ್ಯ ಸಂಘದ ವ್ಯವಸ್ಥಾಪಕ ಸಮಿತಿಯು ಮೇ 19ನೇ ತಾರೀಖು ಸಾಯಂಕಾಲ ಸಭೆ ಸೇರಿ ಈ ರೀತಿ ತೀರ್ಮಾನಗಳನ್ನು ಮಾಡಿದೆ:-

ಬಳ್ಳಾರಿ ಡಿಸ್ಟ್ರಿಕ್ಟ್ ಚೇಂಬರ್ ಆಫ್ ಕಾಮರ್ಸ್, ಸರ್ಕಾರಕ್ಕೂ, ಮುನಿಸಿಪಾಲಿಟಿಗೂ ತೆರಿಗೆಗಳ ರೂಪವಾಗಿ ಅತ್ಯಧಿಕ ಮೊತ್ತವನ್ನು ಸಲ್ಲಿಸುತ್ತಲಿರುವ ವರ್ತಕರಲ್ಲಿ 93 ಜನರನ್ನೊಳಗೊಂಡು ಮೈಸೂರು ಚೇಂಬರ್ ಆಫ್ ಕಾಮರ್ಸ್ ಪೂರ್ವ ಸ್ಥಾಪಕ ಸಮಿತಿಯಲ್ಲಿ ಸ್ಥಾನವನ್ನು ಹೊಂದಿದೆ. ಈ ವಿಷಯವನ್ನು ಅಧಿಕೃತವಾಗಿ ಮುನಿಸಿಪಾಲಿಟಿಗೂ ಸರ್ಕಾರಕ್ಕೂ ತಿಳಿಸುವುದು.

ಪನ್ನೊಂದು ಜನ ಪೌರಸಭಾ ಸದಸ್ಯರು ಸೂಚಿಸಿದಂತೆ ಬಳ್ಳಾರಿ ಪೌರಸಭೆಯನ್ನು ರದ್ದುಗೊಳಿಸುವ ಜರೂರು ಅವಶ್ಯಕತೆಯ ಬಗ್ಗೆ ಸಂಸ್ಥಾರವನ್ನು ಒತ್ತಾಯ ಪಡಿಸುವುದು ಮೈಸೂರು ಸರ್ಕಾರವನ್ನು ಮತ್ತು ಅದರ ಅಧಿಕಾರಿಗಳನ್ನು ಅಪಮಾನಗೊಳಿಸಲೆತ್ನಿಸುತ್ತಿರುವ ಬಹುಸಂಖ್ಯಾಕರೆಂಬ ಪೌರಸಭಾ ಸದಸ್ಯರು ಭಾಷಾ ವಿಷಯದಿಂದಾರಿಸಿ ಬಂದಿಲ್ಲ. ಅವರು ಆರಿಸಿ ಬಂದಿರುವುದು ಅಕ್ರಮ ದಾರಿಗಳಿಂದ- ಬಹುಸಂಖ್ಯಾಕರೆಂಬುದು ಕೃತಕ.

ಈ ಸದಸ್ಯರು ಮುನಿಸಿಪಲ್ ಆಸ್ತಿಗಳ ನಾಶಕ್ಕೂ, ನಷ್ಟಕ್ಕೂ ತಮ್ಮ ಶಾಸನೋಲ್ಲಂಘನ ನೀತಿಯಿಂದ ಕಾರಣರಾಗಿರುವುದರಿಂದ ಸರ್ಕಾರವು ಸಾಕಷ್ಟು ಎಚ್ಚರಿಕೆ ವಹಿಸಬೇಕು. ಮೈಸೂರಿನ ಶಾಸನ ಸಭೆಯಲ್ಲಿ ಪ್ರತಿಜ್ಞೆ ಮಾಡಿ ಸರ್ಕಾರದ ಮೂಲಾತನವನ್ನು ಬಳಸುತ್ತಿರುವ ಸ್ಥಾನಿಕ ಶಾಸನ ಸಭ್ಯರು ಮೈಸೂರು ಸರ್ಕಾರದ ವಿರುದ್ಧದ ತೀರ್ಮಾನವನ್ನು ಸೂಚಿಸಿರುವುದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಇವರು ಸಾರ್ವಜನಿಕ ವಿಶ್ವಾಸವನ್ನು ಕಳೆದುಕೊಂಡು ತಮ್ಮ ಪ್ರಾತಿನಿಧ್ಯಕ್ಕೇ ಭಂಗ ತಂದುಕೊಂಡಿರುವರು. ಇವರು ರಾಜೀನಾಮೆ ಕೊಟ್ಟು ಭಾಷೆಯ ಪ್ರಶ್ನೆಯ ಮೇಲೆ ನಿಲ್ಲಬೇಕೆಂದು ಸೂಚಿಸುತ್ತೇವೆ. ಇಲ್ಲಿಯ ವಕೀಲರೊಬ್ಬರು ಮೈಸೂರು ನ್ಯಾಯ ಶಾಖೆಗೆ ಆಪಕೀರ್ತಿ ತರುವ ಮಾತುಗಳನ್ನಾಡಿದ್ದಾರೆ. ಇದನ್ನು ಸಂಬಂಧಿಸಿದವರ ಗಮನಕ್ಕೆ ತರಲಾಗಿದೆ.

ಮೈಸೂರು ಮುಖ್ಯಮಂತ್ರಿ ಭಾಷಣ.

ಮುಖ್ಯ ಮಂತ್ರಿಗಳು ಮುಂದುವರಿದು ಮಹಾತ್ಮಾ ಗಾಂಧಿಯವರಿಗೆ ಕೆಲವರು "ತಾವು ಕಾಂಗ್ರೆಸ್ಸಿಗಿಂತ ದೊಡ್ಡವರು, ತಮ್ಮಿಂದ ಕಾಂಗ್ರೆಸ್ಸು ಉಳಿದೆ ಎಂದು ಹೇಳಿದಾಗ ಅವರು "ಅದು ಸರಿಯಾದ ವಾದನಲ್ಲ. ನನಗಿಂತ ಕಾಂಗ್ರೆಸ್ ಸಂಸ್ಥೆ ದೊಡ್ಡದು" ಎಂದು ಹೇಳಿದ್ದರು. ಇಂದು ನಾನು ಆ ದೃಷ್ಟಿಯಿಂದ ಸಾಕ್ಷಾತ್ಕರಿಸುತ್ತಿದ್ದೇನೆ. "ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಿದವನು ನಾನು" ಎಂದು ಭಾಷಣ ಮಾಡುವುದು ಸ್ವಾಭಿಮಾನದ ಎಲ್ಲೆಯನ್ನು ಮೀರಿದಂತಾಗಿ ಇರುತ್ತದೆ. ಈ ವಿನಯದ ಕೊರತಾವರಣಕ್ಕೆ ಈ ಎಲ್ಲಾ ಹೊಣೆಯು ಕಾರಣವಾಗಿರುತ್ತದೆ ಮುಖಂಡರುಗಳು ಕಷ್ಟಪಟ್ಟರು ಆನ್ನೇ ಇನ್ನೂ ಹೆಚ್ಚಾಗಿ ಅನೇಕ ಕಾಂಗ್ರೆಸ್ ಸದಸ್ಯರೂ ಕಷ್ಟಪಟ್ಟಿದ್ದಾರೆ.

ಈ ಎಲ್ಲರ ಕಷ್ಟದ ಫಲವಾಗಿ ಸಂಸ್ಥೆ ಬೆಳೆದಿದೆ ಮತ್ತು ಉಳಿದಿದೆ. ಈ ಸಂಸ್ಥೆಯನ್ನು ನಾನು ಕಟ್ಟಿದವನು ಎನ್ನುವ ಮಾತು ಇನ್ನು ಮುಂದಾದರೂ ಬೇಡ ಈ ದೃಷ್ಟಿಯಿಂದ ನಾನು ಶ್ರೀ ವೀರಣ್ಣಗೌಡರನ್ನಾಗಲೀ ಶ್ರೀ ಚನ್ನಯ್ಯನವರನ್ನಾಗಲೀ ಅಥವಾ ಶ್ರೀ ಸುಬ್ರಹ್ಮಣ್ಯಂರವರನ್ನಾಗಲೀ ಕುರಿತು ಮಾತನಾಡುವುದಿಲ್ಲ. ಈ ಸಭೆಯಲ್ಲಿ ಹೊರ ಹೊಮ್ಮಿರುವ ಅಭಿಪ್ರಾಯ ಕಾಂಗ್ರೆಸ್ ಸಂಸ್ಥೆಯ ಹಿತಕ್ಕೆ ಅನುಗುಣವಾಗಿದೆ. ಎಲ್ಲರೂ ಯಾವ ವಿಧವಾದ ಸರಣಿಯನ್ನು ಅನುಸರಿಸಿದರೂ ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟಿರಬೇಕು. ವಿಸ್ತರಿಸಬೇಕು ಮತ್ತು ಈ ಸಂಸ್ಥೆಯಿಂದ ದೇಶಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಬೇಕು" ಎಂದು ಮಾತನಾಡಿದ್ದಾರೆ. ಈ ಸದುದ್ದೇಶವನ್ನು ಸಾರ್ಥಕ ಪಡಿಸುವುದು ನವಿಲ್ಲರ ಕೆಲಸ. ಈ ಸದುದ್ದೇಶ ಸಾರ್ಥಕವಾಗುವ ದೃಷ್ಟಿಯಿಂದ ನಾನು ಶ್ರೀ ವೀರಣ್ಣ ಗೌಡರಿಗೆ ಜವಾಬು ಕೊಡುವ ಗೊಡವೆಗೆ ಹೋಗುವುದಿಲ್ಲ. ಆದರೆ ಅವರು ಮಾಡಿರುವ ಆರೋಪಣೆಗಳಿಗೆ ನಾನು ಉತ್ತರ ಕೊಡಲಾರೆನೆಂದಲ್ಲ. ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹ್ರೂರವರು ಮಂತ್ರಿ ಮಂಡಲದ ಮೇಲೆ ಶ್ರೀ ವೀರಣ್ಣ ಗೌಡರು ಶ್ರೀ ಚನ್ನಯ್ಯನವರು ಮತ್ತು ಶ್ರೀ ಸುಬ್ರಹ್ಮಣ್ಯಂರವರು ಕೊಟ್ಟಿರುವ ಆಪಾದನೆಗಳನ್ನು ಪರಿಶೀಲಿಸಿ ತೀರ್ಮಿತ್ತಿದ್ದಾರೆ. ಇವುಗಳಲ್ಲಿ ಆಪಾದನೆಗಳು ಕೆಲವು ನಿರಾಧಾರವಾದವು ಮತ್ತೆ ಕೆಲವು ಶುಷ್ಕವಾದುವು ಎಂದು ತೀರ್ಮಿತ್ತಿದ್ದಾರೆ. ಅವರ ತೀರ್ಮಾನದ ನೆರಳಿನಲ್ಲಿ ಮಂತ್ರಿಮಂಡಲವು ರಕ್ಷಣೆ ಪಡೆಯಬೇಕೆಂದು ನಾನು ಟೆಕ್ನಿಕಲ್ ಆಗಿ ವಾದಿಸುವುದಿಲ್ಲ. ನನ್ನ ಸಹೋದ್ಯೋಗಿಗಳಾದ ನೀವು ಒಪ್ಪಬೇಕು ನಿಮ್ಮ ವಿಶ್ವಾಸವನ್ನು ಪಡೆಯದೆ ನಾನು ಮುಂದುವರಿಯಲು ದಿಸ್ಸೆ ಪಡುವುದಿಲ್ಲ. ಮತ್ತೊಂದು ಎಂ.ಪಿ.ಸಿ.ಸಿ ಸಭೆಯನ್ನು ಅವರು ಕರೆಯಲಿ. ಎಂ.ಪಿ.ಸಿ.ಸಿ. ಮತ್ತು ಶಾಸನ ಸಭಾ ಜಂಟಿ ಅಧಿವೇಶನವನ್ನು ಕರೆಯಲಿ. ಇವೆಲ್ಲಕ್ಕಿಂತಲೂ ದೊಡ್ಡದಾದ ಕಾಂಗ್ರೆಸ್ ಕಾರ್ಯಕರ್ತರ ರಾಜಕೀಯ ಸಮ್ಮೇಳನವನ್ನು ಕರೆಯಲಿ. ಹಿಂದೆ ದಾವಣಗೆರೆಯಲ್ಲಿ ಇಂತಹ ರಾಜಕೀಯ ಸಮ್ಮೇಳನ ನೆರೆದ್ದು. ಈ ಯಾವ ಸಭೆಯಲ್ಲೇ ಆಗಲಿ ಶ್ರೀ ವೀರಣ್ಣಗೌಡರು ಮಂತ್ರಿಮಂಡಳದ ಮೇಲಿರುವ ತಮ್ಮ ಆರೋಪಣೆಗಳನ್ನೆಲ್ಲಾ ಮಂಡಿಸಲಿ. ಆಪಕ್ಕೆ ನಾನು ಉತ್ತರ ಕೊಡುತ್ತೇನೆ. ಪ್ರಾಮಾಣಿಕತೆಯಿಂದ ಸೇವಾ ನಿಷ್ಠೆಯಿಂದ ಮಂತ್ರಿ ಮಂಡಲವು ಕೆಲಸ ಮಾಡಿದೆ. ಆದುದರಿಂದ ಈ ಆರೋಪಣೆಗಳೆಲ್ಲಕ್ಕೆ ಸಬಯಾದ ಉತ್ತರವನ್ನು ಕೊಡಬಲ್ಲ ವಿಶ್ವಾಸ ನನಗಿದೆ.

ಭಿಕ್ಷುಕ ವೃತ್ತಿಯ ನಿವಾರಣೆ

ಕೊಲಂಬೊ ಮೇಯರರ ಯೋಜನೆ

"ಮದ್ರಾಸ್ ನಗರದಲ್ಲಿ ಭಿಕ್ಷಾವೃತ್ತಿಯನ್ನು ತಡೆಗಟ್ಟಲು ಮಾಡಿರುವ ಕಾರ್ಯ ನಿಲಯಗಳ ವ್ಯವಸ್ಥೆಯು ಚೆನ್ನಾಗಿದೆ. ಕೊಲಂಬೊ ನಗರದಲ್ಲಿಯೂ ಹೀಗೆಯೇ ಮಾಡಬೇಕು" ಎಂಬುವಾಗಿ ಮದ್ರಾಸಿಗೆ ಭೇಟಿ ಕೊಟ್ಟು ಕೊಲಂಬೊವಿಗೆ ಬಂದಿರುವ ಕೊಲಂಬೊ ನಗರದ ಮೇಯರ್ ಶ್ರೀ ಟಿ. ರುದ್ರಾರವರು ನುಡಿದಿರುತ್ತಾರೆ. ಶ್ರೀ ರುದ್ರಾರವರು ಈಚೆಗೆ ಕೊಲಂಬೊ ನಗರದ ಪೌರಸಭೆ ನಿಯೋಗಮೊಡನೆ ಮದ್ರಾಸ, ಕಲ್ಕತ್ತ ಮತ್ತು ರಂಗೂನ್ ನಗರಗಳಿಗೆ ಭೇಟಿಯಿತ್ತು ಭಿಕ್ಷಾಟನೆ ನಿವೃತ್ತಿ ಬಗ್ಗೆ ಪರಿಶೀಲನೆ ನಡೆಸಿ ಬಂದರು.

ಕೇಂದ್ರದ ಸಹಾಯ
ಮುಖ್ಯ ಮಂತ್ರಿಗಳ ವಿವರಣೆ

ಕೇಂದ್ರ ಸರ್ಕಾರವು ಮೈಸೂರು ಸಂಸ್ಥಾನಕ್ಕೆ 1954-55ರಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು, ತುಂಗಭದ್ರಾ ಪ್ರಾಜೆಕ್ಟ್ ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದ ಯೋಜನೆಗಳಿಗಾಗಿ 22½ ಲಕ್ಷ ರೂಗಳನ್ನು ಭದ್ರಾ ಮತ್ತು ನುಗು ಪ್ರಾಜೆಕ್ಟುಗಳಿಗಾಗಿ 1½ಲಕ್ಷ ರೂ.ಗಳನ್ನೂ ಸಹಾಯ ನೀಡುವುದಾಗಿ ವಾಗ್ದಾನ ಮಾಡಿದೆಯೆಂದು ಮುಖ್ಯ ಮಂತ್ರಿಗಳು ಪತ್ರಿಕಾ ಸಮ್ಮೇಳನದಲ್ಲಿಂದು ತಿಳಿಯಪಡಿಸಿದರು.

ಭದ್ರಾವತಿ ಕಬ್ಬಿಣ ಕಾರ್ಖಾನೆಯ ಅಭಿವೃದ್ಧಿಗಾಗಿ 2 ಕೋಟಿ ರೂಪಾಯಿಗಳ ನೆರವು ಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿರುವುದಾಗಿಯೂ ಇದರಲ್ಲಿ 50 ಲಕ್ಷ ರೂ.ಗಳನ್ನು ಬಳ್ಳಾರಿ ಜಿಲ್ಲೆಯ ವಂಕ್ಷಣೆಯಿಂದಾದ ನಷ್ಟವನ್ನು ಸರಿದೂಗಿಸುವ ಸಲುವಾಗಿ ಕೊಡಬೇಕೆಂದೂ ಕೋರಲಾಗಿದೆಯೆಂದೂ ಮುಖ್ಯ ಮಂತ್ರಿಗಳೇಳಿದರು.

ಮೇಲ್ಕುಂಡ ಜಾಬುಗಳಲ್ಲದೆ, ಕೆಪ್ಪು ಆಹಾರ ಬೆಳೆ ಯೋಜನೆಗಳಿಗಾಗಿ 66ಲಕ್ಷ ರೂ, ಕಮ್ಯೂನಿಟಿ ಪ್ರಾಜೆಕ್ಟ್‌ಗಳಿಗಾಗಿ 8 ಲಕ್ಷ ರೂ, ನ್ಯಾಷನಲ್ ಎಕ್ಸ್‌ಟೆನ್ಷನ್ ಯೋಜನೆಗಳಿಗಾಗಿ 3-36 ಲಕ್ಷ ರೂ ನೀರಾವರಿಗೆ ವಿದ್ಯುಚ್ಛಕ್ತಿ ಸೌಲಭ್ಯ, ವಿಸ್ತರಿಸುವ ಸಲುವಾಗಿ 64-5 ಲಕ್ಷ ರೂ.ಕೇಂದ್ರದಿಂದ ಸಹಾಯವಾಗಿ ಬರಲಿರುವುದಾಗಿ ಅರ್ಥಿಕ ಇಲಾಖೆ ಸೆಕ್ರೆಟರಿ ಶ್ರೀ ಎ. ನಾಗಪ್ಪ ರಾವ್ ಹೇಳಿದರು.

1 ನೇ ಪುಟದ ತರುವಾಯ

ಆ ಹಬಿಸೂರು ಮಂದಿ ಸದಸ್ಯರೂ ತಮ್ಮ ಸ್ಥಳಗಳಿಗೆ ರಾಜೀನಾಮೆ ಕೊಡ ಪಂಕ ಮಾಡಬೇಕು. ಬಳ್ಳಾರಿ ಪೌರಸಭೆಯವರು ಶ್ರೀ ಮನ್ಮಹಾರಾಜರ ಬರುವಿಕೆಗೆ ಉತ್ಸಾಹಾನಂದವನ್ನು ವ್ಯಕ್ತಗೊಳಿಸುವ ಬದಲು, ಅವರು ತೋರಿಸಿದ ಈ ನಡತೆಗಾಗಿ ಮೈಸೂರಿನವರ ಮನಸ್ಸೆಲ್ಲ ನೊಂದಿದೆ. ಆ ನಿರ್ಣಯ ತಗಬಾರದಿತ್ತು. ತಡವಾದರೂ ಅವರಿಗೆ ಜ್ಞಾನೋದಯವಾಗಲಿ.

ಹೊಸಪೇಟೆಯ ಡಿಪ್ಯಿಕ್ಸ್ ಮುನ್ಸಿಫರ ಕೋರ್ಟಿನಲ್ಲಿ

O. P. 16 / 54

1. ಹೊಸಕೇರಿ ಹನುಮಪ್ಪ
2. — ,, — ಭೀಮಪ್ಪ

} ಅರ್ಜಿದಾರರು.

ಮೇಲ್ಕಾಣಿಸಿದ ಇಬ್ಬರು ಅರ್ಜಿದಾರರ ಪೈಕಿ ಎರಡನೆಯ ಅರ್ಜಿದಾರಳು — ತನ್ನ ಗಂಡನಾದ ಲೇಟ್ ಹೊಸಕೇರಿ ರಾಮಪ್ಪನಿಗೆ ಬರಬೇಕಾದ ಪಾಲಿಸಿಗಳ — ನೊಮಿನಿಯರಾಗಿ ತಿಳಿಸಿಕೊಳ್ಳಲು-ತನಗೆ ವಾರಸು ಸರ್ಟಿಫಿಕೇಟ್ ಕೊಡಬೇಕೆಂದು ಅರ್ಜಿ ಇಟ್ಟಿರುತ್ತಾಳೆ. ಅದರ ವಾಯ್ದೆಯು 21-6-54 ಕ್ಕೆ ಇದೆ. ಯಾರಿಗಾದರೂ ಈ ವಿಷಯದಲ್ಲಿ ಆಕ್ಷೇಪಣೆ ಇದ್ದಲ್ಲಿ — ವಾಯ್ದೆ ದಿನ ಕೋರ್ಟಿಗೆ ಹಾಜರಾಗಿ ತಿಳಿಸಬೇಕು. ಇಲ್ಲವಾದರೆ ಇದರ ನಿರ್ಣಯವು ಮನ್ನಾಗುವುದು—

ಎಂ. ರಂಗನಾಥಾಚಾರ್
ಅರ್ಜಿದಾರರ — ವಕೀಲರು

At Prabhat Bellary.—ಬಳ್ಳಾರಿ ಪ್ರಭಾತ್‌ದಲ್ಲಿ

Rupkamal's
BHAGYAVAN
(Hindi — Picture)
Story of on orphan child superb picture crowded house
ರೂಪಕಮಲ್ ರ
ಬಾಗ್ಯವಾನ್ (ಹಿಂದಿ - ಚಿತ್ರ)
ಅನಾಥಬಾಲನ ಹೃದಯದ್ರಾವಕ ಕಥೆ

MATINEE
A SWASH BUCKLING ADVENTURES
DRAMA
FFA: JOHN HALL
Marnie WINDSOR

ವೀರಮಾತೆ
ಕನ್ನಡ ಮಾಸಪತ್ರಿಕೆ ಧಾರವಾಡ
ಇಂದೇ ಚಂದಾದಾರರಾಗಿರಿ.
ಮುಖ್ಯ ಸಂಪಾದಕಿಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ
ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ.
ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಇರುವ ಮಾಸಪತ್ರಿಕೆ.
ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
,, ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 9 ಆಣೆ

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0.	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 14-6-54

Sri.

Edited Printed & Published by T. B. Keshava Rao, at Nava Bharat Printing Press.Bellary.

ಸಚಿತ್ರವಾರ್ತೆ

ಸೋಮವಾರ
ಜೂನ್
೨೧, ೧೯೫೪

ವರ್ಷ 17
ಸಂಚಿಕೆ 40

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ

ಸೂರ್ಯನ ಉಷ್ಣತಾ ಶಕ್ತಿಯ ಬಳಕೆ

ಸೂರ್ಯನ ಕಿರಣಗಳ ಉಷ್ಣತಾ ಶಕ್ತಿಯನ್ನು ಉಪಯೋಗಕ್ಕೆ ತರಲು ರಷ್ಯದ ತಜ್ಞರ ಸಮ್ಮೇಲನವೊಂದು ಸ್ಯಾಬೇರಿಯಾದಲ್ಲಿಯ ತಾಶ್‌ಕೆಂಟ್ ಪಟ್ಟಣದಲ್ಲಿ ಕಳೆದ ಮೇ 25 ನೇ ದಿನಾಂಕ ಕೂಡಿತು ಎಂದು ಮಾಸ್ಕೋ ರೆಡಿಯೋ ಸಾರಿದೆ. ರಷ್ಯದ ವಿಜ್ಞಾನಿಗಳು ಈ ಶಕ್ತಿಯನ್ನು ಉದ್ದಿಮೆಗಳಿಗಾಗಿ ಬಳಸಲಿಕ್ಕೆ ಅನೇಕ ಯಂತ್ರಗಳನ್ನು ರಚಿಸಿ ಅವುಗಳ ಪರೀಕ್ಷೆಲನೆ ಮಾಡಿದ್ದಾರೆ. ಇವುಗಳಲ್ಲಿ ಹಲವು, ಸುಮಾರು 2210 ಅಂಶ ಸೆಂಟಿಗ್ರೇಡಿನ ಉಷ್ಣತೆಯನ್ನು ನಿರ್ಮಿಸಿ, ಉಪ್ಪು ನೀರನ್ನು ಸೀ ನೀರಾಗಿ ಮಾಡುವುದಕ್ಕೆ ಹಾಗು ಬೇರೆ ಕಾರ್ಯಗಳಿಗಾಗಿ ಉಪಯುಕ್ತವಾಗುವವು ಎಂದು ಮಾಸ್ಕೋ ರೇಡಿಯೋ ಹೇಳಿತು

ಅಮೇರಿಕೆಯು ಒಂದು ದೊಡ್ಡದಾದ ವೈಮಾನಿಕ ಕಂಪೆನಿಯು ಸೂರ್ಯ ಕಿರಣಗಳ ಉಷ್ಣತೆಯಿಂದ ಧಾತುಗಳನ್ನು ಕರಗಿಸುವ ಹೊಸ ವಿಧಾನವನ್ನು ಕಂಡು ಹಿಡಿದಿದೆ. ಈ ಉಷ್ಣತೆಯನ್ನು ಪಡೆಯಲು ೨ ಅಡಿ ಉದ್ದದ ಫಳಫಳಿಸುವ ಸ್ಫಟಿಕದ ಕನ್ನಡಿಯೊಂದು, ಉಪಯೋಗಿಸಲ್ಪಡುವುದು. ಕನ್ನಡಿಯು ಸೂರ್ಯಕಿರಣಗಳನ್ನು ಸಂಗ್ರಹಿಸಿ ಉಷ್ಣತೆಯನ್ನು ಆಯಾ ಧಾತುಗಳ ಕರಗುವ ಅಂಶಕ್ಕೆ ಸಂಪಡಿಸುವುದು. ಆಕಾಶವು ನಿಚ್ಚಳವಿದ್ದಾಗ ಈ ಯಂತ್ರವು ಸುಮಾರು 4700 ಅಂಶ ಸೆಂಟಿಗ್ರೇಡಿನ ಉಷ್ಣತೆಯನ್ನು ಒದಗಿಸುವುದು.

ಕೇಂದ್ರ ಸರಕಾರವು, ಸಕ್ಕರೆಯ ಬೆಲೆಯನ್ನು ಇದೇ ಜೂನ ೧೬ ನೇ ತಾರೀಖಿನಿಂದ ಬಂಗಾಲಿಮಣ (ನಮ್ಮೂರುಮಣ) ಕ್ಕೆ ೩೦ ರೂ. ಇದ್ದುದರಿಂದ ೨೯-೮-೦ ಕ್ಕೆ ಇಳಿಸಿದೆ.

ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

O. S. 418/53

ಅಳಗಿರಿ ನಾಯ್ಡುನ್
ತಂದೆ
ಮರುದಾನಾಯ್ಡನ್ ವಯಸ್ಸು 50
ನಾಯ್ಡುನ್, ಕೂಲಿ–ಬಸಾಪುರ [ಹೊಸಪೇಟೆ ತಾ||] } ವಾದಿ

Vs

ರಾಮೂನಾಯ್ಡುನ್ ತಂದೆ ಪೆದ್ದನಾಯ್ಡುನ್
50 ವರ್ಷ – ನಾಯ್ಡುನ್ – ಕಂಟ್ರಾಕ್ಟರ್
ಬುಕ್ಕಸಾಗರ [ಹೊಸಪೇಟೆ ತಾ||] } ಪ್ರತಿವಾದಿ

ಮೇಲಿನ ನಂಬರ್ ಪ್ರಕಾರಕ್ಕೆ ವಾದಿಯು ಹಸರೀಲಿ ಪ್ರತಿವಾದಿಯು ಬರೆದುಕೊಟ್ಟ ಪ್ರೋನೋಟಿನ ಮೇಲೆ ರೂ 668–0–0 ಕ್ಕೆ ದಾವಾ ದಾಖಲು ಆಗಿರುತ್ತದೆ. ಮತ್ತು 9 A 905/53 ವಾದಿಯು Proorder ಪ್ರಾರಾ ಪ್ರತಿವಾದಿಯ ಬಿಲ್ಲನ್ನು ಜಪ್ತಿ ಕೋರಿರುತ್ತಾನೆ— 30–6–54 ಕ್ಕೆ ವಾಯ್ದೆ ಇರುತ್ತದೆ. ಪ್ರತಿವಾದಿಯು ಖುದ್ದಾಗಲಿ, ವಕೀಲರ ಪ್ರಾರನಾಗಲಿ ಕೋರ್ಟಿಗೆ 30–6–54 ಹಗಲು 11 ಗಂಟೆಗೆ ಹಾಜರಾಗಿ ತನ್ನ ಆಕ್ಷೇಪಣೆ ತಿಳಿಸದಿದ್ದಲ್ಲಿ ಏಕಪಕ್ಷದ ಹುಕುಂ ಆಗುತ್ತದೆ—

ಹೊಸಪೇಟೆ
16–6–54

ಎ. ಆರ್ ಕೃಷ್ಣರಾವ್
ವಾದಿಯ – ಅಡ್ವೊಕೇಟ್

ಬಳ್ಳಾರಿ 'ಪ್ರಭಾತ'ದಲ್ಲಿ ನೋಡಿರಿ, ಆನಂದಪಡಿರಿ,

—: ಶೀಘ್ರವಾಗಿ ಬರಲಿದೆ :—
ಎ. ವಿ. ಅಯ್ಯಂರವರ

★ 'ಸಂಗಂ' ★
[ಸುಪ್ರಸಿದ್ಧ ತೆಲುಗು – ಚಿತ್ರ]

ಇದರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, ಯಸ್. ವಿ. ರಂಗರಾವ್
ವೈಜಯಂತಿಮಾಲ, ಅಂಜಲಿದೇವಿ ನಟಿಸಿದ್ದಾರೆ:—
ಸಂಗೀತ ರಸವತ್ತರ ಚಿತ್ರ

— ಅಫಗಾಣಿಸ್ತಾನದ ಅಂತರಂಗ —

[ಜಯಹಿಂದ್]

ಉತ್ತರಕ್ಕೆ ರಶಿಯಾ, ಪೂರ್ವ ಮತ್ತು ದಕ್ಷಿಣಗಳಲ್ಲಿ ಪಾಕಿಸ್ತಾನ ಮತ್ತು ಪಶ್ಚಿಮಕ್ಕೆ ಇರಾಣಗಳಿಂದ ಸುತ್ತುವರಿಯಲ್ಪಟ್ಟ ಅಫಗಾಣಿಸ್ತಾನವು ಗುಡ್ಡುಗಾಡು ಪ್ರದೇಶ.ಅಲ್ಲಿಗೆ ಪರಕೀಯರು ಹೋಗಲು ಮನಸ್ಸು ಮಾಡದಿರುವುದೇ ಬಹಳ. ಏಕೆಂದರೆ 4-5 ನೂರು ಮೈಲು ಗಳ ವರಿಗೆ ನಡೆದು ಇಲ್ಲವೆ ಒಂಟೆ ಅಥವಾ ಕತ್ತೆಗಳ ಮೇಲೆ ಕುಳಿತು ಪ್ರವಾಸ ಮಾಡಬೇಕಾಗುತ್ತದೆ.

ಪೂರ್ವದಲ್ಲಿ ಈ ದೇಶವು ಪೌರ್ವಾತ್ಯ ಸಂಸ್ಕೃತಿಯ ಆಗರವಾಗಿತ್ತು. ಪೂರ್ವ ಪಶ್ಚಿಮಗಳ ವ್ಯಾಪಾರದ ಸಂಬಂಧವು ಇಲ್ಲಿಂದಲೇ ಉಂಟಾಗಿತ್ತು. ಆದರೆ 12ನೇ ಶತಮಾನದಲ್ಲಿ ಜಂಗೀಜಖಾನ ಮತ್ತು 14 ನೇ ಶತಮಾನದಲ್ಲಿ ತೈಮರಲೇನ್ ಇವರಿಂದ ಈ ದೇಶವು ಹಾಳಾಯಿತು. ಆಗಿನ ಗಂಡಾಂತರಗಳ ಪರಿಣಾಮದಿಂದ ಇದು ಆಮೇಲೆ ಮೇಲಕ್ಕೇಳಲು ಶಕ್ತವಾಗಲೇ ಇಲ್ಲ.

ಹತ್ತೊಂಬತ್ತನೇ ಶತಮಾನದಲ್ಲಿ ಇದು ರಶಿಯಾ ಮತ್ತು ಬ್ರಿಟಿಷ್ ಒಡೆತನ ಪ್ರದೇಶಗಳ ನಡುವಿನ ಸರ್ವ ಸಾಮಾನ್ಯ ಪ್ರದೇಶವಾಗಿ ಉಳಿದಿತ್ತು. ಆದ್ದರಿಂದ ಅದಕ್ಕೆ ಸುಧಾರಿಸಿಕೊಳ್ಳಲು, ಯಾರ ಸಹಾಯವೂ ಸಿಗಲಿಲ್ಲ.

ಹೋದ ಯುದ್ಧದ ತರುವಾಯವಂತೂ ಈ ದೇಶದ ವ್ಯಾಪಾರಕ್ಕೆ ಇನ್ನೂ ದಕ್ಕೆ ಬಡೆಯಿತು. ಆಡವಿಗಳು ಹಬ್ಬುತ್ತ ನಡೆದಾಗ ಅವುಗಳನ್ನು ಹಿಂದಕ್ಕೆ ಸರಿಸಿ ಹೊಲ್ಲುಗಾಣಿಸ್ತಾನಕ್ಕಾಗಲಿಲ್ಲ?

ಅಫಘಾಣಿಸ್ತಾನದ ಜನತೆಯಲ್ಲಿ ನುನೆಯಿಲ್ಲದೆ ತಿರುಗುತ್ತಿರುವ ಜನರೇ ಬಹಳ. ಅವರು ಒಂಟೆ ಮತ್ತು ಕತ್ತೆಗಳ ಮೇಲೆ ಕುಳಿತುಕೊಂಡು ಯಾವಾಗಲೂ ಓಡಾಡುತ್ತಿರುತ್ತಾರೆ. ಗುಡ್ಡಗಳೇ ಅವರ ವಾಸಸ್ಥಾನ.

ಊರುಗಳಲ್ಲಿ ಮಣ್ಣಿನ ಗೋಡೆಗಳುಳ್ಳ ಮತ್ತು ಹುಲ್ಲಿನ ಚಪ್ಪರದ ಮನೆಗಳೇಬಹಳ. ಬಡತನ ಹೆಚ್ಚು. ಸ್ವಚ್ಛತೆ ಕಡಿಮೆ. ಆಧುನಿಕ ನಾಗರಿಕತೆಯಂತೂ ಅವರಿಗೆ ಬಿಟ್ಟಿಯೇ ಆಗಿದ್ದಿಲ್ಲ.

ನೂರಕ್ಕೆ 4 ರಷ್ಟು ಜನರು ಅಲ್ಲಿ ಸಾಕ್ಷರರಿದ್ದಾರೆ. ಎಲ್ಲಿ ನೋಡಿದರೂ ಮುಲ್ಲಾ ಜನರ ಅಧಿಕಾರ ಹೊರಗಿನವರು ಬಂದರೆ ಅವರ ಕಡೆಗೆ ಜನರು ಸಂಶಯಯುಕ್ತ ದೃಷ್ಟಿಯಿಂದ ನೋಡುತ್ತಿದ್ದರು. ಯಾವಾಗಲೂ ಗೋಷಾದಲ್ಲಿ ಇದ್ದ ಸ್ತ್ರೀಯರು, ಮೋರೆ ತೆಗೆದ ಪಾಶ್ಚಾತ್ಯ ಸ್ತ್ರೀಯರನ್ನು ಕಂಡಾಗ್ಗೆ ಅವರನ್ನು ಹಿಡಿದು ಒದೆದ ದ್ದುಂಟು.

ಮುಲ್ಲಾಗಳು ಹೊರಗಿನ ಸಂಸ್ಕೃತಿಯನ್ನು ಬಹಳವಾಗಿ ವಿರೋಧಿಸುತ್ತಾರೆ. ಜನರು ಹೆಚ್ಚು ಶಿಕ್ಷಣ ಪಡೆಯುವುದಕ್ಕೆ ಅವರು ವಿರುದ್ಧರಿದ್ದಾರೆ. ಪಾಶ್ಚಾತ್ಯರನ್ನು ಕಂಡರಂತೂ ಅವರಿಗೆ ಬಹಳ ಸಿಟ್ಟು.

ವಿವಿಧ ತರಹದ ಹಣ್ಣುಗಳು, ನಾನಾ ತರಹದ ಹೂಗಳು ಮತ್ತು ಉಣ್ಣೆ ವಸ್ತ್ರಗಳು ಅಫಗಾಣಿಸ್ತಾನದಲ್ಲಿ ಹೇರಳವಾಗಿ ಹುಟ್ಟುತ್ತವೆ. ಮತ್ತು ಬಹಳ ಮನೋಹರವಾಗಿರುತ್ತವೆ.

ರಾಜಕಾರಣದಲ್ಲಿಯೂ ಅಫಗಾಣಿಸ್ತಾನಕ್ಕೆ ತೊಂದರೆಯಿದೆ ಉತ್ತರದಿಂದ ರಶಿಯಾ, ಅದನ್ನು ವ್ಯಾಪಿಸಬಯಸುತ್ತಿದೆ ದಕ್ಷಿಣ ಮತ್ತು ಪೂರ್ವಗಳ ಕಡೆಯಿಂದ ಪಾಶ್ಚಾತ್ಯರು ಅದನ್ನು ತಮ್ಮ ಕಡೆಗೆ ತೆಗೆದುಕೊಳ್ಳಲು ಯತ್ನಿಸುತ್ತಬಂದಿದ್ದಾರೆ.

ಆದರೂ ಅಫಗಾಣಿಸ್ತಾನವು 1946 ರಿಂದ ತನ್ನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಟೊಂಕಕಟ್ಟಿದೆ. ಅದು ಅಮೇರಿಕೆಯಿಂದ ಹಣದ, ಯಂತ್ರಿಕ ಮತ್ತು ತಜ್ಞರ ಸಹಾಯ ಪಡೆದಿದೆ. ಅಲ್ಲಿ ಅಮೇರಿಕೆಯ ಅನೇಕಜನರು ಬೀಡುಬಿಟ್ಟಿದ್ದಾರೆ.

ಯಾವಾಗಲೂ ತಿರುಗಾಡುತ್ತ ಇದ್ದ ಗುಡ್ಡಗಾಡು ಜನರನ್ನು ಅಲ್ಲಲ್ಲಿ ಉಳಿಸಿ, ಅವರಿಗೆ ಭೂಮಿಗಳನ್ನು ಕೊಟ್ಟು, ಸಾಗುವಳಿಗೆ ಬೇಕಾದ ಸರ್ವ ಸಲಕರಣೆಗಳನ್ನು ಒದಗಿಸಿ ಅವರನ್ನು ಒಕ್ಕಲುತನಕ್ಕೆ ಹಚ್ಚಿದ್ದಾರೆ. ಬೆಳೆಯನ್ನು ಪಡೆಯುತ್ತ ಹೋದಂತೆ ಆ ಜನರು ಕ್ರಮೇಣ ಆ ಕಾರ್ಯದಲ್ಲಿ ಆಸ್ಥೆವಹಿಸಿ ದುಡಿಯುತ್ತಿದ್ದಾರೆ.

ದೇಶದಲ್ಲಿಯ ಮಾರ್ಗಗಳನ್ನು ಸರಿಪಡಿಸುತ್ತಿದ್ದಾರೆ. ದೇಶದ ಸರಕಾರೀ ಉತ್ಪನ್ನದ ನೂರಕ್ಕೆ 16 ರಷ್ಟು ಹಣವನ್ನು ಅಲ್ಲಿ ಜನತೆಯ ಶಿಕ್ಷಣಕ್ಕಾಗಿ ವೆಚ್ಚಮಾಡುತ್ತಿದ್ದಾರೆ.

ಎಲ್ಲಕ್ಕೂ ಹೆಚ್ಚಿಗೆ ಸುಧಾರಣೆಯನ್ನು ಅವರು ಮಾಡುತ್ತಿರುವುದೆಂದರೆ, ಆ ದೇಶದ ದಕ್ಷಿಣದಲ್ಲಿರುವ ಕಂದರದಲ್ಲಿ ಪುನಃ ಜನವಸತಿಯನ್ನು ಉಂಟುಮಾಡಿ ಅಲ್ಲಿ ಬೆಳೆಯನ್ನು ಒದಗಿಸಿಕೊಳ್ಳುವುದು. ಈ ಕಂದರವು ಹೆಲ್ಮಾಂಡ ನದಿಯ ಹತ್ತರವಿದೆ ಜಂಗೀಜ ಖಾನ ಮೊದಲಾದವರ ಹಾವಳಿಯ ಮೊದಲು ಈ ಕಂದರವು ಬಹಳ ಬೆಳೆಯುಳ್ಳ ಪ್ರದೇಶವಾಗಿತ್ತು.

ಈ ಕಾರ್ಯಕ್ಕಾಗಿ ಈಗಾಗಲೇ ಅಫಗಾಣಿಸ್ತಾನವು 6ಕೋಟಿಡಾಲರುಗಳನ್ನು ವೆಚ್ಚಮಾಡಿದೆ. ಇದರಲ್ಲಿ ಅಮೇರಿಕೆಯು ಸಾಲವಾಗಿ ಕೊಟ್ಟ 2 ಕೋಟಿ 10 ಲಕ್ಷ ಡಾಲರುಗಳಿವೆ.

ಅಂದಮೇಲೆ ಅಫಗಾಣಿಸ್ತಾನವು ಅಮೇರಿಕೆಯ ಕೈಯಲ್ಲಿ ಸಿಕ್ಕಿರುವುದೆಂದು ಹೇಳಿದರೆ ತಪ್ಪಾಗಬಹುದೇ ?

ಇಷ್ಟೇ ಅಲ್ಲದೆ ಅಫಗಾಣಿಸ್ತಾನವು ಪಾಕಿಸ್ತಾನದೊಡನೆ ಸಂಧಾನದ ಮಾತುಕತೆಗಳನ್ನು ಆಡುತ್ತಿದೆಯೆಂಬ ಸುದ್ದಿಯು ನಡುವೆ ಹಬ್ಬಿತ್ತು. ಆ ಮಾತು ಕೂಡ ಇದರಿಂದ ಧೃಡಪಡುತ್ತಿದೆ ಆ ಎರಡೂ ದೇಶಗಳು ಒಟ್ಟುಗೂಡಿ ಪರಸ್ಪರ ಸಹಕಾರದಿಂದ ರಚನಾತ್ಮಕ ಕಾರ್ಯಗಳನ್ನು ಮಾಡಿಕೊಳ್ಳಬೇಕೆಂಬ ವಿಚಾರವನ್ನು ಇಟ್ಟುಕೊಂಡಿವೆಯಾಗಿ ಹೇಳಲ್ಪಡುತ್ತಿದೆ. ಈ ವಿಚಾರಕ್ಕೆ ಅಮೇರಿಕೆಯು ಕೂಡ ಪುಷ್ಟಿ ಕೊಟ್ಟರಬಹುದು.

ಆದರೆ ಈ ಯೋಜನೆಯು ಇನ್ನೂ ಫಲಿಸಿಲ್ಲ. ಇದೆಲ್ಲವನ್ನೂ ರಶಿಯಾ ಮೇಲಿನಿಂದ ನೋಡುತ್ತಿರುವುದೆಂಬ ವಿಷಯದಲ್ಲಿ ಕೂಡ. ಬಹಳ ಆಳವಾದ ರಾಜಕಾರಣವು ಒಳಗೊಂಡಿದೆ.

ಈ ಜಿಪ್ಸಿನಲ್ಲಿ ಹೊಗೆಸೊಪ್ಪಿನ ಬೆಳೆ

ಈಜಿಪ್ಸಿನಲ್ಲಿ ಹೊಗೆಸೊಪ್ಪಿನ ಬೆಳೆಯನ್ನು ತೆಗೆಯಲು ಈ ಜಿಪ್ಸ್ ಮಂತ್ರಿಮಂಡಳ ಒಪ್ಪಿದೆ. 1890 ರಿಂದ ಈ ಜಿಪ್ಸ್‌ನಲ್ಲಿ ಹೊಗೆಸೊಪ್ಪಿನ ಬೆಳೆಯನ್ನು ನಿಷೇದಿಸಲಾಗಿತ್ತು.

ಮೇವಿನ ಹುಲ್ಲುಗಳು

ಪ್ರತಿ ನಿತ್ಯವೂ ನಿಮ್ಮ ಪಶುಗಳಿಗೆ ಹಸಿ ಹುಲ್ಲನ್ನೊದಗಿಸುವ ಸುಲಭೋಪಾಯ.

ರೈತರ ಕರ್ತವ್ಯ

ಭೂಮಿಯಿಂದ ಅಧಿಕ ಉತ್ಪನ್ನವನ್ನು ಪಡೆಯುವುದೇ ಕೃಷಿಯ ಮುಖ್ಯೋದ್ದೇಶ. ಹುಲ್ಲುಗಳಲ್ಲಿ ಹಲವು ತರಗಳಿದ್ದರೂ, ಅವುಗಳಲ್ಲಿ ಕೆಲವು ಮಾತ್ರ ವ್ಯವಸಾಯಕ್ಕೆ ಯೋಗ್ಯವಾದವು. ಹಸಿ ಹುಲ್ಲು ದನಗಳಿಗೆ ಸ್ವಾಭಾವಿಕಾಹಾರವಾದುದರಿಂದ ಪಶು ಪೋಷಣೆಗಾಗಿ ಹುಲ್ಲುಗಳನ್ನು ತಕ್ಕ ರೀತಿಯಲ್ಲಿ ಬೆಳೆಸುವುದು ರೈತರ ಕರ್ತವ್ಯವಾಗಿದೆ. ವಿವಿಧ ಪ್ರದೇಶಗಳಲ್ಲಿ ಬೆಳೆಯಲು ಯೋಗ್ಯವಾದ ಹುಲ್ಲಿನ ಬಗೆಗಳನ್ನಾರಿಸುವುದು ಕೂಡ ಬಹಳ ಮುಖ್ಯವಾದ ಕೆಲಸವಾಗಿದೆ ನೀರು ಹಾಯಿಸಿ ಬೆಳೆಯಲು ಅನೇಕ ಜಾತಿಗಳಿರುವುವಾಗಲಿ, ಬರೇ ಮಳೆ ಆಧಾರದಿಂದಲೇ ಪೈರು ಮಾಡಲು ಯೋಗ್ಯವಾದವು ಬಹಳ ಕಡಿಮೆ. ಕೃಷಿ ಮಾಡುವ ರೀತಿಯಲ್ಲಿ ಕೂಡ ನೀರು ಹಾಯಿಸಿ ಗುತ್ತು ಕುಷ್ಕಿಯಾಗಿ ಬೆಳೆಸಲ್ಪಡುವ ಹುಲ್ಲುಗಳ ಬೇಸಾಯದಲ್ಲಿ ಹಲವು ವ್ಯತ್ಯಾಸಗಳಿವೆ. ಹುಲ್ಲುಗಳನ್ನು ಜಯಪ್ರದವಾಗಿ ಬೆಳೆಯಬೇಕಾದರೆ ಅವುಗಳ ಕೃಷಿ ವಿಧಾನಗಳನ್ನು ಸಂಪೂರ್ಣವಾಗಿ ತಿಳಿಯತಕ್ಕದ್ದು.

ನಿರ್ಧಾರದ ಪರಿಸ್ಥಿತಿಗಳಿಗೆ ಹುಲ್ಲುಗಳು

ಪೈಲುಗಳು,—(ಹುಲ್ಲುಗಾವಲುಗಳು) ಪಶುಗಳನ್ನು ಮೇಯುವುದಕ್ಕೆ ಬಿಡುವ ಹುಲ್ಲುಗಾವಲುಗಳು ಎಲ್ಲ ಗ್ರಾಮಗಳಲ್ಲೂ ಸಾಧಾರಣ ಕಾಣಬಹುದು. ಇದರಲ್ಲಿನ ಹುಲ್ಲು ಮಳೆಗಾಲದಲ್ಲಿ ಮಾತ್ರ ಹಸುರಾಗಿದ್ದು, ಬೇಸಿಗೆಯಲ್ಲಿ ಒಣಗಿ ಹೋಗುವುದು ಸಹಜ ಹುಲ್ಲು ಗಾವಲುಗಳನ್ನು ಎರಡು ಮೂರು ಸಲ ಚೆನ್ನಾಗಿ ಉಳಬೇಕು ಮಳೆ ಬರುವ ಮುಂಚೆ ಹುಲ್ಲುಗಾವಲಿಗೆ ಯೋಗ್ಯವಾದ ಹುಲ್ಲಿನ ಬೀಜಗಳನ್ನು ಜೆಲ್ಲಬೇಕು. ಅಂತಹ ಹುಲ್ಲುಗಳು ಯಾವುವೆಂದರೆ ಸೆಂಕ್ರಸ್ ಸಿಲಿಯಾರಿಸ್, ಸೆಂಕ್ರಸ್ ಸೆಟಿಗೇರಸ್ ಮುಂತಾದವು. ಬೀಜಗಳ ಭಾರ, ಮೊಳೆಯುವ ಶಕ್ತಿಯನ್ನಾಧರಿಸಿಕೊಂಡು ಬೀಜವರಿ ಎಷ್ಟು ಬೇಕಾದುದೆಂದು ನಿರ್ಣಯಿಸಬೇಕು. ಮಳೆ ಹೆಚ್ಚು ಸುರಿದರೆ ಹೆಚ್ಚು ಹುಲ್ಲು ಸಿಗುತ್ತದೆ. ಹುಲ್ಲುಗಾವಲುಗಳ ಪ್ರಧಾನ್ಯತೆ ಈ ಕೆಳಗಿನ ಅಂಶಗಳನ್ನು ಆಧರಿಸಿಕೊಂಡಿದೆ (1)ಮಳೆ (2) ಬಿತ್ತಲ್ಪಟ್ಟ ಹುಲ್ಲಿನ ಜಾತಿ, (3) ಹುಲ್ಲುಬೆಳೆಯುವ ಮಣ್ಣಿನ ಸ್ವಭಾವ,(4)ಮೇಯಲಿಕ್ಕೆ ಬಿಡುವ ಸಮಯಗಳಿಗೆ ಮಧ್ಯ ವಿರಾಮ. ಮಳೆ ಕ್ರಮವಾಗಿ ಬಂದರೆ ಹುಲ್ಲು ಗಾವಲಿಗೆ ಬಹಳ ಒಳ್ಳೆಯದು. ಮೇಯಲಿಕ್ಕೆ ಬಿಡುವ ಸಮಯಗಳನ್ನು ನಿರ್ಣಯಿಸುವದು ಸೂಕ್ಷ್ಮ ಜಾಗ್ರತೆಯಿಂದ ಮಾಡತಕ್ಕದ್ದು. ಯಾವ ಸ್ಥಿತಿಯಲ್ಲಿ ಹುಲ್ಲು ಮೇಯಲು ಯೋಗ್ಯವಾಗಿದೆಯೆಂದು ನೋಡಿಕೊಳ್ಳಬೇಕು

ಹಸಿಮೇವಿಗೆ ಹುಲ್ಲುಗಳು

ಕೃಷ್ಣಿ ಭೂಮಿ ಸಲ್ಲಿ ಬೆಳೆಸಿ ಅನೇಕ ವರುಷಗಳವರೆಗೆ ನಿಂತು ಹಸಿಯಾಗಿ ಕತ್ತರಿಸಿ ಆಗಾಗ್ಗೆ ದನಗಳಿಗೆ ಹಾಕಲು ಹೋಗ್ಯವಾದ ಹುಲ್ಲಿನ ಸಸಾಜೆಗಳು ಕೆಲವಿರುವುವು. ನೀರಿನ ಅಭಾವವನ್ನು ಚೆನ್ನಾಗಿ ತಡೆಯುವ ಸಸಾಜೆಗಳನ್ನೇ ಕೆಲಸಕ್ಕೆ ಚುನಾಯಿಸಿದ ಪಕ್ಷದಲ್ಲಿ ವರುಷ ಪರ್ಯಂತವೂ ಹಸಿಮೇವು ಸಿಗುವ ಸಂಭವವಿದ್ದೀತು. ಮರಸೇಗಲಿನಿಂದ ಜಮೀನನ್ನು ಎರಡು ಮೂರು ಸಲ ಚೆನ್ನಾಗಿ ಉಳಬೇಕು. ಮಳೆಬರುವ ಮುಂಚೆ ಬೀಜಗಳನ್ನು ಜೆಲ್ಲಿ ಸುಚ್ಚಬೇಕು. ಎಕ್ರೆಗೆ ಎಷ್ಟು ಬೀಜ ಬೇಕಾಗಿರುವುದೆಂಬುದು ಬೀಜದ ಭಾರ ಮತ್ತು ಮೊಳೆಯುವ ಶಕ್ತಿಗಳನ್ನಾಧರಿಸಿಕೊಂಡಿರುತ್ತದೆ. ಬೀಜಗಳನ್ನು ಜೆಲ್ಲಿದನಂತರ ಮುಚ್ಚಲು ಜೂನಿಯರ್ ಹೋ, ಅಥವಾ ಬ್ರುಷ್ ಹಾರೋ ಎಂಬ ಯಂತ್ರ ಸಾಧನಗಳು ಉಪಯೋಗವಾಗಿವೆ. ಬೀಜಗಳು ಮೊಳೆದ ನಂತರ ಬಹಳ ಗುಂಪಾಗಿದ್ದಿರೆ ತೆಳುವು ಮಾಡುವುದು ಆವಶ್ಯ. ಮೊದಲನೆಯಸಾರಿ ಕಟಾವು ಮಾಡುವುದು ಆರು ತಿಂಗಳ ಬಳಿಕ ಏಕೆಂದರೆ, ಆ ಸಮಯಕ್ಕೆ ಮೊಳಕೆಗಳು ಗಟ್ಟಿಯಾಗಿ ನಿಂತಿರುತ್ತವೆ. ಈ ಹುಲ್ಲಿನ ಪೈರು ಅನೇಕ ವರುಷಗಳ ತನಕ ಭೂಮಿಯಲ್ಲಿ ನಿಂತಿರಬಲ್ಲದು ಎಡತನೆಯ ವರುಷದಿಂದ, ಮಳೆಗಳು ಸರಿಯಾಗಿ ಬರುತ್ತಿದ್ದರೆ, ವರುಷಕ್ಕೆ 6-12 ಕಟಾವುಗಳನ್ನು ಕೊಡುತ್ತದೆ. ಪಾನಿಕಂ ಆಂಟಿಡೋಟೇಲ್ (ಆಸ್ಟ್ರೇಲಿಯಾ ಹುಲ್ಲು); ಸೆಂಕ್ರಸ್ ಸಿಲಿಯಾರಿಸ್, ಸೆಂಕ್ರಸ್ ಸೆಟಿಗೇರಸ್ ಸಣ್ಣ ನೇಪಿಯರ್ ಹುಲ್ಲುಗಳು ನೀರಿನ ಅಭಾವವನ್ನು ತಡೆಯಬಲ್ಲವು. ವರುಷಕ್ಕೆ ಒಂದು ಎಕ್ರೆಯಿಂದ 10 ರಿಂದ 15 ಸಾವಿರ ಪೌಂಡು ಹುಲ್ಲನ್ನು ಕೊಡುತ್ತವೆ. ಆಗಾಗ್ಗೆ ಗೊಬ್ಬರ ಜೆಲ್ಲುವುದರಿಂದ ಉತ್ಪನ್ನ ಹೆಚ್ಚುತ್ತದೆ. ವರುಷಕ್ಕೆ ಎರಡುಸಾರಿಯಾದರೂ ಕಳೆಕೀಳಬೇಕು.

ನೀರು ಹಾಯಿಸಿ ಬೆಳೆಯುವ ಹುಲ್ಲುಗಳು

ಸರ್ವ ಸಾಧಾರಣವಾಗಿ ಎಲ್ಲ ಜಾತಿದು ಹುಲ್ಲುಗಳು ನೀರು ಹಾಯಿಸಿದಾಗ ಚೆನ್ನಾಗಿ ಬೆಳೆದು ಒಳ್ಳೆಯ ಫಸಲನ್ನು ಕೊಡುತ್ತವೆ. ಆದರೂ ಇದರಲ್ಲಿ ಉತ್ತಮ ಜಾತಿಯವುಗಳು ಕೆಲವಿರುವವು. ಇವುಗಳಿಂದ ಒಂದು ಎಕ್ರೆಯಲ್ಲಿ ವರುಷಕ್ಕೆ 12-20 ಕಟಾವು ಮಾಡಿದರೆ 75 ಸಾವಿರದಿಂದ ಒಂದು ಲಕ್ಷ ಪೌಂಡುಗಳವರೆಗೆ ಹಸಿಮೇವು ಸಿಗುತ್ತದೆ. ಭೂಮಿಯನ್ನು ಎರಡು ಮೂರು ಸಲ ಚೆನ್ನಾಗಿ ಉಳಬೇಕು ಕೆಲವುಬಗೆಯ ಹುಲ್ಲಿನ ಜಾತಿಗಳನ್ನು ಸಸಿಗಳಿಂದ ಪ್ರವರ್ಧನೆ ಮಾಡಬಹುದು. ಮತ್ತು ಕೆಲವುಗಳನ್ನು ಸಾಧಾರಣ ರೀತಿಯಲ್ಲಿ ಬಿತ್ತುವರು ಮೊದಲಲ್ಲಿ ಭೂಮಿಯಲ್ಲಿ ಹತ್ತು ಅಡಿ ಚದರಕ್ಕೆ ತಾಕುಗಳನ್ನು ಮಾಡಿ ಸುತ್ತಲೂ ಎತ್ತವಾದ ದಂಡೆಗಳನ್ನೇ ಮಾಡುವರು. ಒಂದು ವರೆ ಅಡಿ ದೂರದಲ್ಲಿನ ಸಾಲುಗಳಲ್ಲಿ ಬೀಜಗಳನ್ನು ಬಿತ್ತುತ್ತಾರೆ. ಸಸಿಗಳನ್ನು ಸಬ್ಬಾಗ ಎರಡಡಿ ದೂರದಲ್ಲಿ ನೆಡುವರು. ಕ್ರಮವಾಗಿ ನೀರು ಹಾಯಿಸುವುದರಿಂದಲೂ, ಗೊಬ್ಬರಗಳನ್ನು ಹೇರಳವಾಗಿ ಹಾಕುವದರಿಂದಲೂ ಉತ್ಪತ್ತಿಯನ್ನು ಹೆಚ್ಚುಗೊಳಿಸಲಾಗುವದು. ಕತ್ತರಿಸುತ್ತಾ ಬಂದರೆಸಿಗಳು ಇನ್ನೂ ಚೆನ್ನಾಗಿ ಬೆಳೆಯುತ್ತವೆ. ನೆಟ್ಟ ನಾಲ್ಕು ತಿಂಗಳ ನಂತರ ಮೊದಲನೇಯ ಕೊಯ್ಲು ತೆಗೆಯಬಹುದು. ಗಿನೀ ಹುಲ್ಲು, ನೇಪಿಯರ್ ಹುಲ್ಲು, ಮುಂತಾದ ಹುಲ್ಲುಗಳ ಎಲೆಗಳು ವೃದ್ಧವಾಗಿದ್ದು ಪಶುಗಳು ನಿಸ್ಸಲು ಬಹಳ ಯೋಗ್ಯವಾಗಿರುತ್ತವೆ. ನೀರು ಹಾಯಿಸಿ, ಗೊಬ್ಬರಗಳನ್ನೊದಗಿಸಿದರೆ ಸಮೃದ್ಧಿಯೂದಯಕ್ಕೆ ವಳಯನ್ನು ಕೊಡುತ್ತವೆ ವರುಷಕ್ಕೆ ಎರಡು ಸಲವಾದರೂ ಕಳೆ ತೆಗೆಯಬೇಕು.

ಳ ನೇ ಪುಟನೋಡಿ.

2 ನೇ ಪುಟ ತರುವಾಯ

ಪ್ರತ್ಯೇಕ ಜಾತಿಯ ಹುಲ್ಲುಗಳು

ಮಣ್ಣನ್ನು ಜೆನ್ನಾಗಿ ಹಿಡಿದಿಟ್ಟಿರಲು ಯೋಗ್ಯವಾದ ಹುಲ್ಲಿನ ಜಾತಿ 'ಜಯಿಂಟ್ ಸ್ಟಾಸ್' ಇದನ್ನು ಸಸಿಗಳಿಂದ ಪ್ರವರ್ಧನೆ ಮಾಡಲಾಗುವುದು. ಮಳೆಬಂದ ಕೂಡಲೆ ಭೂಮಿಯನ್ನು ಆಗೆದು ಸಸಿಗಳನ್ನು ಹತ್ತಿರುಹತ್ತಿರವಾಗಿ ನೆಡಬೇಕು. ಜೆನ್ನಾಗಿ ಬೆಳೆದ ಮೇಲೆ ಜಾನುವಾರುಗಳಿಗೆ ಮೇವಾಗಿ ಕೊಡಬಹುದು. ಬೇಸಿಗೆಯಲ್ಲಿದು ಒಣಗಿ ಹೋದರೂ, ಮಳೆಗಳು ಬಂದ ಕೂಡಲೆ ಬಹುಶ್ಚರಿತದಿಂದ ಬೆಳೆದು ಬರುತ್ತದೆ.

ಜಗತ್ತಿನಲ್ಲಿ ಅತಿ ಆಳವಾದ ಎಣ್ಣೆ ಬಾವಿ

ಇತ್ತೀಚಿಗೆ ಸಂಯುಕ್ತ ಸಂಸ್ಥಾನದ ವಾ ಯೊ ಮಿ ಂಗ್ ಎಂಬ ಸ್ಥಳದಲ್ಲಿ 20, 521 ಅಡಿ ಆಳಕ್ಕೆ ಒಂದು ಎಣ್ಣೆ ಬಾವಿಕೆರೆಯಲ್ಪಟ್ಟಿದೆ. ಇದು ಜಗತ್ತಿನಲ್ಲಿ ಬಾವಿಗಳಲ್ಲಿ ಅತಿ ಆಳವಾದದ್ದು. ಭೂಗರ್ಭ ದೊಳಗೆ ಇನ್ನು ಆಳಕ್ಕೆ ಉಷ್ಣಾಂಶವು ಸುಮಾರು 20ನೆ ಸೆಂಟಿಗ್ರೇಡ್ ಆಗಬಲ್ಲದು.

ಶ್ರೀ ಪೈಲವಾನ ಹಮೀದಾಬಾನು, ಮುಂಬಯಿಯಲ್ಲಿ ಕುಸ್ತಿ ಆಡುವವಳಿದ್ದಳು ಆದರೆ ಆ ಕುಸ್ತಿ ಕಾರ್ಯಕ್ರಮದಲ್ಲಿ ನೋಸವಿರುವದೆಂದು ತಿಳಿದು ಮುಂಬಯಿ ಸರಕಾರವು ಆವಕ್ಕೆ ಅನುಮತಿಯನ್ನೀಯಲಿಲ್ಲ.

ಕೇಂದ್ರ ಸರಕಾರವು, ಮೈಸೂರ ಸಂಸ್ಥಾನಕ್ಕೆ ಅಧಿಕ ಆಹಾರ ಉತ್ಪನ್ನ ಮಾಡಲು, ೩ ಲಕ್ಷದ ೪೫ ಸಾವಿರದ ೨೫೦ ರೂಗಳನ್ನು ಸಹಾಯವೆಂದೂ ೪ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಸಾಲವೆಂದೂ ಕೊಟ್ಟಿದೆ.

ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

S. C. 459/'53

ಮುದಗಲ್ ವೆಂಗಮ್ಮ
ತಂದೆ ಭೀಮಪ್ಪ — 60 ವರ್ಷ
ವೈಶ್ಯ – ಸುಖವಸತಿ – ಬಳ್ಳಾರಿ } ವಾದಿ

Vs

ಟಿ. ಯಂ. ಫ್ರಾನ್ಸಿಸ್ – ತಂದೆ – ಮ್ಯಾಥೂಸ್
50 ವರ್ಷ - ಕ್ರಿಶ್ಚಿಯನ್ - ರಿಟೈರ್ಡ ಎಂಜಿನಿಯರ್
ಹೊಸಪೇಟೆ
ಹಾಲಿವಸತಿ — ಬಳ್ಳಾರಿ } ಪ್ರತಿವಾದಿ

ಮೇಲಿನ ನಂಬರಿನ ಪ್ರಕಾರಕ್ಕೆ ವಾದಿಯು ಹೆಸರೀಲಿ – ಪ್ರತಿವಾದಿಯು ರೂ 300/-ಕ್ಕೆ ಬರೆದುಕೊಟ್ಟ ಪ್ರೊನೋಟಿನ ಮೇಲೆ ರೂ 300/-ಕ್ಕೆ ದಾವಾಮಾಡಿರುತ್ತಾಳೆ ಪ್ರತಿವಾದಿಯು 26 - 6 - 54 ನೆಯ ತೇದಿ ಹಗಲು 11ಗಂಟೆಗೆ ಹಾಜರಾಗದಿದ್ದರೆ ಯಕ್ಸಪಾರ್ಟ ಏಕಪಕ್ಷ ಹುಕು ಆಗುತ್ತದೆ—

ಹೊಸಪೇಟೆ
16–6–54

ಎ. ಆರ್. ಕೃಷ್ಣರಾವ್
ವಾದಿಯ – ಅಡ್ವೊಕೇಟ

ಜಯರಾಜ ಫಿಲ್ಮ್ಸ್ ರವರ

★ ನ ಟ ಶೇ ಕ ರ ★

ನಿರ್ಮಾಪಕ — ನಿರ್ದೇಶಕ — ಪಿ. ವಿ. ರಾಜು

ಬಳ್ಳಾರಿ 'ಪ್ರಭಾತ, ದಲ್ಲಿ ಬರಲಿದೆ

.... ತಾರೀಖು ನಿರೀಕ್ಷಿಸಿರಿ ....

ವೀ ರ ಮಾ ತೆ

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕಿಯರು :– ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :– ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
,, ಸ್ಥಳೀಯರಿಗೆ 4–8–0 ರೂಪಾಯಿ.
ಬಿಡಿ ಸಂಚಿಕೆ 9 ಆಣೆ

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
6ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.

21-6-54

Edited Printed & Published by T. B. Keshava Rao at Nava Bharat Printing Press, Bellary.

ನವಚೈತನ್ಯ

ಸೋಮವಾರ
ಜೂನ್
೨೮ ೧೯೫೪

ವರ್ಷ 17
ಸಂಚಿಕೆ 41

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವು

ನಮ್ಮೊಳಗಿರುವ ಮದ್ದಿನ ಮನೆ

(ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು)

ಮನಸ್ಸೆಂಬುದೊಂದು ಭಾರಿಯ ಮದ್ದಿನ ಮನೆ ಅದಕ್ಕೆ ಇರುವ ಶಕ್ತಿಗಳ ವಿಷಯದಲ್ಲಿ ನಾವು ಬಹಳ ಎಚ್ಚರಿಕೆಯಿಂದಿರಬೇಕು. ಮನಸ್ಸಿಗೆ ಬೇಕಾದಂಥ ಶಕ್ತಿಗಳುಂಟಾಗುವವು ಎಂದು ಅನೇಕರು ಬೋಧಿಸುತ್ತಾರೆ. ಅದಕ್ಕೆ ಇರುವ ಶಕ್ತಿಗಳು ಅಟಂಬಾಂಬ್, ಹೈಡ್ರೋಜನ್ ಬಾಂಬ್ ಮುಂತಾದುವುಗಳ ಶಕ್ತಿಗಳಿಗಿಂತಲೂ ಪ್ರಬಲವಾದವು ಎಂಬ ಎಚ್ಚರಿಕೆಯನ್ನು ಕೊಡುವವರು ವಿರಳ.

ಮನಸ್ಸಿನ ಶಕ್ತಿಗಳನ್ನು ದುರುಪಯೋಗಮಾಡುವ ಆಜ್ಞರು ಬಹುಮಂದಿ ಇರುತ್ತಾರೆ. ಮನಸ್ಸಿನ ಶಕ್ತಿಗಳನ್ನು ಉಪಯೋಗಿಸಿಕೊಂಡು ಮತ್ತೊಬ್ಬನನ್ನು ವಶಗೊಳಿಸಿಕೊಳ್ಳುವದಕ್ಕೆ ಹಣವನ್ನು ಗಳಿಸುವದಕ್ಕೆ ಅಧಿಕಾರವನ್ನು ಸಂಪಾದಿಸುವದಕ್ಕೆ ಅಥವ ತನ್ನ ಕೀರ್ತಿಯನ್ನು ಹಬ್ಬಿಸುವದಕ್ಕು ಉಪಯೋಗಿಸುವವರು ಜಗತ್ತಿನ ನ್ಯಾಯಕ್ಕೆ ಕಾರಣರಾಗುವರು ಅವರಿಗೂ ಅದರಿಂದ ಕೊನೆಯಲ್ಲಿ ಕೇಡೇ ಆಗುವದು, ಆದರೆ ಪ್ರೇಮಪೂರಿತರಾಗಿ ಜಗತ್ತಿನ ಕಲ್ಯಾಣಕ್ಕಾಗಿ ಸಕಾಲದಲ್ಲಿ ಮಳೆಗರೆಯುವ ಪರ್ಜನ್ಯನಂತೆ ತಾವು ಹಗುರವಾಗಿ ಅನಿಸುವ ಜೀವನವನ್ನು ಸಾಗಿಸಿಕೊಳ್ಳುತ್ತಾರೆ. ಮಾನವ ವರ್ಗದ ಚರಿತ್ರೆಯಲ್ಲಿಗೂ ಪಾತ್ರರಾಗುತ್ತಾರೆ.

ನಿಮ್ಮ ಅಂತಃಕರಣದ ಶಕ್ತಿಗಳು ನಿಮಗೂ ನಿಮ್ಮನ್ನೆರೆಯವರಿಗೂ ಯಾವಾಗಲೂ ಕಲ್ಯಾಣಕಾರಕವಾಗಿಯೇ ಇರಬೇಕೆ? ಹಾಗಾದರೆ ಕಲ್ಯಾಣ ಶಕ್ತಿಗಳ ಮೂಲನಾಗಿರುವ ಭಗವಂತನೆಂಬ ಕೇಂದ್ರವನ್ನು ನಿಮ್ಮ ಹೃದಯದಲ್ಲಿ ಇರಿಸಿಕೊಳ್ಳಿರಿ.

ವಿಜಯರವರ
ಅತ್ಯದ್ಭುತ—ಹಾಸ್ಯರಸಭರಿತ ಸಾಮಾಜಿಕ ಚಿತ್ರ

★ "ಪೆಳ್ಳಿ ಚೇಸಿ ಚೂಡು" [ತೆಲುಗು] ★

(ಮದುವೆ ಮಾಡಿ ನೋಡು)

ಇವರಲ್ಲಿ ಚಿಟ್ಟಿ ಭೀಮನ್ನ ಇವರ ಪ್ರೇಮ, ಚಿಟ್ಟಿಯನ್ನು ಬೇರೊಬ್ಬರಿಗೆ ಕೊಡುತ್ತೇನೆಂದು ಬೀಮ್ಮನ ಮೋಸವಾಗಲಾಟ- ಸಿಯ್ಯನ್ನನು ಅವಸಿಕೊಂಡಿಂದ ಅವರಿಬ್ಬರ ಸಂಚಿನ ಮದುವೆಯದು- ಕಳ್ಳ ಪೋಲೀಸಿನ ಸಹಾಯದಿಂದ ಚಿಟ್ಟಿಯ ತಾಯಿ-ತಂದೆಗಳು ಅವಳನ್ನ ಎತ್ತಿಕೊಂಡುವರು ಹೊಟ್ಟೆಹುಣ್ಣಾಗುವಂತೆ ನಗಿಸುವ ಹಾಸ್ಯ- ಮನೋಹರ ಅರಿವು ಪಡಿಸಿ

ಎಷ್ಟೋ ಪ್ರಮುಖಟ್ಟು – ನಿಶ್ಚಯಿಲ್ಲದ ಹಣ ವೆಚ್ಚಮಾಡಿ, ಬಂಗಾರಾಗಿ, ಆಕರ್ಷಣಾಗಿ, ಹೆಚ್ಚು ಹಾಸ್ಯಯುಕ್ತವಾಗಿ 'ವಿಜಯ' ರವರು ಇದನ್ನು ರಚಿಸಿದ್ದಾರೆ ಇಂಥಾ ಚಿತ್ರವನ್ನು ನೀವೆಂದೂ ಕಂಡಿರಲಿಕ್ಕಿಲ್ಲ.

.... ತಪ್ಪದೆ ನೋಡಿರಿ ....

— ಬಳ್ಳಾರಿ 'ಪ್ರಭಾತ, ಪಲ್ಲಿ —
29 - 6 - 54 ರಿಂದ

ವಿಜಯಾರವರ
"ಪೆಳ್ಳಿ ಚೇಸಿ ಚೂಡು" ಒಂದುನಾಟ್ಯೈಶ್ವ
ನಿರೂ ತರು:— ಪಾರಿಕ್ಷ ಮತ್ತು ಚಕ್ರಪಾಣಿ.
ಡೈರೆಕ್ಷನ್:— ಪ್ರಸಾದ್, — ರಚನೆ— ಚಕ್ರಪಾಣಿ—ಸಂಗೀತ — ಘಂಟಸಾಲ

★ಕಾರ್ಮಿಕರ ಇತಿಹಾಸ★

ಸಂಯುಕ್ತ ಸಂಸ್ಥಾನಗಳಲ್ಲಿ 1952 ರಲ್ಲಿ ನಜ್ಜಿತ ಕಾರ್ಮಿಕ ಸಂಘಗಳು 14 ದಶಲಕ್ಷ ಸದಸ್ಯತ್ವವನ್ನು 16 ದಶಲಕ್ಷ ಕಾರ್ಮಿಕರ ಮಧ್ಯೆ ತಮ್ಮ ಸದಸ್ಯತ್ವವನ್ನು ಸ್ಥಾಪಿಸಿವೆ. ಕರಾರುವಾಕಾಗಿ ಇಷ್ಟೇ ಸದಸ್ಯರಿದಾರೆ ಎಂಬ ಅಂಕಿ ಸಂಖ್ಯೆಗಳನ್ನು ಪಡೆಯುವು ಕಷ್ಟವಾದರೂ ವ್ಯವಸಾಯೇತರ ಕಾರ್ಮಿಕವರ್ಗದ ಸಂಸ್ಥೆಗಳಲ್ಲಿ ಸುಮಾರು ಮೂರ ಮಿಲ್ಲಿಯನ್ ಜನ ಕೈಗಾರಿಕಾ ಸಂಘದ ಸದಸ್ಯ ರಾಗಿದ್ದಾರೆ. 1913 ನೆಯ ಇಸವಿಯ ವೃತ್ತಾಸದೊಡನೆನೋಡಿದರೆ 2½ ದಶಲಕ್ಷ ಕಾರ್ಮಿಕರು ಸಂಘದ ಸದಸ್ಯರಾಗಿದ್ದರು. ಅಂದರೆ ಹದಿನೈದು ಮಂದಿಗೊಬ್ಬನಂತೆ ಕಾರ್ಮಿಕ ಸಂಘದ ಸದಸ್ಯನಾಗಿದ್ದ ನೆಂದಾಯ್ತು.

ನೂರು ವರ್ಷಗಳ ಹಿಂದೆ ಅಲ್ಪಸ್ವಲ್ಪ ಣದ ಕೇಲಸೇ ಸಂಘಗಳಿದ್ದವು. ಸೊಟ್ಟ ಮೊದಲನೆಯ ರಾಷ್ಟ್ರೀಯ ಸಂಘವು 1836 ರಲ್ಲಿ ಚರ್ಮಕಾರರಿಂದ ಒಂದುಗೂಡಿಸಲ್ಪಟ್ಟಿತು. ನಂತರ ಕೆಲವೇವರ್ಷಗಳಲ್ಲಿ ಮುದ್ರಣಕಾರರು, ಬಾಜಣಿಗೆ ತಯಾರಕರು ಬಡಗಿಗಳು ಮತ್ತು ಮುಗ್ಗದ ಕೈಗಾರಿಕೆಯವರಿಂದ ಬೇರೆ ಕೆಲವು ದೇಶೀಯ ಸಂಸ್ಥೆಗಳು ನಿರ್ಮಾಣವಾದುವು 1852 ನೇ ಇಸವಿಯಲ್ಲಿ ಮುದ್ರಕರಿಂದ ನಿರ್ಮಾಣವಾದ ದೇಶೀಯ ಸಂಘವು ಇಂದಿಗೂ ಜೀವಂತವಾಗಿದೆ.

ಕಾಲಕ್ರಮೇಣ, ಎಲ್ಲಸಂಘಗಳೂ ಸಂಘಟಿತ ದೇಶೀಯ ಸಮಿತಿಯಲ್ಲಿ ಕೂಡಿ ಕೊಳ್ಳಲು ಯತ್ನಿಸಿದವು. 1881 ರಲ್ಲಿ ಯಾವುಗೊಂಡ ಅಮೆರಿಕಾದ ಕಾರ್ಮಿಕ ಸಂಘವೊಂದನ್ನುಹೊರತುಪಡಿಸಿದ್ದಲ್ಲಿಯೂ ತಾತ್ಕಾಲಿಕವಾಗಿ ಯಶಸ್ವಿಯಾಗಿದ್ದವು. ಆಕಾಲದಲ್ಲಿ ಅರ್ಧ ಮಿಲ್ಲಿಯನ್‌ಗಿಂತಲೂ ಹೆಚ್ಚಿನ ಸಂಖ್ಯೆಯ ಸದಸ್ಯರಿದ್ದರು. ಅವರೆ ಸ್ವರ್ಗಂಚದ ಪೊದಲನ ನುಹಾಯುದ್ಧದಲ್ಲಿ ಕಾರ್ಮಿಕ ವ್ಯಾಮುಖ್ಯತೆಯುಂಟಾಗಿ 1920ರ ಹೊತ್ತಿಗೆ 5 ದಶಲಕ್ಷ ಸದಸ್ಯರಾಗಿದ್ದರು ಅವರಲ್ಲಿ 5 ರಲ್ಲಿ 4 ಭಾಗ ಸದಸ್ಯರು ಅಮೆರಿಕಾದ ಶಾಸ್ತ್ರನಿರ್ದಿಷ್ಟ ಸಂಘಕ್ಕೆ ಸೇರಿದವರು ಉಳಿದವರುಸ್ವತಂತ್ರ ಸಂಸ್ಥೆಗಳಿಗೆ ಸೇರಿದವರು.

ಈಸಂಘಗಳ ಬೆಳವಣಿಗೆಯು ಒಗ್ಗಟ್ಟಿನಿಂದ ತಮ್ಮ ಕೆಲಸಗಾರರಿಗೆ ಸಹಾಯವನ್ನು ಮಾಡಲು, ದೊಡ್ಡದೊಡ್ಡ ಮಾಲೀಕರ ಮತ್ತು ಕಾರ್ಮಿಕರ ಮಧ್ಯೆ ಘರ್ಷಣೆಗಳನ್ನು ತಂದೊಡ್ಡುವುದರಲ್ಲಿ ಪರ್ಯವಸಾನವಾಯಿತು. ಏನೆ ಆದರೂ 1920 ನೇ ಇಸವಿಯ ಹೊತ್ತಿಗೆ ದುಡಿಮೆಯ ಕಾಲಪರಿಮಿತಿಯನ್ನು ಕಡಿಮೆಗೊಳಿಸಿ ಮಜೂರಿಯನ್ನು ಜಾಸ್ತಿ ಕೊಡಿಸುವ ಉದ್ಯಮದಲ್ಲಿ ಯಶಸ್ವಿಯಾದವು.

ಉದಾಹರಣೆಗೆ 1909 ನೆ ಇಸವಿಯಲ್ಲಿ ಉತ್ಪಾದನಾ ಕಾರ್ಯದಲ್ಲಿ ತೊಡಗಿದ ಕಾರ್ಮಿಕನ ಒಂದು ಗಂಟೆಯ ಸರಾಸರಿ ಮಜೂರಿ 19 ಸೆಂಟುಗಳಿದ್ದುವು. 1923 ನೆಯ ಇಸವಿಯಲ್ಲಿ ಅಂದರೆ 1920-21ರ ಆರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಹೊಂದಿದ ನಂತರ ಒಂದು ಘಂಟೆಯ ಸರಾಸರಿ ಮಜರಿಯು 52 ಸೆಂಟುಗಳಾಯಿತು. ಧಾರಣೆಯ ಏರಿಕೆಗೆ ಅವಕಾಶವಾದಂತೆ ಪ್ಲಾ ಮಜೂರಿಯು ಏರಿಕೆಯು ಇನ್ನೂ ಗಮನಾರ್ಹವಾದುದಾಗಿತು. 1909 ರಲ್ಲಿ ಒಂದು ಪಾರಪ ವಡಿಮೆಯಕಾಲವು 51 ಗಂಟೆಗಳಿಗೂ ಜಾಸ್ತಿಯಾಗಿದ್ದಿತು ಅದರೆ 1923 ರಲ್ಲಿ 46 ಗಂಟೆಗಳದ್ದಿತು.

ಜೇನು ಹುಳದ ಕುರಿತು ನಿಮಗೆಷ್ಟು ಗೊತ್ತು?

ನಮ್ಮ ನಿತ್ಯದ ಉಪಯೋಗಕ್ಕೆ ಬೇಕಾಗುವ ವಸ್ತುಗಳಲ್ಲಿ ಜೇನುತುಪ್ಪವೂ ಒಂದು. ಇಂದು ಜೇನು ಸರ್ವೋಪಯೋಗಿ ಮಹತ್ವಪೂರ್ಣ ವಸ್ತುವಾಗಿದೆ.

ಜೇನುತುಪ್ಪವ ವಿಚಾರವಾಗಿ ತಿಳಿಯುವ ಮುಂಚೆ ಜೇನು ನೊಣಗಳ ಜೀವನದ ಕುರಿತು ಸ್ವಲ್ಪ ತಿಳಿಯೋಣ. ಲೋಕದ ಕಲ್ಯಾಣಕ್ಕೋಸ್ಕರ ತಮ್ಮ ಮಧು ಕೋಶವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಇವೂ ಮನುಷ್ಯರಂತೆ ವ್ಯವಸ್ಥಿತ ಸಾಮೂಜಿಕ ಜೀವನವನ್ನು ನಡೆಸುತವೆ. ಅವುಗಳ ಐಕ್ಯತೆ ಬಹಳ ವಿಚಿತ್ರವಾಗಿದೆ. ಶ್ರಮ ಪಡುವುದು ಅವುಗಳ ಜೀವನದ ಅಂಗವಾಗಿದೆ. ಅವುಗಳಲ್ಲಿ ಮಧುಸಂಗ್ರಹ ಮಾಡುವ ಕೆಲಸಗಾರರೂ ರಕ್ಷಣೆ ಮಾಡುವವರೂ, ಮನೆ ಕಟ್ಟುವವರೂ, ಉಪಭೋಗಕ್ಕಾಗಿ ರಾಣಿ ನೊಣಗಳೆಂದೂ ಭೇದಗಳಿವೆ. ರಾಣಿ ಹುಳುವು ಮೊಟ್ಟೆಗಳನ್ನು ಇಟ್ಟುಕೊಂಡು ಮನೆಯನ್ನು ರಕ್ಷಿಸುತ್ತದೆ. ಕೆಲವು ನೊಣಗಳು ಹೊರಗಡೆ ಹೋಗಿ ಹೂಗಳಿಂದ ರಸ ಸಂಗ್ರಹ ಮಾಡಿ ತರುತ್ತವೆ. ಕೆಲವು ವಾಸಕ್ಕೋಸ್ಕರ ಮನೆಯನ್ನು ತಯಾರಿಸುತ್ತವೆ ಭಿನ್ನ ಭಿನ್ನ ನೊಣಗಳು ತಮ್ಮ ಕೆಲಸಗಳಲ್ಲಿ ಅತ್ಯಂತ ನಿಪುಣ ತಮ್ಮನಾಗಿತತ್ಪರವಾಗಿರುತ್ತವೆ. ನಾವು ಯಾವುದಾದರೊಂದು ನೊಣಕ್ಕೆ ತೊಂದರೆ ಕೊಟ್ಟರೆ, ಉಳಿದ ನೊಣಗಳನ್ನು ಕರೆದು ಕೊಂಡು ಬಂದು ನಮ್ಮನ್ನು ಮುತ್ತುತ್ತವೆ ಆಗ ನಮ್ಮನ್ನು ಅವುಗಳಿಂದ ರಕ್ಷಿಸಿಕೊಳ್ಳುವುದು ಬಹಳ ಕಷ್ಟದ ಕೆಲಸ. ನೀರಿನಲ್ಲಿ ಮುಳುಗಿ ಕೂತರೂ ನಮ್ಮನ್ನು ಬಿಡುವುದಿಲ್ಲ! ಕಚ್ಚಿದ ಜಾಗದಲ್ಲಿ ಉರಿಬಂದು ಊತ ಬರುತ್ತವೆ.

ಜೇನು ನೊಣಗಳಲ್ಲಿ ಸಾಮಾನ್ಯವಾಗಿ ಸಾರಂಗ, ಪ್ಯಿರ, ಭುನಗಾ ಮತ್ತು ಸಣ್ಣ ಭುನಗನೆಂದು ನಾಲ್ಕು ಜಾತಿಗಳವೆ. ಅಧುನಿಕ ಜಂತುಶಾಸ್ತ್ರ ಅನುಸಂಧಾನಕಾರರು ನೊಣಗಳು ಹತ್ತರಿಂದ ಹದಿನೈದು ಸಾವಿರವವರೆಗೆ ಒಟ್ಟುಕೂಡಿವಾಸಿಸುತ್ತವೆಂದು ಅಭಿಪ್ರಾಯಪಡುತ್ತಾರೆ, ಪ್ರತಿ ಪೂಡಿನಲ್ಲಿ ರಾಣಿ, ಕೆಲಸದವು. ಪುರುಷರೆಂದುಮೂರು ರೀತಿಯ ಹುಳಗಳಿರುತ್ತವೆ.

ರಾಣಿ ಹುಳವು ಕೇವಲ ಗರ್ಭದರಿಸಿ ಮೊಟ್ಟೆಗಳನ್ನು ಇಡುತ್ತಾ ಇರುತ್ತದೆ. ಇದು ಒಂದು ದಿವಸಕ್ಕೆ ಹೆಚ್ಚು ಕಮ್ಮಿ ಎರಡು ಸಾವಿರ ಮೊಟ್ಟೆಗಳನ್ನು ಇಡುತ್ತದೆ ಒಂದು ಗೂಡಿನಲ್ಲಿ ಒಂದೇ ರಾಣಿ ಹುಳವಿರುವುದು. ಇವು ಎಲ್ಲಾ ನೊಣಗಳಿಗಿಂತ ಸ್ವಲ್ಪ ದೊಡ್ಡದಾಗಿರುತ್ತದೆ. ರಾಣಿಹುಳವು ತಾಮ್ರ ವರ್ಣವಾಗಿಯೂ, ಹೊಟ್ಟೆಯು ಉದ್ದವಾಗಿದ್ದು ಸೌಂದರ್ಯಪೂರ್ಣವಾದ ಹೊಳೆಯುವ ರೆಕ್ಕೆಗಳಿಂದ ಕೂಡಿದ್ದಾರುತ್ತದೆ. ಛಾಗ ಒಂದರಲ್ಲಿ ಕಳೆಯುತ್ತದೆ. ನಿದ್ರೆಯ ಅವಸ್ಥೆಯ ನಂತರ ಅದು ತನ್ನ ಜೀವನದಲ್ಲಿ ಕೇವಲ ಒಂದೆರಡು ಬಾರಿ ಹೊರಗೆ ಹಾರಾಡಿ ಸಂಭೋಗ ಮಾಡುತ್ತದೆ. ನಂತರ ಹಿಂದಿರುಗಿ ಗೂಡಿನ ಮೇಲಿನ ಭಾಗದಲ್ಲಿಮಾತೃತ್ವಸ್ಥಾನವನ್ನು ಸ್ವೀಕರಿಸಿ ತನ್ನ ಇಚ್ಛಾನುಸಾರ ಮೊಟ್ಟೆಗಳನ್ನು ಇಡುತ್ತದೆ.

ದುರ್ಜನರಿರುವುದರಿಂದಲೇ ಸಜ್ಜನರು!

ಭ್ರಷ್ಟಾಚಾರ, ಅಸಮಾನತೆ, ಅನ್ಯಾಯ, ಅಜ್ಞಾನ ಅನಾರೋಗ್ಯ-ಇವುಗಳ ವಿರುದ್ಧ ನಡು ಬಿಗಿದಿರುವವರು, ಅಂತರ್ಯತಃ ಇವುಗಳ ಸಾಬಲ್ಯವನ್ನೇ ಬಯಸುವವರೆಂಬುದು ಒಂದು ವಿಲಕ್ಷಣ ಸತ್ಯ. ದೀಪವೆಂಬುದಿರಬೇಕಾದರೆ ಕತ್ತಲೆಯಿರಬೇಕಾದುದು ಹೇಗೆ ಅಗತ್ಯವೋ ಹಾಗೆಯೇ 'ಉದ್ಧಾರಕರ ಇರಸ್ತಿಕೆಗೇನೇ 'ಪತಿತ, ರು ಇರಬೇಕಾದುದು ಅವಶ್ಯ ಆದ್ದರಿಂದಲೇ, ನಿವಾರಿಸುವವರಿರುವುದರಿಂದಾಗಿ ಅಜ್ಞಾನ ಅನ್ಯಾಯಗಳಿರುವವೋ, ಅಥವಾ ಅಜ್ಞಾನಾನ್ಯಾಯಗಳಿರುವುದರಿಂದ, ಇವುಗಳ ನಿವಾರಕರಿರುವರೋ ಎಂಬ ಸಂಶೋಹ ವೇಳುವಂತಾಗಿದೆ.

ನ್ಯಾಯಾಲಯಗಳಿರುವುದರಿಂದ ತಪ್ಪಿ ತಸ್ಥರು ಶಿಕ್ಷಿಸಲ್ಪಡುತಿದ್ದಾರೇನೋ ಖರೆ: ಆದರೆ ಪ್ರಪಂಚದಲ್ಲಿ ಎಲ್ಲರೂ ನ್ಯಾಯವಾದಿಗಳೇ ಆಗಿದ್ದರೆ ನ್ಯಾಯಾಲಯಗಳಿಗೆ ಅಸ್ತಿತ್ವವಿದೆಯೆ? ಕೋರ್ಟು ಕಚೇರಿಗಳಿರುವ ದೆಸೆಯಿಂದಾಗಿ ಹೆಚ್ಚಿನ ವಾಜ್ಯ ಸಾಜ್ಯಗಳೇ ರೂಪುಗೊಳ್ಳುತ್ತಿವೆ, ಎನ್ನಬಹುದು.

ಸಂಖ್ಯೆಯಲ್ಲಿ 'ಚೀಚರ್', ವರ್ಗವನ್ನು ಹಿಂದಿಕ್ಕಲು ಹೊರಟಿದ್ದಾರೇನೋ ಎಂಬಂತೆ ಡಾಕ್ಟರರು ಹಬ್ಬುತಿದ್ದಾರೆ. ರೋಗಗಳು ಹುಟ್ಟುತ್ತಾ ಇರಬೇಕು– ತಾವು ಅವುಗಳನ್ನು ಗುಣಪಡಿಸುತ್ತಾ ಹೋಗಬೇಕು, ಇದೆ. ಇವರ ಬಯಕೆಯಲ್ಲಿಜೀವಾನವ ಸಮಾಜವೇ ನಿರೋಗಿಯಾಗಬೇಕೆಂಬ ಗುರಿ ಇವರಿಗಿದ್ದೀತೆ? ಆರೋಗ್ಯ ಭಾಗ್ಯ ಸದಾಕಾಲ ಸರ್ವರಿಗೂ ದೊರೆತಲ್ಲಿ ಡಾಕ್ಟರರಿಗೆ ಇಂಸ್ತಿಕೆಯೇಕೆ?

ಪಾನನಿರೋಧ ಸಿಬ್ಬಂದಿಯವರಿದ್ದಾರೆ. ಕಳ್ಳ ಪಾನೀಯಗಳ ತಯಾರಿ ಮತ್ತು ಸೇವನೆಯನ್ನು ಪತ್ತೆ ಹಚ್ಚುವುದು ಇವರ ಕೆಲಸ. ತಮ್ಮ ಅವಶ್ಯಕತೆಯದೆ ಎಂಬುದನ್ನು ತೋರಿಸುವುದಕ್ಕಾಗಿ, ಆಗೊಮ್ಮೆ ಈಗೆಮ್ಮೆ ಖಾಲಿ ಕೈಯ್ಯ ಕೆಂಗಣ್ಣವರನ್ನು ಹಿಡಿಯುವುದೊಂದನ್ನು ಬಿಟ್ಟರೆ, ಪಾನ ನಿಷೇಧವು ಪೂರ್ಣ ಜಯಶೀಲವಾಗಬೇಕೆಂದು ಇವರು ಪ್ರಯತ್ನಿಸುವಂತಿದೆಯೆ? ಕಳ್ಳಪಾನದ ಅಭ್ಯಾಸವೇ ನಿಂತು ಹೋದಲ್ಲಿ ಇವರ ಅಸ್ತಿತ್ವ?

"ಜನರು ಪ್ರತಿಯೊಂದು ವಿಷಯಕ್ಕೂ ರಕ್ಷಾಕವಚವನ್ನು ನೋಡುವುದನ್ನು ಬಿಡಬೇಕು; ಸ್ವತಂತ್ರ ದೇಶದ ನಾಗರಿಕರ ಹೊಣೆಗಾರಿಕೆಯನ್ನರಿತು! ಸ್ವತಂತ್ರ ಮನೋವೃತ್ತಿ ತಾಳಬೇಕು" ಎಂದು ನಮ್ಮ ಮಂತ್ರಿಗಳೂ ಪ್ರಮುಖರೂ ನಾಗಾಗ ಉಪದೇಶಕೊಡುತಿದ್ದಾರೇನೋ ನಿಜ. ಆದರೆ, ತಾವು ಇಂತಹ ಬೋಧನೆಯನ್ನು ಸದಾಕಾಲ ಕೊಡುತ್ತಾ ಹೋಗುವ ಅರಾಧ್ಯರಾಗಿರುವಂತೆ, ಜನತೆಯಲ್ಲಿ ಪರಾವಲಂಬನಾ ಬುದ್ಧಿಯುಳಿದಿರಲೆಂದೇ ಅವರ ಅಂತರಂಗದ ಬಯಕೆ. ಅದಿಲ್ಲದೆ ಹೋದಲ್ಲಿ ಇವರ ಸ್ಥಾನ ಪೂರಸ್ಕೃತಹ ವಃಹತ್ವ ನೆಲ್ಲಿದೆ?

"ಹಣ ಅಥವಾ ಹಂಗಿಗೆ ಬಲಿಬೀಳದೆ, ಯೋಗ್ಯತೆಯನ್ನು ನೋಡಿ ಮತದಾನ ಮಾಡಿರಿ" ಎಂದು ಚುನಾವಣೆಯ ಪ್ರತಿಯೊಬ್ಬರೂ ಹೇಳುವೇದ್ವಾರಿಯೂ ನೀತಿಬೋಧೆ ಮಾಡುತ್ತಾನೆ. ಆದರೆ ಚುನಾವಣೆ ಗೆಲ್ಲಲು ತನ್ನಲ್ಲಿರುವ ಹಣವೆಷ್ಟು, ಮತ್ತು ತನ್ನ ಹಂಗೀಕರಿಷ್ಣು ಎಂಬ ಲೆಕ್ಕ ಹಾಕಿಕೊಂಡೇ ಆತ ನಿಲ್ಲುತ್ತಾನೆ ಹೊರತು, ಬೇರೆ ಯೋಗ್ಯತೆಯನ್ನು ಅಧರಿಸಿ ಅಲ್ಲ.

"ಬಡಜನ ಬಂಧುಗಳೇ, ಭಂಡವಾಳ ಕಾಹಿಗಳು ನಿಮ್ಮ ರಕ್ತಶೋಷಣೆ ಮಾಡುತಿದ್ದಾರೆ. ಈ ಅಸ್ತವ್ಯಸ್ತತೆಯ ನಿವಾರಣೆಗಾಗಿ ಕೂಡಲೇ ಆಧೀಕ್ಷ ಸಾಮಾಜಿಕ ಸಮಾನತೆ ಸ್ಥಾಪನೆಯಾಗಬೇಕು" ಎಂಬ ಚಳವಳಿನಡೆಸುವ ಅಂತರ್ಯವೂ ಇಷ್ಟೆ. ತಾವು ಇಂಥಾ ಬಡವರ ಬಂಧುಗಳಾಗಿ ಉಳಿದುಕೊಳ್ಳುವಂತೆ ಬಡತನವೂ ಉಳಿದುಕೊಳ್ಳಬೇಕು ಎಂಬುದೇ. ಆ ವಿನಹಾ ಇವರ ಪ್ರತಾಪಕ್ಕೆಡೆಯೆಲ್ಲಿ?

ಹೆಚ್ಚೇಕೆ? ಯಾವುದೇ ದುರ್ಗತಿ ಅಥವಾ ದುರಭ್ಯಾಸಕ್ಕೀಡಾದವನ ಕುರಿತು ಟೀಕಾತ್ಮಕ ವರ್ಣನೆ ಮಾಡುವ 'ಸಂಘಾವಿತ್ತರ ಅಂತರ್ಯವೇ ನೋಡೋಣ. ಆ ಮತ್ತೊಬ್ಬ ದುರ್ದೈವಿ ತನ್ನಂತಾಗದೆ ಹಾಳಾದನಲ್ಲಾ ಎಂಬ ಕನಿಕರದಿಂದ ಈತನು ಹಾಗೇನೂ ಉದ್ಗರಿಸುವುದಲ್ಲ– ಅಂಥಾ ಕೀಳು ಸ್ಥಿತಿಯವನಿಗಿಂತ ತಾನು ಮೇಲಿದ್ದೇನಲ್ಲಾ ಎಂಬ ಹೆಗ್ಗಳಿಕೆಯಿಂದ ಅವನು ಹಾಗೆಯೇ, ತಾನು ಹೀಗೆಯೇ ಇರಬಹುದೆಂಬ ಭಾವನೆಯಿಂದ!

ಧರ್ಮಬೋಧೆ ಮಾಡುವವರ ಅಥವಾ ರಾಜಕೀಯ ಇಲ್ಲವೇ ಕಾನೂನು ಕ್ರಮಗಳ ಕುರಿತು ಸಲಹೆಕೊಡುವವರ ಉದ್ದೇಶವು ತಾವು ಹೇಳಿದುದನ್ನು ಸಂಬಧಪಟ್ಟವರು ಕಲಿತುಕೊಂಡು ತಮ್ಮಂತಾಗಲಿ ಎಂದಲ್ಲವೇ ಅಲ್ಲ ಇದೇ ರೀತಿ ಸದಾಕಾಲ ತಾವು ಹೇಳುವವರಾಗಿಯೂ ಅವರು ಕೇಳುವವರಾಗಿಯೂ ಇರಬೇಕೆಂಬುದೇ ಅವರಭ್ಯೇಯ.

"ಇಲ್ಲರೂ ಕಾಂಗ್ರೆಸಿಗೆ ಸೇರಿ ಅದನ್ನು ಬಲಪಡಿಸಲು ನೆರವಾಗಬೇಕು" ಎಂಬ ಸರ್ವಸಾಮಾನ್ಯ ಸಲಹೆಯನ್ನು ಹಾಡುತ್ತಿರುವ ಹಲವರ ಅಂತರ್ಯದಲ್ಲಿ ತಮ್ಮಂತಹ ಬೇರೆಯವರೂ ಕಾಂಗ್ರೆಸಿಗೆ ಸೇರಿಕೊಂಡಲ್ಲಿ ತನ್ನ ಸ್ಥಾನನೆಲ್ಲಿತಪ್ಪಿಹೋಗುವುದೋ ಎಂಬ ಹೆದರಿಕೆಯಿನ್ನೇ ಇದೆ; ಕಾಂಗ್ರೆಸ್ಸನ್ನು ಅಧಿಕಾರದಿಂದುರುಳಿಸಬೇಕು ಎಂದು ಘೋಷಿಸುತ್ತಿರುವ ಹಲವರ ಮನಸ್ಸಿನಲ್ಲಿ ತಾವು ಹೀಗೇಯೇ ವೀರಾವೇಶದ ಖಂಡನೆನೂಡುತ್ತಿರಲಾಗುವಂತೆ, ಕಾಂಗ್ರೆಸು ಹೀಗೆಯೇ ಜವಾಬ್ದಾರಿ ಹೊತ್ತುಕೊಂಡಿರಲಿ, ಎಂದೇ ತೋರುತ್ತಿದೆ.

ಹಳ್ಳೀ 'ವ್ಯವಸ್ಥಾಪಾಲಕ'ರನ್ನಿಸುವವರಿದ್ದಾರೆ. ಯಾವುದೇ ಆಟ, ನೇಮ, ಇತ್ಯಾದಿ ಸಮಾರಂಭಗಳಲ್ಲಿ 'ಮೂತಾಡಬೇಡಿ, ಎನ್ನುತ್ತಾ ಸಭೆಸಂತೈಸುವವರು. ಇಂಥವರು, ಜನ ಯಾವಾಗ ಗದ್ದಲವೆಬ್ಬಿಸಿಯಾರು, ತಾವುಯಾವಾಗ ತಮ್ಮ ಗೌರವಾಧಿಕಾರ ಚಲಾಯಿಸೇವು ಎಂದು ತಾಲೈಸಿಕೊಂಡೇ ಇರುತ್ತಾರೆ ಹೊರತು ಸಭೆ ಸ್ವಾಭಾವಿಕವಾಗಿ ಶಾಂತವಾಗಿರಲಿಂದು ಬಯಸುವಂತಿಲ್ಲ. ಬೇರೆಯವರು ಜಪಸಾಡಿಕೊಳ್ಳುವಾಗ ಮಧ್ಯಸ್ಥಿಕೆಗೆ ಹೋಗುವವರ ಭಾವನೆಯೂ ಹೀಗೆಯೇ.

ಅನ್ನದಾನ, ವಸ್ತ್ರದಾನಗಳ, ಶನಿವಾರದಾನ, ಅಮವಾಸ್ಯಾದಾನಗಳನ್ನು ವಾಡಿಕೆಯಾಗಿ ಅನುಕರಿಸಿಕೊಂಡು ಬರುವ ದಾತಾರರೇದ್ದಾರೆ. ಪುಣ್ಯಸಂಪಾದನೆಯು ತಮ್ಮ ಈ ವಿಧಾನವೊಂದು ಹೀಗೆಯೇ ಉಳಿದಿದ್ದರೆ ಪಾಪಾಚರಣೆಗೆ ತಾವು ಹೆದರಬೇಕಾಗಿಲ್ಲವೆಂಬ ಭಾವನೆಯಿಂದ

4 ನೇ ಪುಟನೋಡಿ

(3 ನೇ ಪುಟ ತರುವಾಯ)

ಅವರೀದಾನಧರ್ಮಗಳನ್ನು ಆಚರಿಸುತಿದ್ದಾರಲ್ಲದೆ, ಅನ್ನವಸ್ತ್ರಗಳ ಅಭಾವ ನಿವಾರಣೆಗೆ ನೆರವಾಗಬೇಕೆಂಬ ಇಚ್ಛೆಯಿಂದಲ್ಲವೇ ಅಲ್ಲ.

ಪ್ರಾಪಂಚಿಕ ವ್ಯವಹಾರವೇ ಹೀಗಿದೆ, ತಾನು ಕತ್ತರಿಸಿದಂಕೂದಲು, ಇನ್ನಷ್ಟು ದಪ್ಪವಾಗಿ ಪುನಃ ಬೆಳೆಯುತ್ತದೆ ಮತ್ತು ಬೆಳೆಯಬೇಕು ಇದೇ ಕ್ಷೌರಿಕನ ಇಚ್ಛೆ; ತಾನು ಖಂಡಿಸಿದ ಅಜ್ಞಾನ ಅಥವಾ ಅನ್ಯಾಯವು ಜನತೆಯಲ್ಲಿ ಯಥಾಪ್ರಕಾರ ಪುನರುತ್ಥಾನವಾಗುತ್ತದೆ ಮತ್ತು ಆಗಬೇಕೆಂಬುದೇ ಸುಧಾರಕನ ಒಳಾಂತರ್ಯ ಹೀಗಾಗಿ ಈ ಕಾಲದಲ್ಲಿ ಹೆಚ್ಚಿನ ಬೋಧನೆ ಅಥವಾ ಸುಧಾರಣೆಯೂ ಅದೊಂದು ಉದ್ಯೋಗದರೂಪದಲ್ಲಿದೆಯೋ ಹೊರತು ಬೇರಿಲ್ಲ ಇವೆಲ್ಲಾ 'ಉದ್ಧಾರಕರ, ಪ್ರಯತ್ನ ನಿಜಕ್ಕೂ ಫಲಿಸಿ, ಸರ್ವೋನ್ನತ ಶಾಂತಿ, ಸಮಾನತೆ, ಸುಖಸ್ವಾಸನೆಗೊಂಡಲ್ಲಿ, ಮಿಡಿಬಿದ್ದಾಗ ಹೂ ಉದುರಿ ಹೋಗುವಂತೆ ಉದ್ಧಾರಕರೇ ಮಾಯವಾಗಬೇಕಾಗುವುದು!

ಬಳ್ಳಾರಿಯಲ್ಲಿ ಪ್ರತಿಬಂಧಕಾಜ್ಞೆ

ಗಳಿಕೆಯ ಸೆಕ್ಷನ್ ಮೇರೆಗೆ

ಬಳ್ಳಾರಿ ಮುನಿಸಿಪಾಲಿಟಿ ಪ್ರದೇಶದಿಂದ ಐದು ಮೈಲಿ ದೂರದೊಳಗಿನ ಸ್ಥಳಗಳಲ್ಲಿ ಸಭೆ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ಒಂದು ತಿಂಗಳ ಕಾಲ ನಡೆಸಬಾರದೆಂದು ಪ್ರತಿಬಂಧಕಾಜ್ಞೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ನಿನ್ನೆ ಸಂಜೆ ಕ್ರಿ.ಪ್ರೊ ಕೋಡ್ 144 ನೆಯ ಸೆಕ್ಷನ್ ಪ್ರಕಾರ ಹೊರಡಿಸಿದ್ದಾರೆ.

ಬಳ್ಳಾರಿ 'ಪ್ರಭಾತ, ದಲ್ಲಿ 'ನೋಡಿರಿ, ಆನಂದಪಡಿರಿ,

—: ಶೀಘ್ರವಾಗಿ ಬರಲಿದೆ :—

ಎ. ವಿ. ಯಂ ರವರ

★ 'ಸಂಗಂ' ★

[ಸುಪ್ರಸಿದ್ಧ ತೆಲುಗು - ಚಿತ್ರ]

ಇದರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, .ಯಸ್. ವಿ. ರಂಗರಾವ್ ಪೈಜಯಂತಿಮಾಲ, ಅಂಜಲಿದೇವಿ ನಟಿಸಿದ್ದಾರೆ:— ಸಂಗೀತ ರಸವತ್ತರ ಚಿತ್ರ

ಜಯರಾಜ ಫಿಲ್ಮ್ಸ್ ರವರ

★ ನಟಶೇಖರ ★

(ಅದ್ಭುತಕನ್ನಡ ಚಿತ್ರ)

ನಿರ್ಮಾಪಕ — ನಿರ್ದೇಶಕ — ಪಿ. ವಿ. ರಾಜು

.... ತಾರೀಖು ನಿರೀಕ್ಷಿಸಿರಿ ....

AT PRABHAT BELLARY,

MATINEE 4th, 5th & 6th July' 54

WARNER'S

SPRING FIELD RIFLE

in

WARNER COLOR

Starring GARY COOPER

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.

28-6-54

Edited Printed & Published by T. B. Keshava Rao, at Nava Bharat Pinting Press, Bellary

ನಾಡಿಚಾವಡಿ

ಸೋಮವಾರ
ಜುಲೈ
೫,೧೯೫೪ಖಿಳ

ವರ್ಷ 17
ಸಂಚಿಕೆ 42

ಬಳ್ಳಾರಿಯ ಉಚ್ಚಳ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವು

ಕೊಬಾಲ್ಟ್ ಬಾಂಬು ಬಿದ್ದರೇನು ಗತಿ ?

ಹೈಡ್ರೋಜನ್ ಬಾಂಬಿಗಿಂತಲೂ ಹೆಚ್ಚು ಭಯಾನಕವಾದಂಥ ಮೂರನೇ ಸ್ತರವನ್ನು ತಯಾರಿಸಲು ಇದೀಗ ಸಾಧ್ಯವಿದೆಯೆಂದು ಅಮೆರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಪ್ರಕಟಿಸಿದೆ.

ಅದೇ ಕೊಬಾಲ್ಟ್ ಬಾಂಬು!

ಹೈಡ್ರೋಜನ್ ಬಾಂಬನ್ನು ಇನ್ನೆನ್ನು ಭಯಾನಕ ಗೊಳಿಸುವ ಪ್ರಯತ್ನದ ಫಲವಾಗಿ ಈ ಹೊಸ ಹೆಸರಿನ ಬಾಂಬು ಜನ್ಮ ತಾಳಿದೆ. ಹೈಡ್ರೋಜನ್ ಬಾಂಬಿನ ಅಸ್ಫೋಟನೆ ಪ್ರಯೋಗಗಳು ನಡೆಯುತ್ತಿರುವಾಗ ಇದರ ಯೋಚನೆ ಬಂತು.

ಹೈಡ್ರೋಜನ್ ಬಾಂಬಿನ ಹೊರಮೈ ಉಕ್ಕಿನ ಪಗಡಿನಿಂದ ತಯಾರಾಗಿರುತ್ತದೆ. ಉಕ್ಕಿಗೆ ಬದಲಾಗಿ ಕೊಬಾಲ್ಟ್ (ನಿಕ್ಕಲಿನ ಮೂದರಿಯ) ಲೋಹವನ್ನು ಉಪಯೋಗಿಸುವುದರಿಂದ ಅಸ್ಫೋಟನೆ ಇನ್ನೆನ್ನು ಭೀಕರವಾಗಿ ಬಾಂಬಿನ ವಿನಾಶಕಾರಿ ಶಕ್ತಿ ಇನ್ನೆನ್ನು ಹೆಚ್ಚುತ್ತದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಕೊಬಾಲ್ಟ್ ಲೋಹದ ಕೇಕೇಟಿನಿಂದ ಆವೃತವಾಗಿರುವ ಹೈಡ್ರೋಜನ್ ಬಾಂಬಿಗೆ ಕೊಬಾಲ್ಟ್ ಬಾಂಬ್ ಎಂದು ಹೆಸರು.

ಅಸ್ಫೋಟನೆ ಸಮಯದಲ್ಲಿ ಕೊಬಾಲ್ಟ್ ಲೋಹವು ಕರಗಿ ಅವಿಯಾಗಿ ಅತ್ಯಂತ ಭಯಾವಹ ಹಾಗೂ ವಿನಾಶಕಾರಿ ರೇಡಿಯೋ ಆಕ್ಟಿವ್ ನೋಡಗಳ ರೂಪ ತಾಳುವುದು.

1ಟ್ಟ ತೂಕದ 400 ಕೋಬಾಲ್ಟ್ ಬಾಂಬುಗಳನ್ನು ಸುರಿದರೆ ಸಾಕು, ಇಡೀ ವಿಶ್ವವೇ ನಿರ್ನಾಮವಾಗಿ ಹೋಗುವುದು. ಎಂದು ವಿಜ್ಞಾನಿಗಳು ಅಂದಾಜು ಹಾಕಿದ್ದಾರೆ. ಈ ನಾನೂರು ಬಾಂಬುಗಳ ಅಸ್ಫೋಟನೆಯಿಂದ ಉತ್ಪತ್ತಿಯಾಗುವ ರೇಡಿಯೋ ಆಕ್ಟಿವಿಟಿ – ವಿನಾಶಕಾರಿ ಶಕ್ತಿ – ಇಡೀ ವಿಶ್ವವನ್ನು ನಾಶಮಾಡುವಷ್ಟು ಸಮರ್ಥವಾಗುತ್ತದೆ.

ಹೈಡ್ರೋಜನ್ ಬಾಂಬಿನ ತಯಾರಿಕೆ ವಿಧಾನದ ಗುಟ್ಟನ್ನು ಅರಿತಿರುವ ಯಾವ ರಾಷ್ಟ್ರವೇ ಆಗಲಿ, ಕೊಬಾಲ್ಟ್ ಬಾಂಬನ್ನು ತಯಾರಿಸಲು ಸಮರ್ಥವಿರುತ್ತದೆ, ಎಂದು ಹೇಳಲಾಗಿದೆ

ಒಂದು ಕೊಬಾಲ್ಟ್ ಬಾಂಬಿನ ಅಸ್ಫೋಟನೆಯಿಂದ ಉತ್ಪನ್ನವಾಗುವ ರೇಡಿಯೋ – ಆಕ್ಟಿವ್ ಮೋಡದ ವಿನಾಶಕಾರಿ ಶಕ್ತಿ, ರೇಡಿಯಂ ತಕ್ತಿಗಿಂತ 320 ಪ್ರಮಾಣದಷ್ಟು ಭಯಾನಕವಾಗಿರುತ್ತದೆ. ಸಾವಿರಾರು ಮೈಲಿಗಳಷ್ಟು ದೂರ ಅದು ತೇಲಿಕೊಂಡು ಹೋಗಿ ತನ್ನ ದಾರಿಯಲ್ಲಿ ಸಿಗುವ ಪ್ರತಿಯೊಂದು ಜೀವರಾಶಿಯನ್ನೂ ನಿರ್ನಾಮಗೊಳಿಸುತ್ತದೆ.

ಕ್ಯಾಲಿಫೋರ್ನಿಯಾದಿಂದ ಪಶ್ಚಿಮಕ್ಕೆ 1000 ಮೈಲಿಗಳಷ್ಟು ದೂರ ಫಾಸಲೆಯಲ್ಲಿ ಒಂದು ಕೊಬಾಲ್ಟ್ ಬಾಂಬನ್ನು ಅಸ್ಫೋಟಿಸಿದರೆ ಅದರಿಂದ ಉತ್ಪನ್ನವಾಗುವ ರೇಡಿಯೋ ಆಕ್ಟಿವ್ ಅಲೆ ಕ್ಯಾಲಿಫೋರ್ನಿಯಾಕ್ಕೆ ಹಾದು ಬಂದು ದಾರಿಯುದ್ದಕ್ಕೂ ಪ್ರತಿಯೊಂದು ಜೀವರಾಶಿಯನ್ನು ನಿರ್ನಾಮಗೊಳಿಸುವುದಲ್ಲದೆ, ಕ್ಯಾಲಿಫೋರ್ನಿಯಾವನ್ನೂ ತಲಪುತ್ತದೆ ಎಂದು ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರೊ. ಹ್ಯಾರಿಸನ್ ಬ್ರೌನ್‌ರವರು ಅಂದಾಜು ಹಾಕಿದ್ದಾರೆ.

ಪಾಶ್ಚಾತ್ಯ ರಾಷ್ಟ್ರಗಳು ಪ್ರೇಗಿನ ನೇರಕ್ಕೊಂದು ಬಾಂಬನ್ನು ಹಾಕುತ್ತಾರೆನ್ನೋಣ. ಆದರ ಪರಿಣಾಮವಾಗಿ ಸುಮಾರು 1500 ಮೈಲಿ ವಿಸ್ತಾರದ ಭೂಮಿಯೇ ನಿರ್ಜೀವವಾಗಿ ಹೋಗುವುದು. ಲೆನಿನ್‌ಗ್ರಾಡ್‌ನಿಂದ ಒಡೆಸ್ಸಾದವರೆಗೆ ಸರ್ವನಾಶವಾಗಿ ಹೋಗುವುದೆಂದು ಫ್ರೊ॥ಬ್ರೌನ್ ಅಂದಾಜು ಹಾಕುತ್ತಾರೆ. ಯೂರಲ್ ಪರ್ವತಗಳವರೆಗಿನ 3000 ಮೈಲಿಗಳಷ್ಟು ದೂರಕ್ಕೂ ವಿನಾಶಕಾರ್ಯ ನಡೆದು ಹೋಗುವುದೆನ್ನುತ್ತಾರೆ.

ಇತಿಹಾಸದಲ್ಲಿ ಇದರಷ್ಟು ವಿನಾಶಕಾರಿ ಶಕ್ತಿ ಬೇರೊಂದಿರಲಾರದು.

ಹೊಸಪೇಟೆಯ ಡಿಸ್ಟ್ರಿಕ್ಟ್ಸ್ ಮುನ್ಸಿಫರ ಕೋರ್ಟ್‌ನಲ್ಲಿ

O. P 20/'54

ಅಡಿಯವಾನಿ ವೆಂಕಟಸುಬ್ಬಮ್ಮ — ಅರ್ಜಿದಾರರು
—,,— ವೆಂಕಪ್ಪ ಮತ್ತು ಇತರರು — ರೆಸ್ಪಾಂಡೆಂಟ್ಸು

ವಾರಸು ಪತ್ರಕ್ಕಾಗಿ ಅರ್ಜಿದಾರರು ಅರ್ಜಿ ಇಟ್ಟದ್ದು ಅಕ್ಷೇಪಣೆಗಳನ್ನು ಕೇಳಲು 16-7-'54 ಕ್ಕೆ ವಾಯ್ದೆ ಬಿದ್ದಿದೆ. ಯಾರಿಗಾದರೂ ಅಕ್ಷೇಪಣೆಗಳಿದ್ದಲ್ಲಿ ಅದಿನ ಕೋರ್ಟಿಗೆ ಹಾಜರಾಗಿ ತಿಳಿಸಬೇಕು. ಇಲ್ಲವಾದರೆ ಅರ್ಜಿಯು ಏಕಪಕ್ಷ ವಿಚಾರಣೆಯು ಮುನ್ನಡೆಯುವುದು.

ಎಂ. ರಂಗನಾಥಾಚಾರ್.
ಅರ್ಜಿದಾರರ ವಕೀಲರು

★ತುಂಗಭದ್ರಾ ಅಣೆಕಟ್ಟು★

ಬಳ್ಳಾರಿ ಜಿಲ್ಲೆಯ ಸೌಭಾಗ್ಯದ ನಿಧಿಯೆನಿಸಿದ ತುಂಗಬದ್ರಾ ಅಣೆಕಟ್ಟು ಪಾವನ ತುಂಗೆ, ಮನೋಹರ ಭದ್ರೆ ಇವು ಒಂದಾಗಿ ತುಂಗಭದ್ರೆಯಾಗಿ ಹರಿಯುತ್ತವೆ. ಹೊಸಪೇಟೆಗೆ ಮೂರು ಮೈಲಿ ದೂರದಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಈ ಅಣೆಕಟ್ಟು ಒಂದೂವರೆ ಮೈಲಿ ಉದ್ದವೂ 160 ಅಡಿ ಎತ್ತರವೂ ಇದ್ದು ತುಂಗಭದ್ರಾ ನದಿಯ ಪ್ರವಾಹದ ನೀರನ್ನು ತಡೆ ಹಿಡಿದು ನಿಲ್ಲಿಸುತ್ತದೆ.

ಈ ಅಣೆಕಟ್ಟಿನಲ್ಲಿ 11,31,260 ಘನ ಅಡಿಗಳಷ್ಟು ನೀರು ನಿಲ್ಲುವುದು ಮೈಸೂರು ಹೈದರಾಬಾದ್ ಮತ್ತು ಆಂಧ್ರಗಳಲ್ಲಿ ಒಟ್ಟು 20 ಲಕ್ಷ ಎಕರೆ ಗಳಷ್ಟು ಜಮೀನು ಹೆಚ್ಚಾಗಿ ಸಾಗುವಳಿಗೆ ಒಳಪಡುವುದು. ಇದರಿಂದ 140,000 ಟನ್ನುಗಳಷ್ಟು ಆಹಾರ ಧಾನ್ಯಗಳೂ, 80,000 ಟನ್ನುಗಳಷ್ಟು ನಾನಿಧ್ಯ ಬೆಳೆಗಳೂ ಹೆಚ್ಚು ಉತ್ಪನ್ನವಾಗುವುವು. ಸಾಗುವಳಿಯ ಜೊತೆಗೆ ಈ ನೀರು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಅಭಿವೃದ್ಧಿಪಡಿಸುವುದಕ್ಕೂ ಸಹಾಯಕವಾಗುತ್ತದೆ. ಸುಮಾರು 18,000 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯ ಕೊನೆಯಲ್ಲಿ ಉತ್ಪಾದನೆಗಾಗಿ ದೊರೆಯುವುದು.

ತುಂಗಭದ್ರಾ ಪ್ರಾಜೆಕ್ಟ್

ಈ ಪ್ರಾಜೆಕ್ಟಿನಲ್ಲಿ ಮುಖ್ಯವಾಗಿ 1) ಕಲ್ಲಿನಿಂದ ಕಟ್ಟಲ್ಪಟ್ಟ ಮುಖ್ಯ ಅಣೆಕಟ್ಟು ಇದೆ. ಅದರ ಎಡಭಾಗದಲ್ಲಿ ಜಲಾಶಯವನ್ನು ರೂಪಿಸಿರುವ ಎರಡು ಸಣ್ಣ ಅಣೆಕಟ್ಟುಗಳಿವೆ. 2) ನದಿಯ ಇಕ್ಕೆಲಗಳಲ್ಲಿಯೂ ಎರಡು ಕಾಲುವೆಗಳಿವೆ. 3) ಒಂದು ಎತ್ತರದ ಕಾಲುವೆ. 4) ಕಾಲುವೆಗೆ ನೀರು ದುಮುಕುವ ಸ್ಥಳಗಳಲ್ಲಿ ವಿದ್ಯುದುತ್ಪಾದನೆ ಯಂತ್ರಗಳು—ಈ ನಾಲ್ಕು ವಿಭಾಗಗಳಿವೆ. ಮೊದಲನೆಯ ಎರಡು ಕೆಲಸಗಳ ನಿರ್ಮಾಣಕ್ಕಾಗಿ ಸುಮಾರು 50 ಕೋಟಿ ರೂ.ಗಳ ಖರ್ಚು ತಗಲುವದೆಂದು ಫಿರೀಕ್ಷಿಸಲಾಗಿದೆ.

ಈ ಅಣೆಕಟ್ಟನ್ನು ಪೂರ್ಣವಾಗಿ ಕಟ್ಟಿ ಮುಗಿಸಲಾಗಿದೆ. ಪ್ರಾಜೆಕ್ಟಿನ ಕಾರ್ಯಾನ್ವಯದಲ್ಲಿ ತಯಾರಾಗುತ್ತಿರುವ ಕೆಲವು ಉಕ್ಕಿನ 'ಷಲರುಗಳನ್ನು ಮಾತ್ರ ಹಾಕಬೇಕಾಗಿದೆ. ಅಣೆಕಟ್ಟಿನ ಮೇಲೆ ಒಂದು ಕೊನೆಯಿಂದ ಕೊನೆಯವರೆಗೆ ಮೋಟಾರು ರಸ್ತೆಯ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ನೀರಾವರಿ ಕಾಲುವೆಗಳ ತುಟ್ಟ ತುದಿಗಳನ್ನು ಆಗೆಯುವದರಲ್ಲಿ ಕೆಲವು ಕಾರ್ಮಿಕರು ನಿರತರಾಗಿರುವರು. ಎರಡು ವಿದ್ಯುದುತ್ಪತ್ತಿ ಯಂತ್ರ ಗೃಹಗಳಿಗಾಗಿ ತಳಪಾಯಗಳನ್ನು ತೋಡಲಾಗಿದೆ. ಎತ್ತರದ ಕಾಲುವೆಯ ಕಾರ್ಯ ಮುಕ್ತಾಯದ ಘಟ್ಟದಲ್ಲಿದೆ.

ಅಣೆಕಟ್ಟಿನ ವಿವರಗಳು

ಮುಖ್ಯ ಅಣೆಕಟ್ಟು 6,100 ಅಡಿ ಉದ್ದವಾಗಿದೆ. ಹತ್ತಿರದಲ್ಲಿರುವ ಗಣಿಗಳಲ್ಲಿ ದೊರೆಯುವ ಕಲಿನಿಂದ ಇದನ್ನು ಕಟ್ಟಲಾಗಿದೆ. ಅದರ ಮಧ್ಯದಲ್ಲಿ 2,300 ಅಡಿಗಳ ಅಗಲವೂ 100 ಅಡಿಗಳ ಉದ್ದವೂ ಇರುವ ಇಳಿಜಾರಾದ ಕೋಡಿಯೂ ಇದೆ. ಜಲಾಶಯದಲ್ಲಿ ನೀರು ಬಹಳ ಹೆಚ್ಚಿದಾಗ ಅದನ್ನು ಹತೋಟಿಗೆ ತರಲು ಇದು ಅನುಕೂಲವಾಗಿದೆ.

ಮುಖ್ಯ ಅಣೆಕಟ್ಟಿನ ಎಡಗಡೆಯಲ್ಲಿ ಎರಡು ತಡೆಗಳಿವೆ. ಅದರಲ್ಲಿ ಒಂದು ಮಣ್ಣಿನದು. ಇನ್ನೊಂದು ಮಿಶ್ರಣದ್ದು. ತುಂಗಭದ್ರಾ ನದಿಯ ನೀರು ತನ್ನ ಎಲ್ಲೆಯನ್ನು ದಾಟಿ ಆಚೆಗೆ ಹರಿದು ಹೋಗದಂತೆ ತಡೆಯಲು ಇವುಗಳನ್ನು ನಿರ್ಮಿಸಲಾಗಿದೆ.

ಈ ಜಲಾಶಯವು 133 ಚದುರ ಮೈಲಿಗಳಷ್ಟು ವಿಸ್ತಾರವಳ್ಳದ್ದಾಗಿದೆ. ಇಲ್ಲಿಂದ ನೀರನ್ನು ನಾಲೆಗಳ ಮೂಲಕ ಬೆಂಗಾಡಾದ ರಾಯಲಸೀಮೆಗೂ ಮುಂಗಾರು ಮಳೆಯ ನಂತರ ನೀರಿನ ಅಭಾವವನ್ನು ಹೊಂದುವ ಜಮೀನುಗಳಿಗೂ ಹರಿಸಬಹುದು.

ಈ ಜಲಾಶಯ ನಿರ್ಮಾಣಕ್ಕಾಗಿ ಹೈದರಾಬಾದ್, ಮುಂಬೈ ಮತ್ತು ಮೈಸೂರು ಸಂಸ್ಥಾನಗಳಿಗೆ ಸೇರಿದ ಸುಮಾರು 65 ಹಳ್ಳಿಗಳನ್ನು ಖಾಲಿ ಮಾಡಿಸಲಾಯಿತು ಅವು ಮುಳುಗಡೆಯಾದವು. ಈ ಹಳ್ಳಿಗಳಿಂದ ಸ್ಥಾನಪಲ್ಲಟರಾದವರಿಗೆ ಬೇರೆ ಪ್ರದೇಶಗಳಲ್ಲಿ ಜಮೀನುಗಳನ್ನು ಕೊಟ್ಟು ಪುನರ್ವಸತಿ ಏರ್ಪಡಿಸಿಕೊಡಲಾಗಿದೆ. ಸೂಕ್ತ ಪರಿಹಾರವನ್ನು ಕೊಡುವುದರ ಜೊತೆಗೆ ಅವರಿಗೆ ಗೃಹ ವಸತಿಗಾಗಿ ಸ್ಥಳಗಳನ್ನೂ ಅವರ ಸಂಸಾರಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವುದಕ್ಕೆ ಸೌಕರ್ಯಗಳನ್ನೂ ಏರ್ಪಡಿಸಲಾಯಿತು. ಇದಕ್ಕೆಲ್ಲ ಒಟ್ಟು ಖರ್ಚು ಕೋಟಿ ರೂ. ಗಳ ವೆಚ್ಚವಾಗಿದೆ.

ನಾಲೆಗಳು.

ನದಿಯ ಎಡಕ್ಕೊಂದು ಬಲಕ್ಕೊಂದು ಎಂದು ಎರಡು ಕಾಲುವೆಗಳು ಅಣೆಕಟ್ಟಿನಿಂದ ನೀರನ್ನು ಸಾಗಿಸುವುವು. ಬಲಭಾಗದ ಕಾಲುವೆಯು ಮುಖ್ಯವಾದುದು. ಇದರ ಉದ್ದ 225 ಮೈಲಿಗಳು. ಇದರ ಮುಕ್ಕಾಲು ಭಾಗ ಕೆಲಸವು ಈಗಾಗಲೇ ಮುಗಿದಿದೆ. ಎಡ ಭಾಗದಲ್ಲಿರುವ 127 ಮೈಲಿ ಉದ್ದದ ಕಾಲುವೆಯ ಕೆಲಸವು ಅರ್ಧಕ್ಕಿಂತಲೂ ಹೆಚ್ಚು ಭಾಗದಷ್ಟು ಮುಗಿದಿದೆ. ಅನೇಕ ಕಡೆಗಳಲ್ಲಿ ಈ ಕಾಲುವೆಗಳಲ್ಲಿ ಹಲವು ಮೇಲು ಕಾಲುವೆಗಳು. ಇವುಗಳಲ್ಲಿ ಹಗಂ ನದಿಯ ಅಡ್ಡಲಾಗಿರುವ ಮೇಲು ಕಾಲುವೆಯು ಅತ್ಯಂತ ದೊಡ್ಡದಾಗಿವೆ.

ಸೆಕೆಂಡಿಗೆ 10,000 ಘನಅಡಿಗಳಷ್ಟು ನೀರನ್ನು ಸಾಗಿಸಬಲ್ಲ ಈ ಕಾಲುವೆಗಳು ಸಾವಿರಾರು ಉಪ ಕಾಲುವೆಗಳಿಗೆ ನೀರನ್ನೊದಗಿಸುವುವು.

ಈ ಉಪಕಾಲುವೆಗಳು ಆರಥ್ಯ, ಮೈಸೂರು, ಹೈದರಾಬಾದ್ ಸಂಸ್ಥಾನಗಳಲ್ಲಿ ಆತಿದೂರದವರೆಗೂ ಪಸರಿಸಿವೆ. ಅವುಗಳ ಮೂಲಕ ನೀರನ್ನು ಸಾಗಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬಹುದಾಗಿದೆ.

ಎತ್ತರದ ಕಾಲುವೆ

ಜಲಾಶಯದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಲು ಈ ಕಾಲುವೆಗಳು ಮಾತ್ರವೇ ಸಾಕಾಗುವುದಿಲ್ಲ ಆದುದರಿಂದ 170 ಮೈಲಿಗಳ ಉದ್ದದ ಎತ್ತರದ ಕಾಲುವೆಯನ್ನು ತೋಡುವುದಕ್ಕಾಗಿ

ಳನೇ ಪುಟನೋಡಿ

ಚೌ-ಎನ್-ಲಾಯರ ಬೇಟಿ

ಚಾಯನಾದ ಜನತಾಸರಕಾರದ ಪ್ರಧಾನಾಮಾತ್ಯರೂ,ವಿದೇಶಮಂತ್ರಿಗಳೂಆಗಿರುವ ಶ್ರೀ ಚೌ. ಎನ್ ಲಾಯ್ ಅವರು ಇದೇ ಈಗ ನಮ್ಮ ದೇಶಕ್ಕೆ ಆಗಮಿಸಿ ರಾಜಧಾನಿಯಲ್ಲಿ ತಂಗಿ ಪ್ರಧಾನಿ ನೆಹರೂರನರೊಡನೆ ಪ್ರಪಂಚದ ಸಮಸ್ಯೆಗಳ ಕುರಿತು ವಿಚಾರ ವಿನಿಮಯಮಾಡಿ ಸ್ವದೇಶಕ್ಕೆ ಮರಳಿರವರು. ಜನಸಂಖ್ಯೆಯಲ್ಲಿ, ಪುರಾತನಸಂಸ್ಕೃತಿಪುತ್ತು ನಾಗರಿಕತೆಯ ನೆಲೆಯಲ್ಲಿ, ಚೀನಾ ಮತ್ತು ಭರತವರ್ಷಗಳು ಪ್ರಪಂಚದಲ್ಲಿಯೆ ಅಗ್ರಸ್ಥಾನವನ್ನು ಪಡೆಯಬಲ್ಲ ಮಹಾರಾಷ್ಟ್ರಗಳಾಗಿವೆ.110 ಕೊಟಿ ಜನಸಮುದಾಯವು ಈ ಎರಡು ರಾಷ್ಟ್ರಗಳಲ್ಲಿ ಬಾಳುತ್ತಿದೆ. ಭರತವರ್ಷದಿಂದ ಹರಿದುಬಂದ ಬಾತ್ಧಧರ್ಮದ ಪ್ರಭಾವವೂ, ಕಾನ್‌ಪ್ಯೂಷಿಯಸ್ಸನಂಥ ಮೇಧಾವಂತ ತತ್ತ್ವದರ್ಶಿಗಳ ಉಪದೇಶ ಸಾರವೂ ಚೀನದ ಜನತೆಯ ಅಂತರಂಗವನ್ನು ತಿದ್ದಿ ಬೆಳಗಿಸಿವೆ. ಭರತವರ್ಷವಂತೂ ಸ್ವಾತಿಕದಲ್ಲಿಯೆಹೆಸರುಪಡೆದಿದೆ. ಇಂಥ ಸಂಸ್ಕೃತ ರಾಷ್ಟ್ರಗಳ ಮಹಾನಾಯಕರಿಬ್ಬರು ಕಲೆತು ಒಂದು ಮನಸ್ಸು—ಒಂದು ಹೆಜ್ಜೆ-ಗಳಿಂದ ಸಾಗಿದರೆ ಲೋಕಕ್ಕೆ ಕ್ಷೇಮವೆಂಬುದರಲ್ಲಿ ಅನುಮಾನವಿಲ್ಲ.

ಒಂದು ಕಡೆ ದುಡ್ಡಿನ ಮದದ ಜೊತೆಗೆ ಅಜ್ಞಾನ ಮದವೂ ಸೇರಿ ಕೊಬ್ಬಿರುವ ಅಮೇರಿಕೆಯು ಲೋಕದ ಮೇಲೆಲ್ಲ ತನ್ನ ವರ್ಚಸ್ಸನ್ನು ಬೀರುವ ದುರಾಶೆಯಿಂದಾಯಕ ನಡೆಯಿಸುತ್ತಲಿದೆ.ಮನಸಿದ್ದೂ ಇಲ್ಲದೆಯಾ ಇಂಗ್ಲೆಂಡು, ಫ್ರಾನ್ಸು ಗಳಂಥ ದೇಶಗಳೂ ಅಮೇರಿಕೆಯ ಚಾಯಾನುವರ್ತಿಯಾಗುವುದರಲ್ಲಿಯೆ ತಮ್ಮಪುರುಷಾರ್ಥವಿರುವುದೆಂದು ಗ್ರಹಿಸಿದಂತಿವೆ. ಇತ್ತ ರಷಿಯಾದ ಕಮ್ಯುನಿಷ್ಟ ಪಕ್ಷಪಾತಿಗಳೂ-ಒಂದುಬಗೆಯ ಸರ್ವಾಧಿಕಾರೀ ರಾಜ್ಯಸ್ಥಾಪನೆಯ ಚರಮೋದ್ದೇಶದಿಂದ ತಾತ್ಕಾಲಿಕೆಯ ಸಂಘಟನೆಯನ್ನು ನಡೆಯಿಸುತ್ತಲಿದ್ದಾರೆ.ಕೆಲವು ರಾಷ್ಟ್ರಗಳು ಈ ಗುಂಪಿಗೂ ಸೇರಿವೆ. ಹೀಗೆ 2 ಭೀಕರ ಶಕ್ತಿಗಳ ಸ್ಪರ್ಧೆಯಲ್ಲಿ ಶಾಂತಿಯನ್ನು ಬಯಸುವ ರಾಷ್ಟ್ರಗಳ ಸ್ಥಿತಿ ಅಯೋಮಯಕ್ಕೀಡಾಗಿವೆ. ಪಾಕಿಸ್ತಾನದೊಡನೆ ಸೈನಿಕ ಒಪ್ಪಂದ ಮಾಡಿಕೊಂಡು ಅಮೇರಿಕೆ ಭಾರತದ ಶಾಂತಿನೀತಿಯನ್ನು ಕೆಣಕುತ್ತಿರುವಂತೆಯೆ ಇಂಡೋಚೀನ, ಕೊರಿಯ ಗಳಲ್ಲಿ ಸಾಮ್ರಾಜ್ಯಶಾಹಿಯ ಮುಂಗಳು ಲೋಕಶಾಂತಿಯನ್ನು ಕನಸನ್ನಾಗಮಾಡುತ್ತಲಿವೆ. ಇಂಡೋಚೈನಾವಂತೂ ಶುದ್ಧ ಏಶಿಯಾ ರಾಷ್ಟ್ರ. ಅಲ್ಲಿಯ ಸಮಸ್ಯೆಯ ಪರಿಹಾರಕ್ಕೆ ಫ್ರಾನ್ಸ್— ಅಮೇರಿಕೆಗಳು ಕೈಹಾಕಬಂದುದೇ ಒಂದು ಘಾತಕ ವಿಚಾರ. ಅವು ಅಲ್ಲಿಂದ ಕಾಲ್ತೆಗೆದರೆ ಒಡನೆಯೆ ಶಾಂತಿಯುಂಟಾಗಬಹುದು. ಹೀಗೆ ಎಲ್ಲ ಕಡೆಗೂ ಅಶಾಂತಿಯ ವಾತಾವರಣ ವೇರ್ಪಟ್ಟಿರುವಾಗ ಭಾರತವುತ್ತು ಚೀನಾ ಗಳು ತಾವು ನೆರೆಯಲ್ಲಿರುವುದರಿಂದಲೂ, ಏಶಿಯಾದಲ್ಲಿ ಶಾಂತಿಸ್ಥಾಪನೆಗೆ ತಕ್ಕ ಅಧಿಕಾರಿಗಳಾಗಿರುವುದರಿಂದಲೂ ಪರಸ್ಪರ ವಾಗಿ ಕಲೆತು ಉಭಯ ದೇಶಗಳ ನಿಲುಮೆಗಳನ್ನು ಅರ್ಥಮಾಡಿಕೊಂಡು, ಸ್ನೇಹದಿಂದಲೂ, ಐಕ್ಯದಿಂದಲೂ ಇರುವುದು ಅವಶ್ಯವಾಗಿದೆ. ಚೀನಾವ ಸ್ವಾತಂತ್ರ್ಯ ಮತ್ತು ಸಾರ್ವಭೌಮಾಧಿಕಾರದ ಕಾವಲಾಗಿ ಭಾರತವೂ, ಭಾರತದ ಸ್ವಾತಂತ್ರ್ಯ ಮತ್ತು ಸಾರ್ವಭೌಮಾಧಿಕಾರದ ಕಾವಲಾಗಿ ಚೀನವೂ ಸಹವರ್ತಿಸಿದರೆ ಚೀನಕ್ಕೂ, ಭಾರತಕ್ಕೂ ಕೂಡಿಯೆ ಹಿತವುಂಟು ಭಾರತಮತ್ತು ಚೀನಗಳನ್ನು ಕೆಣಕುವ ದುಸ್ಸಾಹಸಿಗಳೂ ಸ್ವಲ್ಪ ವಿವೇಕಿಗಳಾಗಿ ನಡೆಕೊಂಡಾರು. ಕಾಶ್ಮೀರ, ಪಾಂಡಿಚೇರಿ, ಗೋವೆ ಮೊದಲಾದ ಕುಟಿಲ ಸಮಸ್ಯೆಗಳ ಕಂಟಿಯಿರುವ ಈ ದುರ್ದಿನಗಳಲ್ಲಿ, ಇಂಥ ಒಂದು ತೀರ್ಮಾನಕ್ಕೆ ಮಹತ್ವವಿಲ್ಲದಿಲ್ಲ. ಚೀನವೂ ಭಾರತವೂ ಸಾಂಸ್ಕೃತಿಕವಾಗಿ ಸಂಬಂಧವುಳ್ಳ ರಾಷ್ಟ್ರಗಳಾಗಿರುವಂತೆಯೆ ಎರಡೂಜನತಾರಾಜ್ಯಗಳಾಗಿ ಶಾಂತಿಪಾಲನೆಯ ದೀಕ್ಷೆ ವಹಿಸಿರುತ್ತವೆ. ಇಲ್ಲಿಯ ನೂರುಕೋಟಿ ಮಾನವಶಕ್ತಿಯಅಲೋತ್ತರಗಳನ್ನಾಗಲೀ ಅಭಿಪ್ರಾಯಗಳನ್ನಾಗಲೀ ಪ್ರಪಂಚದ ಯಾವ ದೇಶವೂ ಅಲಕ್ಷಿಸಲಾರದು!

ಅದೂ ಅಲ್ಲದೆ ಈಗಾಗಲೇ ಅಮೇರಿಕೆಯಲ್ಲಿ ಶ್ರೀಗಳಾದ ಚರ್ಚಿಲ್, ಈಡನ್, ಏಕ್, ಡಲ್ಲೆಸ್, ಮುಂತಾದ ಮುಸ್ಸದ್ದಿಗಳು ಸಮಾವೇಶಗೊಂಡು ಸಮಾಲೋಚನೆ ನಡೆಸಿನ್ದಾರೆ. ಎಚ್ಚತ್ತ ಏತಿಯಾದಲ್ಲಿ ಯಾವರೀತಿಯಲ್ಲಿ ತಮ್ಮ ಸೇಳೆ ಬೀಯಿಸಬಹುದೆಂಬುದರ ಕುರಿತು, ಕೊರಿಯಾ ಇಂಡೋಚೀನಾಗಳಲ್ಲಿ ತಮ್ಮ ಇಂಗಿತದಂತೆ ಕಾರ್ಯಕರವಡೆಸುವ ರೀತಿನೀತಿಗಳ ದರಿತು, ಸಮರವೇ ಒದಗಿದರೆ ಶತ್ರು ಸೈನ್ಯಾತಪನ್ನು ಎಲ್ಲಿ ಎಂತು ಸಾಧಿಸಬಹುದೆಂಬುದರ ಕುರಿತು ಅವರು ಆಲೋಚನೆಮಾಡಿ– ತೀರ್ಮಾನಿಸಿರಬಹುದೆಂದು ಊಹಿಸುವುದು ಅಕಾಲಿಕವಾಗಿಲಾರದು! ಇಂಥ ವಿಕ್ಷಿಪ್ತ ಪರಿಸ್ಥಿತಿಯಲ್ಲಿ ಯಾವ ದೇಶವೂ ತಟಸ್ಥವೆಂದು ದೂರ ಕುಳಿತಿರಲು ಬರಲಾರದು. ಎಲ್ಲರೂ ತಮ್ಮ ಹೊಣೆಯನ್ನೂ,ಜಾಗ್ರತೆಯನ್ನೂ ನೋಡಿಕೊಳ್ಳಬೇಕಾಗುತ್ತದೆ. ಆದುದರಿಂದ ಚಾಯನಾದ ಪ್ರಧಾನ ಮಂತ್ರಿಗಳೂ, ಭಾರತದ ಪ್ರಧಾನಮಂತ್ರಿಗಳೂ ಸಮಾಲೋಚಿಸಿಕೊಂಡ ಸಂದರ್ಭವು ಏಶಿಯಾಖಂಡವೂ ಸಮಸ್ತ ಭಾರತೀಯರಿಗೆ ಆನಂದ ಮತ್ತು ಧೈರ್ಯಗಳನ್ನು ಕೊಡುವಂಥದೂ ಆಗಿರುತ್ತದೆ.

ರಷ್ಯಾದಲ್ಲಿ ಬೆಟ್ಟ ಗುಡ್ಡಗಳನ್ನು ಸರಿಪಡಿಸಲು ಆಟಂಬಾಂಬ್

ಬೆಟ್ಟ ಗುಡ್ಡಗಳನ್ನು ಸಮಪಡಿಸಲು ಮತ್ತು ನೀರಿನವರಿ ಮಾರ್ಗಗಳನ್ನು ತೋಡಲು ಅಟಾಮಿಕ್ ರಸಾಸ್ತ್ರಗಳನ್ನು ರಷ್ಯಾವು ಉಗಾಗಲೇ ಉಪಯೋಗಿಸುತ್ತಿದೆಯೆಂದು ನವ ಚೀನಾ ಕಮ್ಯೂನಿಸ್ಟ್ ಪಾರ್ಟಿ ಏಜೆನ್ಸಿ ತಿಳಿಸಿದೆ

ರಷ್ಯಾವು 1949ರಲ್ಲಿ ಪ್ರಪ್ರಥಮವಾಗಿ ಒಟಂ ಬಾಂಬನ್ನು ಆಸ್ಫೋಟಿಸಿ ಟರ್ಕಿಸ್ತಾನದ ಮರುಭೂಮಿಯಲ್ಲಿ ನೂತನ ಕೈಗಾರಿಕೆಗಳ ಸ್ಥಾಪನೆಗೆ ಜಾಗವನ್ನು ಸರಿಪಡಿಸಿತು ಎಂದು ಬುಡಾಪೆಸ್ಟ್ ರೇಡಿಯೋ ಹೇಳಿದೆ.

ದೆಹಲಿಯಲ್ಲಿ ಅಟಾಮಿಕ್ ಗಡಿಯಾರ

ಅಮೋನಿಯಾ ಮತ್ತಿತರ ಅನಿಲಗಳ ವೊಲಿಕ್ಯುಲರ್ ರೆಸೊನೆನ್ಸ್ ಸ್ಪೆಕ್ಟ್ರಾ ಸೂತ್ರದ ಮೇಲೆ ಕೆಲಸ ಮಾಡುವ ಅಟಾಮಿಕ್ ಗಡಿಯಾರವೊಂದನ್ನು ದೆಹಲಿಯ ರಾಷ್ಟ್ರೀಯ ಫಿಸಿಕಲ್ ಲ್ಯಾಬರೇಟರಿಯಲ್ಲಿ ಸ್ಥಾಪಿಸಲಾಗುತ್ತಿದೆ,

೨ನೇ ಪೇಜಿನ ತರುವಾಯ

ಸಲಹೆಯೊಂದು ಬಂದಿದೆ. ಇದರಿಂದ ಮೂರು ಲಕ್ಷ ಎಕರೆಗಳಿಗೆ ನಿಶ್ಚಿತವಾಗಿ ಕೊರತೆಯಪ್ರದೇಶಗಳನ್ನಿಸಿದ ಆನಂತಪುರ ಜಾಗೂ ರಾಯದುರ್ಗಗಳಿಗೆ ನೀರಾವರಿ ಸೌಕರ್ಯ ಹೊರೆಯಬಹುದು.

ವಿದ್ಯುಚ್ಛಕ್ತಿ ಅಭಿವೃದ್ಧಿ

ತುಂಗಭದ್ರ ತಪ್ಪಲು ಮತ್ತು ಸುತ್ತ ಮುತ್ತಿನ ಪ್ರದೇಶಗಳಿಗೆ ಅತ್ಯಗತ್ಯವಾದ ವಿದ್ಯುಚ್ಛಕ್ತಿಯನ್ನು ಒದಗಿಸಲು ಅನೇಕ ವಿದ್ಯುದುತ್ಪತ್ತಿ ಯಂತ್ರಶಾಲೆಗಳನ್ನು ನಿರ್ಮಿಸುವ ಯೋಜನೆಯಿದೆ. ಅಣೆಕಟ್ಟಿನ ಬಲಭಾಗಕ್ಕೆ ಒಂದು ವಿದ್ಯುದುತ್ಪತ್ತಿ ಯಂತ್ರಶಾಲೆ ಸ್ಥಾಪಿಸಲ್ಪಡವುದು ನೀರಾವರಿ ಕಾಲುವೆಯ ನೀರು 15 ಮೈಲಿದೂರದಾಚೆ ಬೀಳುವ ಜಾಗದಲ್ಲಿ ಮತ್ತೊಂದು ಯಂತ್ರಶಾಲೆಯನ್ನು ನಿರ್ಮಿಸಲಾಗುವುದು. ಈ ಎರಡು ವಿದ್ಯುತ್ ಕೇಂದ್ರಗಳಿಂದಲೂ ಮೊದಲನೆಯ 5 ವರ್ಷಗಳಲ್ಲಿ ಒಟ್ಟು 30,000 ಕಿಲೊವಾಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು. ಎರಡನೆಯ ಐದು ವರ್ಷಗಳಲ್ಲಿ 45,000 ಕಿಲೋವ್ಯಾಟುಗಳನ್ನು ಆ ಮುಂದೆ 60,000 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದು.

ಎರಡನೆಯ ಪಡವಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಾಗುವುದಲ್ಲದೆ ನೀರಾವರಿ ಕಾಲುವೆಗಳಲ್ಲಿಯೂ ನಾಲ್ಕು ಕಡೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಾಗುವುದು. ಇವೆಲ್ಲವುಗಳಿಂದ ಒಟ್ಟು 1,30,800 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು. ಈ ರೀತಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿನ ಮನೆಗಳನ್ನು ಬೆಳಗಿಸುವುದಕ್ಕೂ ಗೃಹ ಕೈಗಾರಿಕೆಗಳ ಚಾಲನೆಗೂ ಬೇಸಾಯಕ್ಕಾಗಿ ಬಾವಿಗಳಿಂದ ನೀರನ್ನೆತ್ತುವ ಪಂಪುಗಳ ಚಾಲನೆಗೂ ಉಪಯೋಗಿಸಲಾಗುವುದು.

ಶಕ್ತಿ ಕೈಗಾರಿಕೆ ಮತ್ತು ಸೀಮೆ ಗೊಬ್ಬರದ ತಯಾರಿಕೆಗಳಂತಹ ಕೈಗಾರಿಕೆಗಳನ್ನು ಇಲ್ಲಿ ಆರಂಭಿಸುವುದಕ್ಕೆ ಸಾಧ್ಯತೆಗಳೂ ಇವೆ.

ಈ ಶತಮಾನದ ಆರಂಭದಲ್ಲಿ ಹೊಳೆದ ಯೋಜನೆಯು ಈಗ ನಿರ್ದಿಷ್ಟನಾಮ ರೂಪು ತಾಳಿದೆ. ಈ ಅಣೆಕಟ್ಟಿಗೆ ಕೇವಲ ಎಂಟು ಮೈಲಿ ದೂರದಲ್ಲಿರುವ ಹಂಪೆಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ವೈಭವದಿಂದ ಮೆರೆದ ವಿಜಯ ನಗರ ಸಾಮ್ರಾಜ್ಯದ ಕನಸನ್ನು ಮತ್ತೊಮ್ಮೆ ಕಾಣುತ್ತಿರುವ ಗ್ರಾಮ ನಿವಾಸಿಗಳ ಪುಹದಾಶಯ ಈ ಅಣೆಕಟ್ಟಿನ ನಿರ್ಮಾಣದೊಂದಿಗೆ ಬೆಳೆಯುತ್ತಿದೆ.

ಬಳ್ಳಾರಿ ಜಿಲ್ಲಾ ಮುನಸಿಫ್ ಕೋರ್ಟ್‌ನಲ್ಲಿ

O. S. 21/54.
OP 91/54.

ಆರಳಿಬಂಡಿ ದೊಡ್ಡ ಬಸಿರೆಡ್ಡಿ ತಂದೆ ಹನುಮರೆಡ್ಡಿ, 45 ವಯಸ್ಸು, ಜಿಂಗಾಯತು, ಸಾ|| ಜಾಲಿಹಾಳು ಬಳ್ಳಾರಿ ತಾ|| | ವಾದಿ

Vs.

1) ಪೊಪಕೋಟ ಈಶ್ವರಪ್ಪ ವಯಸ್ಸು 24
2) —,,— ವೀರಭದ್ರಪ್ಪ —,,— 16 | ಪ್ರತಿವಾದಿ
3) —,,— ರಾಜಶೇಖರಪ್ಪ —,,— 14

ಗಾರ್ಡಿಯನ್ ಬಿ. ಈಶ್ವರಪ್ಪ. (1ನೇ ಪ್ರತಿವಾದಿ) ಲಿಂಗಾಯಿತು, ಜಿರಾಯಿತು, ಸಾ|| ಜಿಂತಕುಂಟೆ ಆಲೂರು ತಾ. ಕರ್ನೂಲ್ ಜಿಲ್ಲಾ.

ಮೇಲಿನ ನಂಬರಿನ ವಾದಿ, ಪ್ರತಿವಾದಿಗಳ ಮೇಲೆ ಪ್ರಾಮಿಸರಿ ನೋಟಿನ ಬಾಕಿ ಬಾಬತ್ತುಗಾಗಿ ರೂ|| 1747-8-0 ಬರನೂಡಿಕೊಳ್ಳಲು ದಾವ ಹಾಕಲು ಮೂಹರುತ್ತಾನೆ ಸದರಿ ನಂಬರಿನ ವಾಯಿದಾ ತಾ|| 27-7-54 ಕ್ಕೆ ಯಿರುತ್ತದೆ. ವಾಯಿದಾಕ್ಕೆ ನೀವೆ ಆಗಲಿ, ನಿಮ್ಮ ಪರ ವಕೀಲ ದ್ವಾರವಾಗಲಿ ಹಾಜರ್ ಆಗಿ ನಿಮ್ಮ ತಕರಾರ ಮೇಲ್‌ಕಾಣಿಸಿದ ಯಾವದಕ್ಕೆ ಕೋರ್ಟಿಗೆ ಹಾಜರು ನಡಿಸಬೇಕು. ಇಲ್ಲವಾದಲ್ಲಿ ನಿಮ್ಮ ಮೇಲೆ ಎಕ್ಸಪಾರ್ಟೆ ಯಾಗಿ ತೀರ್ಮಾನಿಸಲಾಗುವುದು. ಹೀಗೆಂದು ತಿಳಿಯಪಡಿಸುತ್ತದೆ.

ಬಳ್ಳಾರಿ. N. ವೆಂಕಟ್ಟಿಂಜಯ್ಯ ಶಾಸ್ತ್ರಿ
1)-8-7-54. ವಾದಿ ವಕೀಲರು.

ಬಳ್ಳಾರಿ 'ಪ್ರಭಾತ್, ದಲ್ಲಿ 'ನೋಡಿರಿ; ಆನಂದಪಡಿರಿ,
10-7-54
ಎ. ವಿ. ಯಂ ರವರ
★ 'ಸಂಗಂ' ★
[ಸುಪ್ರಸಿದ್ಧ ತೆಲುಗು - ಚಿತ್ರ]
ಇದರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, ಯಸ್. ವಿ. ರಂಗರಾವ್
ನೈಜಯಂತಿಮಾಲ, ಆಂಜಲಿದೇವಿ ನಟಿಸಿದ್ದಾರೆ:— ಸಂಗೀತ ರಸವತ್ತರ ಚಿತ್ರ

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 5,12-7-54
Sri.

Edited Printed & Published by T. B. Keshava Rao, at Nava Bharat Pinting Press, Bellary

ನಾಡಿಪತ್ರಿಕೆ

ಸೋಮವಾರ
ಜುಲೈ
೧೯, ೧೯೫೪

ವರ್ಷ 17
ಸಂಚಿಕೆ 43

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇತವರಾವು

ಸುಲಭಚಿಕಿತ್ಸೆ

ಬೆಂಕಿಯಿಂದ ಸುಟ್ಟ ಘಾಯಗಳಿಗೆ ಔಷಧ

ಬೆಂಕಿ ಬಟ್ಟೆಗಳಿಗೆ ಆಂಟಿಕೊಂಡಾಗ ಬೆಂಕಿಯ ಜಬೆಯನ್ನು ಆರಿಸುವುದಕ್ಕೆ ನೀರನ್ನು ಮೈಮೇಲೆ ಎರಚಬಾರದು. ಬೇರೆ ಬಟ್ಟೆಯನ್ನು ನೀರಿನಲ್ಲಿ ನೆನಸಿ ಹಿಂಡಿಬಿಟ್ಟು ಕೈಗಳಿಗೆ ಸುತ್ತಿಕೊಂಡು ಸುಡುತ್ತಿರುವ ಬಟ್ಟೆಯನ್ನು ತೆಗೆದುಹಾಕಬೇಕು. ತಕ್ಷಣ ಸುಟ್ಟ ಅಂಗಗಳಿಗೆ ಕೊಬ್ಬರಿ ಎಣ್ಣೆಯನ್ನು ಸವರಬೇಕು.

ಇದಕ್ಕೆ ಉರಳಗಡ್ಡೆಯ ಉಪಯೋಗ

ಹಸಿ ಉರಳಗಡ್ಡೆಯನ್ನು ಜಜ್ಜಿ ವರಳಲ್ಲಿ ಹಾಕಿ ನುಣ್ಣಗೆ ರುಬ್ಬಿ (ನೀರು ಸೇರಿಸಬಾರದು) ಸುಟ್ಟ ಅಂಗಗಳಿಗೆ ಅರ್ಧ ಅಂಗಲ ಮಂದವಾಗಿ ಲೇಪನ ಮಾಡಬೇಕು. ಈ ರೀತಿ ಪ್ರತಿ ಒಂದು ಗಂಟೆಗೆ ಒಂದು ಸಲ ಮೊದಲು ಹಾಕಿದ ಲೇಪನವನ್ನು ತೆಗೆದು ಹಾಕಿ ಪುನಃ ಬೇರೆ ಲೇಪನ ಹಾಕಬೇಕು. ಹೀಗೆ ಉರಿ ಮತ್ತು ಬಾಹ ನಿಲ್ಲುವವರೆಗೂ ಹಚ್ಚಬೇಕು.

ಅನಂತರ ರೇವಲ ಚಿನಿ ಎಣ್ಣೆಯನ್ನು ಮೈಗೆ ಸವರಬೇಕು. ರೇವಲ ಚಿನಿ ಎಣ್ಣೆ ತಯಾರಿಸುವ ಕ್ರಮ.

ರೇವಲ ಚಿನಿ ಅಥವ ವನಸ್ಪತಿ ಒಣಗಿದ್ದು ಗ್ರಂಥಿಗೆ ಅಂಗಡಿಗಳಲ್ಲಿ ಮಾರಲ್ಪಡುತ್ತದೆ. ಇದನ್ನು ತಂದು ಕುಟ್ಟಿ ನುಣ್ಣಗೆ ಪುಡಿ ಮಾಡಿ, ಒಂದು ಭಾಗದ ಪುಡಿಗೆ ಎರಡು ಭಾಗ ನೀರನ್ನು ಸೇರಿಸಿ ಬೆಂಕಿಯ ಮೇಲೆ ಕಾಯಿಸಬೇಕು ಅರ್ಧ ಭಾಗ ನೀರು ಕಮ್ಮಿ ಆದ ನಂತರ ಅಷ್ಟೇ ಭಾಗ ಕೊಬ್ಬರಿ ಎಣ್ಣೆಯನ್ನು ಬೆರೆಸಿ ಪುನಃ ಕಾಯಿಸಬೇಕು. ಮಂದ ಅಗ್ನಿ ಇರಬೇಕು. ಎಣ್ಣೆಗೆ ಸೇರಿದ ನೀರೆಲ್ಲ ಇಮರಿಹೋದ ನಂತರ ಕೆಳಗೆ ಇಳಿಸಿ ಒಂದು ಸೀಸಾಯಿಹುಲ್ಲಿ ತಂಬಿಸಿಟ್ಟುಕೊಂಡಿದ್ದು ಮೈಸುಟ್ಟ ಭಾಗಗಳಿಗೆ ತಕ್ಷಣ ಹಚ್ಚಬೇಕು. ಎಣ್ಣೆ ಹಚ್ಚುವುದರಿಂದ ನೀರಿನ ಬೊಬ್ಬೆಗಳು ಮತ್ತು ಕೀವು ಸೋರುವುದು ಮಾಯವಾಗುವುದು. ಪ್ರಾಣಕ್ಕೆ ಅಪಾಯ ಸಂಭವಿಸುವುದಿಲ್ಲ.

—ಶ್ರೀ ಪಿ ಎನ್. ಶಂಕರರಾಜ್, ವೈದ್ಯ.—

ಮೈಸೂರು ಮಂತ್ರಿ ಮಂಡಲಕ್ಕೆ ವಿಶ್ವಾಸದ ತರಾವು

ಮೈಸೂರಿನ ರಾಜಕೀಯ ಸಂದಿಗ್ಧತೆಯನ್ನು ಬಗೆಹರಿಸಲು ಮೈಸೂರು ಮಂತ್ರಿಮಂಡಲ ಕಾಂಗ್ರೆಸ್ ಶಾಸನ ಸಕ್ಷದ ವಿಶ್ವಾಸ ತರಾವನ್ನು ಪಡೆಯಬೇಕೆಂದು ನೆಹರೂ ಸೂಚಿಸಿರುವಂತಿ ಗೊತ್ತಾಗಿದೆ.

ಬದರೀನಾಥ ದೇವಾಲಯಕ್ಕೆ ಹರಿಜನರು

ಶ್ರೀ ಪ್ರಯಾಗಿಲಾಲ್, ಎಂ. ಪಿ, ಎಂ ಬವರ ಮುಂದಾಳುತನದಲ್ಲಿ, ಹನ್ನೆರಡು ಜನ ಹರಿಜನರು ಬದರಿನಾಥ ದೇವಾಲಯವನ್ನು ಪ್ರವೇಶಿಸುವೆಂಬ ಬಹಿರಂಗ ಪ್ರಕಟಣೆಯೊಂದಿಗೆ ಸೀತಾಪುರದಿಂದ ತೆರಳಿರುವರು. ಬದರೀನಾಥ ದೇವಾಲಯದಲ್ಲಿ ಇದೀಗ ಮಹಾಯಜ್ಞ ಒಂದು ನಡೆಯುತ್ತಿದ್ದು ದಕ್ಷಿಣದ ಅನೇಕ ಮಹಾ ಪಂಡಿತರು ಭಾಗವಹಿಸಿರುವರು.

ಹಾವಿನ ಕಡಿತದ ಇತಿಹಾಸ

ಜಾಗತಿಕ ಆರೋಗ್ಯ ಸಂಸ್ಥೆಯವರು ಶೇಕರಿಸಿರುವ ಅಂಕೆಸಂಖ್ಯೆಗಳಂತೆ ಪ್ರ ಪಂಚದಲ್ಲಿ ವರುಷ ವರುಷ 40,000 ಜನರು ಹಾವಿನ ಕಡಿತದಿಂದ ಮರಣಹೊಂದುತ್ತಿರುವರು. ಇದರಲ್ಲಿ ಚೈನಾ ಮತ್ತು ರಷ್ಯಾ ರಾಷ್ಟ್ರಗಳ ಲೆಕ್ಕಚಾರ ಕೂಡಿಲ್ಲ. ಇನ್ನೊಂದು ಜನರಲ್ಲಿ ಸುಮಾರು 35,000 ಜನರು ಏಷ್ಯಾದಲ್ಲಿ ಈ ದುರ್ಮರಣಕ್ಕೆ ತುತ್ತಾಗುತ್ತಿರುವರು. ಅದರಲ್ಲೂ ಭಾರತದಲ್ಲಿ ಹಾವಿನಿಂದ ಸಾಯುತ್ತಿರುವವರು 15,000 ಮಂದಿಗೂ ಮಿಕ್ಕುವರು. ಗಂಗಾನದಿಯ ಕುದುರಿನಲ್ಲಿ ಹಾವಿನ ಉಪಟಳ ಅತೀ ಹೆಚ್ಚು. ಸುಮಾರು 2500 ಜಾತಿಯ ಹಾವುಗಳಲ್ಲಿ ಮಾನವನಿಗೆ ಅಪಾಯಕಾರಿಯಾಗಿರುವುವು ಬರೇ 200 ಮಾತ್ರವೆಂದು ತಿಳಿದುಬರುತ್ತದೆ.

ಹೊಸಪೇಟೆಯ ಡಿಸ್ಟ್ರಿಕ್ಟ್ಸ್ ಮುನ್ಸಿಫರ ಕೋರ್ಟ್‌ನಲ್ಲಿ.

O. S. 154/54

ದಬೋಜ ಕನಕಪ್ಪ ಶೆಂಡೆ
ಗೋಪಾಲಪ್ಪ, 60 ವರ್ಷ ವಯಸ್ಸು, ವೈಶ್ಯ–ವ್ಯಾಪಾರ ವೃತ್ತಿ, ಕಂಪ್ಲಿ (ಹೊಸಪೇಟೆ ತಾ||) — ವಾದಿ

Vs.

ಮುದ್ದಸಗೌಡ ಶಂಡೆ ರಾಮನಗೌಡ
60 ವರ್ಷ ವಯಸ್ಸು, ಹಿಂದು, ನೌಕರಿ
ಜಮಾಪುರ – ಗಂಗಾವತಿ ತಾ|| — ಪ್ರತಿವಾದಿ

ವಾದಿಯ ಹೆಸರಲಿ ಪ್ರತಿವಾದಿಯು 23–2–1951 ನೇಯ ತೇದಿ ಬರೆದು ಕೊಟ್ಟ ಪ್ರೋನೋಟಿನ ಮೇಲೆ – ವಾದಿಯು ರೂ, 752–11–0ಗೆ ದಾವಾ ಮಾಡಿರುತ್ತಾನೆ. ಪ್ರತಿವಾದಿಯು 26–7–1954ನೆಯ ತೇದಿ – ಖುದ್ದಾಗಲಿ - ವಕೀಲರ ದ್ವಾರಾಗಲಿ ಹಗಲು 11 ಗಂಟೆಗೆ ಕೋರ್ಟಗೆ ಹಾಜರಾಗದಿದ್ದಲ್ಲಿ ಪ್ರತಿವಾದಿಯ ಮೇಲೆ ಏಕಪಕ್ಷ (ಏಕಪಕ್ಷ) ಹುಕುಂ ಜಾರಿಯಾಗುವುದು—

ಹೊಸಪೇಟೆ
14–7–'54

ಎ. ಆರ್. ಕೃಷ್ಣರಾವ್
ವಾದಿಯ – ಅಡ್ವೊಕೇಟ್

ಆಯುರ್ವೇದ ಮತ್ತು ಪಾಶ್ಚಾತ್ಯ ಚಿಕಿತ್ಸೆ

ಭಾರತವು ಬಹು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಂಸ್ಕೃತಿ, ಕಲೆ, ವಿಜ್ಞಾನಗಳನ್ನು ಬೆಳೆಸಿಕೊಂಡು,ಅವುಗಳ ಪ್ರಯೋಜನವನ್ನು ಜಗತ್ತಿನ ಇತರ ರಾಷ್ಟ್ರಗಳಿಗೆ ಮಾಡಿಕೊಡುತ್ತ, ತಾನೂ ಅವುಗಳ ಮೂಲಕವೇ ತನ್ನ ಪೂರ್ವಪರಂಪರಾಗತ ಅಸ್ತಿತ್ವವನ್ನು,ಎಂಥದೇಆಪತ್ತು ಬಂದರೂ ಕಳೆದುಕೊಳ್ಳದೆ ಸಾಗಿಬಂದಿರುವ ಅಪಾರ ಧನ್ಯ ದೇಶ.ನಡುವೆ ಒಂದೆರಡು ಶತಮಾನ ಇದಕ್ಕೆ ಪರಕೀಯ ದಾಸ್ಯರೂಪೀ ಗ್ರಹಣವು ಹಿಡಿದಿದ್ದರಿಂದ, ಇದರ ಪೂರ್ವ ಪರಂಪರೆಗೆ ಕೆಲವು ಮಟ್ಟಿಗೆ ದಕ್ಕೆ ತಗಲಿತು. ಆದರೆ ಭಾರತೀಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ಅಳಿಸಲು ಪಾಶ್ಚಾತ್ಯರಿಗೆ ಸಾಧ್ಯವಾಗಲಿಲ್ಲ. ನಮ್ಮ ಎಲ್ಲ ಕಲೆಗಳು ವಿಜ್ಞಾನಗಳು ಇನ್ನೂ ನಮ್ಮಲ್ಲಿ ಸ್ವಲ್ಪ ವ್ಯಾಪ್ತಿಯಲ್ಲಿ, ಇದ್ದೇ ಇವೆ.

ನನಗೆ ಆ ದಾಸ್ಯದಿಂದ ಮುಕ್ತಿಯು ಸಿಕ್ಕ ನಂತರ ಪುನಃ ನಮ್ಮವೈಶಿಷ್ಟ್ಯದೊಂತಕ ಆ ಕಲೆ ಮತ್ತು ವಿಜ್ಞಾನಗಳು ಪುನಃ ಬೆಳೆಯತೊಡಗಿವೆ. ಆಸ್ಟೇಏಕೆ? ಇಂದು ಪಾಶ್ಚಾತ್ಯರಲ್ಲಿ ಉಂಟಾದ ಎಲ್ಲ ತರಹದ ಪ್ರಗತಿಗೂ ನಮ್ಮ ಪೂರ್ವ ವಿಜ್ಞಾನದ ತಳಹದಿಯೇ. ಕಾರಣವಾಗಿದೆ ಎಂದು ಹೇಳುತ್ತಿದ್ದ. ಮಾತು ಈಗ ದಿನದಿನಕ್ಕೆ ಹೆಚ್ಚು ಸ್ಪಷ್ಟವಾಗತೊಡಗಿದೆ.

ಉಳಿದ ಅನೇಕ ವಿಷಯಗಳನ್ನು ಬಿಟ್ಟು ಕೇವಲ ವೈದ್ಯಕೀಯವಿಭಾಗವನ್ನು ತೆಗೆದುಕೊಂಡು ನೋಡಿದರೂ ಈಗಾತು ಆಸ್ಟೇ ಸ್ಪಷ್ಟವಾಗಿ ಕಂಡುಬರುತ್ತದೆ.

ನಮ್ಮಲ್ಲಿ ವೈದ್ಯಕೀಯ ಶಾಸ್ತ್ರವು ಬಹು ಸುಸಮರ್ಥವಾದದ್ದೂ ಮತ್ತು ಸೈಸರ್ಗಿಕ ತತ್ವಗಳ ಗುಣಧರ್ಮಗಳನ್ನು ಅರಿತು ಸಶಾಸ್ತ್ರವಾಗಿ ಉಪಚಾರವನ್ನು ಒದಗಿಸುವಂಥದೂ ಆಗಿದೆ. ಆದರ ಪ್ರಭಾವವು, ಇದ್ದ ವರೆಗಿನ ಪರಕೀಯತ ದಾಳಿಯನಂತರ ಕೂಡ, ಇನ್ನೂ ಅದೇ ಉಜ್ವಲ ಸ್ಥಿತಿಯಲ್ಲಿದೆ.

ಆದರೆ ಭಾರತದಲ್ಲಿ ಅನೇಕ ಜನಾಂಗಗಳ,ರಾಜಕಾರಣಗಳು ಅಮೇಲೆ ಪ್ರದೇಶಮಿಡಿವು ಇತರ ಕ್ಷೇತ್ರಗಳಲ್ಲಿ ಪರಕೀಯ ಪ್ರಭಾವ ಉಂಟಾದಂತೆ ಈ ವೈದ್ಯಕೀಯ ಕ್ಷೇತ್ರದಲ್ಲಿಯೂ ಅನೇಕ ಮೂರ್ಖಾಡುಗಳಾದವು. ಅಲೋಪಥಿ, ಹೋಮಿಯೋಪಥಿ, ಯುನಾನಿ, ನಿಸರ್ಗ ಚಿಕಿತ್ಸಾ ಮೊದಲಾದ ಇಲ್ಲಿನ ಪದ್ಧತಿಯ ಚಿಕಿತ್ಸೆಗಳು, ರೋಗಗಳನ್ನು ಗುಣಪಡಿಸುವ ಕಾರ್ಯಕ್ಕಾಗಿ ಇಂದು ಭಾರತದಲ್ಲಿಪ್ರಚಾರಕ್ಕೆ ಬಂದಿವೆ. ಅದರಲ್ಲಿಯೂ ಅಲೋಪಥಿಯಲ್ಲಿ ಆದ ಅನೇಕ ಆಧುನಿಕ ಶೋಧಗಳು ಮತ್ತು ಶಸ್ತ್ರಚಿಕಿತ್ಸೆಯ ಆಶ್ಚರ್ಯಕರ ಪ್ರಕಾರಗಳು ಜನತೆಯ ಮನಸನ್ನು ಬಹುವಾಗಿ ಸೆಳೆದಿವೆ.

ಭಾರತೀಯ ವಿಜ್ಞಾನವನ್ನು ಪುನಃ ನಮ್ಮ ದೇಶದ ವಾತಾವರಣಕ್ಕನುಗುಣವಾಗಿ ಸಾಧಿಸಬೇಕು ಮತ್ತು ನಮ್ಮ ಕಲೆ,ವಿದ್ಯೆ, ಶಾಸ್ತ್ರ ಮತ್ತು ವಿಜ್ಞಾನಗಳನ್ನು ಪುನಃ ನಮ್ಮ ದಾರಿಯಲ್ಲಿಯೇ ನಾವು ಬೆಳೆಸಿಕೊಳ್ಳಬೇಕು ಎಂಬ ಮಾತು ನಮ್ಮೆದುರಿಗೆ ಈಗ ಬಂದಿದ್ದು ಇಮೇರೆಗೆ ಈವೈದ್ಯಕೀಯ ಕ್ಷೇತ್ರದಲ್ಲಿಯತ್ತ ನಾವು ಮುಂದರಿಯುವುದಾದರೆ ನಾವು ನಮ್ಮ ಆಯುರ್ವೇದ ಶಾಸ್ತ್ರವನ್ನು ಪುನಃ ಬೆಳೆಸಿಕೊಳ್ಳುವುದು ಕ್ರಮ ಪ್ರಾಪ್ತವಾಗಿದೆ.

ಅಲೋಪತಿ ಡಾಕ್ಟರರೇ ಈಗ ಭಾರತೀಯಸರಕಾರದವನ್ನಹೆಯನ್ನು ಎಲ್ಲೆಡೆಗೆ ಪಡೆದಿದ್ದು, ಇವರಕೈಯಲ್ಲಿಯೇಸರಕಾರೀ ಆರೋಗ್ಯ ವಿಭಾಗಗಳು ಇವೆ. ಅವರ ಔಷಧ ಪದ್ಧತಿ,ಶಸ್ತ್ರಚಿಕಿತ್ಸೆಗಳುಜನತೆಗೆ ಮೇಲೂ ಹೆಚ್ಚಿನ ಪ್ರಭಾವಬೀರಿವೆ.

ಆಯುರ್ವೇದ ಪಂಡಿತರೂ, ನಾನಾ ಯೋಗ್ಯತೆಯ ವೈದ್ಯರೂ ದೇಶದಲ್ಲಿ ಎಂದಿನಿಂದಲೂ ಜನತೆಗೆ ಔಷಧೋಪಚಾರ ಒದಗಿಸುತ್ತಿದ್ದಾರೆ. ಅವರಲ್ಲಿ ಅಸಮಾನ್ಯ ಯೋಗ್ಯತೆಯವರೂ ಇದ್ದು ಅವರು ಸಶಾಸ್ತ್ರವಾಗಿ ಚಿಕಿತ್ಸೆ ಮಾಡುತ್ತಾರೆ.

ತಾತ್ಪರ್ತಿಕ ಅಥವಾ ಒಮ್ಮೆಲೇಉಪಾಯವೂಡಬೇಕಾದ ಪ್ರಸಂಗಗಳಲ್ಲಿ ಅಲೋಪಥಿಯುಉಪಯೋಗವುಚನ್ನಾಗಿ ಆಗುತ್ತದೆ. ಬಹು ದಿವಸದ ಬೇನೆಯನ್ನು ಕಡಿಮೆ ಮಾಡುವ ಕಾರ್ಯದಲ್ಲಿ ಆಯುರ್ವೇದದ ಪ್ರಯೋಜನವು ಹೆಚ್ಚಾಗಿ ಕಂಡುಬರುತ್ತದೆ.

ಜನತೆಯೂ ಇತ್ತ ಕಡೆಗೆ ಹೆಚ್ಚುಜಾಣತನ ಪಡೆದಿದೆ. ರೋಗದ ದೃಷ್ಟಿಯಿಂದ ಅವರು ತಮ್ಮ ಡಾಕ್ಟರರನ್ನೋ ವೈದ್ಯರನ್ನೋ ಗೊತ್ತು ಮಾಡುತ್ತಾರೆ. ಶಸ್ತ್ರ ಚಿಕಿತ್ಸೆಯ ಪ್ರಸಂಗವಿದ್ದರಂತೂ ಅವರು ಓರ್ವ ಪಾಶ್ಚಾತ್ಯ ಪದ್ಧತಿಯ ವರ್ಜನ್ನನ ಕಡೆಗೇ ಹೋಗುಬೇಕಾಗುತ್ತದೆ. ತೀವ್ರ ಪರಿಣಾಮದ ಉಪಾಯ ಬೇಕಾಗಿದ್ದರೆ ಅವರು ಓರ್ವ ಡಾಕ್ಟರನ ಕಡೆಗೆ ಹೋಗುತ್ತಾರೆ. ಹಳೇ ಬೇನೆಯು, ಬಹು ದಿವಸದ ಪ್ರಯತ್ನದಿಂದ ಕಡಿಮೆಯಾಗಬೇಕಾದ ಪ್ರಸಂಗವಿದ್ದರೆ ವೈದ್ಯರ ಕಡೆಗೆ ಹೋಗುತ್ತಾರೆ.ಚಿಕ್ಕಪುಟ್ಟ ತೊಂದರೆಗಳಿದ್ದರೆ ಅವುಗಳಿಗಾಗಿ ಗೊತ್ತಿದ್ದ ಒಷಧಿಗಳನ್ನೋ ಗುಳಿಗೆಗಳನ್ನೋ ಅಂಗಡಿಗಳಿಂದ ತಂದು ಸೇವಿಸಿಬಿಡುತ್ತಾರೆ.

ಇನ್ನು ಅಲೋಪಥಿ ಮತ್ತು ಆಯುರ್ವೇದ ಇಪರತು ಪದ್ಧತಿಗಳ ತಜ್ಞರಲ್ಲಿ ತೀವ್ರಮತಭೇದವಿದೆ.ಎರಡೂಪದ್ಧತಿಗಳಲ್ಲಿ ಕ್ರಿಷ್ಟವಿವೆ, ಅವುಗಳ ಶಕ್ತಿಯಮೇರೆಗೆ ಅವುಗಳನ್ನು ಉಪಯೋಗಿಸಿಕೊಂಡರಾಯಿತು ಎಂಬವರೂ ಇದ್ದಾರೆ. ಹಲಕೆಲವು ಪ್ರಸಂಗಗಳಲ್ಲಿ ಅವರು ಆಯುರ್ವೇದ ಔಷಧಿಗಳನ್ನೂ ಕೊಡುತ್ತಾರೆ, ಅವಶ್ಯ ಬಿದ್ದರೆ ಇಂಜಕ್ಶನ್ ಮಾಡಿ ಬಿಡುತ್ತಾರೆ. ಆಸ್ಟೇ ಏಕೆ? ಅಲೋಪಥಿ ಡಾಕ್ಟರರು, ಹೋಮಿಯೋಪಥಿ, ಬಾಯೋಕೆಮಿಕ್ ಒಷಧಿಗಳನ್ನು ಸಹ ತಮ್ಮಲ್ಲಿಟ್ಟು ಅವುಗಳನ್ನೂ ರೋಗಿಗೆ ಕೊಡುವುದುಂಟು.

ಒಂದು ಪದ್ಧತಿಯವರು ಇನ್ನೊಬ್ಬರನ್ನು ಹೀಯಾಳಿಸುವುದು ಇದ್ದೇ ಇದೆ "ವೈದ್ಯ ಏನೇನು ತಿಳಿಯುತ್ತದೆ? ಅವರ ಅಭ್ಯಾಸ ವಾದರೂ ಎಷ್ಟು?" ಎಂದು ಡಾಕ್ಟರರು ಅನ್ನುತ್ತಾರೆ "ಡಾಕ್ಟರರಿಗೇನು ಬರುತ್ತದೆ! ಬಾಟಲಿಗಳ ಮೇಲೆನ ಚೀಟಿಯುವ್ಯತ್ಯಾಸವಾದರೆ ಅವರ ಕಥೆಯೇ ಮುಗಿಯುವುದು. ಅವರು ಪರದೇಶೀ ಔಷಧಗಳ ಏಜಂಟರಂತೆ ಇದ್ದಾರೆ" ಎಂದು ವೈದ್ಯರು ಅನ್ನುತ್ತಾರೆ.

ಇವೆರಡೂ,ಎರಡು ಬಿನ್ನ ಭಿನ್ನ ಶಾಸ್ತ್ರಗಳೇ ಆಗಿಯೆಂಬುದನ್ನು ನಾವು ಮರೆಯ

ಮುಂದೆ ನೋಡಿ

ಅಲೂರು - ಆದವಾನಿ ಕನ್ನಡ ಪ್ರದೇಶಗಳು

ಬಳ್ಳಾರಿಯ ಜಿಲ್ಲೆಯ ಆಲೂರು-ಆದವಾನಿ ತಾಲ್ಲೂಕುಗಳು ಐತಿಹಾಸಿಕವಾಗಿಯೂ ವಾಸ್ತವವಾಗಿಯೂ ಸಂಪೂರ್ಣವಾಗಿ ಕನ್ನಡ ಪ್ರದೇಶಗಳೆಂದೂ ಅವುಗಳನ್ನು ಆಂಧ್ರ ಪ್ರಾಂತಕ್ಕೆ ಸೇರಿಸಿರುವುದು ಸರಿಯಲ್ಲವೆಂದೂ ಈ ಪ್ರದೇಶಗಳನ್ನು ಅಖಂಡ ಕರ್ನಾಟಕಕ್ಕೆ ಸೇರಿಸಬೇಕೆಂದೂ ಒತ್ತಾಯಿಸಿ ಚಿತ್ರದುರ್ಗದ ಇತಿಹಾಸ ಸಂಶೋಧಕರಾದ ಶ್ರೀಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಾಂತಗಳ ಪುನರ್ವಿಂಗಡಣಾ ಕಮಿಷನ್ನಿಗೆ ಮನವಿ ಸಲ್ಲಿಸಿದ್ದಾರೆ.

ಮೈಸೂರು ಸಂಸ್ಥಾನ ಸಹಿತವಾದ ಅಖಂಡ ಕರ್ನಾಟಕ ಪ್ರಾಂತ ನಿರ್ಮಿಸಬೇಕೆಂದೂ ಬೆಂಗಳೂರು ರಾಜಧಾನಿಯಾಗಿರಬೇಕೆಂದೂ ಅವರು ಮನವಿ ಮಾಡಿದ್ದಾರಲ್ಲದೆ ಎರಡು ಕರ್ನಾಟಕದ ಘೋಷಣೆಯನ್ನು ಒಪ್ಪಬಾರದೆಂದೂ ಪ್ರಾರ್ಥಿಸಿದ್ದಾರೆ.

ಐತಿಹಾಸಿಕ ಆಧಾರ

ಆಲೂರು ಮತ್ತು ಆದವಾನಿ ತಾಲ್ಲೂಕುಗಳ ಪ್ರದೇಶವು ಎರಡು ಸಾವಿರ ವರ್ಷಗಳ ಕಾಲ ಸಿಂಧುವಾಡಿ ಸಾವಿರನಾಡು ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತೆಂದೂ, ಮೌರ್ಯ ಮತ್ತು ಶಾತವಾಹನ ಅರಸರ ಕಾಲದಲ್ಲಿ ಒಂದೇ ಆಡಳಿತದಡಿಯಲ್ಲೂ ಕದಂಬ ಮಯೂರವರ್ಮನ ಕಾಲದಿಂದ ಹಿಡಿದು ಬಿಜಾಪುರದ ಮುಸ್ಲಿಮರ ವಶವಾಗುವವರೆಗೆ ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಾಲಚೂರ್ಯರು, ಹೊಯ್ಸಳರು, ದೇವಗಿರಿ ಯಾದವರು ಮತ್ತು ವಿಜಯನಗರ ರಾಯರುಗಳು ಮುಂತಾದ ಪರಂಪರೆಗಳಲ್ಲಿ ಕನ್ನಡ ಚಕ್ರವರ್ತಿಗಳ ಆಧೀನದಲ್ಲಿಯೇ ಮಹಾಮಂಡಲೇಶ್ವರರ ಅಥವಾ ಮಹಾ ಸಾಮಂತರ ಆಡಳಿತದಡಿಯಲ್ಲೂ ಕನ್ನಡ ಪ್ರಾಂತವಾಗಿಯೇ ಆಳಲ್ಪಡುತ್ತಿತ್ತೆಂದೂ ಶ್ರೀಜೋಯಿಸರು ಅಂಕಿ ಅಂಶಗಳನ್ನು ತಮ್ಮ ಮನವಿಯಲ್ಲಿ ಕೊಟ್ಟಿದ್ದಾರೆ.45 ಪುರಾತನ ಕನ್ನಡ ಶಾಸನಗಳನ್ನು ಉಲ್ಲೇಖಿಸಿದ್ದಾರೆ.

ಇಲ್ಲಿನ ಗ್ರಾಮ ಕಲೆಗಳು, ಗ್ರಾಮ ಕತೆಗಳು, ಬಯಲಾಟಗಳು ಜನರ ನಡೆನುಡಿಗಳು, ಆಹಾರ ಆಚಾರ ಆಹಾರಗಳು ಎಲ್ಲವೂ ಕನ್ನಡ ಸಂಸ್ಕೃತಿಯವೇ ಎಂದೂ ಮುಸ್ಲಿಂ ಅರಸರ ಕಾಲದಲ್ಲೂ 1920ರ ವರೆಗೆ ಬ್ರಿಟಿಷರ ಆಡಳಿತದಲ್ಲೂ ಕನ್ನಡವು ಇಲ್ಲಿ ಸರ್ಕಾರಿ ಭಾಷೆಯಾಗಿತ್ತೆಂಬುದನ್ನೂ ಶ್ರೀ ಜೋಯಿಸರು ಸ್ಪಷ್ಟಪಡಿಸಿದ್ದಾರೆ.

ಐತಿಹಾಸಿಕವಾಗಿ, ಭೌಗೋಳಿಕವಾಗಿ ಸಾಂಸ್ಕೃತಿಕವಾಗಿ ಮತ್ತು ಆಡಳಿತ ದೃಷ್ಟಿಯಿಂದ ಈ ಪ್ರದೇಶವು ಸಂಪೂರ್ಣವಾಗಿ ಕನ್ನಡದ್ದೇ ಎಂದೂ ಶ್ರೀ ಜೋಯಿಸರು ಸಾಧಿಸಿದ್ದಾರೆ.

ತೀರ್ಪು ತರುವಾಯ

ಕೂಡದು. ಹೋಮಿಯೋಪಥಿ, ಬಾಯೋಕೆಮಿಕ್, ನೇಚರ್ ಚಿಕಿತ್ಸೆ ಇವೆಲ್ಲವುಗಳಿಗೂ ಶ[illegible]ವುದೂ ಜನರ ಅಪೇಕ್ಷಾಣಿಕ್ಕಾಗಿ ಬಂಂಲ್ಲ ಮತ್ತು ಯಾವುದೋ ಸಾಮಾನ್ಯನಿಂದ ಅವು ನಿರ್ಮಿಸಲ್ಪಟ್ಟಿರುವುದು ಸಾಧ್ಯವಿಲ್ಲ.

ಇವೆಲ್ಲವುಗಳನ್ನು ನಾವು ಅಭ್ಯಾಸಿಸಿಕೊಂಡು ಜನತೆಯ ಸ್ವಾಸ್ಥ್ಯವನ್ನು ಕಾಯುವುದು ಅದ್ಯಕರ್ತವ್ಯವಾಗಿದೆ. ಇಂಥದು ಹೆಚ್ಚು ಇಂಥದು ಕಡಿಮೆಯೆಂದು ಹೇಳುವುದು ದಡ್ಡತನ.ಆಯಾ ಪದ್ಧತಿಯಲ್ಲಿ ಅದರದೇ ಆದ ವೈಶಿಷ್ಟ್ಯವು ಇದೇ ಇದೆ. ಅದೇ ಗುಣವು ಇನ್ನೊಂದರಲ್ಲಿ ಬರಲಾರದು:

ಆಯುರ್ವೇದವು ನಮ್ಮ ದೇಶದ್ದೂ ಸಶಾಸ್ತ್ರ ತಳಹದಿಯುಳ್ಳದ್ದೂ ಬಡವರಿಗೆ ನಿಲುಕುವಂಥದೂ ಆಗಿರುವುದೆಂಬುದರಲ್ಲಿ ವಾದವೇ ಇಲ್ಲ. ಅದರ ಕಡೆಗೆ ಭಾರತೀಯ ಸರಕಾರದ ಲಕ್ಷ್ಯವು ಇತ್ತಕಡೆಗೆ ಹೋಗಿದೆ. ಬರಬರುತ್ತ ಅದಕ್ಕೆ ಕೂಡ ಅಲೋಪಥಿಗಿರುವ ಸ್ಥಾನಮಂದತಹ ಸ್ಥಾನವು ಸಿಗದೆ ಇರಲಾರದು.

ಹಿಂದಕ್ಕೆ ಆಯುರ್ವೇದ ಪದ್ಧತಿಯಲ್ಲಿ ಕೂಡ ಶಸ್ತ್ರ ಚಿಕಿತ್ಸೆಯು ಇತ್ತೆಂದೂ ಅದರಿಂದ ಜೀರ್ಣವಾದ ಚಿಕಿತ್ಸೆಗಳನ್ನು ಮಾಡುವುದು ಸಾಧ್ಯವಾಗಿತ್ತೆಂದೂ ಆಯುರ್ವೇದ ತಜ್ಞರು ಇಂದು ಹೇಳುತ್ತಾರೆ. ಅಷ್ಟೇ ಏಕೆ ಆಯುರ್ವೇದದ ಗ್ರಂಥಗಳಲ್ಲಿ ಹೇಳಿದಂಥ ಶಸ್ತ್ರ ಚಿಕಿತ್ಸೆಯ ಆಯುಧಗಳನ್ನು ಸಿದ್ಧ ಮಾಡಲಾಗಿದೆಯೆಂದೂ ಅವುಗಳಿಂದ, ಇಂದಿನ ಆಧುನಿಕ ಶಸ್ತ್ರ ಚಿಕಿತ್ಸಕರು ಮಾಡುವ ಯಾವುದೇ ಚಿಕಿತ್ಸೆ ಮಾಡುವುದು ಸಾಧ್ಯವಾಗಿದೆಯೆಂದೂ, ಮೊನ್ನೆ, ಅಖಿಲ ಭಾರತ ಆಯುರ್ವೇದ ಮಹಾಮಂಡಲದ ಅಧ್ಯಕ್ಷರಾದ ಶ್ರೀ. ಶಿವಶರ್ಮ ರವರು ಹುಬ್ಬಳ್ಳಿಗೆ ಬಂದಾಗ್ಗೆ ಹೇಳಿದರು

ಆಯುರ್ವೇದ ಶಾಸ್ತ್ರವು ತನ್ನ ಸ್ವಂತ ಚಿಕಿತ್ಸಾ ಪದ್ಧತಿಯನ್ನು ಆಧುನಿಕ ಶಸ್ತ್ರ ಚಿಕಿತ್ಸಾ ಪದ್ಧತಿಯನ್ನು ಅಲಕ್ಷಿಸುವವರ ಮಟ್ಟಿಗೆ ಬೆಳೆಸಿಕೊಳ್ಳುವವರೆಗೆ, ಜನತೆಯು ಒಲವು ಆಯುರ್ವೇದದ ಕಡೆಗೆ ಹೊರಳುವುದು ಅನಿವಾರ್ಯವಾಗಿದೆ. ಅದಾದ ಮೇಲೂ ಕೂಡ ಅಲೋಪಥಿ, ಆಯುರ್ವೇದ, ಯೋಗಿನೋಪಥಿ ಮೊದಲಾದ ಪದ್ಧತಿಗಳ ವೈಶಿಷ್ಟ್ಯವುಇದ್ದೇ ಇರುವುದು ಒಂದರಿಂದಾಗದ ಕಾರ್ಯವನ್ನು ಇನ್ನೊಂದು ಮಾಡಿದ, ಮಾಡುವ ಉದ್ದಾಹರಣೆಗಳು ಮೇಲಿಂದಮೇಲೆ ನಿದರ್ಶನಕ್ಕೆ ಬರುತ್ತವೆ.

ಈ ಪದ್ಧತಿಗಳನ್ನು ಕಾರ್ಯರೂಪಕ್ಕೆ ಇಳಿಸುವ ಡಾಕ್ಟರರ ಮತ್ತು ವೈದ್ಯರ ಮೇಲೆಯೂ ಆಯಾ ಪದ್ಧತಿಗಳಿಗೆ ಹಲವು ಕೆಲವು ಕೆಟ್ಟ,ಚಲೋ ಹೆಸರುಗಳುಬರುವ ಸಂಭವವಿದೆ. ಆ ಕೀರ್ತಿ, ಅಪಕೀರ್ತಿಗಳು ಆಯಾ ವ್ಯಕ್ತಿಗಳ ಮೂಲಕವಾದವುಗಳೆಂಬ ಮತ್ತು ಅವುಗಳ ಕಾರಣದಿಂದ ಆಯಾ ಪದ್ಧತಿಗಳ ದೋಷ ಗುಣಗಳು ಎಣಿಸಲ್ಪಡಬಾರದೆಂಬ ತಿಳಿವಳಿಕೆಯು ಜನತೆಯಲ್ಲಿ ಮತ್ತು ಎರಡನೇ ಪದ್ಧತಿಯ ತಜ್ಞರಲ್ಲಿ ಉಂಟಾಗುವುದು ಅವಶ್ಯವಿದೆ.

ಹೀಗೆ ನಾವು ಮುಂದೆ ಸಾಗಿದರೆ ನಾವು ಇವೆಲ್ಲ ಪದ್ಧತಿಗಳನ್ನು ಇಟ್ಟುಕೊಂಡೂ ನೆಮ್ಮದಿಯಿಂದ ಮುಂದೆ ಸಾಗಲು ಸಾಧ್ಯವಿದೆ. ಒಂದೊಂದು ಕಾರಣದಿಂದ, ಒಂದೊಂದು ಪರಿಸ್ಥಿತಿಯ ಮೂಲಕ ಹುಟ್ಟಿದ ಈ ಅಮೌಲ್ಯ ಶಾಸ್ತ್ರಗಳಾವುವನ್ನೂ ನಾವು ಕಳೆದುಕೊಳ್ಳಬಾರದು.

ಬಳ್ಳಾರಿ

ಮತ್ತೆರಡು ಹೋಬಳಿಗಳಲ್ಲಿ ಪ್ರತಿಬಂಧಕಾಜ್ಞೆ

ಬಳ್ಳಾರಿ ನಗರ ಮತ್ತು ಹೋಬಳಿ ದೊಪನಗುಡಿ ಮತ್ತು ಮೋಕ ಹೋಬಳಿಗಳಲ್ಲಿ ಸಭೆ, ಭಾಷಣಗಳಿಂದ ಶಾಂತಿಭಂಗವಾಗಬಹುದೆಂದು ಬಳ್ಳಾರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಶ್ರೀ ಎ ಎಸ್. ರಾಮಚಂದ್ರರವರು ಕ್ರಿ – ಪ್ರೊ – ಕೋ 144 ನೇ ಸೆಕ್ಷನ್ ಮೇರೆಗೆ ಬಳ್ಳಾರಿ ತಾಲ್ಲೂಕಿನ ಈ ಮೂರು ಹೋಬಳಿಗಳಲ್ಲಿ ತಾ|| 1-7-54 ರಿಂದ ತಾ|| 25-7-54 ರವರೆಗೆ ಪ್ರತಿಬಂಧಕಾಜ್ಞೆ ಜಾರಿಮಾಡಿದ್ದಾರೆ

ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಮೈಸೂರು - ನಿವಾಸ

ರಾಷ್ಟ್ರಪತಿ ಡಾ|ರಾಜೇಂದ್ರ ಪ್ರಸಾದ್ ರವರು, ಜುಲೈ 21 ರಿಂದ ಮೈಸೂರಿನಲ್ಲಿ ಮೂರು ವಾರ ವಿಶ್ರಾಂತಿ ಪಡೆಯುವ ಕಾಲದಲ್ಲಿ, ಚಾಮುಂಡಿ ಬೆಟ್ಟದ ಮೇಲಿನ 'ರಾಜೇಂದ್ರ ವಿಲಾಸ್' ಅರಮನೆಯಲ್ಲಿ ಬಿಡಾರ ಮಾಡುವರು.

ಶ್ರೀಮನ್ಮಹಾರಾಜರವರ ಸ್ವಂತ ಭವನವಾದ ಈ ಅರಮನೆಯು ಸುಂದರ ಸನ್ನಿವೇಶದಲ್ಲಿ ಸ್ಥಾಪಿತವಾಗಿದೆ. ರಮಣೀಯ ಪ್ರಕೃತಿ ದೃಶ್ಯಗಳನ್ನೊದಗಿಸುವ ಈ ಅರಮನೆಯ ಸುತ್ತಲೂ ವಾಯು ವಿಹಾರಕ್ಕಾಗಿ ಓಡಾಡಲು ಒಳ್ಳೆಯ ರಸ್ತೆಗಳೂ ವರ್ಗಗಳೂ ಇವೆ. ಈ ಸನ್ನಿವೇಶವು ರಾಷ್ಟ್ರಪತಿಯ ಆರೋಗ್ಯ ಸುಧಾರಿಸಲು ಉತ್ತಮವಾಗಿದೆಯೆಂದೂ ಅಭಿಪ್ರಾಯ ಪಡಲಾಗಿದೆ.

ರಷ್ಯ ಸಾಹಿತ್ಯಕ್ಕೂ ಪಾಕಿಸ್ತಾನದ ಬಹಿಷ್ಕಾರ

ಪಾಕಿಸ್ತಾನದಲ್ಲಿರುವ ರಷ್ಯನ್ ರಾಜತಾಂತ್ರಿಕ ಪ್ರತಿನಿಧಿಗಳ ಮೇಲೆ ನಾನಾ ನಿರ್ಬಂಧಗಳನ್ನು ಒಂದೆರಡು ದಿನದಲ್ಲೇ ಪಾಕಿಸ್ತಾನ ಸರ್ಕಾರವು ವಿಧಿಸುವುದೆಂದು ಗೊತ್ತಾಗಿದೆ. ರಷ್ಯ ಸಾಹಿತ್ಯದ ಆಮದು ಮೊರಾಟು ಮತ್ತು ಹಂಚಿಕೆಯನ್ನು ಸಹಾ ಬಹಿಷ್ಕರಿಸಲಾಗುವುದು.

ಬಳ್ಳಾರಿ 'ಪ್ರಭಾತ, ದಲ್ಲಿ 'ನೋಡಿರಿ, ಆನಂದಪಡಿರಿ,

ರಮ್ಯವಾದ ಭಾನುವಾರ

ಪ್ರತಿದಿನವು ಯೆರಡು ಆಟಗಳು ಸಾ|| 6-10, ರಾ|| 9-30

ಎ. ವಿ. ಯಂ ರವರ

★ 'ಸಂಗಂ' ★

[ಸುಪ್ರಸಿದ್ಧ ತೆಲುಗು - ಚಿತ್ರ]

ಇದರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, ಯಸ್. ವಿ. ರಂಗರಾವ್ ವೈಜಯಂತಿಮಾಲ, ಅಂಜಲಿದೇವಿ ನಟಿಸಿದ್ದಾರೆ:—

.... ಸಂಗೀತ ರಸವತ್ತಾದ ಚಿತ್ರ ....

.... ಶೀಘ್ರವಾಗಿ ಬರಲಿದೆ .... ಜನತಾರವರ ....

★ ಪರಿವರ್ತನ ★

ಜಯರಾಜ ಫಿಲ್ಮ್ಸ್ ರವರ

★ ನಟಶೇಖರ ★

(ಅದ್ಭುತ ಕನ್ನಡ ಚಿತ್ರ)

ನಿರ್ಮಾಪಕ — ನಿರ್ದೇಶಕ — ಪಿ. ವಿ. ರಾಜು

ವೀರಮಾತೆ

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೀ ಚಂದಾದಾರರಾಗಿರಿ.

ಮುಖ್ಯ ಸಂಪಾದಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ಉಪಯೋಗಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

" ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.	Subscription will not be accepted for less than 6 months

To 19-7-54

Sri.

Edited Printed & Published by T. B. Keshava Rao, at Nava Bharat Pinting Press, Bellary

ಸಹಕಾರಿ

ಸೋಮವಾರ
ಜುಲೈ
೫, ೧೯೩೫

ವರ್ಷ 17 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ಸಾಪ್ತಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 44 | ಉತ್ತಿಷ್ಠತ ! ಜಾಗ್ರತ !! ಹ್ಯಾಸ್ಟಪರಾನ್ನಿ ಬೋಧತ !!! | ಟಿ. ಜಿ. ಕೇಶವರಾವ್

ನಾನ್ ಗೆಜಟೆಡ್ ಅಧಿಕಾರಿಗಳಿಗೆ ರಿಯಾಯ್ತಿ ದರದಲ್ಲಿ ಅಕ್ಕಿ

ಮೈಸೂರು ಸರಕಾರದ ಆಜ್ಞೆಯ ವಿವರ

ಬೆಂಗಳೂರು, ಜುಲೈ ೨೪ಅಕ್ಕಿಯ(ಸಿ) ಮತ್ತು (ಡಿ)ದರ್ಜೆಯ ಸ್ಟಾಕುಗಳನ್ನು ಸರಿಯಾಗಿ ಜೋಕ್ಯಟಗಡಿಸಿ ಈ ಕೆಳಕಂಡ ಕಡಿಮೆ ದರಗಳಲ್ಲಿ ಸರ್ಕಾರದ ನಾನ್-ಗೆಜೆಟೆಡ್ ಅಧಿಕಾರಿಗಳಿಗೆ ಕೊಡತಕ್ಕದ್ದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

(ಸಿ) ದರ್ಜೆಯ ಅಕ್ಕಿ

1 ನೇ ರಬಿಂ ರೂ. ಗೆ 2 ಸೇರು 2 ನೇ ರಬಿಂ (ಬಿಳಿಯದು) ರೂ ಗೆ 2 ಸೇರು ಮತ್ತು 3 ನೇ ರಬಿಂ (ಕೆಂಪದು)ರೂಗೆ 3 ಸೇರು.

(ಡಿ) ದರ್ಜೆಯ ಅಕ್ಕಿ

1 ನೆ ರಬಿಂ ರೂಗೆ 2 ಸೇರು, 2 ನೆ ರಬಿಂ (ಬಿಳಿಯದು) ರೂಗೆ 3 ಸೇರು ಮತ್ತು 3 ನೇ ರಬಿಂ (ಕೆಂಪದು) ರೂಗೆ 3 ಸೇರು.

ಈ ರೀತಿ ಅವಶ್ಯಗಿರುವವರಿಗಳಿಸಿ ಮತ್ತು ಆ ದರ್ಜೆಗಳ ಅಕ್ಕಿಯ ಪೂರಾಟನ್ನು ಕ್ರಮವಾಗಿ 20,000 ಪಲ್ಲಾ ಮತ್ತು 5,000ಪಲ್ಲಾಗಳ ಒಟ್ಟು ಪರಿಮಾಣಕ್ಕೆ ನಿಗದಿ ಮಾಡತಕ್ಕದ್ದೆಂದೂ ಸೂಚಿಸಲಾಗಿದೆ. ಈ ವ್ಯವಹಾರದಿಂದ ಆಗತಕ್ಕ ನಷ್ಟದ ಅಂದಾಜು ಸುಮಾರು 2,5೫,000 ರೂಗಳಾಗುವುದೆಂದು ಹೇಳಲಾಗಿದೆ

ಅಕ್ಕಿಯನ್ನು ಸಾಲದ ಮೇಲೆ ಕೊಳ್ಳುವುದಕ್ಕೂ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಅವಕಾಶಕೊಡಲಾಗುವುದು. ಆದರೆ ಈ ರೀತಿ ಸಾಲ ಕೊಡುವುದಕ್ಕೆಂದು ಪರತ್ತನ್ನು ಪಾಕಲಾಗಿದೆ. ಕೊಳ್ಳುವ ಅಕ್ಕಿಯ ಕ್ರಿಂಬಲಗನ್ನು ಕುಂಬಿಗಳಲ್ಲಿ ಏರಿಸಿ ಕಂತುಗಳಿಗೆ ಪಿಂಡಸಂದ ಅರ ಸಂಬಳ ದಿಂದ ವಸೂಲ್ಮಾಡಿಕೊಳ್ಳಬಾಗುವುದು. ಯಾವೊಬ್ಬ ಅಧಿಕಾರಿಗೂ ಸಾಮಾನ್ಯ ರಾಗಿ ಎರಡು ಪಲ್ಲಾಗಳಿಗಿಂತ ಜಾಸ್ತಿಯಾಗಿ ಕೊಡುವುದಿಲ್ಲ.

ಮೈಸೂರು ಶಾಸನ ಸಭೆ ಕಾಂಗ್ರೆಸ್ ಪಕ್ಷ

ತುಂಗಭದ್ರಾ ಡ್ಯಾಂಬಳಿ ಸೇರಲಿದೆ

ಮೈಸೂರು ಶಾಸನ ಸಭೆಯ ಪಕ್ಷದ ಸಭೆಯು ಆಗಸ್ಟ್ ಮೂರನೆಯ ವಾರದಲ್ಲಿ ತುಂಗಭದ್ರಾ ಜಲಾಶಯದಲ್ಲಿ ಸೇರುವುದು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪಕ್ಷದಕಾರ್ಯ ನಿರ್ವಾಹಕ ಸಭೆಯಲ್ಲಿ ಪಕ್ಷದ ಸಭೆಯನ್ನು ಕರೆಯಲು ತೀರ್ಮಾನಿಸಿಕೊಳ್ಳಲಾಯಿತು.

ಸಂಸ್ಥಾನಗಳ ವಿಲೀನದ ವಿಂಗಡನೆಯ ಬಗ್ಗೆ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಲು ಇರುವ ಪ್ರತಿ ಬಂಧಕವನ್ನು ತೆಗೆದು ಹಾಕಬೇಕೆಂದು ಈ ಅಂಶವನ್ನು ಪರಿಶೀಲಿಸಿ ನಿರ್ಧಾರಕ್ಕೆಕೊಳ್ಳಲು ಪಕ್ಷದ ಸಚೆ ಕರೆಯಬೇಕೆಂದು ಪಕ್ಷದ 24 ಮಂದಿ ಸದಸ್ಯರು ಸಹಿ ಹಾಕಿ ಪಕ್ಷದ ನಾಯಕರಿಗೆ ಕಳುಹಿಸಿದ್ದ ಪತ್ರವನ್ನು ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಪರಿಶೀಲಿಸಿ ಪಕ್ಷದ ಸಭೆಯನ್ನು ಆಗಸ್ಟ್ ಮೂರನೆಯ ವಾರದಲ್ಲಿ ತುಂಗಭದ್ರಾ ಜಲಾಶಯ ಪ್ರದೇಶದಲ್ಲಿ ಕರೆಯಬೇಕೆಂದು ತೀರ್ಮಾನಿಸಿತು.

ಬೊಂಬಾಯಿ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಪ್ರಕಟಿಸುತ್ತಿರುವ ಜಾಗೆ ಮೈಸೂರಿನಲ್ಲಿಯೂ ತಾವೆಯ ಕಾಂಗ್ರೆಸ್ ಪಕ್ಷವು ಒಂದು ಬುಲೆಟಿನ್ ಹೊರಡಿಸಬೇಕೆಂದು ತೀರ್ಮಾನವಾಯಿತು.

ಶ್ರೀಮತಿ ಎಂ. ಆರ್. ಲಕ್ಷಮ್ಮ, ಶ್ರೀ ಸಿ. ಆರ್. ರಾಮಯ್ಯ, ಶ್ರೀ ಎಚ್, ಹುಚ್ಚಮಾಸ್ತಿಗೌಡ ಶ್ರೀ ಆರ್.ಅನಂತರಾಮಪ್ಪ ಮತ್ತು ಶ್ರೀ ಡಿ. ವೆಂಕಟೇಶ್ವರಿಂದ ಕೂಡಿದ ಸಂಪಾದಕೀಯ ಸಮಿತಿಯನ್ನು ರಚಿಸಲಾಯಿತು.

ಬುಲೆಟಿನ್ ಪ್ರಥಮ ಸಂಚಿಕೆಯು ಅಕ್ಟೋಬರ್ 2 ನೇ ತಾರೀಖು ಬರಲಿದೆ.

ಅಮೆರಿಕಾ ನಿಲ್ಲಿಸಿದರೇ ನಾವೂ ನಿಲ್ಲಿಸುವುದು,

ಅಮೆರಿಕಾವು ಎಲ್ಲಿಯವರೆಗೆ ಅಟಾಮಿಕ್ ಶಸ್ತ್ರಾಸ್ತ್ರಗಳನ್ನು ತ್ಯಜಿಸುವುದಿಲ್ಲವೋ ಅಲ್ಲಿಯವರೆಗೂ ರಷ್ಯಾವೂ ಅಟಂ ಮತ್ತು ಹೈಡ್ರೋಜನ್ ಶಸ್ತ್ರಾಸ್ತ್ರಗಳ ತಯಾರಿಕೆಯನ್ನು ನಿಲ್ಲಿಸುವುದಿಲ್ಲ ಎಂಬುದಾಗಿ ರಷ್ಯಾದ ಡಿಫೆನ್ಸ್ ಮಂತ್ರಿ ಮಾರ್ಷಲ್ ನಿಕೋಲಾಯ್ ಬಲ್ಗಾನಿನ್ ಹೇಳಿದ್ದಾರೆ.

ಸೋವಿಯಟ್ ಯೂನಿಯನ್ನು ಏಕಾ ಏಕಿಯಾಗಿ ಮತ್ತು ನಿಶ್ಚಯವಾಗಿ ಅಮೆರಿಕಾಕ್ಕೆ ನಿಶ್ಶಸ್ತ್ರಿಕರಿಸುವ ಇಚ್ಛೆಯನ್ನು ಹೊಂದಿಲ್ಲವೆಂದೂ ಅವರು ನುಡಿದಿದ್ದಾರೆ.

ನವಭಾರತಕ್ಕೆ

ಚಂದಾದಾರರಾಗಿರಿ.

ಪರಮಾತ್ಮನು ತನ್ನಲ್ಲೇ ಇರುವನು

ಒಮ್ಮೆ ಒಂದು ಆಶ್ರಮದಲ್ಲಿ ಆರು ಮಂದಿ ಋಷಿಗಳು ಪರಮಾತ್ಮನ ವಿಚಾರವಾಗಿ ಚರ್ಚೆಗೆ ತೊಡಗಿದರು. ಒಬ್ಬನು ಪರಮಾತ್ಮನು ಆಕಾಶವ್ಯಾಪಿಯಾಗಿರುವನೆಂದರೆ, ಇನ್ನೊಬ್ಬನು ಪರಮಾತ್ಮನೆಂದರೆ ಅಗ್ನಿಸ್ವರೂಪಿ ಎಂದನು. ಹೀಗೆ ಚರ್ಚೆ ಮುಂದುವರಿಯುತ್ತೇ ಹೊರತು ಯಾವುದೊಂದೂ ನಿರ್ಣಯವಾಗಲಿಲ್ಲ. ಕಡೆಗೆ ಆ ಆರುಮಂದಿಯೂ ಅಶ್ವಪತಿರಾಜನ ಬಳಿಗೆ ನಡೆದರು. ತಾವು ಬಂದ ವಿಷಯವನ್ನು ತಿಳಿಸಿದರು. ಆಗ ಅಶ್ವಪತಿ ರಾಜನು ಒಬ್ಬೊಬ್ಬರಿಗೇ ಪ್ರಶ್ನೆಹಾಕಿದನು. ಆ ಆರು ಮಂದಿಯಲ್ಲಿ ಔಪಸನ್ಯವನೆಂಬ ಋಷಿ ಪರಮಾತ್ಮನೆಂಬವನು ವಿಸ್ತಾರವಾದ ಆಕಾಶದಲ್ಲಿ ವ್ಯಾಪ್ತನಾಗಿರುವುದರಿಂದ ತಾನು ಆಕಾಶರೂಪಿ ಪರಮಾತ್ಮನನ್ನೇ ಉಪಾಸಿಸುವೆನೆಂದು ಹೇಳಿದನು.

ಸತ್ಯಯಜ್ಞ ಋಷಿ ತಾನು ಜ್ಯೋತಿರ್ಮಯನಾಗಿ ಸೂರ್ಯನಾರಾಯಣನ ರೂಪದಲ್ಲಿರುವ ಪರಮಾತ್ಮನನ್ನೇ ಪರಬ್ರಹ್ಮನೆಂದು ಉಪಾಸನೆಗೈವೆನೆಂದು ತನ್ನ ಅಭಿಪ್ರಾಯವನ್ನು ಸೂಚಿಸಿದನು. ಇಂದ್ರದ್ಯುಮ್ನ ಋಷಿಯಾದರೂ ವೇಗಶಾಲಿಯೂ ಶಕ್ತಿಶಾಲಿಯೂ ಆದ ವಾಯುವಿನಲ್ಲಿ ಪರಬ್ರಹ್ಮಸ್ವರೂಪವನ್ನು ಕಂಡಿದ್ದೇನೆ ಎಂದು ತನ್ನ ಅನುಭೋಗತತ್ವವನ್ನು ಹೇಳಿದನು.

ಜನನೆಂಬ ಋಷಿ ಪರಬ್ರಹ್ಮನು ತೇಜೋಮಯನಾದ ದಿವ್ಯಲೋಕದಲ್ಲಿರುವುದಾಗಿ ತಿಳಿಸಿದನು. ಬುಡಿಲನೆಂಬ ಋಷಿ ಪರಬ್ರಹ್ಮನು ಜಲದಲ್ಲಿ ವ್ಯಾಪ್ತನಾಗಿರುವುದರಿಂದ ವರುಣ ರೂಪಿಯಾದ ಪರಮಾತ್ಮನ ಉಪಾಸನೆಯೇ ಯೋಗ್ಯವೆಂದನು.

ಕಡೆಗೆ ಔದ್ದಾಲಕ ಋಷಿ ವನಸಂಪತ್ತಿಗಳಿಂದಲೂ ನದೀನದ ಸರೋವರಗಳಿಂದಲೂ ಗ್ರಾಮನಗರಗಳಿಂದಲೂ ಶೋಭಿಸುವ ಪೃಥ್ವಿಯೇ ಪರಬ್ರಹ್ಮನ ಆವಾಸವಾದುದರಿಂದ ಪೃಥ್ವೀಸ್ವರೂಪಿಯಾದ ಪರಮಾತ್ಮನ ಉಪಾಸನೆಯೇ ಯೋಗ್ಯವೆಂದು ತನ್ನ ಅಭಿಪ್ರಾಯವನ್ನು ಮುಂದಿಟ್ಟನು.

ಪ್ರಕಾಶನೀ

ಈ ಆರು ಮಂದಿಯ ಮಾತು ಕೇಳಿ ರಾಜಾ ಅಶ್ವಪತಿಯು ಮುಗುಳುನಗುತ್ತ ಹೇಳಿದನು:—

ಮುನಿವರ್ಯರೇ, ಪರಮಾತ್ಮನ ವಿಚಾರದಲ್ಲಿ ನೀವು ಇನ್ನೂ ಬಾಲಕರು. ವೈಶ್ವಾನರನೆಂದು ಕರೆಯಲಾಗುವ ಆ ಪರಮಾತ್ಮನಿಗೆ ಅಲ್ಲಿ ಇಲ್ಲಿ ಎಂದು ಸ್ಥಾನವಿಲ್ಲ. ನಿಶ್ಚಯವನ್ನೆಲ್ಲ ಛಂದನು ಆವರಿಸಿಕೊಂಡಿದ್ದಾನೆ. ಈ ಆಕಾಶ, ಭಾಯು, ಜಲವೆಂದು ಪರಮಾತ್ಮನಿಗೆ ಸ್ಥಾನ ಕಲ್ಪಿಸಬೇಡಿ, ನೀವು ಹೇಳುವ ದಿವ್ಯಲೋಕ ಕೇವಲ ಆತನ ತಿಂಸ್ಸು. ಸೂರ್ಯನು ಆತನ ಕಣ್ಣು, ವಾಯು ಪ್ರಾಣ, ಆಕಾಶವೇ ಶರೀರ, ಜಲವೇ ವಸತಿ, ಪೃಥ್ವಿಯೇ ಪಾದವಾಗಿದೆ. ಆ ವಿಶ್ವವ್ಯಾಪೀ ಪರಮಾತ್ಮನ ಉಪಾಸನೆಗೆ ಅಲ್ಲಿ ಇಲ್ಲಿ ಅಲೆದಾಡಬೇಕಿಲ್ಲ. ಆತನು ನಮ್ಮೆಲ್ಲರ ಹೃದಯಗಳಲ್ಲೂ ಇರುವನು. ಬಾಹ್ಯ ಜಗತ್ತಿನಲ್ಲಿ ಆತನ ಛಾಯೆಯನ್ನು ಮಾತ್ರ ಕಾಣಬಹುದು. ಆತನ ನಿಜ ಸ್ವರೂಪವಿರುವುದು ಜೀವಾತ್ಮನೂ ಆ ಪರಮಾತ್ಮನ ಬಳಿಯಲ್ಲೇ ಇರುವನು. ಆದುದರಿಂದ ಪರಮಾತ್ಮನ ಆದಿವ್ಯಜ್ಯೋತಿಯ ದರ್ಶನಕ್ಕಾಗಿ ಹೃದಯದಾಳವಾಗಲೇಕಾಗ್ರತೆಯನ್ನು ಪಡೆಯಬೇಕು. ಅಂತರಂಗಕ್ಕೆ ಅಲೆದಾಡಬೇಕಾಗಿಲ್ಲ. ಮನಸ್ಸನ್ನು ಪವಿತ್ರ ಆಚರಣೆಗಳಿಂದ ಜೀವಾತ್ಮನಿಗೆ ಪರಮಾತ್ಮನ ದರ್ಶನಕ್ಕಾಗಿ ಅಂತರ್ಮುಖವಾಗಿಸಿದರೆ ಆತ್ಮೀಯ ಜ್ಯೋತಿಯ ದರ್ಶನವಾಗುವುದು. ಕಡೆಗೆ ಒಂದು ದಿನ ಜೀವಾತ್ಮನು ಪರಮಾತ್ಮನಾಗಿ ಮೋಕ್ಷವನ್ನು ಪೊಂದುವನು. ತಸ್ಮಾತ್ ಕೋಮೋ ಜನ ಈ ಶೋಕ ಏಕತ್ವನುಪಶ್ಯತಃ ಎಂದು ಹಿರಿಯರು ಮಾತು ಆ ಮೇಲೆ ಈ ಆತ್ಮನಿಗೆ ಸಂಸಾರಬಂಧನವಿಲ್ಲ ಶೋಕ ಮೋಹಗಳ ಪೀಡೆಯಿಲ್ಲ.

(ಛಾಂದೋಗ್ಯ ಉಪನಿಷತ್ತಿನಿಂದ)

ಶ್ರೀನಗರದ ಅರಮನೆ ಭವ್ಯ ಹೋಟಲಾಗುವುದು

ವಿದೇಶಿ ಪ್ರೇಕ್ಷಕರನ್ನು ಆಕರ್ಷಿಸುವ ಕೇಂದ್ರ

ಶ್ರೀನಗರದ ಭಾರೀ ಅರಮನೆಗಳಲ್ಲಿ ಒಂದಾದ ಗುಪ್ಕಾರ್ ಅರಮನೆಯನ್ನು ಭವ್ಯ ಹೋಟಲಾಗಿ 2 ಕೋಟಿ ರೂ ಗಳ ವೆಚ್ಚದಲ್ಲಿ ಪರಿವರ್ತಿಸಲಾಗುತ್ತಿದೆ. ಇದು ವಿದೇಶೀ ಪ್ರೇಕ್ಷಕರುಗಳನ್ನು ಆಕರ್ಷಿಸುವ ಕೇಂದ್ರವಾಗಲಿದೆ. 1955 ರ ಮಾರ್ಚ್ ಹೊತ್ತಿಗೆ ಈ ಹೋಟಲು ಅರಂಭವಾಗಲಿದೆ.

ದಾಲ್ ಸರೋವರದ ಎದುರಿಗಿರುವ ಈ ಸುಂದರ ಅರಮನೆಗೆ ಅತ್ಯಾಧುನಿಕ ಸೌಕರ್ಯಗಳನ್ನೆಲ್ಲಾ ಅಳವಡಿಸಲಾಗುವುದು. ಪ್ರಖ್ಯಾತ ಜಾಕ್ಸಶಾಹೀ ಜಿಲುಮೆಗಳಿಂದ ಇಲ್ಲಿನ ಉಪಯೋಗಕ್ಕೆ ನೀರಿನ ಸರಬರಾಜು ವ್ಯವಸ್ಥೆ ಏರ್ಪಡಿಸಲಾಗುವುದು. ಸುತ್ತಣ 25 ಎಕರೆ ಪ್ರದೇಶದಲ್ಲಿ ಉತ್ತಮ ಗಾಲ್ಫ್ ಮೈದಾನವನ್ನೂ ಏರ್ಪಡಿಸಲಾಗುವುದು.

ಇಂಡೋ ಚೀನದಲ್ಲಿ

ಕದನವಿರಾಮ

ಜಾರಿಯಲ್ಲಿದ್ದ

ಕಳೆದ 7 ವರ್ಷಗಳಿಂದ ಫ್ರೆಂಚ್ ಮತ್ತು ಇಂಡೋ ಚೀನದ ವಿಟ್‌ಮೀನರ ಮಧ್ಯದ ಯುದ್ಧವು ಕಳೆದವಾರ ಕೊನೆಗಂಡಿತು. ಇದರ ಪ್ರಕಾರ ಫ್ರೆಂಚರು ಕೆಂಪುನದಿಯ ಪ್ರದೇಶವನ್ನು ಬಿಟ್ಟು ಕೊಡಬೇಕಾಗುತ್ತೆ. ಲಾಪ್ಲಾಸ್, ಕಾಂಬೋಡಿಯಗಳಲ್ಲಿ ಎರಡುಪಕ್ಷಗಳವರೂ ತಮ್ಮ ಸೈನ್ಯಗಳನ್ನು ವಾಪಸ್ಸು ಮಾಡಬೇಕಾಗುತ್ತೆ. 1956 ರ ಅಂತ್ಯಭಾಗದಲ್ಲಿ ಜುನಾವಣೆಯನ್ನು ನಡೆಸಿ ರಾಜ್ಯಪುನರ್ನೆಯ ಏರ್ಪಾಟಾಗಲಿದೆ ಈ ಪದನಿರಾಮಪರಿಶೀಲನೆಗಳನ್ನು ಪಾಲಿಸಲು ಭಾರತದ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನಿರ್ಮಿತವಾಗಿದೆ ಭಾರತ ಮತ್ತು ಪೋಲೆಂಡ್‌ಗಳು ಸದಸ್ಯರಾಗಿವೆ.

ರಾಷ್ಟ್ರೀಯ ಯೋಜನೆ ಸಾಲ

ರಾಷ್ಟ್ರೀಯ ಯೋಜನೆಯ ಸಾಲಕ್ಕೆ 150 ಕೋಟಿ ರೂಪಾಯಿಗಳು ಸಂದಾಯವಾದಾಗ ಅದನ್ನು ಮುಚ್ಚುವ ಉದ್ದೇಶವೇನೂ ಇಲ್ಲ.

ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗೆ ಹಣ ಒದಗಿಸಲು ಈ ಸಾಲವೆತ್ತಿತ್ತಿರುವುದರಿಂದ ಅದನ್ನು ಮುಚ್ಚುವುದಿಲ್ಲ. ಪ್ರಾಯಶಃ 1954 ರ ಕೊನೆಯವರೆಗೂ ಸಾಲಗಳನ್ನು ಸ್ವೀಕರಿಸಲಾಗುವುದು.

ಸಂಚಿಕೆ

ಸೋಮವಾರ
ಜುಲೈ
೩೦, ೧೯೩೫
೩೦,

ವರ್ಷ 17
ಸಂಚಿಕೆ 44

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ

ನಾನ್ ಗೆಜಟೆಡ್ ಅಧಿಕಾರಿಗಳಿಗೆ ರಿಪೋಯ್ತಿ ದರದಲ್ಲಿ ಅಕ್ಕಿ

ಮೈಸೂರು ಸರಕಾರದ ಆಜ್ಞೆಯ ವಿವರ

ಬೆಂಗಳೂರು, ಜುಲೈ ೨೫ಅಕ್ಕಿಯು(ಸಿ) ಮತ್ತು (ಡಿ)ದರ್ಜೆಯ ಸ್ಟಾಕುಗಳನ್ನು ಸರಿಯಾಗಿ ಜೋಕ್ಯಟೆಪಡಿಸಿ ಈ ಕೆಳಕಂಡ ಕಡೆಗಳು ದರಗಳಲ್ಲಿ ಸರ್ಕಾರವು ನಾನ್-ಗೆಜೆಟೆಡ್ ಅಧಿಕಾರಿಗಳಿಗೆ ಕೊಡತಕ್ಕದ್ದೆಂದು ಮೈಸೂರು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

(ಸಿ) ದರ್ಜೆಯ ಅಕ್ಕಿ

1 ನೇ ರಯಿಂ ರೂ. ಗೆ 2 ಸೇರು 2 ನೇ ರಯಿಂ (ಬಿಳಿಯದು) ರೂ ಗೆ 2 ಸೇರು ಮತ್ತು 2 ನೇ ರಯಿಂ (ಕೆಂಪದು)ರೂ ಗೆ 3 ಸೇರು.

(ಡಿ) ದರ್ಜೆಯ ಅಕ್ಕಿ

1 ನೆ ರಯಿಂ ರೂಗೆ 2 ಸೇರು, 2 ನೆ ರಯಿಂ (ಬಿಳಿಯದು) ರೂಗೆ 3 ಸೇರು ಮತ್ತು 2 ನೇ ರಯಿಂ (ಕೆಂಪದು) ರೂಗೆ 3 ಸೇರು.

ಈ ರೀತಿ ಅವಶ್ಯಗಿರಿಯಾಯಿತಿದರಗಳಲ್ಲಿ ಸಿ ಮತ್ತು ಡಿ ದರ್ಜೆಗಳ ಅಕ್ಕಿಯ ಮೂರಾಟವನ್ನು ಕ್ರಮವಾಗಿ 20,000 ಪಲ್ಲಾವತ್ತು 5,000 ಪಲ್ಲಾಗಳ ಒಟ್ಟು ಪರಿಮಾಣಕ್ಕೆ ನಿಗದಿ ಮಾಡತಕ್ಕದೆಂದೂ ಸೂಚಿಸಲಾಗಿದೆ. ಈ ವ್ಯವಹಾರದಿಂದ ಆಗತಕ್ಕ ನಷ್ಟವ ಅಂದಾಜು ಸುಮಾರು ೨. ೫೦, ೦೦೦ ರೂಗಳಾಗುವುದೆಂದು ಹೇಳಲಾಗಿದೆ.

ಅಕ್ಕಿಯನ್ನು ಸುಲಭ ಮೇಲ್ಕೆ ಕೊಳ್ಳುವುದಕ್ಕೂ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಅವಕಾಶಕೊಡಲಾಗುವುದು. ಆದರೆ ಈ ರೀತಿ ಸಾಲ ಕೊಡುವುದಕ್ಕೆಂದು ಸರಕ್ಕೆನ್ನು ಹಾಕಲಾಗಿದೆ. ಕೆಂಪಕ್ಕಿಯ ಅಕ್ಕಿಯ ಸ್ಟಾಕುಗಳನ್ನು ಕೆಂಪುಗಳಲ್ಲಿ ಐದು ಕೆಂಪುಗಳಿಗೆ ಮಿರದಂತೆ ಜಿಲ್ಲಾ ಸಂಬಳ ಒಂದು ವಸೂಲ್ಮಾಡಿಕೊಳ್ಳಲಾಗುವುದು. ಯಾವುದೇ ಅಧಿಕಾರಿಗೂ ಸಾಮಾನ್ಯವಾಗಿ ಎರಡು ಪಲ್ಲಂಗಳಿಗಿಂತ ಹೆಚ್ಚಾಗಿ ಕೊಡುವುದಿಲ್ಲ.

ಮೈಸೂರು ಶಾಸನ ಸಭೆ ಕಾಂಗ್ರೆಸ್ ಪಕ್ಷ

ತುಂಗಭದ್ರಾ ಡ್ಯಾಂಬಳಿ ಸೇರಲಿದೆ

ಮೈಸೂರು ಶಾಸನ ಸಭೆಯ ಪಕ್ಷದ ಸಭೆಯು ಆಗಸ್ಟ್ ಮೂಗನೆಯ ವಾರದಲ್ಲಿ ತುಂಗಭದ್ರಾ ಜಲಾಶಯದಲ್ಲಿ ಸೇರುವುದು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪಕ್ಷದಕಾರ್ಯ ನಿರ್ವಾಹಕ ಸಭೆಯಲ್ಲಿ ಪಕ್ಷದ ಸಭೆಯನ್ನು ಕರೆಯಲು ತೀರ್ಮಾನಿಸಿಕೊಳ್ಳಲಾಯಿತು.

ಸಂಸ್ಥಾನಗಳ ಪುನರ್ ನಿರ್ಮಾಣದ ಬಗ್ಗೆ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಲು ಇರುವ ಪ್ರತಿ ಬಂಧಕವನ್ನು ತೆಗೆದು ಹಾಕಬೇಕೆಂದು ಈ ಅವಕಾಶವನ್ನು ಪರಿತೀಲಿಸಿ ನಿರ್ಧಾರಕ್ಕೆಕೊಳ್ಳಲು ಪಕ್ಷದ ಸಭೆ ಕರೆಯಬೇಕೆಂದು ಪಕ್ಷದ 24 ಮಂದಿ ಸದಸ್ಯರು ಸಹಿ ಹಾಕಿ ಪಕ್ಷದ ನಾಯಕರಿಗೆ ಕಳುಹಿಸಿದ್ದ ಪತ್ರವನ್ನು ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಪರಿತೀಲಿಸಿ ಪಕ್ಷದ ಸಭೆಯನ್ನು ಆಗಸ್ಟ್ ಮೂರನೆಯ ವಾರದಲ್ಲಿ ತುಂಗಭದ್ರಾ ಜಲಾಶಯ ಪ್ರದೇಶದಲ್ಲಿ ಕರೆಯಬೇಕೆಂದು ತೀರ್ಮಾನಿಸಿತು.

ಬೊಂಬಾಯಿ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಪ್ರಕಟಿಸುತ್ತಿರುವ ಹಾಗೆ ಮೈಸೂರಿನಲ್ಲಿಯೂ ಶಾಖೆಯ ಕಾಂಗ್ರೆಸ್ ಪಕ್ಷವು ಒಂದು ಬುಲೆಟಿನ್ ಹೊರಡಿಸಬೇಕೆಂದು ತೀರ್ಮಾನವಾಯಿತು.

ಶ್ರೀಮತಿ ಎಂ. ಆರ್. ಲಕ್ಷಮ್ಮ, ಶ್ರೀ ಪಿ. ಆರ್. ರಾಮಯ್ಯ, ಶ್ರೀ ಎಸ್, ಹುಚ್ಚೆ ಮಾಸ್ತಿಗೌಡ ಶ್ರೀ ಆರ್.ಅನಂತರಾಮನ್ ಮತ್ತು ಶ್ರೀ ಡಿ. ವೆಂಕಟೇಶ್‌ರಿಂದ ಕೂಡಿದ ಸಂಪಾದಕೀಯ ಸಮಿತಿಯನ್ನು ರಚಿಸಲಾಯಿತು.

ಬುಲೆಟಿನ್ ಪ್ರಥಮ ಸಂಚಿಕೆಯು ಅಕ್ಟೋಬರ್ ೨ ನೇ ತಾರೀಖು ಬರಲಿದೆ.

ಅಮೆರಿಕಾ ನಿಲ್ಲಿಸಿದರೇ ನಾವೂ ನಿಲ್ಲಿಸುವುದು,

ಅಮೆರಿಕಾವು ಎಲ್ಲಿಯವರೆಗೆ ಅಟಾಮಿಕ್ ಶಸ್ತ್ರಾಸ್ತ್ರಗಳನ್ನು ತ್ಯಜಿಸುವುದಿಲ್ಲವೋ ಅಲ್ಲಿಯವರೆಗೂ ರಷ್ಯಾವೂ ಅಟಂ ಮತ್ತು ಹೈಡ್ರೋಜನ್ ಶಸ್ತ್ರಾಸ್ತ್ರಗಳ ತಯಾರಿಕೆಯನ್ನು ನಿಲ್ಲಿಸುವುದಿಲ್ಲ ಎಂಬುದಾಗಿ ರಷ್ಯಾದ ಡಿಫೆನ್ಸ್ ಮಂತ್ರಿ ಮಾರ್ಷಲ್ ನಿಕೋಲಾಯ್ ಬಲ್ಗಾನಿನ್ ಹೇಳಿದ್ದಾರೆ.

ಸೋವಿಯಟ್ ಯೂನಿಯನ್ನು ಏಕಾಏಕಿಯಾಗಿ ಮತ್ತು ನಿಶ್ಚಯವಾಗಿ ಅಮೆರಿಕಾಕ್ಕೆ ನಿಕ್ಕಿಕೊಳ್ಳುವ ಇಚ್ಛೆಯನ್ನು ಹೊಂದಿಲ್ಲವೆಂದೂ ಅವರು ನುಡಿದಿದ್ದಾರೆ.

ನವಭಾರತಕ್ಕೆ

ಚಂದಾದಾರರಾಗಿರಿ.

ಪರಮಾತ್ಮನು ತನ್ನಲ್ಲೇ ಇರುವನು

ಒಮ್ಮೆ ಒಂದು ಆಶ್ರಮದಲ್ಲಿ ಆರು ಮಂದಿ ಋಷಿಗಳು ಪರಮಾತ್ಮನ ವಿಚಾರವಾಗಿ ಚರ್ಚೆಗೆ ತೊಡಗಿದರು. ಒಬ್ಬನು ಪರಮಾತ್ಮನು ಆಕಾಶವ್ಯಾಪಿಯಾಗಿರುವನೆಂದನೆ, ಇನ್ನೊಬ್ಬನು ಪರಮಾತ್ಮನೆಂದರೆ ಅಗ್ನಿಸ್ವರೂಪಿ ಎಂದನು ಹೀಗೆ ಚರ್ಚೆ ಮುಂದುವರಿಯುತ್ತೇ ಹೊರತು ಯಾವುದೊಂದೂ ನಿರ್ಣಯವಾಗಲಿಲ್ಲ. ಕಡೆಗೆ ಆ ಆರುಮಂದಿಯೂ ಅಶ್ವಪತಿರಾಜನ ಬಳಿಗೆ ನಡೆದರು. ತಾವು ಬಂದ ವಿಷಯವನ್ನು ತಿಳಿಸಿದರು. ಆಗ ಅಶ್ವಪತಿ ರಾಜನು ಒಬ್ಬೊಬ್ಬರಿಗೇ ಪ್ರಶ್ನೆ ಹಾಕಿದನು. ಆ ಆರು ಮಂದಿಯಲ್ಲಿ ಔಪಸ್ಯನನೆಂಬ ಋಷಿ ಪರಮಾತ್ಮನೆಂಬವನು ವಿಸ್ತಾರವಾದ ಆಕಾಶವಲ್ಲಿ ವ್ಯಾಪ್ತನಾಗಿರುವುದರಿಂದ ತಾನು ಆಕಾರರೂಪಿ ಪರಮಾತ್ಮನನ್ನೇ ಉಪಾಸಿಸುವೆನೆಂದು ಹೇಳಿದನು.

ಸತ್ಯಯಜ್ಞ ಋಷಿ ತಾನು ಜ್ಯೋತಿರ್ಮಯನಾಗಿ ಸೂರ್ಯನಾರಾಯಣನ ರೂಪದಲ್ಲಿರುವ ಪರಮಾತ್ಮನನ್ನೇ ಪರಬ್ರಹ್ಮನೆಂದು ಉಪಾಸನೆಗೈವೆನೆಂದು ತನ್ನ ಅಭಿಪ್ರಾಯವನ್ನು ಸೂಚಿಸಿದನು. ಇಂದ್ರದ್ಯುಮ್ನ ಋಷಿ ತಾನು ನೇಗಿಲಾಲಿಯೂ ಶಕ್ತಿಶಾಲಿಯೂ ಆದ ವಾಯುವಿನಲ್ಲಿ ಪರಬ್ರಹ್ಮ ಸ್ವರೂಪವನ್ನು ಕಂಡಿದ್ದೇನೆ ಎಂದು ತನ್ನ ಮನೋಗತವನ್ನು ಹೇಳಿದನು.

ಜನನೆಂಬ ಋಷಿ ಪರಬ್ರಹ್ಮನು ತೇಜೋಮಯವಾದ ದಿವ್ಯಲೋಕದಲ್ಲಿರುವುದಾಗಿ ತಿಳಿಸಿದನು. ಬುಡಿಲನೆಂಬ ಋಷಿ ಪರಬ್ರಹ್ಮನು ಜಲದಲ್ಲಿ ವ್ಯಾಪ್ತನಾಗಿರುವುದರಿಂದ ವರುಣ ರೂಪಿಯಾದ ಪರಮಾತ್ಮನ ಉಪಾಸನೆಯೇ ಯೋಗ್ಯವೆಂದನು.

ಕಡೆಗೆ ಔದ್ದಾಲಕ ಋಷಿ ವನಪಶುಪತಿಗಳಿಂದಲೂ ನದೀನದ ಸರೋವರಗಳಿಂದಲೂ ಗ್ರಾಮನಗರಗಳಿಂದಲೂ ಶೋಭಿಸುವ ಪೃಥ್ವಿಯೇ ಪರಬ್ರಹ್ಮನ ಆವಾಸವಾದುದರಿಂದ ಪೃಥ್ವೀಸ್ವರೂಪಿಯಾದ ಪರಮಾತ್ಮನೆ ಉಪಾಸ್ಯನು ಎಂದು ತನ್ನ ಅಭಿಪ್ರಾಯವನ್ನು ಮುಂದಿಟ್ಟನು.

ಪ್ರಕಾಶನೀ

ಈ ಆರು ಮಂದಿಯ ಮಾತು ಕೇಳಿ ರಾಜಾ ಅಶ್ವಪತಿ ಮುಗುಳುನಗುತ್ತ ಹೇಳಿದನು:—

ಮುನಿವರ್ಯರೇ, ಪರಮಾತ್ಮನ ವಿಚಾರದಲ್ಲಿ ನೀವು ಇನ್ನೂ ಬಾಲಕರು. ವೈಶ್ವಾನರನೆಂದು ಕರೆಯಲ್ಪಡುವ ಆ ಪರಮಾತ್ಮನಿಗೆ ಅಲ್ಲಿ ಇಲ್ಲಿ ಎಂದು ಸ್ಥಾನವಿಲ್ಲ ವಿಶ್ವವನ್ನೆಲ್ಲ ಆವರಿಸಿಕೊಂಡಿದ್ದಾನೆ. ಈ ಆಕಾಶ, ವಾಯು, ಜಲವೆಂದು ಪರಮಾತ್ಮನಿಗೆ ಸ್ಥಾನ ಕಲ್ಪಿಸಬೇಡಿ, ನೀವು ಹೇಳುವ ದಿವ್ಯಲೋಕ ಕೇವಲ ಆತನ ಪಿಂಡಸ್ಥಾನ. ಸೂರ್ಯನು ಆತನ ಕಣ್ಣು, ವಾಯು ಪ್ರಾಣ, ಆಕಾಶವೇ ಶರೀರ, ಜಲವೇ ವಸತಿ, ಪೃಥ್ವಿಯೇ ಪಾದವಾಗಿದೆ. ಆ ವಿಶ್ವವ್ಯಾಪಿ ಪರಮಾತ್ಮನ ಉಪಾಸನೆಗೆ ಅಲ್ಲಿ ಇಲ್ಲಿ ಅಲೆದಾಡಬೇಕಿಲ್ಲ. ಆತನು ನಮ್ಮೆಲ್ಲರ ಹೃದಯಗಳಲ್ಲೂ ಇರುವನು. ಬಾಹ್ಯ ಜಗತ್ತಿನಲ್ಲಿ ಆತನ ಛಾಯೆಯನ್ನು ಮಾತ್ರ ಕಾಣಬಹುದು. ಆತನ ನಿಜ ಸ್ವರೂಪವಿರುವುದು ಜೀವಾತ್ಮನೂ ಆ ಪರಮಾತ್ಮನ ಬಳಿಯಲ್ಲೇ ಇರುವನು. ಆದುದರಿಂದ ಪರಮಾತ್ಮನ ಆದಿತ್ಯಜ್ಯೋತಿಯ ದರ್ಶನವಾಗಬೇಕಾದರೆ ಹೃದಯ ಶುದ್ಧವಾಗಬೇಕು. ಪ್ರಾಪಂಚಿಕ ಬೇಕು ಬೇಡಗಳಿಗೆ ಅಲೆದಾಡಬೇಕಾಗಿಲ್ಲ ಶುದ್ಧಜ್ಞಾನ, ಪವಿತ್ರ ಆಚರಣೆಗಳಿಂದ ಜೀವ ತನಗೆ ಪರಮಾತ್ಮನ ದರ್ಶನವಾಗುವುದು. ಈತನೇ ಯ ಜ್ಯೋತಿಯ ದರ್ಶನವಾಗುವುದು. ಕಡೆಗೆ ಒಂದು ದಿನ ಜೀವಾತ್ಮನು ಮುಕ್ತನಾಗಿ ಮೋಕ್ಷವನ್ನು ಹೊಂದುವನು. ತಸ್ಯ ಕೋಮೋ ಪಃ ಕಃ ಶೋಕಃ ಏಕತ್ವಮನು ಪಶ್ಯತಃ ಎಂದು ಹಿರಿಯರು ಮಾತು ಆ ಮೇಲೆ ಈ ಆತ್ಮನಿಗೆ ಸಂಸಾರಬಂಧನವಿಲ್ಲ ಶೋಕ ಮೋಹಗಳ ಪೀಡೆಯಿಲ್ಲ.

(ಛಾಂದೋಗ್ಯ ಉಪನಿಷತ್ತಿನಿಂದ)

ಶ್ರೀನಗರದ ಅರಮನೆ ಭವ್ಯ ಹೋಟೆಲಾಗುವುದು

ವಿದೇಶಿ ಪ್ರೇಕ್ಷಕರನ್ನು ಆಕರ್ಷಿಸುವ ಕೇಂದ್ರ

ಶ್ರೀನಗರದ ಭಾರೀ ಅರಮನೆಗಳಲ್ಲಿ ಒಂದಾದ ಗುಪ್‌ಕಾರ್ ಅರಮನೆಯನ್ನು ಭವ್ಯ ಹೋಟೆಲಾಗಿ 2 ಕೋಟಿ ರೂ. ಗಳ ವೆಚ್ಚದಲ್ಲಿ ಪರಿವರ್ತಿಸಲಾಗುತ್ತಿದೆ. ಇದು ವಿದೇಶೀ ಪ್ರೇಕ್ಷಕರುಗಳನ್ನು ಆಕರ್ಷಿಸುವ ಕೇಂದ್ರವಾಗಲಿದೆ. 1955 ರ ಮಾರ್ಚಿ ಹೊತ್ತಿಗೆ ಈ ಹೋಟಲು ಆರಂಭವಾಗಲಿದೆ.

ದಾಲ್ ಸರೋವರದ ಎದುರಿಗಿರುವ ಈ ಸುಂದರ ಅರಮನೆಗೆ ಆತ್ಯಾಧುನಿಕ ಸೌಕರ್ಯಗಳನ್ನೆಲ್ಲಾ ಅಳವಡಿಸಲಾಗುವುದು ಪ್ರಖ್ಯಾತ ಚಾತ್ಮಶಾಹೀ ಚಿಲುಮೆಗಳಿಂದ ಇಲ್ಲಿನ ಉಪಯೋಗಕ್ಕೆ ನೀರಿನ ಸರಬರಾಜು ವ್ಯವಸ್ಥೆ ಏರ್ಪಡುವುದು. ಸುತ್ತಣ 23 ಎಕರೆ ಪ್ರದೇಶದಲ್ಲಿ ಉತ್ತಮ ಗಾರ್ಡ್ಸ್ ಮೈದಾನವನ್ನೂ ಏರ್ಪಡಿಸಲಾಗುವುದು.

ಇಂಡೋ ಚೀನದಲ್ಲಿ

ಕದನವಿರಾಮ

ಜಾರಿಯಲ್ಲಿದ್ದ

ಕಳೆದ 7 ವರ್ಷಗಳಿಂದ ಫ್ರೆಂಚ್ ಮತ್ತು ಇಂಡೋ ಚೀನದ ವಿಟ್‌ಮೀನರ ಮಧ್ಯದ ಯುದ್ಧವು ಕಳೆದವಾರ ಕೊನೆಗಂಡಿತು. ಇದರ ಹಸ್ತಾಕ್ಷರಕ್ಕೆ ಫ್ರೆಂಚರು ಕೆಂಪುನದಿಯ ಪ್ರದೇಶವನ್ನು ಬಿಟ್ಟು ಕೊಡಬೇಕಾಗುತ್ತ ಲಾಪೊಸ್, ಕಾಂಬೋಡಿಯಗಳಲ್ಲಿ ಎರಡುಸಹಸ್ರಗಳವೂ ಸೈನ್ಯಗಳನ್ನು ಪಾಲಿಮಾಡಬೇಕಾಗುತ್ತೆ. 1956 ರ ಅಂತ್ಯಭಾಗದಲ್ಲಿ ಜುನಾವಣೆಯುನೆಪದು ರಾಜ್ಯಘಟನೆಯ ಏರ್ಪಾಟಾಗಲಿದೆ ಈ ಪದನವಿರಾಮಸಂಧರ್ಭಗಳನ್ನು ಪಾಲಿಸಲು ಭಾರತದ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನಿರ್ಮಿತವಾಗಿದೆ ಭಾರತ ಮತ್ತು ಪೋಲೆಂಡೆಗಳು ಸದಸ್ಯರಾಗಿವೆ.

ರಾಷ್ಟ್ರೀಯ ಯೋಜನೆ ಸಾಲ

ರಾಷ್ಟ್ರೀಯ ಯೋಜನೆಯ ಸಾಲಕ್ಕೆ 150 ಕೋಟಿ ರೂಪಾಯಿಗಳು ಸಂದಾಯವಾದಾಗ ಅದನ್ನು ಮುಚ್ಚುವ ಉದ್ದೇಶವೇನೂ ಇಲ್ಲ.

ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗೆ ಹಣ ಒದಗಿಸಲು ಈ ಸಾಲವೆತ್ತುತ್ತಿರುವುದರಿಂದ ಅದನ್ನು ಮುಚ್ಚುವುದಿಲ್ಲ. ವ್ಯಾಯಶಃ 1954 ರ ಕೊನೆಯವರೆಗೂ ಸಾಲಗಳನ್ನು ಸ್ವೀಕರಿಸಲಾಗುವುದು.

ಬಳ್ಳಾರಿ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

S. C. 126/54

BETWEEN

ಚಿಕ್ಕಂತಾಪುರ ಜನ್ನಬಸಪ್ಪ ತಂದೆ
ದೊಡ್ಡಬಸಪ್ಪ – ವಯಸ್ಸು 35
ಲಿಂಗಯ್ಯ – ಜಿರಾಯ್ತಿ – ಚಿಕ್ಕಂತಾಪುರ
ಸೊಂಡೂರು ತಾ॥ — ವಾದಿ

Vs.

ಸಿದ್ದಪ್ಪ ತಂದೆ ಬಂಗಾರ್ಯಪ್ಪ ವಯಸ್ಸು 35
ಕುರುಬ – ಜಿರಾಯ್ತಿ – ಕಾರುಗೋಡು
ಬಳ್ಳಾರಿ ತಾ॥ — ಪ್ರತಿವಾದಿ

ಪ್ರತಿವಾದಿಗೆ ನೋಟೀಸು

ಮೇಲೆ ಕಾಣಿಸಿದ ವಾದಿಯು ಪ್ರತಿವಾದಿಯ ಮೇಲೆ ಕಸ್ಟ ಜಾಕೆಯನ್ನು ಬರ ಮಾಡಿಕೊಳ್ಳಲು ಸ್ವಾಮಿಸರಿ ನೋಟೀನನೋಲೆ ರೂ. 116/– ಗೆ ದಾವಾಖಾಯಲು ಮಾಡಿರುತ್ತಾನೆ. ಸದರಿ ನಂಬರಿನ ವಾಯ್ದೆ ತಾ. 31–7–54 ಕ್ಕೆ ಇರುತ್ತದೆ ಆ ವಾಯ್ದೆಗೆ ನೀವು ಖುದ್ದಾಗಲಿ – ಅಥವಾ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ತಕರಾರುಗಳನ್ನು ತಿಳಿಸಬೇಕು. ಇಲ್ಲವಾದರೆ ನಿಮ್ಮ ವಿರೋಧವಾಗಿ ಏಕಪಕ್ಷ (ಎಕ್ಸಪಾರ್ಟೆ) ತೀರ್ಮಾನ ವಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಡಿ. ಪದ್ಮಣ್ಣಾಚಾರ್
ವಾದಿ ವಕೀಲ

ಸ್ವಾಮಿವಿವೇಕಾನಂದ

ಲಕ್ಷ್ಯವಿಲ್ಲದ ವಿದ್ಯಾರ್ಥಿ

ಒಂದು ಹಳ್ಳಿಯ ಶಾಲೆಯಲ್ಲಿ ಗುರುಗಳು ವರ್ಗದ ವಿದ್ಯಾರ್ಥಿಗಳಿಗೆ ಒಂದು ಪಾಠ ಹೇಳಿಕೊಡುತ್ತಿದ್ದರು. ಆದರೆ ವರ್ಗದಲ್ಲಿಯ ಒಬ್ಬ ವಿದ್ಯಾರ್ಥಿಯ ಲಕ್ಷ್ಯವು ಪಾಠದ ಕಡೆಗಿರದ್ದು ಗುರುಗಳ ಲಕ್ಷ್ಯಕ್ಕೆ ಬಂದಿತು ವಿದ್ಯಾರ್ಥಿಯು ಕೈಯಲ್ಲಿಯ ಪುಸ್ತಕದ ಕಡೆಗೂ ನೋಡುತ್ತಿದ್ದಿಲ್ಲ. ಗುರುಗಳು ಹೇಳುತ್ತಿದ್ದುದನ್ನು ಕೇಳುತ್ತಲೂ ಇರಲಿಲ್ಲ. ಕಿಡಿಕಿಯೊಳಗಿಂದ ಹೊರಗೆ ಏನನ್ನೋ ನೋಡುತ್ತಿದ್ದನು.

ಗುರುಗಳು ಸ್ವಲ್ಪಹೊತ್ತು ಅವನನ್ನು ನಿರೀಕ್ಷಿಸಿ, ಅವನ ಹತ್ತರ ಭರದಿಂದ ಹೋದರು ಮತ್ತು 'ಎಲ್ಲಿದೆನಿನ್ನ ಲಕ್ಷ್ಯ? ಹೋರಗೆ ಏನು ನೋಡುತ್ತಿ? ಎಂದು ಗಟ್ಟಿಯಾಗಿ ಕೂಗಿದರು. ವಿದ್ಯಾರ್ಥಿಯು ಇಲ್ಲ ಗುರುಗಳೇ ನೀವು ಹೇಳುತ್ತಿದ್ದುದನ್ನೇ ಕೇಳುತ್ತಿದ್ದೆ" ಎಂದ ಸಂಪೂರ್ಣಸುಳ್ಳು ಹೇಳುತ್ತೀ ಎಂದು ಗುರುಗಳು ಇನ್ನಿಷ್ಟು ಎತ್ತರನ ಧ್ವನಿಯಲ್ಲಿ ಆರ್ಭಟಿಸಿದರು. ಇಲ್ಲ ನಿಜವಾಗಿ" ಎಂದ ವಿದ್ಯಾರ್ಥಿ. 'ಹಾಗಾದರೆ ನಾನು ಹೇಳಿದುದೇನು ಎಂಬುದನ್ನು ಹೇಳುವೆಯಾ? ಎಂದರು ಗುರುಗಳು ಒಂದಕ್ಷರ ಬಿಡದೆ ಹೇಳುತ್ತೇನೆ' ಎಂದ ಪುಂಡುಗ. ಅದಕ್ಕೆ ತಪ್ಪಿದರೇ ನಿನ್ನ ಸ್ಯಬಾಯುವುದು ಎಂದರು ಶಿಕ್ಷಕರು. ಹಾಗೇ ಆಗಲಿ ಎಂದಪುಂಡುಗ.

ಗುರುಗಳು ಆ ವಿದ್ಯಾರ್ಥಿಗೆ ಎದ್ದುನಿಲ್ಲಲು ಹೇಳಿದರು- ಮತ್ತು ತಾವು ಹೇಳಿದುದೇನು ಎಂಬುದನ್ನು ಹೇಳಲು ಕೇಳಿದರು

ವರ್ಗದ ವಿದ್ಯಾರ್ಥಿಗಳೆಲ್ಲರೂ ಈ ಪ್ರಸಂಗದಿಂದ ಗಾಬರಿಗೊಂಡಿದ್ದರು. ಅವನು ಹೇಳಲು ತಪ್ಪಿದರೆ ಅವನ ಗತಿಯೇನು ? ಎಂದು ಗುಣುಗುಟ್ಟುತ್ತಿದ್ದರು.

ಆಗ ಆ ವಿದ್ಯಾರ್ಥಿಯು, ಗುರುಗಳು ಹೇಳಿದ ಸರ್ವ ವಿಷಯವನ್ನು ಒಂದಕ್ಷರ ಬಿಡದಂತೆ ಬಾಯಿಪಾಠ ಮಾಡಿದಂತೆ ಹೇಳಿಬಿಟ್ಟನು. ಅದನ್ನು ಕೇಳುತ್ತಲೇ ಎಲ್ಲ ವಿದ್ಯಾರ್ಥಿಗಳು ಆಶ್ಚರ್ಯಾನಂದಗಳಿಂದ ಬಹಳಹೊತ್ತು ಮಾತಾಡದರು.

ಗುರುಗಳೂ ಈ ಪ್ರಸಂಗದಿಂದ ದಿಙ್ಮೂಢರಾದರು. ಅನಂತರ ಗೆ ಬಂದಿದ್ದ ಸಿಟ್ಟು ಎಲ್ಲಿಯೋ ಮಾಯವಾಗಿ ಹೋಯಿತು. ಆಗ ಅವರು ನರೇಂದ್ರ. ಈ ನಿನ್ನ ಅಗಾಧ ಬುದ್ಧಿಯಿಂದ ಒಂದು ದಿವಸ ಇಡಿ ಜಗತ್ತನ್ನೇ ಚಕಿತಗೊಳಿಸುವಿ ಎಂದರು.

ಅದೇ ಮೇರೆಗೆ ಆವಿದ್ಯಾರ್ಥಿಯುತನ ಮುಂದಿನ ಆಯುಷ್ಯದಲ್ಲಿ ತನ್ನ ಗುರುಗಳು ಹೇಳಿದ ಭವಿಷ್ಯವನ್ನು ನಿಜಗೊಳಿಸಿತೋರಿಸಿದ. ಅವನು ಜೊಹ್ಡ ಮೇಧಾವಿ ಮತ್ತು ಉಪದೇಶಕನೆನಿಸಿಕೊಂಡ. ಅವನ ಮಾಡಿದ ಭಾಷಣಗಳನ್ನು ಜಗತ್ತೇ ಲಕ್ಷ್ಯಗೊಟ್ಟು ಕೇಳಿತು, ಮತ್ತು ಆಶ್ಚರ್ಯಪಟ್ಟಿತು. ಅವನ ಎಲ್ಲ ಭಾಷಣಗಳು ಮತ್ತು ಲೇಖನಗಳು ಪುಸ್ತಕ ರೂಪದಲ್ಲಿ ಪ್ರಕಟಿಸಲ್ಪಟ್ಟವು, ಇಂದಿಗೂ ಜನತೆಯಿಂದ ಆಸ್ಥೆಯೊಡನೆ ಓದಲ್ಪಡುತ್ತಿವೆ.

ಅವನು ಅಸಾಮಾನ್ಯವ್ಯಕ್ತಿಯೆಂದೆನಿಸಿಕೊಂಡನು. ಒಂದೇ ಕಾಲದಲ್ಲಿ ಅನೇಕ ಕೆಲಸಗಳನ್ನು ಮಾಡುವ ಅವನ ಶಕ್ತಿಯು ಆವಿದ್ಯಾರ್ಥಿ ದೆಸೆಯಲ್ಲಿ, ವರ್ಗದಲ್ಲಿಯ ಪ್ರಸಂಗದಲ್ಲಿ ವ್ಯಕ್ತವಾದಂತೆ, ಮುಂಜೆಕೂಡ, ಗೊಡ್ಡ ಪ್ರಮಾಣದಲ್ಲಿ ಕಂಡು ಬಂದಿತು. ಆ ವ್ಯಕ್ತಿಯೇ ವಿವೇಕಾನಂದ

ಭಾರತೀಯ ಅಂಚೆ ಕಛೇರಿಯ ಇತಿಹಾಸ

ಯುಗಳರಿಂದ ರ್ಗಾಳರ ವರೆಗಿನ ಭಾರತೀಯ ಅಂಚೆ ಕಛೇರಿಯ ಇತಿಹಾಸ ಪ್ರೊಂದನ್ನು ಅಕ್ಟೋಬರ್ ೧ನೇ ತಾರೀಕು ಭಾರತೀಯ ಅಂಚೆ ಸ್ವಾಂಪು ಶತಮಾನೋತ್ಸವದ ನೆನಪಾಗಿ ಕೇಂದ್ರ ಸರ್ಕಾರವು ಪ್ರಕಟಿಸಲಿದೆ.

ಮಂಡ್ಯ ಸಕ್ಕರೆಗೆ ೨೯ ರೂಪಾಯಿ ದರ

ಕೇಂದ್ರ ಸರ್ಕಾರದ ನಿಗದಿ

ಮಂಡ್ಯ ಸಕ್ಕರೆ ಕಂಪನಿಯು ತಯಾರಿಸಿದ ಸಕ್ಕರೆಗೆ ಮಣಕ್ಕೆ ೨೪ ರೂಪಾಯಿಯಂತೆ ದರವನ್ನು ಭಾರತ ಸರ್ಕಾರದ ಆಹಾರ ಇಲಾಖೆಯು ನಿಗದಿ ಮಾಡಿದೆ.

ರ್ಗಾಖ-ಖಳರ ಅರೆಯುವ ಸೀಸನ್ನಿನಲ್ಲಿ ಉತ್ಪನ್ನವಾದ ಇ–ಎ ಗ್ರೇಡಿನ ಸಕ್ಕರೆಗೆ ಇದು ಅನ್ವಯಿಸುವುದು. ಉತ್ತರ ಪ್ರದೇಶ ಮತ್ತು ಬೀಹಾರ್‌ಗಳ ಕಾರ್ಖಾನೆಗಳಿಗೂ ಹೆಚ್ಚು ಕಡಿಮೆ ಇದೇ ದರಗಳನ್ನು ಗೊತ್ತು ಪಡಿಸಿದೆ.

ಬಳ್ಳಾರಿ 'ಪ್ರಭಾತ, ದಲ್ಲಿ 'ನೋಡಿರಿ, ಆನಂದಪಡಿರಿ,

ರಮ್ಯವಾದ ಶನೇವಾರ

ಪ್ರತಿದಿನವು ಎರಡು ಆಟಗಳು ಸಾ|| 6-10, ರಾ|| 9-30

ಎ. ಪಿ. ಯಂ ರವರ

★ 'ಸಂಗಂ' ★

[ಸುಪ್ರಸಿದ್ಧ ತೆಲುಗು - ಚಿತ್ರ]

ಇದರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, ಯಸ್. ವಿ. ರಂಗರಾವ್ ವೈಜಯಂತಿಮಾಲ, ಅಂಜಲಿದೇವಿ ನಟಿಸಿದ್ದಾರೆ:—

.... ಸಂಗೀತ ರಸವತ್ತರ ಚಿತ್ರ ....

.... ಶೀಘ್ರವಾಗಿ ಬರಲಿದೆ .... ಜನತಾರವರ ....

★ ಪರಿವರ್ತನ ★

ಜಯರಾಜ ಫಿಲ್ಮಸ್ ರವರ

★ ನಟಶೇಖರ ★

(ಅದ್ಭುತಕನ್ನಡಚಿತ್ರ)

ನಿರ್ಮಾಪಕ — ನಿರ್ದೇಶಕ — ಪಿ. ವಿ. ರಾಜು

ಬಳ್ಳಾರಿ

ಒಳಾಡಳಿತ ಮಂತ್ರಿಗಳ ಭೇಟಿ

ಮೈಸೂರಿನ ಒಳಾಡಳಿತ ಮಂತ್ರಿಗಳಾದ ಶ್ರೀ ಹೆಚ್. ಸಿದ್ದವೀರಪ್ಪನವರು ತಮ್ಮ ಸಿಬ್ಬಂದಿಯೊಂದಿಗೆ ಮತ್ತು ವ್ಯವಸಾಯ ಜೈರೆಕ್ಟರೊಂದಿಗೆ ಜುಲೈ ೧೭ ರಂದು ಸಾಯಂಕಾಲ ಬಳ್ಳಾರಿಗೆ ಆಗಮಿಸಿದರು. ಡಿ. ಐ. ಜಿ, ಡಿ. ಎಸ್. ಪಿ. ಮೊದಲಾದ ಅಧಿಕಾರಿಗಳು ಅವರನ್ನು ಭೇಟಿಮಾಡಿದರು. ಅನಂತರ ಪಟ್ಟಣಿಗರ ಪರವಾಗಿ ಜನಾಬ್ ಅಬ್ದುಲ್ ರಜಾಕ್ ಸಾಹೇಬರವರು, ಜಿಲ್ಲಾ ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷ ಮತ್ತು ಕಾರ್ಯದರ್ಶಿ ಶ್ರೀ ತಿಮ್ಮಪ್ಪ ಮತ್ತು ಶ್ರೀ ಶೇಷಗಿರಿ ಸಾವ್ ಮೊದಲಾದವರು ಪೌರಸಭೆಯನ್ನು ಕೂಡಲೇ ರದ್ದು ಪಡಿಸಬೇಕೆಂದು ಕೋರಿದರು. ಸಾರಿಗೆ (ಟ್ರಾನ್ಸ್‌ಪೋರ್ಟ್) ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ಲಿಂಗಾರೆಡ್ಡಿಯವರು ಸಾರಿಗೆಯ ಕಷ್ಟ ಗಳನ್ನು ವಿವರಿಸಿ, ಡಬಲ್ ಟ್ಯಾಕ್ಸೇಷನ್ ಕೊಡಬೇಕಾದುದನ್ನು ತಪ್ಪಿಸಬೇಕೆಂದು ಅರಿಕೆ ಮಾಡಿದರು. ಸರ್ಕಲ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಡಿ. ಹೆಚ್. ವೆಂಕೋಬರಾಯರು ಒಂದುಮನವಿಯನ್ನು ಅರ್ಪಿಸಿ ಉದ್ಯೋಗ ಪರಿಸ್ಥಿತಿಯ ಸುಧಾರಣೆಯನ್ನು ಕೋರಿದರು. ಮಂತ್ರಿಗಳು ಸೂಕ್ತವಾದ ಉತ್ತರವಿತ್ತರು.

ಜುಲೈ ೧೭ ರಂದು ಪ್ರಾತಃಕಾಲ ಅಸೋಸಿಯೇಶ್ನನವರು ತಮ್ಮ ಬೇಡಿಕೆಗಳನ್ನು ಸೆಂಟ್ರಲ್ ಕೋ-ಆಪರೇಟಿವ್ ಸ್ಟೋರ್ಸ್ ಭವನದಲ್ಲಿ ಮಂತ್ರಿಗಳಲ್ಲಿ ಸಲ್ಲಿಸಿದರು. ಉಪಾಹಾರವನ್ನು ಏರ್ಪಡಿಸಲಾಗಿತ್ತು.

ಮಂತ್ರಿಗಳು ಅನಂತರ ಶಿರಗುಪ್ಪೆಯ ವ್ಯವಸಾಯ ಪರಿಶೋಧನಾ ಕೇಂದ್ರಕ್ಕೆ ಭೇಟಿಕೊಟ್ಟು ಅಲ್ಲಿ ನಡೆಯುವ ಪರಿಶೋಧನಾ ಕಾರ್ಯಗಳನ್ನು ಆಸಕ್ತಿಯಿಂದ ಪರಿಶೀಲಿಸಿದರು. ಜುಲೈ ೧೭ ರಂದು ಮಧ್ಯಾಹ್ನ ಶ್ರೀ ಗುಡದೂರು ತಿಮ್ಮಪ್ಪನವರ ಮನೆಯಲ್ಲಿ ಭೋಜನಸಮಾರಂಭ ಏರ್ಪಡಿಸಲಾಗಿತ್ತು.

ವಾಣಿಜ್ಯ ಸಂಘದ ಬಿನ್ನವತ್ತಳೆ

ಸಾಯಂಕಾಲ ವಾರ್ಡಲಾ ಭವನದಲ್ಲಿ ವಾಣಿಜ್ಯ ಸಂಘದವರು ಸತ್ಕಾರ ಕೂಟವನ್ನೇರ್ಪಡಿಸಿದ್ದು ಮಂತ್ರಿಗಳಲ್ಲಿ ಬಿನ್ನವತ್ತಳೆಯನ್ನರ್ಪಿಸಿದರು. ಮಂತ್ರಿಗಳು ಮುಖ್ಯ ಬೇಡಿಕೆಗಳಿಗೆ ಜವಾಬು ಕೊಡುತ್ತಾ, ಬಳ್ಳಾರಿಗೆ ನೀರಿನ ಸೌಕರ್ಯ ಕಲ್ಪಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದರು.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)
ಚಂದಾದರಗಳು: Subscription Rates.

ವರ್ಷಕ್ಕೆ 6—0—0	One Year 6—0—0
೬ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.	Subscription will not be accepted for less than 6 months

To 26-7-54

Sri-

Edited Printed & Published by T. B. Keshava Rao, at Nava Bharat Pinting Press, Bellary

ಬಳ್ಳಾರಿ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

S. C. 126/54

BETWEEN

ಬಿಕ್ಕಂತಾಪುರ ಚನ್ನಬಸಪ್ಪ ತಂದೆ
ದೊಡ್ಡ ಬಸಪ್ಪ – ವಯಸ್ಸು 35
ಲಿಂಗಣ್ಣಯ್ಯ – ಜಿರಾಯ್ತಿ – ಬಿಕ್ಕಂತಾಪುರ
ಸೊಂಡೂರು ತಾ॥ } ವಾದಿ

Vs.

ಸಿದ್ದಪ್ಪ ತಂದೆ ಬಂಗಾರಯ್ಯ ವಯಸ್ಸು 35
ಕುರುಬ – ಜಿರಾಯ್ತಿ – ಕುರುಗೋಡು
ಬಳ್ಳಾರಿ ತಾ॥ } ಪ್ರತಿವಾದಿ

ಪ್ರತಿವಾದಿಗೆ ನೋಟೀಸು

ಮೇಲೆ ಕಾಣಿಸಿದ ವಾದಿಯು ಪ್ರತಿವಾದಿಯ ಮೇಲೆ ತನ್ನ ಬಾಕಿಯನ್ನು ಬರ ನಾವಿಕೊಳ್ಳಲು ಪ್ರಾಮಿಸರಿ ನೋಟಿನಮೇಲೆ ರೂ. 116/- ಗೆ ದಾವಾದಾಖಲು ಮಾಡಿರುತ್ತಾನೆ. ಸದರಿ ನಂಬರಿನ ವಾಯ್ದೆ ತಾ॥ 31–7–54 ಕ್ಕೆ ಇಮತ್ತಾದೆ. ಆ ವಾಯ್ದೆಗೆ ನೀವು ಖುದ್ದಾಗಲಿ – ಅಥವಾ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ತಕರಾರುಗಳನ್ನು ತಿಳಿಸಬೇಕು. ಇಲ್ಲವಾದರೆ ನಿಮ್ಮ ವಿರೋಧನಾಗಿ ಏಕಪಕ್ಷ (ಎಕ್ಸಪಾರ್ಟಿ) ತೀರ್ಮಾನ ವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಡಿ. ಪರಮೇಶ್ವರಾಚಾರ್
ವಾದಿ ವಕೀಲ

ಸ್ವಾಮಿವಿವೇಕಾನಂದ

ಲಕ್ಷ್ಯವಿಲ್ಲದ ವಿದ್ಯಾರ್ಥಿ

ಒಂದು ಹಳ್ಳಿಯ ಶಾಲೆಯಲ್ಲಿ ಗುರುಗಳು ವರ್ಗದ ವಿದ್ಯಾರ್ಥಿಗಳಿಗೆ ಒಂದು ಪಾಠ ಹೇಳಿಕೊಡುತ್ತಿದ್ದರು. ಆದರೆ ವರ್ಗದಲ್ಲಿಯ ಒಬ್ಬವಿದ್ಯಾರ್ಥಿಯ ಲಕ್ಷ್ಯವು ಪಾಠದ ಕಡೆಗಿರದ್ದು ಗುರುಗಳ ಲಕ್ಷ್ಯಕ್ಕೆ ಬಂದಿತು ವಿದ್ಯಾರ್ಥಿಯುಕೈಯಲ್ಲಿಯ ಪುಸ್ತಕದ ಕಡೆಗೂ ನೋಡುತ್ತಿದ್ದಿಲ್ಲ.ಗುರುಗಳು ಹೇಳುತ್ತಿದ್ದುದನ್ನು ಕೇಳುತ್ತಲೂ ಇರಲಿಲ್ಲ. ಕಿಡಿಕಿಯೊಳಗಿಂದ ಹೊರಗೆ ಏನನ್ನೋ ನೋಡುತ್ತಿದ್ದನು.

ಗುರುಗಳು ಸ್ವಲ್ಪಹೊತ್ತು ಅವನನ್ನು ನಿರೀಕ್ಷಿಸಿ ಅವನ ಹತ್ತರ ಧರದಿಂದ ಹೊದರ. ಮತ್ತು 'ಎಲ್ಲಿಜೆನ್ನ ನೀಕ್ಷ್ಯವೋರಗೆ ಏನು ನೋಡುತ್ತಿ? ಎಂದು ಗಟ್ಟಿಯಾಗಿ ಕೂಗಿದರು.ವಿದ್ಯಾರ್ಥಿಯು ಇಲ್ಲ ಗುರುಗಳೇ ನೀವು ಹೇಳುತ್ತಿದ್ದುದನ್ನೇ ಕೇಳುತ್ತಿದ್ದೆ" ಎಂದ ಸಂಪೂರ್ಣಸುಳ್ಳು ಹೇಳುತ್ತೀ ಎಂದು ಗುರುಗಳು ಇನ್ನಿಷ್ಟು ಎತ್ತರದ ಧ್ವನಿಯಲ್ಲಿ ಆರ್ಭಟಿಸಿದರು. ಇಲ್ಲ ನಿಜವಾಗಿ" ಎಂದ ವಿದ್ಯಾರ್ಥಿ. 'ಹಾಗಾದರೆ ನಾನು ಹೇಳಿದುದೇನು ಎಂಬುದನ್ನು ಹೇಳುವೆಯಾ? ಎಂದರು ಗುರುಗಳು ಒಂದಕ್ಷರ ಬಿಡದೆ ಹೇಳುತ್ತೀನೆ" ಎಂದ ಹುಡುಗ. ಅದಕ್ಕೆತಪ್ಪಿದರೇ ನಿನ್ನ ನ್ಯೂಬಾಯುವುದು ಎಂದರು ಶಿಕ್ಷಕರು. ಹಾಗೇ ಆಗಲಿ ಎಂದಹುಡುಗ.

ಗುರುಗಳು ಆ ವಿದ್ಯಾರ್ಥಿಗೆ ಎದ್ದುನಿಲ್ಲಲು ಹೇಳಿದರು- ಮತ್ತುತಾವು ಹೇಳಿದುದೇನು ಎಂಬುದನ್ನು ಹೇಳಲು ಕೇಳಿದರು

ವರ್ಗದ ವಿದ್ಯಾರ್ಥಿಗಳೆಲ್ಲರೂ ಈ ಪ್ರಸಂಗದಿಂದ ಗಾಬರಿಗೊಂಡಿದ್ದರು. ಅವನು ಹೇಳಲು ತಪ್ಪಿದರೆ ಅವನ ಗತಿಯೇನು ? ಎಂದು ಗುಣುಗುಟ್ಟುತ್ತಿದ್ದರು.

ಆಗ ಆ ವಿದ್ಯಾರ್ಥಿಯು, ಗುರುಗಳು ಹೇಳಿದ ಸರ್ವ ವಿಷಯವನ್ನು ಒಂದಕ್ಷರ ಬಿಡದಂತೆ ಪಾಯಿಪಾಠ ಮಾಡಿದಂತೆ ಹೇಳಿಬಿಟ್ಟನು. ಅವನ್ನು ಕೇಳುತ್ತಲೇ ಎಲ್ಲ ವಿದ್ಯಾರ್ಥಿಗಳು ಆಶ್ಚರ್ಯಾನಂದಗಳಲ್ಲಿ ಮಹೋನ್ಮಾದಿಸರು.

ಗುರುಗಳೂ ಈ ಪ್ರಸಂಗದಿಂದ ದಿಙ್ಮೂಢರಾದರು. ಅವರಿಗೆ ಬಂದಿದ್ದ ಸಿಟ್ಟು ಎಲ್ಲಿಯೋ ಪಾಯವಾಗಿ ಹೋಯಿತು. ಆಗ ಅವರು ನರೇಂದ್ರ. ಈ ನಿನ್ನ ಅಗಾಧ ಬುದ್ಧಿಯಿಂದ ಒಂದು ದಿವಸ ಇಡಿ ಜಗತ್ತನ್ನೇ ಜಕಿತಗೊಳಿಸುವಿ ಎಂದರು.

ಅದೇ ಮೇರೆಗೆ ಆವಿದ್ಯಾರ್ಥಿಯುತನ ಮುಂದಿನ ಆಯುಷ್ಯದಲ್ಲಿ ತನ್ನ ಗುರುಗಳು ಹೇಳಿದ ಭವಿಷ್ಯವನ್ನು ನಿಜಗೊಳಿಸಿತೋರಿಸಿದ. ಅವನು ದೊಡ್ಡ ಮೇಧಾವಿ ಮತ್ತು ಉಪದೇಶಕನೆನಿಸಿಕೊಂಡ. ಅವನ ಮಾಡಿದ ಭಾಷಣಗಳನ್ನು ಜಗತ್ತೇ ಲಕ್ಷ್ಯಗೊಟ್ಟು ಕೇಳಿತು, ಮತ್ತು ಆಶ್ಚರ್ಯಪಟ್ಟಿತು. ಅವನ ಎಲ್ಲ ಭಾಷಣಗಳು ಮತ್ತು ಲೇಖನಗಳು ಪುಸ್ತಕ ರೂಪದಲ್ಲಿ ಪ್ರಕಟಿಸಲ್ಪಟ್ಟವು, ಇಂದಿಗೂ ಜನತೆಯಿಂದ ಆಸ್ಥೆಯೊಡನೆ ಓದಲ್ಪಡುತ್ತಿವೆ.

ಅವನು ಆಷ್ಟಾವಧಾನಿಯೆಂದೆನಿಸಿಕೊಂಡನು. ಒಂದೇ ಕಾಲದಲ್ಲಿ ಅನೇಕ ಕೆಲಸಗಳನ್ನು ಮಾಡುವ ಅವನ ಶಕ್ತಿಯು ಆವಿದ್ಯಾರ್ಥಿ ದೆಸೆಯಲ್ಲಿ, ವರ್ಗದಲ್ಲಿಯ ಪ್ರಸಂಗದಲ್ಲಿ ವ್ಯಕ್ತವಾದಂತೆ, ಮುಂದೆ ಕೂಡ, ಗೊಡ್ಡ ಪ್ರಮಾಣದಲ್ಲಿ ಕಂಡು ಬಂದಿತು. ಆ ವ್ಯಕ್ತಿಯೇ ವಿವೇಕಾನಂದ

ಭಾರತೀಯ ಅಂಚೆ ಕಛೇರಿಯ ಇತಿಹಾಸ

ಗಯಾಳರಿಂದ ಗಾಯಕರ ವರೆಗಿನ ಭಾರತೀಯ ಅಂಚೆ ಕಛೇರಿಯ ಇತಿಹಾಸ ಪೊಂದನ್ನು ಅಕ್ಟೋಬರ್ ೧ನೇ ತಾರೀಕು ಭಾರತೀಯ ಅಂಚೆ ಸ್ವಾಂಪು ಶತಮಾನೋತ್ಸವದ ನೆನಪಾಗಿ ಕೇಂದ್ರ ಸರ್ಕಾರವು ಪ್ರಕಟಿಸಲಿದೆ.

ಮಂಡ್ಯ ಸಕ್ಕರೆಗೆ ೨೯ ರೂಪಾಯಿ ದರ

ಕೇಂದ್ರ ಸರ್ಕಾರದ ನಿಗದಿ

ಮಂಡ್ಯ ಸಕ್ಕರೆ ಕಂಪನಿಯು ತಯಾರಿಸಿದ ಸಕ್ಕರೆಗೆ ಮಣಕ್ಕೆ ೨೪ ರೂಪಾಯಿಯಂತೆ ದರವನ್ನು ಭಾರತ ಸರ್ಕಾರದ ಆಹಾರ ಇಲಾಖೆಯು ನಿಗದಿ ಮಾಡಿದೆ.

ಗಾಯಾಳರ ಆರೆಯುವ ಸೀಸನ್ನಿನಲ್ಲಿ ಉತ್ಪನ್ನ ವಾವ ಇ–೩೭ ಗ್ರೇಡಿನ ಸಕ್ಕರೆಗೆ ಇದು ಅನ್ವಯಿಸುವುದು. ಉತ್ತರ ಪ್ರದೇಶ ಮತ್ತು ಬೀಹಾರ್‌ಗಳ ಕಾರ್ಖಾನೆಗಳಿಗೂ ಹೆಚ್ಚು ಕಡಿಮೆ ಇದೇ ದರಗಳನ್ನು ಗೊತ್ತು ಪಡಿಸಿದೆ.

ಬಳ್ಳಾರಿ 'ಪ್ರಭಾತ, ದಲ್ಲಿ 'ನೋಡಿರಿ, ಆನಂದಪಡಿರಿ,

ರಮ್ಯವಾದ ಶನೇವಾರ

ಪ್ರತಿದಿನವು ಎರಡು ಆಟಗಳು ಸಾ॥ 6-10, ರಾ॥ 9-30

ಎ. ಪಿ. ಯಂ ರವರ

★ 'ಸಂಗಂ' ★

[ಸುಪ್ರಸಿದ್ಧ ತೆಲುಗು- ಚಿತ್ರ]

ಇವರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, ಯಸ್. ವಿ. ರಂಗರಾವ್ ವೈಜಯಂತಿಮೂಲ, ಅಂಜಲಿದೇವಿ ನಟಿಸಿದ್ದಾರೆ:—

.... ಸಂಗೀತ ರಸವತ್ತರ ಚಿತ್ರ ....

.... ಶೀಘ್ರವಾಗಿ ಬರಲಿದೆ .... ಜನತಾರವರ ....

★ ಪರಿವರ್ತನ ★

ಜಯರಾಜ ಫಿಲ್ಮಸ್ ರವರ

★ ನಟಶೇಖರ ★

(ಅದ್ಭುತಕನ್ನಡಚಿತ್ರ)

ನಿರ್ಮಾಪಕ — ನಿರ್ದೇಶಕ — ಪಿ. ವಿ. ರಾಜು

ಬಳ್ಳಾರಿ
ಒಳಾಡಳಿತ ಮಂತ್ರಿಗಳ ಭೇಟಿ

ಮೈಸೂರಿನ ಒಳಾಡಳಿತ ಮಂತ್ರಿಗಳಾದ ಶ್ರೀ ಹೆಚ್. ಸಿದ್ದವೀರಪ್ಪನವರು ತಮ್ಮ ಸಿಬ್ಬಂದಿಯೊಂದಿಗೆ ಮತ್ತು ಸ್ವಂತ ಸಾಯ ದೈರೆಕ್ಟರೊಂದಿಗೆ ಜುಲೈ ೧೭ ರಂದು ಸಾಯಂಕಾಲ ಬಳ್ಳಾರಿಗೆ ಆಗಮಿಸಿದರು. ಡಿ. ಐ. ಜಿ. ಡಿ. ಎಸ್. ಪಿ. ಮೊದಲಾದ ಅಧಿಕಾರಿಗಳು ಅವರನ್ನು ಭೇಟಿಮಾಡಿದರು ಅನಂತರ ಪಟ್ಟಣಿಗರ ಪರವಾಗಿ ಜನಾಬ್ ಅಬ್ದುಲ್ ರಜಾಕ್ ಸಾಹೇಬರವರು, ಜಿಲ್ಲಾ ಬೋಂಬರ್ ಆಸ್ ಕಾನುರ್ಸಿನ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಶ್ರೀ ತಿಮ್ಮಪ್ಪ ಮತ್ತು ಶ್ರೀ ವೇಷಗಿರಿ ರಾವ್ ನೊವಲಾದವರು ಪೌರಸಭೆಯನ್ನು ಇರಲೇ ರದ್ದು ಪಡಿಸಬೇಕೆಂದು ಕೋರಿದರು. ನಾರಿಗೆ (ಟ್ರಾನ್ಸ್‌ಪೋರ್ಟ್) ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ಲಿಂಗಾರೆಡ್ಡಿಯವರು ನಾರಿಗೆಯ ಕಷ್ಟ ಗಳನ್ನು ವಿವರಿಸಿ, ಡಬಲ್ ಟ್ಯಾಕ್ಸೇಷನ್ ಕೊಡಬೇಕಾದುದನ್ನು ತಪ್ಪಿಸಬೇಕೆಂದು ಅರಿಕೆ ಮಾಡಿದರು. ಸರ್ಕಲ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ.ಡಿ. ಹೆಚ್. ವೆಂಕೋಬ ರಾಯರು ಒಂದುಮನವಿಯನ್ನು ಅರ್ಪಿಸಿ ಉದ್ಯೋಗ ಪರಿಸ್ಥಿತಿಯ ಸುಧಾರಣೆ ಯನ್ನು ಕೋರಿದರು. ಮಂತ್ರಿಗಳು ಸೂಕ್ತವಾದ ಉತ್ತರನಿತ್ತರು.

ಜುಲೈ ೧೭ ರಂದು ಪತ್ರಿಕಾಗೋಷ್ಠಿ ಏರ್ಪಡಿಸಲಾಗಿತ್ತು. ಅಸೋಸಿಯೇಶನ್ನಿನವರು ತಮ್ಮ ಬೇಡಿಕೆ ಗಳನ್ನು ಸೆಂಟ್ರಲ್ ಕೋ-ಆಪರೇಟಿವ್ ಸ್ಟೋರ್ಸ್ ಭವನದಲ್ಲಿ ಮಂತ್ರಿಗಳಲ್ಲಿ ಪಲ್ಲಿ ಸಿದರು. ಉಪಾಹಾರವನ್ನು ಏರ್ಪಡಿಸ ಲಾಗಿತ್ತು.

ಮಂತ್ರಿಗಳು ಆನಂತರ ತಿರುಗುಪ್ಪೆಯ ವ್ಯವಸಾಯ ಪರಿಶೋಧನಾ ಕೇಂದ್ರಕ್ಕೆ ಭೇಟಿಕೊಟ್ಟು ಅಲ್ಲಿ ನಡೆಯುವ ಪರಿಶೋ ಧನಾ ಕಾರ್ಯಗಳನ್ನು ಆಸಕ್ತಿಯಿಂದ ಪರಿತೀಲಿಸಿದರು. ಜುಲೈ ೧೭ ರಂದು ಮಧ್ಯಾಹ್ನ ಶ್ರೀ ಗುಡಮೂರು ತಿಮ್ಮಪ್ಪ ನವರ ಮನೆಯಲ್ಲಿ ಭೋಜನಸಮಾರಂಭ ಏರ್ಪಡಿಸಲಾಗಿತ್ತು.

ವಾಣಿಜ್ಯ ಸಂಘದ ಬಿನ್ನವತ್ತಳೆ

ಸಾಯಂಕಾಲ ವಾರ್ಡಲಾ ಭವನದಲ್ಲಿ ವಾಣಿಜ್ಯ ಸಂಘದವರು ಸತ್ಕಾರ ಕೂಟವನ್ನೇರ್ಪಡಿಸಿದ್ದು ಮಂತ್ರಿಗಳಲ್ಲಿ ಬಿನ್ನ ವತ್ತಳೆಯನ್ನರ್ಪಿಸಿದರು. ಮಂತ್ರಿಗಳು ಮುಖ್ಯ ಬೇಡಿಕೆಗಳಿಗೆ ಜವಾಬು ಕೊಡುತ್ತಾ, ಬಳ್ಳಾರಿಗೆ ನೀರಿನ ಸೌಕರ್ಯ ಕಲ್ಪಿಸುವ ವಿಷಯವು ಸರ್ಕಾರದ ಪರಿಶೀ ಲನೆಯಲ್ಲಿದೆ ಎಂದರು.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.

26-7-54

Edited Printed & Published by T. B. Keshava Rao, at Nava Bharat Pinting Press, Bellary

ಗೃಹಶೋಭಿಣಿ

ಸೋಮವಾರ
ಆಗಷ್ಟ
೨೨ ೧೯೩೫

ವರ್ಷ 17 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 45 | ಆತ್ಮಶಕ್ತಿ ! ಜಾಗೃತ !! ಪ್ರಾಪ್ತಪರಾನ್ನಿ ಬೋಧತ !!! | ಟಿ. ಬಿ. ಕೇಶವರಾವು

ಪರಿಪೂರ್ಣತೆಯ ಹಿರಿಯಾಶೆ

(ಪ್ರೊ|| ಕೆ. ಆರ್. ಉಡುಪ, ಎಂ. ಎ., ಬಿ. ಟಿ., ಮಡಿಕೇರಿ)

ತಾನು ಸರ್ವಗುಣ ಪರಿಪೂರ್ಣನಾಗಿರಬೇಕೆಂಬ ಹಿರಿಯಾಶೆಯನ್ನು ಒಬ್ಬ ನಿಟ್ಟುಕೊಂಡಿರುವುದು ಬಹಳ ಒಳ್ಳೆಯದು ತನ್ನ ವೇಷಭೂಷಣ, ಮನೆಮಾರು, ರೀತಿ ನೀತಿ, ವಿದ್ಯಾ ವಿನಯ, ಆಗುಹೋಗು, ಎಲ್ಲವೂ ದೋಷರಹಿತವಾಗಬೇಕು. ಸಕಲ ಕಲಾ ಪರಿಪೂರ್ಣವಾಗಿರಬೇಕು. ಇದೀಗ ಉತ್ತಮ ಶ್ಲಾಘನೀಯ ಗುಣವಾಗಿದೆ. ಆದರೆ ಆ ಹಿರಿಯಾಶೆಯು ಬಹು ವಿಶೇಷವಾಗಿ ಹೋದರೆ ಆ ಪರಿಪೂರ್ಣತೆಯು ದೊರೆಯದಾಗ ಬೇಸರವಿರಕ್ತಿಗಳು ತೋರಿ ಬಂದುದಾದರೆ ಅದು ಶುಭ ಸೂಚನೆ ಯಲ್ಲಿ. ಆ ಬೇಸರ ವಿರಕ್ತಿಗಳಿಂದಾಗಿ ಸ್ವ ಸಾಮರ್ಥ್ಯದಲ್ಲಿ ನಂಬಿಕೆಗೆಟ್ಟು ಒಂದು ತರದ ಅಜ್ಞಾತ ಶಂಕೆ ಭಯಗಳು ಕಲವೇಳೆ ಮನದಲ್ಲಿ ಮನೆಮಾಡುವುದೂ ಉಂಟು.

ಇದೀ ಪ್ರಪಂಚವೇ ಗುಣದೋಷ ಸಂಮಿಶ್ರವಾಗಿದೆ. ಎಲ್ಲ ವಿಧದ ನಿರ್ದೋಷತೆಯನ್ನು ಸಾಧಿಸುವುದು ಅಸಾಧ್ಯವಾದ ಕೆಲಸ. ಪ್ರತಿಯೊಂದು ವಸ್ತು ಅಥವಾ ವ್ಯಕ್ತಿಯಲ್ಲಿ ಒಂದಲ್ಲ ಒಂದು ತರದ ದೋಷ ಇರದಿರಲಾರದು. ಸಾಧ್ಯವಿದ್ದಮಟ್ಟಿಗೆ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಅಂತೆ ಮೀರಿದ ತಪ್ಪುಗಳನ್ನು ಸಹಿಸಿಕೊಂಡಿರಬೇಕು. ಈ ರೀತಿಯ ಮನೋಭಾವನೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ತನ್ನಲ್ಲಿಯ ದೋಷದ ತರಿಜ್ಞಾನ ವನಗಿದೆ. ಅವನ್ನು ಸಂಪೂರ್ಣ ನಿವಾರಣೆ ಗೊಳಿಸಲು ತಾನು ಸಮರ್ಥನಲ್ಲ. ಜಾಪೆಯೇ ತನ್ನ ಪ್ರೀತಿಪಾತ್ರ ಗೆಳೆಯ ಅಥವಾ ಗೆಳತಿಯಿರಬಹುದು. ಸಾಧ್ಯವಿದ್ದರೆ ಅವರ ದೋಷವನ್ನು ತಿದ್ದಬೇಕು. ಇಲ್ಲವಾದರೆ ಸಹಿಸಿಕೊಂಡಿರಬೇಕು. ಇವೇ ಮೊದಲಾದ ಭಾವನೆಗಳನ್ನು ಬೆಳೆಸಬೇಕಾಗುತ್ತದೆ.

ಇದೇಕೆ ಹೀಗೆ ? ನಿಸರ್ಗದ ಮೂಡಿ ಬರುವ ಉತ್ಸಾಹಪೂರ್ಣ ನಯನ ಸ್ಪಿನಲ್ಲಿ ಹೊಸ ಹೊಸ ಭವ್ಯ ಭಾವನೆಗಳು ಮೂಡಿ ಬರುವುದು ಸ್ವಾಭಾವಿಕ. ಆಗ ಎಲ್ಲವೂ ಭವ್ಯ ಸುಂದರವಾಗಿರಬೇಕು. ದೋಷಮಾತ್ರದ ಲೇಶವೂ ತಾನು ಕಟ್ಟುವ ಸುಂದರ ಗಾಳಿಗೋಪುರದಲ್ಲಿ ಬೀಸಬಾರದು. ಅದು ಸ್ವರ್ಗ ಸೀಮೆಗೂ ಮೀರಿದ್ದಾಗಿರಬೇಕು. ಈ ಮೊದಲಾದ ಉಚ್ಚ ಭಾವನೆಗಳು ಎಳೆತನದಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ತೋರಿಬರುವುದು ಸ್ವಾಭಾವಿಕವೇ. ಆದು ವಯಸ್ಸಿನ ಗುಣವೆನ್ನಲೂ ಬಹುದು ಆದರೆ ಕಾಲವು ಸಾಗಿ ಆ ಭಾವನಾಲೋಕದಿಂದಿಳಿದು ನಿಜವಾದ ವ್ಯಾವಹಾರಿಕ ಜೀವನದಲ್ಲಿ ಅಡಿ ಇಡಲು ತೊಡಗಿದಾಗ ಒಂದೊಂದಾಗಿಯೇ ಆ ಭವ್ಯ ಗೋಪುರಗಳು ಕುಸಿದು ಬೀಳುವುದನ್ನು ಕಾಣಬೇಕಾಗುತ್ತದೆ. ಭಾವನಾ ಪ್ರಪಂಚದಲ್ಲಿ ಗೋಪುರ ಕಟ್ಟಬಹುದು ಸುಲಭ ವಾಸ್ತವಿಕ ಪ್ರಪಂಚದಲ್ಲಿಲ್ಲವೆಂದು ಆಗ ತಿಳಿಯುತ್ತದೆ. ಇಲ್ಲಿ ಬರುವ ಸ್ತ್ರೀಯರೆಲ್ಲ ರಂಭೆ ಊರ್ವಶಿಯರಲ್ಲ. ಆಳಿ ಮಹಾಕಾಳಿಗಳೇ ಮುಂತಾಗಿ ಬರುವರು. ಒಂದೆರಡು ರಂಭೆ ಊರ್ವಶಿಯರಿದ್ದರೂ ಪುರಂದರೀತನ ತೊಡೆಯನ್ನೇರಬೆ ದೊರಕ್ಕೆ ಸರಿದು ಅಣಕಿಸುವರು. ಉದ್ಯಾನಗಳೆಲ್ಲ ನಂದನ ವನಗಳಾಗಿರುವುದಿಲ್ಲ. ಎಲ್ಲ ಒಟ್ಟು ವಾಸ್ತವಿಕ ಪ್ರಪಂಚದಲ್ಲಿ ಅನ್ನ ಬಟ್ಟೆಗಳಿಗಾಗಿಯೂ ನಿರಂತರ ಕೋದಾಡಬೇಕಾಗಿದೆ. ಇವೆಲ್ಲ ಕಾಲಕ್ರಮೇಣ ತಿಳಿದು ಬರುವ ವಿಚಾರ. ತಾನು ಎಲ್ಲರನ್ನೂ ಮೀರಿರುವ ವ್ಯಾವಹಾರಿಯಾಗಬೇಕು. ಎಲ್ಲರಿಗಿಂತ ಜೊಳ್ಳನಾದ ವನೇ ಆಗಬೇಕು. ಸಕಲ ತೋಗೆಗಳನ್ನು ಗುಣಪಡಿಸಬಲ್ಲ ಬಹು ದೊಡ್ಡ ಡಾಕ್ಟರನಾಗಬೇಕು. ತಾನು ಸಮಾಜದಲ್ಲಿ ಎಲ್ಲರಿಂದಲೂ ಆಶ್ರಯಿಸಲ್ಪಡುವ ಮಹಾ ಪುರುಷನಾಗಬೇಕು. ಈ ತರದ ಭಾವನಾಲೋಕದಲ್ಲಿ ಹಾರಾಡುತ್ತಿದ್ದ ನವತರುಣನ ಮೊದಲ ಸಾಹಸದಲ್ಲಿ ಅದಾವುದೂ ಸುಲಭವಿಂದ ಸಿಗುವದಿಲ್ಲ. ಅದು ಬಿಟ್ಟು ಇತರ ಕೆಲ ಸಹೋದ್ಯೋಗಿಗಳ ಮಟ್ಟಕ್ಕೆ ಬರಲೂ ಬಹು ಪ್ರಯಾಸವಾಗುವುದು.

ಅಂತಹ ಸಂದರ್ಭದಲ್ಲಿ ಯುವಕನು ಎಲ್ಲ ಬಿಟ್ಟು ಕಾಡಿಗೆ ಓಡುವುದಿಲ್ಲ. ವಾಸ್ತವಿಕ ಪ್ರಪಂಚದ ಸತ್ಯ ವಿಚಾರವನ್ನರಿತು ಆ ವಾತಾವರಣಕ್ಕೆ ತನ್ನನ್ನು ಹೊಂದಿಸಿಕೊಳ್ಳಲು ಕಲಿಯಬೇಕಾಗುತ್ತದೆ. ಪ್ರಪಂಚದ ಪುಸ್ಥಿತಿಯೇ ಹೀಗೆ. ಹಾಗಾಗಿ ಪರಾಜಯಕ್ಕೂ ಸಿದ್ಧನಿರಬೇಕು. ಉತ್ತಮ ವಿಲ್ಲವಾದರೆ ಮಧ್ಯಮಕ್ಕೂ ಕೈನೀಡಬೇಕಾಗುತ್ತದೆ. ರಂಭೆಯು ತನಗೆ ಸಿಗಬೇಕು ಸಿಗದಿದ್ದರೇ ಪೋಗಲಿ ಸಿಕ್ಕಿದವಳನ್ನು ರಂಭೆಯಾಗಿಸುವೆ ಎಂಬ ಧೈರ್ಯವಿರಬೇಕು. ನಿಜವಾದ ರಂಭೆಗಿಂತ ಸ್ವಹಸ್ತ ಪರಿಕಲ್ಪಿತ ರಂಭೆಯು ಎಷ್ಟೋ ಮೇಲು ಅವಳೊಡನಿರುವುದೇ ಪರಮಾನಂದ. ಎಂಬೀ ಭಾವನೆ ಬೆಳೆದು ಬರಬೇಕಾಗುತ್ತದೆ. ಅದು ಬಿಟ್ಟು ಇಲ್ಲದ ವಿಚಾರದಲ್ಲಿ ಬೇಸರ ಅಸಹನ ತೋರುವುದು ಪ್ರಯೋಜನವಿಲ್ಲ. ಇತರ ಸಹೋದ್ಯೋಗಿಗಳು ತಮಗಿಂತ ಹೆಚ್ಚಿನ ಅನುಭವವುಳ್ಳವರು. ಕಾಲವು ಸಾಗಿದಾಗ, ಅನುಭವವು ವಿರಿದಾಗ ತಾವೂ ಅವರ ಮಟ್ಟಕ್ಕೆ ಬರಬಹುದು. ಅಥವಾ ಮೀರಲು ಬಹುದು ಎಂಬ ಧೈರ್ಯವನ್ನು ಬೆಳೆಸಿಕೊಳ್ಳಬೇಕು. (ಯುಗವುರುಷ)

ಅಮೃತಾಹಾರ

ಲೇ: ಡಾ! ಏ. ಗೋಪಾಲಕೃಷ್ಣ ರಾವ್

ಜೀವನವು ಮರಣದ ಬುನಾದಿಯ ಮೇಲೆಯ ಬೆಳೆಯುತ್ತದೆ! ಈ ವಾಕ್ಯವು ಆಶ್ಚರ್ಯವನ್ನುಂಟು ಮಾಡಬಹುದು. ಆದರೆ ಬಾಳಿನಲ್ಲಿ ಕ್ಷಣ ಕ್ಷಣಕ್ಕೂ ಸಾವಿನ ಸಂಜ್ಞೆಯನ್ನು ಕಾಣದಿದ್ದರೆ ಮನುಷ್ಯನು ಬದುಕಿನ ಭದ್ರತೆಗಾಗಿ ಬವಣೆಗೊಳ್ಳುತ್ತಿದ್ದಿಲ್ಲ. ದಿನದಿನವೂ ಮಲ, ಮೂತ್ರ, ಬೆವರು, ಉಸಿರಾಟ, ಹಸಿವುಗಳು ಜೀವನ ಬಲ್ಲಿಯ ಸಾವನ್ನು ಎತ್ತಿ ತೋರಿಸುತ್ತವೆ. ಅಪ್ರಗಳ ಮೂಲಕ ಸವೆಯುತ್ತಿರುವ ಸಪ್ತಧಾತುಗಳ ಪುನರ್ನಿರ್ಮಾಣಕ್ಕಾಗಿ ಆಹಾರದ ಹಂಬಲನ್ನು ಹುಟ್ಟಿಸುತ್ತವೆ. ಎಂದರೆ ಮೃತವಾಗುತ್ತಿರುವ ತನುವನ್ನು ಅ-ಮೃತವಾಗಿಸಲೆಂದೇ ಪ್ರಕೃತಿಯು ಹಸಿವಿನ ಸಂದೇಶವನ್ನು ಸಾರುತ್ತಾಳೆ. ಆ ಸಂದೇಶದ ಸಾರವನ್ನರಿತು ಸೇವಿಸಿದರೆ ಮಾತ್ರ ಆಹಾರವು ಅ-ಮೃತತ್ವವನ್ನು ಕೊಡುವುದು. ಹಾಗೆ ಹಸಿವಿನ ಗುಟ್ಟನ್ನು ತಿಳಿದು ತಿಂದುದು ಮಾತ್ರ ಅಮೃತಾಹಾರವೆನಿಸುವುದು.

ಸಪ್ತಧಾತುಗಳ ಸವುಕಳಿಯ ರೂಪದಲ್ಲಿ ಹೊತ್ತಿಕೊಳ್ಳುತ್ತಿರುವ ಮೃತ್ಯುವಿನ ಲಗ್ನಿಯನ್ನು ಆಂಕೆಯಲ್ಲಿಡಲು ಸಾಧ್ಯವಾದುದೇ ಅಮೃತಾಹಾರ. ಅರ್ಥಾತ್ ಅ-ಮೃತತ್ವವನ್ನು ಕೊಡಲು ಸಮರ್ಥವಾಗಿರುವ ಆಹಾರವು, ಅ-ಮೃತವಾಗಿರಬೇಕು. ಆಗಲೆ ಅದಕ್ಕೆ ಅಮೃತ ಹಾರ ಎಂಬ ಹೆಸರು ಅನ್ವರ್ಥನಾಮವಾಗುವುದು. ಎಂದರೆ ಸಾವಿನ ಸಮರದಲ್ಲಿ ಸೆಣಸಲು ಸಮರ್ಥನಾಗಬೇಕಾದರೆ ಮನುಷ್ಯನು ಸಾಯದಿರುವ ಆಹಾರವನ್ನೇ ಸೇವಿಸಬೇಕು. ಸಾಯದಿರುವ ಆಹಾರವೇ ಅಮೃತಾಹಾರವೂ ಹೌದು, ಅಮೃತತ್ವಕ್ಕೆ ದಾರಿದೋರುವ ಆಹಾರವೂ ಹೌದು.

ಸಾಯದಿರುವ ಆಹಾರ (ಅಮೃತಾಹಾರ) ಎಂದರೇನು? ಈ ಪ್ರಶ್ನೆಯು ತೋರಿಕೆ ಕಠಿಣವಾಗಿದ್ದರೂ ತುಸುಯೋಚಿಸುವವರಿಗೆ ತೀರ ಸುಲಭವಾಗಿಯೂ ತೋರಬಹುದು. ನಾವು ಆಹಾರವನ್ನೇಕೆ ಸೇವಿಸುವೆವು? ಉಟಕ್ಕಾಗಿ ಏಕೆ ಕಾತರಪಡುವೆವು? ಎಂಬ ಪ್ರಶ್ನೆಗಳಿಗೆ ಹಸಿವಾಗುವುದೆಂಬ ಎಂಬುದೇ ಉತ್ತರವಾಗಿದೆ. ಹಸಿವಾಗಿರದಿದ್ದರೂ ನಾಲಿಗೆಯ ರುಚಿಗಾಗಿ, ಜಟಕ್ಕಾಗಿ ತಿನಿಸನ್ನು ತಿನ್ನುವ ಗುಡಾಣದಲ್ಲಿ ತುರುಕುತ್ತಿರುವವರಂಗತಿಯನ್ನು ಪರಿಭಾವಿಸಿ ನೋಡಿ. ಹಸಿವಿನ ಪ್ರೇರಣೆ ಪೀಡೆಗಳಿಂದಲೆ ಆಹಾರಕ್ಕಾಗಿ ಆಲ್ಪರಿಯುವವರ ವಿಷಯವನ್ನಷ್ಟೇ ಯೋಚಿಸುವ.

ಹಸಿವೆಂದರೇನು? ಜೀವನವೆ ಸಂಗ್ರಾಮದಲ್ಲಿ ಸವೆದು ಸೋತಿತ್ತಿರುವ ಸಪ್ತ ಧಾತುಗಳನ್ನು ಪುನರುಜ್ಜೀವಿಸಲೆಂಬ ಹೊಟ್ಟೆಯು ಕೊರುವ ಕರೆಯೆ ಹಸಿವಲ್ಲವೆ? ಹಾಗಾದರೆ ಹಸಿವನ್ನು ಓಂಗಿಸಲೆಂದು ನಾವು ಸೇವಿಸುವ ಆಹಾರವು ಆ ಹಸಿವಿನ ಧ್ಯೇಯವನ್ನು— ಸಪ್ತಧಾತುಗಳ ಸವುಕಳಿಯನ್ನು ತುಂಬಿತರುವ ಗುರಿಯನ್ನು ಪೂರೈಸಬೇಕು. ಸಪ್ತಧಾತುಗಳನ್ನು ಪುನರುಜ್ಜೀವಿಸಬಲ್ಲ ಆಹಾರವೇ ಸಜೀವವಾದ ಆಹಾರ. ಸಪ್ತಧಾತುಗಳಿಗೆ ಜೀವದಾನ ಮಾಡಬಲ್ಲ ಆಹಾರವೇ ಸಜೀವಾಹಾರವಾಗಿದೆ, ಸಾಯದಿರುವ ಆಹಾರವಾಗಿದೆ, ಅ-ಮೃತಾಹಾರವಾಗಿದೆ.

ಅ[illegible]ಗಸ್ಯುಗಳಾಗಿರುವ ಕಾಳುಕಡಿಗಳು, ಹಣ್ಣು ಕೈಗಳಲ್ಲಿ ಶರೀರದ [illegible]ಗಳನ್ನು ಪೋಷಿಸುವ ಪುನರು[illegible] ಗುಣಗಳಿರುತ್ತವೆ. ಮತ್ತೆ ಆ [illegible]ದ್ದರಿಕೆ ಮಾತ್ರ ಆ ವಸ್ತುಗಳು ಅ[illegible]ರವನ್ನಿಸುತ್ತವೆ. ಆ ಗುಣಗಳಿ[illegible]ರೆ ಅಥವಾ ಆ ಪುನರುಜ್ಜೀವನ ಗುಣಗಳನ್ನು ಮನುಷ್ಯನು ನಾಶಪಡಿಸಿದರೆ ಅವೇ ವಸ್ತುಗಳು ಮೃತಾಹಾರವೆನಿಸುತ್ತವೆ. ಏಕೆಂದರೆ ಅಂತಹ ಸತ್ತ ಆಹಾರಗಳಿಂದ ಶರೀರದ ಸಾವನ್ನು ಪರಿಹರಿಸುವಶಕ್ತಿಯು ಕುಂಠಿತವಾಗುವುದಲ್ಲದೆ ಅವರಿಂದ ರೋಗ ನಿರೋಧಕ್ಕೆ ಶಕ್ತಿಯೂ ಬೆಳೆಯುವುದೆಂದು ಆಧುನಿಕ ವೈದ್ಯ ವಿಜ್ಞಾನವು ಹೇಳುತ್ತದೆ. ಆದರೆ ಹಾಲನ್ನು ಸಹಜವಾಗಿ ಕಾಯಿಸಿದರೆ ಅದರಲ್ಲಿಯ ಪೋಷಕ ಸತ್ವಗಳೂ ಆಹಾರ ಸತ್ವಗಳೂ ನಾಶವಾಗುವವು. ಮಕ್ಕಳಿಗೆ ಹಾಲನ್ನು ಹಾಗೆಯೇ ಕೊಟ್ಟರೆ ಪಚನವಾಗುವುದಿಲ್ಲವೆಂದು ಅದನ್ನು ಚಿನ್ನಾಗಿ ಕುದಿಸಿ ಕೊಡುವ ನಾಡಿಕೆಯಿದೆ. ಆದರಿಂದ ಹಾಲು ಗಟ್ಟಿಯಾಗಿ ಪಚನಕ್ಕೆ ಇನ್ನೂ ಜಡವಾಗುವುದು. ತತ್ಪರಿಣಾಮವಾಗಿ ಮಕ್ಕಳಿಗೆ ಕಫ, ಕೆಮ್ಮು, ಭೇದಿ ಕೊಟ್ಟೆ ಜಾಡಿಯನ್ಸ್ (ಲೆವರ್) ವಿಕಾರಗಳಾಗುವವು. ಹಾಲು ಅಮೃತ ಸಮಾನವಾದ ಆಹಾರವಾಗಿದ್ದರೂ ಅತಿಯಾಗಿ ಕಾಯಿಸಿದರೆ ಅದು ಸ್ಯಾತಾಹಾರವಾಗುವುದು. ಆದ್ದರಿಂದಲೆ ಆಯುರ್ವೇದದಲ್ಲಿ ಧಾರೋಷ್ಣಂ ಅಮೃತೋಪಮಂ ಎಂದರೆ ಹಾಲನ್ನು ಕರೆದೊಡನೆ ಕುಡಿದರೆ ಅಮೃತಸಮಾನವೆಂದು ಹೇಳಿದೆ. ತೀರ ಚಿಕ್ಕ ವಯಸ್ಸಿನ ಮಗುವಿಗೆ ಹಾಲು ಜೀರ್ಣಕ್ಕೆ ಕಷ್ಟವೆನಿಸಿದರೆ ಅದನ್ನು ಒಂದು ಸಲ ಉಕ್ಕು ಬರುವವರೆಗೆ ಮಾತ್ರ ಕಾಯಿಸಿ ಅನಂತರ ಮಗುವಿಗೆ ಕುಡಿಸುವಾಗ ಅಂಗುಷ್ಠಿಗನುಸರಿಸಿ ಸ್ವಲ್ಪ ಬಿಸಿ ನೀರನ್ನು ಸೇರಿಸಿ ಕೊಡಬಹುದು.

ಕಾಯಿಪಲ್ಲೆ, ಸೊಪ್ಪು, ಹಣ್ಣು ಹಂಪಲು, ಗೆಡ್ಡೆ ಗೆಣಸುಗಳು ಒಳ್ಳೆ ರಕ್ತಕೋಶಗಳನ್ನು [illegible]. ಅವನ್ನು ವಿಶೇಷವಾಗಿ ಕುದಿಸಿದರೆ (ಬೇಯಿಸಿ) ಅವು ಮೃತ (ನಿಸ್ಸತ್ವ) ವಾಗುವವು ಕಾಯಿಪಲ್ಲೆಗಳನ್ನು ಸಿಪ್ಪೆಯಿಂದಲೆ ಸುವುದಕ್ಕಾಗಿ ಕುದಿಯುವ ನೀರಲ್ಲಿ ಒಂದು ನಿಮಿಷ ಮಾತ್ರ ಮುಳುಗಿಸಿ ತೆಗೆದುಬಿಟ್ಟರೆ ಸಾಕು ಅವುಗಳನ್ನು ಹಸಿಯಾಗಿಯೇ ಸೇವಿಸುವುದು ಹಿತಕರ. ರುಚಿಗಾಗಿ ಬೇಯಿಸಿದರೆ ಅವುಗಳಲ್ಲಿ ಸಿಂಚಿರಸ, ಜೀನುಗಳನ್ನು ಪೆರಸಬಹುದು. ಹಸಿ ಕಾಯಿಪಲ್ಲೆಗಳನ್ನು ಸೇವಿಸುವುದು ಅಸಾಧ್ಯವೆನಿಸಿದಾಗ ಅದನ್ನು ಸ್ವಲ್ಪೇ ನೀರಾಹಾರಕ್ಕೆ, ಬಾಯಿ ಮುಚ್ಚುವ ಪಾತ್ರೆಯಲ್ಲಿ ಜೀಯಿಸಿ ಆ ನೀರು ಸಹಿತವಾಗಿ ಸೇವಿಸಬೇಕು. ಏಕೆಂದರೆ ಆ ನೀರಿನಲ್ಲಿ ಪಲ್ಲೆಗಳ ಸತ್ವವು ಬೆರೆತಿರುತ್ತದೆ. ಸತ್ವವನ್ನು ಚಿಲ್ಲಿದರೆ ಪಲ್ಲೆಗಳು ಮೃತಾಹಾರವೇ ಅಲ್ಲವೇನೆ?

(ಯುಗಪುರುಷ)

ನವಭಾರತಕ್ಕೆ

ಚಂದಾದಾರರಾಗಿರಿ.

187

ರೈಲ್ವೆ ಗಾಡಿ ಉತ್ಪನ್ನ—ಭಾರತದಲ್ಲಿ ಅದ್ಭುತ ಪ್ರಗತಿ

ಸಮಗ್ರ ರೈಲ್ವೆಗಾಡಿ ಫ್ಯಾಕ್ಟರಿಯ ಒಂದು ನೋಟ

ವರ್ಷದ ಉತ್ಪತ್ತಿ	....	350 ರೈಲ್ವೆ ಗಾಡಿಗಳು
ಕೆಲಸದ ಪ್ರಾರಂಭಕಾಲ	....	1955 ನೇ ವರ್ಷದ ಮಧ್ಯಭಾಗ
ಕೆಲಸ ಗಾರರ ಸಂಖ್ಯೆ	—	4000 ದಲ್ಲಿ
ಹಾಕಬೇಕಾದ ಬಂಡವಾಳ	—	1. ಕೋಟಿ ರೂಗಳು.

ಮದರಾಸಿನ ಬಡಾವಣೆಯೆನಿಸಿದ ಪೆರಂಬೂರಿನಲ್ಲಿ ಅತ್ಯಂತ ಭಾರಿಯಾದ ಉಸ್ತಿನ ಕಟ್ಟಡವೊಂದೇಳುತ್ತಿದೆ. ಅಲ್ಲಿ ಭಾರತದ ಸಮಗ್ರ ರೈಲ್ವೆಗಾಡಿಗಳ ನಿರ್ಮಾಣ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತಿದೆ. ಇನ್ನೊಂದು ವರ್ಷದಲ್ಲಿ ಈ ಹೊತ್ತಿಗೆ ಪ್ರತಿ ಆರು ಗಂಟೆಗೊಂದರಂತೆ ಒಂದೊಂದು ರೈಲ್ವೆ ಗಾಡಿ ತಯಾರಾಗಿ ಫ್ಯಾಕ್ಟರಿಯಿಂದ ಹೊರಬೀಳುವುದು!

ಫ್ಯಾಕ್ಟರಿಯಲ್ಲಿರುವ ಚೋಡನೆ ಫ್ಯಾಕ್ಟರಿಯೊಡನೆ, ಇತರ ಒಂಭತ್ತು ವಿಭಾಗಗಳಿವೆ. ಇವೆಲ್ಲ ಸೇರಿಕೊಂಡು ದೊಡ್ಡ ಫ್ಯಾಕ್ಟರಿಯಾಗುವುದು. ಒಂದು ಕಡೆಯಲ್ಲಿ ಅಪೂರ್ಣ ವಸ್ತುಗಳನ್ನು ಒಯ್ದರೆ ಇನ್ನೊಂದು ಕೊನೆಯಲ್ಲಿ ತಯಾರಾದ ರೈಲ್ವೆಗಾಡಿ ಹೊರಬೀಳುವಷ್ಟರಮಟ್ಟಿಗೆ ಉತ್ತಮವಾದ ವ್ಯವಸ್ಥೆಯನ್ನು ಆಡಗಿದೆ. ಒಂದೇ ತರದಿಯಮೇಲೆ 1000 ಜನರು ಕೊನೆಮಾಡುತ್ತ ವರ್ಷಕ್ಕೆ 350 ರೈಲ್ವೆಗಾಡಿಗಳನ್ನು ತಯಾರು ಮಾಡುವಷ್ಟು ಸೌಲಭ್ಯಗಳನ್ನು ಈ ಫ್ಯಾಕ್ಟರಿಯಲ್ಲಿ ಕಲ್ಪಿಸಲಾಗುವುದು.

ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರುವ ಈ ಯೋಜನೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು 1952ನೆ ವರ್ಷದ ಫಿಬ್ರವರಿ ತಿಂಗಳಲ್ಲು ಆರಂಭಿಸಲಾಯಿತು. ಅದರೆ ಇಂತಹ ಫ್ಯಾಕ್ಟರಿಯನ್ನು ಆರಂಭಿಸಬೇಕೆಂದು ನಿರ್ಮಾಣವಾದುದು 1948 ರಲ್ಲಿ, ಅನಂತರ ಭಾರತ ಸರ್ಕಾರವವರು ಈ ಫ್ಯಾಕ್ಟರಿಯನ್ನು ಸ್ಥಾಪಿಸಲು ಬೇಕಾದ ಟಿಕ್ನಿಕಲ್ ಸಹಾಯವನ್ನು ಸಮಗ್ರರೈಲ್ವೆಗಾಡಿಫ್ಯಾಕ್ಟರಿಗೆ ಬೇಕಾದ ಯಂತ್ರೋಪಕರಣಗಳನ್ನು ಪಡೆಯುವ ಉದ್ದೇಶದ್ಯಿಂ ಸಿದಸ್ ಕಂಪನಿಯೊಂದರೊಡನೆ 1949 ನೇ ಮೇ ತಿಂಗಳಲ್ಲಿ ಒಂದು 1953 ನೇ ಜೂನ್ 30 ಗಳಲ್ಲಿ ಇನ್ನೊಂದು ಈ ರೀತಿ ಎರಡು ಒಪ್ಪಂದಗಳನ್ನು ಮಾಡಿಕೊಂಡರು. ಇದರ ಜೊತೆಗೆ ಭಾರತೀಯರಿಗೆ ತಕ್ಕ ಶಿಕ್ಷಣ ಕೊಟ್ಟು ಮುಂದಿನ ವರ್ಷಗಳಲ್ಲಿ ಇಡೀ ಫ್ಯಾಕ್ಟರಿಯು ಭಾರತೀಯ ಅಧಿಕಾರಿಗಳು ಮತ್ತು ಕೆಲಸಗಾರರಿಂದಲೇ ನಡೆಸಲ್ಪಡುವಂತೆ ಪರಾಡುವುದಾಗಿ ಸ್ವಿಸ್ ಕಂಪನಿಯ ಆಲೋಚನೆಯು ಭರವಸೆ ನೀಡಿದೆ.

ಫ್ಯಾಕ್ಟರಿ ಸ್ಥಾಪಿತವಾಗಿರುವುದು 10 ಎಕರೆ ಅಥವಾ 8 ಲಕ್ಷ ಚದುರ ವಿಸ್ತೀರ್ಣದ ಪ್ರದೇಶದಲ್ಲಿ. ಇದರ ಕಾಲು ಭಾಗ ಪ್ರದೇಶವನ್ನು ಜೋಡಣಾ ಫ್ಯಾಕ್ಟರಿಯೇ ಆವರಿಸಿಕೊಂಡಿರುವುದು. ಕಟ್ಟಲ್ಪಟ್ಟಿರುವ ವರ್ಕ್ ಷಾಪುಗಳು ಬಹಳ ವಿಶಾಲವಾಗಿವೆ. ಗಾಳಿ ಬೆಳಕು ಬಹಳ ಹೆನ್ನಾಗಿ ಬರುವಂತೆ ಕಟ್ಟಲ್ಪಟ್ಟಿವೆ.

60 ಅಡಿಗಳ ಎತ್ತರವಿರುವ ಅಸೆಂಬ್ಲಿ ವರ್ಕ್ ಷಾಪಿನಲ್ಲಿ ಭಾರವಾದ ಕ್ರೇನ್ ಗಳನ್ನು ಜೋಡಿಸಲಾಗುವುದು ಇತರ ವರ್ಕ್ ಷಾಪುಗಳಲ್ಲಿ ಆತ್ಯಾಧುನಿಕ ಯಂತ್ರೋಪಕರಣಗಳನ್ನು ಸಜ್ಜು ಗೊಳಿಸುತ್ತಿರುವಲಾಗಿದೆ ವಿಶ್ವದ ಎಲ್ಲಾಮೂಲೆಗಳಿಂದಲೂ ಟೆಂಡರುಗಳನ್ನು ಆಹ್ವಾನಿಸಿ ನಂತರವೇ ಯಂತ್ರೋಪಕರಣಗಳಿಗೆ, ಆರ್ಡರುಗಳನ್ನು ಕೊಡಲಾಗಿದೆ ಫ್ಯಾಕ್ಟರಿಯ 720 ಯಂತ್ರಗಳನ್ನು ನಡೆಸುವುದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಫ್ಯಾಕ್ಟರಿಯ ಎಲ್ಲಾ ಅಂಗಗಳೂ ಪೂರ್ಣವಾಗಿ ಕೆಲಸಮಾಡುವುದಾದರೆ 10,000 ಅಶ್ವಶಕ್ತಿಯಷ್ಟು ವಿದ್ಯುಚ್ಛಕ್ತಿ ಬೇಕಾಗುವುದು ವರ್ಷಕ್ಕೆ 60 ಲಕ್ಷ ಯೂನಿಟ್ ಗಳಷ್ಟು ವಿದ್ಯುಚ್ಛಕ್ತಿಯನ್ನು ಈ ಫ್ಯಾಕ್ಟರಿಯಲ್ಲಿ ಬಳಸಬೇಕಾಗುವುದು

ಈ ಫ್ಯಾಕ್ಟರಿಯ ಆಡಳಿತ ವರ್ಗದವರು ಈ ಗಾಗಲೇ ತಮ್ಮ ನಿಬ್ಬಂದಿಗೆ ಬೇಕಾದ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. 1954 ನೇ ವರ್ಷದ ಮಾರ್ಚಿ ತಿಂಗಳಲ್ಲಿ ಒಂದು ಶಾಲೆಯನ್ನು ತೆಗೆದು ಸುಮಾರು 70 ಮಂದಿ ಉಮೇದುವಾರಉದ್ಯೋಗಿಗಳಿಗೆ ಶಿಕ್ಷಣ ಕೊಡಲಾಯಿತು. ಪ್ರತಿವರ್ಷವೂ ಸುಮಾರು 600 ಮಂದಿಗಳಂತೆ 4 ವರ್ಷಗಳಕಾಲ ಕೊಡಲೇಪರ್ಪಾಟಾಗಿದೆ.

ಉದ್ಯೋಗ ಪರಿಸ್ಥಿತಿಯ ನಿರ್ಮೆರ್

ಭಾರತದಲ್ಲಿ 1954 ರ ಜೂನ್ ತಿಂಗಳಲ್ಲಿ ಉದ್ಯೋಗ ಪರಿಸ್ಥಿತಿಯಲ್ಲಿನ ಮುಖ್ಯಾಂಶಗಳೆಂದರೆ ಉದ್ಯೋಗಬೇಕೆಂದು ಅರ್ಜಿ ಹಾಕಿಕೊಂಡು ರಿಜಿಸ್ಟರ್ ಮಾಡಿಕೊಂಡವರು ಹಾಗೂ ಉದ್ಯೋಗ ದೊರಕಿದವರ ಸಂಖ್ಯೆಗಳು ಹೆಚ್ಚಾಗಿರುವುದು, ಉದ್ಯೋಗ ವಿನಿಮಯ ಕೇಂದ್ರಗಳಿಗೆ ಪ್ರತಿಯಾದ ಕೆಲಸಗಳ ಸಂಖ್ಯೆ ಕಡಿಮೆಯಾಗಿರುವುದು.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಕೆಲಸಾರ್ಥಿಗಳಾಗಿ ಸುಮಾರು 32,000 ಮಂದಿ ಹೆಚ್ಚಾಗಿ ದಾಖಲಾಗಿರುವರು. ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಸಾರ್ವಜನಿಕ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಹೊರಬಿದ್ದು ಬಂದು ಈ ಸಂಖ್ಯೆಯಲ್ಲಿರುವುದಕ್ಕೆ ಕಾರಣವಾಗಿದೆ. ಜೂನ್ ತಿಂಗಳು 1,43,384 ಜನರು ಕೆಲಸಕ್ಕಾಗಿ ದಾಖಲಾಗಿದ್ದಾರೆ. ಅದರ ಹಿಂದಿನ ತಿಂಗಳಲ್ಲಿ 12,113 ಜನ ದಾಖಲಾಗಿದ್ದರು. ಜೂನ್ ತಿಂಗಳಾಖ್ಯೆರಿಯಲ್ಲಿ ಒಟ್ಟು 5, 48,395 ಜನರು ಉದ್ಯೋಗಕ್ಕಾಗಿ ವಿನಿಮಯ ಕೇಂದ್ರದಲ್ಲಿ ದಾಖಲಾಗಿದ್ದರು.

ವಿನಿಮಯ ಕೇಂದ್ರಗಳಿಗೆ, ಜೂನ್ ತಿಂಗಳಲ್ಲಿ 20.396 ಉದ್ಯೋಗಗಳು ಖಾಲಿ ಇರುವುದಾಗಿ ವರದಿಯಾಗಿದ್ದವು ಮೇ ತಿಂಗಳಲ್ಲಿ ವರದಿಯಾಗಿದ್ದ ಉದ್ಯೋಗಗಳ ಸಂಖ್ಯೆ 22633. ವಿನಿಮಯ ಕೇಂದ್ರದಲ್ಲಿ ರಿಜಿಸ್ಟರಾಗಿದ್ದು ಉದ್ಯೋಗ ದೊರಕಿದವರ ಸಂಖ್ಯೆ ಜೂನಿನಲ್ಲಿ 14687 ಮೇ ತಿಂಗಳಲ್ಲಿ 14,384 ಮಂದಿಗೆ ಉದ್ಯೋಗ ದೊರಕಿದೆ.

ಭಾರತ ಸರ್ಕಾರದ ಕಾರ್ಮಿಕ ಖಾತೆಯ ತರಬೇತು ಯೋಜನೆಯ ಪ್ರಕಾರ ಆ ತಿಂಗಳ ಕೊನೆಯಲ್ಲಿ ವಿವಿಧ ತರಬೇತು ಸಂಸ್ಥೆಗಳನ್ನು ಮತ್ತು ಕೇಂದ್ರಗಳಲ್ಲಿ ಒಟ್ಟು 1,880 ಜನರು ತರಬೇತು ಪಡೆಯುತ್ತಿದ್ದರು. ಅವರಲ್ಲಿ 435 ಮಂದಿ ಮಹಿಳೆಯರು, 294 ಮಂದಿ ಸ್ಥಾನಪಲ್ಲಟರು ಕೋನಿ ಬಿಲಾಸಪೂರದ ಕೇಂದ್ರ ತರಬೇತು ಸಂಸ್ಥೆಯಲ್ಲಿ 109 ಮಂದಿ ಶಿಕ್ಷಕರು ತರಬೇತುಹೊನೆದರು

ಇದರ ಜೆದತೆಗೆ ಸ್ಥಾನಪಲ್ಲಟರ ಅಪ್ರೆಂಟಿಸ್ಷಿಪ್ ತರಬೇತು ಯೋಜನೆಯ ಪ್ರಕಾರ ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ 640 ಅಪ್ರೆಂಟಿಸ್ ಶಿಕ್ಷಕರು ಉತ್ಪನ್ನ ಕೆಲಸಗಳಲ್ಲಿ ಪ್ರಾಯೋಗಿಕ ಶಿಕ್ಷಣಗಳನ್ನು ಪಡೆಯುತ್ತಿದ್ದರು.

ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

SC No 104/54

ವಾದಿ— ಕೋಟ್ಯಾಗಿನ ದೊಡ್ಡಹನುಮಂತಪ್ಪ
ಪ್ರತಿವಾದಿ.— ಅರ್ಜನಾಳು ಕೊಟ್ರಗೌಡ–ತಂದೆ ಮಲ್ಲಪ್ಪ
ರಾಗಿಮಸಲ್ವಾಡ ತಾಲೂಕು ಹ ರ ಪ ನ ಹ ಳ್ಳಿ

ಆರ್ಡರ್ 5 ರೂಲು 1 ಪ್ರಕಾರ ಪ್ರತಿವಾದಿಗೆ ನೋಟೀಸು.

ಮೇಲಿನ ನಂಬರಿನಲ್ಲಿ ವಾದಿಯು ಪ್ರೋನೋಟು ಸಾಲ ಬಾಬತ್ತು, ರೂ 287–0–0 ಇವರ ಕೋರ್ಟು ಖರ್ಚು, ಮತ್ತು ಮುಂದಿನ ಬಡ್ಡಿಗಾಗಿ ನಿಮ್ಮ ಮೇಲೆ ದಾವಾಮಾಡಿರುತ್ತಾರೆ. ಸದರಿ ದಾವೆಯ ವಿಚಾರಣೆಯು 12—8—54 ಕ್ಕೆ ಇದ್ದು ಆದಿನ ಹಗಲು 11 ಗಂಟೆಗೆ ಹಾಜರಾಗಿ ನಿಮ್ಮ ತಕರಾರೇನಾದರು ಇದ್ದರೆ– ಸಾದರು ಪಡಿಸಬೇಕು. ಇಲ್ಲವಾದರೆ, ನಿಮ್ಮ ಪರೋಕ್ಷದಲ್ಲಿ ಕೋರ್ಟಿನ ನಿಚಾರಣೆಯಾಗಿ ನಿರ್ಣಯವಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಯ ಂ. ನಟೇಶ ಮೊ ದ ಲಿ ಯಾ ರ್
ವಾದಿಯ ಪಕ್ಷೀಲರು
ಹೊ ಸ ಪೇ ಟಿ.

ಪಿಂಗಾಣಿ ಪಾತ್ರೆಗಳ ಕಾರ್ಖಾನೆ.

ಮೈಸೂರು ಸರಕಾರವು 63 ಲಕ್ಷರೂ. ವೆಚ್ಚದಲ್ಲಿ ಪಿಂಗಾಣಿ ಪಾತ್ರೆಗಳ ಕಾರ್ಖಾನೆಯು ವಿಸ್ತರಣಾ ಯೋಜನೆಯನ್ನು ಕೈಗೊಂಡಿದ್ದು ಜುಲೈ 7 ರಂದು ಈ ಕಟ್ಟಡಗಳ ಉದ್ಘಾಟನೆಯನ್ನು ಬೆಂಗಳೂರಲ್ಲಿ ಮೈಸೂರಿನ ರಾಜಪ್ರಮುಖರು ಇರಿಸಿದರು. ಈ ವಿಸ್ತೃತ ಕಾರ್ಖಾನೆಯು ಮೈಸೂರು ಸರಕಾರ ವಿದ್ಯುತ್ ವಿಭಾಗಕ್ಕೆ ಬೇಕಾಗಬಹುದಾದ ಎಲ್ಲಾ ಉಪಕರಣಗಳನ್ನು ತಯಾರಿಸುವ ನಿರೀಕ್ಷೆ ಇದೆ. ಅಲ್ಲದೆ ಇಲೆಕ್ಟ್ರಿಕಲ್ ಇನ್ಸುಲೇಟರುಗಳನ್ನು ನೆರೆಪ್ರಾಂತಗಳೂ, ಕೇಂದ್ರ ಸರಕಾರವೂ ಪಡೆಯಬಹುದಾದ ನಿರೀಕ್ಷೆ ಇದೆ. ಜಾಪಾನಿನ ಉದ್ದಿಮೆ ಸಂಸ್ಥೆಯೊಂದಿಗೆ ಮಾಡಿಕೊಂಡ ತಾಂತ್ರಿಕ ಸಹಕಾರ ಒಪ್ಪಂದದಂತೆ ಈ ಯೋಜನೆ ಆರಂಭಿಸಲಾಗಿದೆ.

ಭಾರತದಲ್ಲಿ ಅಕ್ಕಿ ನಿಯಂತ್ರಣ ಹೋಯಿತು

ಇದೇ ಜುಲೈ 10 ರಿಂದ ಕೇಂದ್ರ ಸರಕಾರ ಅಕ್ಕಿಯ ಮೇಲಣ ನಿಯಂತ್ರಣವನ್ನು ಸಂಪೂರ್ಣವಾಗಿ ತೆಗೆದುಹಾಕಿದುವುದು. ದೇಶದ ಒಂದು ಕಡೆಯಿಂದ ಯಾವುದೇ ಇನ್ನೊಂದೆಡೆಗೆ ಅಕ್ಕಿಯನ್ನು ಒಯ್ಯಲು ಈಗ ನಿರ್ಭಂದವಿಲ್ಲ. ಕಳೆದ ಎರಡು ವರುಷಗಳಿಂದ ಉತ್ಪತ್ತಿ ಮುಹಾ ಹಬ್ಬಿರುವುದಲ್ಲದೆ, ಅಕ್ಕಿಯ ಖರ್ಚು ಕಡಿಮೆಯಾಗಿರುವುದು. ಆದುದರಿಂದ ನಿಯಂತ್ರಣವನ್ನು ತೆಗೆಯಲಾಗಿದೆ.

ಆಹಾರ ಪದಾರ್ಥಗಳ ಬೆಲೆ ತುಂಬಾ ಇಳಿಯಬಾರದು

ದೇಶಮುಖರ ಎಚ್ಚರಿಕೆ

ದೇಶದಲ್ಲಿ ವ್ಯವಸಾಯ ಉತ್ಪನ್ನಗಳ ಅದರಲ್ಲೂ ಆಹಾರ ಪದಾರ್ಥಗಳ ಬೆಲೆಗಳು ತುಂಬಾ ಇಳಿದುಹೋಗದಂತೆತಡೆಗಟ್ಟಲು ಸರ್ಕಾರವು ಯೋಜನಾಬದ್ಧವಾದ ಪ್ರಯತ್ನಗಳನ್ನು ನಡೆಸಬೇಕಾದುದು ಅಗತ್ಯ ಎಂಬುದಾಗಿ ಕೇಂದ್ರ ಆರ್ಥಿಕ ಮಂತ್ರಿ ಶ್ರೀ ಸಿ ಡಿ. ದೇಶಮುಖ್ ರವರು ಹೇಳಿದರು

ಹೀಗೆ ಮಾಡದಿದ್ದರೆ ಮುಂದೆ ವ್ಯವಸಾಯ ಉತ್ಪನ್ನ ಹೆಚ್ಚಲು ಧಕ್ಕೆಯಾಗುವುದೆಂದೂ ಎಚ್ಚರಿಸಿದ್ದಾರೆ.

ಗ್ರಾಮೀಣ ಪ್ರವೃತ್ತಿ.

ಭಾರತವು ಅಹಿಂಸಾ ಮಾರ್ಗದಲ್ಲಿ ವಿಕಾಸ ಹೊಂದಬೇಕಾದರೆ ಅನೇಕ ವಿಷಯಗಳಲ್ಲಿ ಅದು ವಿಕೇಂದ್ರೀಕರಣವನ್ನು ಕೈಕೊಳ್ಳಬೇಕೆಂದು ನಾನು ಸೂಚಿಸುವೆ. ಕೇಂದ್ರೀಕರಣವನ್ನು ಉಳಿಸಿಕೊಳ್ಳಬೇಕಾದರೆ ಅದಕ್ಕೆ ಸಾಕಷ್ಟು ಶಕ್ತಿ ಬೇಕು. ಬಡವರ ಮನೆಯಲ್ಲಿ ಕದ್ದೊಯ್ಯುವಂತಹದು ಏನೂ ಇರುವದಿಲ್ಲ. ಅಲ್ಲಿ ಪೋಲೀಸರ ಕಾವಲು ಏತಕ್ಕೆ? ಸಿರಿವಂತರ ಅರಮನೆಗಳನ್ನು ರಕ್ಷಿಸಲು ಮಾತ್ರ ಬಲವಾದ ಕಾವಲು ಬೇಕು. ಅದೇ ಮೇರೆಗೆ ದೊಡ್ಡ ಕಾರಖಾನೆಗಳಲ್ಲಿಯೂ ಹಳ್ಳಿಗಳ ತಳಹದಿಯ ಮೇಲೆ ಸಂಘಟಿತವಾದ ಭಾರತಕ್ಕೆ ಪರಚಕ್ರಗಳ ಚಿಂತೆ ಇಲ್ಲ, ಆದರೆ ನಗರಗಳ ತಳಹದಿಯ ಮೇಲೆ, ಸೈನ್ಯ, ವಿಮಾನಪಡೆ, ನೌಕಾದಳಗಳಿಂದ ಸಜ್ಜಿತವಾದ ಭಾರತಕ್ಕೇ ಪರರ ಆಕ್ರಮಣದ ಅಂಜಿಕೆ ಹೆಚ್ಚು.....

ಕಾರಖಾನೆಗಳ ಮೇಲೆ ನಿಂತ ಸಂಸ್ಕೃತಿಯಲ್ಲಿ ಅಹಿಂಸೆ ಬೆಳೆಯದು ಸ್ವಯಂಪೂರ್ಣವಾದ ಹಳ್ಳಿಗಳ ವಾತಾವರಣವೇ ಅದಕ್ಕೆ ಒಗ್ಗುವದು...ಗ್ರಾಮೀಣ ಆರ್ಥಿಕ ಪ್ರಪಂಚದಲ್ಲಿ ಸುಲಿಗೆಯು ಲವಲೇಶವಿಲ್ಲ, ಸುಲಿಗೆ ಹಿಂಸೆಗೆ ಮೂಲ. ಆದಕಾರಣ ಅಹಿಂಸಾವಾದಿಗಳಾಗುವದಕ್ಕೆ ಮೊದಲು ನೀವು ಗ್ರಾಮೀಣತೆಯನ್ನು ಅರಗಿಸಿಕೊಳ್ಳಬೇಕು. ಗ್ರಾಮೀಣತೆಯನ್ನು ಅರಗಿಸಿಕೊಳ್ಳಲು ರಾಟೆಯಲ್ಲಿ ನಂಬುಗೆ ಬೇಕು.

ಒಂದೇ ಮಾತಿನಲ್ಲಿ ಹೇಳಬೇಕಾದರೆ, ಸಂಪೂರ್ಣ ಮಾನಸಿಕ ಹಾಗು ನೈತಿಕ ವಿಕಾಸದೊಂದಿಗೆ ಮಾನವ ಸುಖವನ್ನು ಸಾಧಿಸುವದೇ ಗುರಿಯಾಗಿರಲಿ. ನೈತಿಕ, ಶಬ್ದವನ್ನು ಧಾರ್ಮಿಕ ಎಂಬರ್ಥದಲ್ಲಿಯೆ ನಾನು ಬಳಸಿದ್ದೇನೆ.

ಈ ಗುರಿಯು ವಿಕೇಂದ್ರೀಕರಣದಿಂದಲೇ ಸಾಧ್ಯ.

—ಮಹಾತ್ಮಾ ಗಾಂಧಿ

ಮಿಡತೆ ತಂಡಗಳನ್ನು ಪಿಡಿಸಲಾಯಿತು.

ರೂಪಾರ್, ಖರಾರ್ ಮತ್ತು ಅಂಬಾಲ ತಾಲ್ಲೂಕುಗಳಲ್ಲಿ ಬಂದಿದ್ದ ಭಾರೀ ಮಿಡತೆ ಗುಂಪುಗಳು ಈಗ ಜೊರಟು ಹೋಗಿವೆ. ಇವುಗಳನ್ನು ಓಡಿಸಲು ಅಧಿಕಾರಿಗಳು ಕಳೆದ 24 ಗಂಟೆಗಳಲ್ಲಿ ಕಾರ್ಯೋಚರಣೆ ನಡೆಸಿದರು.

ಹೊಸಪೇಟೆಯ ಜಿಲ್ಲಾ ಮುನ್ಸಿಫರ
ಕೋರ್ಟಿನಲ್ಲಿ
B.M.C. O. S. 368/51
O. S. E. P. 29/54

ಡಿಕ್ರಿ ಹೋಲ್ಡರ್
ಜಡೆ ಶಿದ್ಲಿಂಗಪ್ಪ ತಂದೆ ಸೂಗಪ್ಪ 61ವರ್ಷ, ವೀರಶೈವ, ವ್ಯಾಪಾರ, ಬಳ್ಳಾರಿ

Vs

ಜಡ್ಜ್‌ಮೆಂಟ್ ದೆಟ್ಟರ್
ಆಮಿದಾಲ ಸೌರಶಂಕರ್ ತಂದೆ ಆಮಿದಾಲ ವೆಂಕಟರಾಮಪ್ಪ 42ವರ್ಷ ಹಿಂದು, ಕಂಟ್ರಾಕ್ಟರ್, ಬಳ್ಳಾರಿ

ಮೇಲಿನ ನಂಬರಿನಲ್ಲಿ ನಾವಿ ಜಸ್ತಿ ಮಾಡಿಸಿದ ಪ್ರತಿವಾದಿಯ ಆಸ್ತಿ ಯಾಲಂ ಪರ್ತುಗಳು ನಿರ್ಣಯ ಮಾಡುವುದಕ್ಕೆ 9-8-54ಕ್ಕೆ ವಾಯಿದಾ ಹಾಕಿರುತ್ತಾರೆ. 9-8-54 ತೇದಿ ಪ್ರತಿವಾದಿ ಬುದ್ಧಾಗಲಿ ವಕೀಲರ ಮೂಲಕ ಆಗಲಿ ಕೋರ್ಟಿಗೆ ಹಗಲು 11 ಘಂಟೆಗೆ ಹಾಜರಾಗದಿದ್ದರೆ ಏಕಪಕ್ಷ ಹುಕುಂ ಆಗುತ್ತದೆ.

ಎ. ಆರ್. ಕೃಷ್ಣರಾವ್
ಅಡ್ವೊಕೇಟ್
ಹೊಸಪೇಟೆ
29—7—54

ಭಾರತದ ಭಾಷೆಗಳು ಮತ್ತು ಅವುಗಳನ್ನಾಡುವವರು

೧೯೫೧ನೇ ಇಸ್ವಿಯ ಜನಗಣನೆಯ ಮೇರೆಗೆ ಭಾರತ ಜನಸಂಖ್ಯೆ ೩೫ ಕೋಟಿ ೧೮ ಲಕ್ಷ, ೭೯ ಸಾವಿರದಾ ೩೯೪ ಎಂದು ಗೊತ್ತಾಗಿದೆ. ಈ ದೇಶದಲ್ಲಿ ೩೭ ಪ್ರಾಂತಗಳು ನಿರ್ಮಿಸಲ್ಪಟ್ಟಿವೆ. ಭಾರತೀಯರು ಆಡುವ ಭಾಷೆಗಳು ಒಟ್ಟು ೨೫೦ ಇವೆ. ಅವುಗಳಲ್ಲಿ ೧೪ ಪ್ರಮುಖವಾಗಿವೆ ಮತ್ತು ಅವುಗಳಿಗೆ ಸರಕಾರದ ಮನ್ನಣೆ ದೊರೆತಿದೆ ಈ ಹದಿನಾಲ್ಕು ಭಾಷೆಗಳನಾಡುವ ಒಟ್ಟು ಜನಸಂಖ್ಯೆಯು ೩೫ ಕೋಟಿ, ೩೪ ಲಕ್ಷ, ೭೨ ಸಾವಿರದಾ ೬೦೨ ಆಗುತ್ತದೆ.

ಹಿಂದಿ, ಉರ್ದು ಮತ್ತು ಹಿಂದುಸ್ತಾನಿ ಭಾಷೆಗಳನ್ನು ಆಡುವ ಒಟ್ಟು ಜನರು ೧೪ ಕೋಟಿ, ೯೯ ಲಕ್ಷ, ೪೪ ಸಾವಿರದಾ ೩೧೧ ಆಗುತ್ತಾರೆ. ಮರಾಠಿ ೨ ಕೋಟಿ ೨೦ ಲಕ್ಷ ೪೯ ಸಾವಿರದಾ ೫೭೨, ಗುಜರಾತಿ ೧ ಕೋಟಿ, ೬೩ ಲಕ್ಷ ೧೦ ಸಾವಿರದಾ ೬೭೧, ಬಂಗಾಲಿ ೨ ಕೋಟಿ, ೫೧ ಲಕ್ಷ, ೨೧ ಸಾವಿರದಾ ೬೭೪, ಮಲಯಾಲಮ್ ೧ ಕೋಟಿ ೩೫ ಲಕ್ಷ, ೮೦ ಸಾವಿರದಾ ೧೦೯, ತಮಿಳು ೩ ಕೋಟಿ ೬೮ ಲಕ್ಷ, ೪೬ ಸಾವಿರದಾ ೭೬೪, ತೆಲುಗು ೩ ಕೋಟಿ, ೭೯ ಲಕ್ಷ, ೯೯ ಸಾವಿರದಾ ೯೧೬, ಕನ್ನಡ ೧ ಕೋಟಿ, ೪೪ ಲಕ್ಷ, ೭೧ ಸಾವಿರದಾ ೭೬೪, ಅಸಾಮಿ ೪೯ ಲಕ್ಷ, ೮೮ ಸಾವಿರದಾ ೩೫೬, ಓರಿಯಾ ೧ ಕೋಟಿ, ೩೧ ಲಕ್ಷ, ೫೩ ಸಾವಿರದಾ ೯೦೯, ಕಾಶ್ಮೀರೀ ೫೦೮೪, ಸಂಸ್ಕೃತ ೨೩೩ ಹೀಗೆ ಬೇರೆಬೇರೆ ಭಾಷೆಗಳನ್ನು ಆಡುವ ಜನರು ಭಾರತದಲ್ಲಿ ಇದ್ದಾರೆ

ವರ್ತಮಾನ ಪತ್ರಿಕೆಗಳ ಪ್ರಚಾರ

1953 ರ ಅಂತ್ಯಕ್ಕೆ ಸಂಯುಕ್ತ ಸಂಸ್ಥಾನದಲ್ಲಿ ಮುದ್ರಣವಾದ ಅಥವಾ ಸಂಚೆಗೆ ಪ್ರಕಟವಾಗುವ ದೈನಿಕ ವರ್ತಮಾನ ಪತ್ರಗಳ ಒಟ್ಟು ಸಂಖ್ಯೆಯು 1785 ಕ್ಕೆ ಏರಿತು. ಅವುಗಳ ಒಟ್ಟು ದೈನಿಕ ಮಾರಾಟವು ೪೪, ೭೩, ೭೮೬ ಪ್ರತಿಗಳಿಗೆ ಮುಟ್ಟಿತು. "ನ್ಯೂಯಾರ್ಕ ಡೇಯಲಿ ನ್ಯೂಸ್" ಪತ್ರಕ್ಕೆ ೭೧ ಲಕ್ಷ, ೧೪, ೧೪೯ ಪ್ರತಿಗಳ ಮಾರಾಟವಿದ್ದು ಜಗತ್ತಿನ ಎಲ್ಲ ದೈನಿಕಗಳಲ್ಲಿ ಅತ್ಯಧಿಕ ಪ್ರಸಾರವಿರುತ್ತದೆ. ಅದರ ರವಿವಾರ ಸಂಚಿಕೆಯ ಪ್ರಸಾರವು ೪೦ ಲಕ್ಷ ಮಿಕ್ಕಿ ಹೋಗುತ್ತದೆ. ಅಮೇರಿಕೆಯ ದೈನಿಕಗಳ ಮಾರಾಟದಲ್ಲಿ ಎರಡನೇ ಸ್ಥಾನ "ಶಿಕೊಗೋ ಟ್ರೈಬ್ಯೂನ್" ಎಂಬುದಕ್ಕೆ ಇರುತ್ತದೆ. ಅದರ ಪ್ರಸಾರವು ೯೦೧, ೨೫೫ ಪ್ರತಿಗಳಷ್ಟಿರುತ್ತದೆ. ಭಾರತದ ದೈನಿಕಗಳಲ್ಲಿ ಪ್ರಥಮ ಸ್ಥಾನವನ್ನು, ದಿನಕ್ಕೆ ಸುಮಾರು ೮೦,೦೦೦ ಪ್ರತಿಗಳು ಮಾರಾಟವಾಗುವ ಮುಂಬಯಿಯ "ಟೈಮ್ಸ್ ಆಫ್ ಇಂಡಿಯಾ" ಪತ್ರವು ಪಡೆಯುತ್ತದೆಂದು ಕೇಳಲಾಗಿದೆ. ಸಾಪ್ತಾಹಿಕಗಳಲ್ಲಿ "ಇಲ್ಲಸ್ಟ್ರೇಟೆಡ್ ವೀಕ್ಲೆ" ಯ ನಂತರ ತಮಿಳ ಭಾಷೆಯಲ್ಲಿ ಪ್ರತಿ ರವಿವಾರ ಪ್ರಕಟವಾಗುವ ಮದ್ರಾಸ ಪಟ್ಟಣದ "ಕಲ್ಕಿ" ಎಂಬುದು ಪ್ರಸಾರದಲ್ಲಿ ೨ ನೇ ಸ್ಥಾನ ಪಡೆಯುತ್ತದೆಂದು ತೋರುತ್ತದೆ. ಅವರ ಮಾರಾಟ ಪ್ರತಿಗಳು ೭೦,೦೦೦ಕ್ಕೆ ನಿಲ್ಲಿರುತ್ತವೆ.

ಬಹಳ ಹೆಚ್ಚು ಜೋಳ ಬೆಳೆದ

ವಿಜಾಪುರದ ಧೃತ ಶ್ರೀ ಗುಣಾರಿಯವರು

ವಿಜಾಪುರ ಜಿಲ್ಲೆಯ ಸಿಂದಗಿ ಗ್ರಾಮದ ಶ್ರೀ ಎಸ್ ಬಿ. ಗುಣಾರಿಯವರಿಗೆ ನಾವು ಧೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅವರು ಮೊನ್ನೆ ನ ಹಂಗಾಮದಲ್ಲಿ ತಮ್ಮ ಭಾಗವ ಸರಾಸರಿ ಹುಟ್ಟುವಳಿಗಿಂತ ಎಷ್ಟೋ ಪಟ್ಟು ಹೆಚ್ಚು ಹಿಂಗಾರಿ ಜೋಳ (ಜವಾಯತ) ವನ್ನು ಒಕ್ಕಿದರು ಅಲ್ಲಿಯ ಸರಾಸರಿ ಎಕರೆಗೆ 540 ಪೌಂಡ ಇದ್ದರೆ ಶ್ರೀ ಗುಣಾರಿಯವರು ಎಕರೆಗೆ 3,020 ಪೌಂಡು ಅಂದರೇ ಸರಾಸರಿಯ ಸುಮಾರು 6 ಪಟ್ಟು ಹುಟ್ಟುವಳಿಯನ್ನು ಪಡೆದರು.

ಮಧ್ಯಮ ಕಪ್ಪು ಮಣ್ಣಿನ ಆ ಭೂಮಿಯಲ್ಲಿ ಮೊದಲು ನೇಂಗಾ ತೆಗೆದುಕೊಂಡಿದ್ದರು. ನೇಂಗಾ ಒಕ್ಕಿದ ನಂತರ ಭೂಮಿಯನ್ನು ಟ್ರಾಕ್ಟರದಿಂದ 6 ರಿಂದ 8 ಇಂಚು ಆಳವಾಗಿ ಹಗುರು ನೇಗಿಲು ಹೊಡೆದು ನಾಲ್ಕು ಸಲ ಹರಗಿ ಎಕರೆಗೆ 10 ಜಕ್ಕಡಿಯಂತೆ ದಡ್ಡೀ ಗೊಬ್ಬರವನ್ನು ಹಾಕಿದರು. ತಮ್ಮ ಸ್ವಂತದ ಹೊಲದಲ್ಲಿಯೇ ಬೆಳೆದ ಎಮ್. 35-1 ಎಂಬ ಹೆಸರಿನ ಸುಧಾರಿಸಿದ ಹಿಂಗಾರಿ ಜೋಳದ ಬೀಜಗಳನ್ನು ಅವರು ಬಿತ್ತಲು ಉಪಯೋಗಿಸಿದರು. ಬೀಜಗಳನ್ನು ಮೊದಲು ಗೋಮೂತ್ರದಲ್ಲಿ ತೊಳೆದು ನಂತರ ಬೆಳೆಗೆ ಕಾಡಿಗೆ ರೋಗ ಹತಗಲಬಾರದೆಂದು ಸಂಧಕದ ಪುಡಿಯಿಂದ ಉಪಚರಿಸಿ ಎಕರೆಗೆ 5 ಪೌಂಡು ಬೀಜ ಬೀಳುವಂತೆ ಬಿತ್ತಿದರು. ಬೆಳೆಯಲ್ಲಿ ಅವರು ಎರಡು ಸಲ ಎಡೆಹೊಡೆದು ಎರಡು ಸಲ ಕಳೆ ತೆಗೆದರು. ಬೆಳೆ ಚೆನ್ನಾಗಿ ಬೆಳೆದು ಸುಮಾರು 8 ಅಡಿ ಎತ್ತರವಾಗಿತ್ತು. ಅರ್ಧಕ್ಕರ್ಧದಷ್ಟು ಸಸ್ಯಗಳಿಗೆ ಒಂದಕ್ಕಿಂತ ಹೆಚ್ಚು ತೆನೆಗಳಿದ್ದವು. ತೆನೆಗಳ ಪರಮಾವಧಿ ಸಂಖ್ಯೆ 5 ಇತ್ತು. ಸಸಿಗಳಲ್ಲಿ ಸಮಾನ ಅಂತರ ಉಳಿಯುವಂತೆ ಮೊದಲೇ ಆಂಗಳಗೊಳಿಸಿದ್ದರು. ಮುಂದೆ ಕಾಳು ಚೆನ್ನಾಗಿ ತುಂಬಿಕೊಂಡು ಬಲಿಷ್ಠವಾಗಲೆಂಬ ಉದ್ದೇಶದಿಂದ ದೇಟಿನ ಕೆಳಗಿನ ಮೂರು ಅಡಿ ಭಾಗದಲ್ಲಿಯ ಹುಲ್ಲನ್ನೆಲ್ಲ ಸವರಿದರು.

ಒಣ ಪರಿಸ್ಥಿತಿಯಲ್ಲೂ ಇಷ್ಟೊಂದು ಉತ್ತಮ ಹಿಂಗಾರಿ ಜೋಳವನ್ನು ಒಕ್ಕಿದ ಶ್ರೀ ಗುಣಾರಿ ಅವರ ಪರಿಶ್ರಮವು ಶ್ಲಾಘನೀಯವಾದುದು. ಇತರರಿಗೆಲ್ಲಿಯು ಧೈರ್ಯದಿಂದ ಅನುಕರಣೀಯ ಪಾಠ ಹಾಕಿಕೊಟ್ಟಿದ್ದಾರೆ.

ಸುಭಾಷಿತ

ತನ್ಮಿತ್ರಂ ತ್ಯಜತಿ ವಿಪತ್ಸು ಯನ್ನ ಮಿತ್ರಂ
ತತ್ ಜ್ಞಾನಂ ಪ್ರಶಮಕರಂ ಯದಿಂದ್ರಿಯಾಣಾಂ ।
ಯಃ ಪೈತ್ರೀಂ ಧುರಮನಲಂಬತೇ ಸ ಪುತ್ರಃ
ಸಾ ಭಾರ್ಯಾ ಪತಿಹೃದಯಂ ಪ್ರಹರ್ಷಣೀಯಂ ॥

ಕಷ್ಟಕಾಲಗಳಲ್ಲಿ ಮಿತ್ರನನ್ನು ಕೈ ಬಿಡುವ ಮಿತ್ರನೇ ಮಿತ್ರ, ಇಂದ್ರಿಯಗಳನ್ನು ಶಮನಗೊಳಿಸುವ ಜ್ಞಾನವೇ ಜ್ಞಾನ : ತಂದೆಯ ಕಾರ್ಯಭಾರವನ್ನು ವಹಿಸುವ ಮಗನೇ ಮಗ ; ಗಂಡನ ಮನಸ್ಸನ್ನು ಸಂತೋಷಗೊಳಿಸುವ ಹೆಂಡತಿಯೇ ಹೆಂಡತಿ.

ಲುಬ್ಧಾಃ ಶಠಾ ನೈಕೃತಿಕಾ ಗುಣಘ್ನಿಷಃ
ಕಾಮಾತುರಾಃ ಸ್ವಾರ್ಥಪರಾ ದುರಾಸದಾಃ ।
ವರ್ಜ್ಯಾ ನರಾಃ ಸದ್ಭಿರುದೀರಿತಾ ಹಿತೈ
ರ್ವಾ ಪೀಂಪ್ರ ವಂಶಪ್ರಭವೈಃ ಗುಣಪ್ರಿಯೈಃ ॥

ಲೋಭಿಗಳು, ಶಠರು, ಕಪಟಿಗಳು, ಗುಣಘ್ನೀಷಿಗಳು, ಕಾಮಾತುರರು, ಸ್ವಾರ್ಥಪರರು ಮತ್ತು ಹೊಂದಲ ಸದಳರಾದಮೂರ್ಖರು—ಇವರು ಇಂದ್ರನ ವಂಶದವರಾದರೂ ತೊರೆಯಲ್ಪಡತಕ್ಕವರೆಂದು ಹಿತವರೂ, ಗುಣಪ್ರಿಯರೂ ಆದ ಸತ್ಪುರುಷರು ಹೇಳುತ್ತಾರೆ.

ಟೆಲಿಫೋನ್ ಅಭಾವದ ನಿವಾರಣೆ

"ನಿಮ್ಮ ಸ್ವಂತ ಟೆಲಿಫೋನ್ ಹೊಂದಿರಿ" ಯೋಜನೆಯನ್ನು ಗಾಜಿ ರ ಅಧಿಕಾರಿಯು ವೇಳೆಗೆ ಬಿಟ್ಟು ಬಿಡುವ ನಿರೀಕ್ಷೆಯಿದೆ.

ಆಟೊಮ್ಯಾಟಿಕ್ ಟೆಲಿಫೋನುಗಳನ್ನು ಹೆಚ್ಚು ಹೆಚ್ಚಾಗಿ ಅಮದು ಮಾಡಿಕೊಳ್ಳಲಾಗುತ್ತಿದೆಯೆಂದೂ, ಬೆಂಗಳೂರಿನಲ್ಲಿನ ಟೆಲಿಫೋನ್ ಕಾರ್ಖಾನೆ ೫೦ ರಿಂದ ೧೦೦ ಕನೆಕ್ಷನ್‌ಗಳನ್ನು ಳ ಎಕ್ಸ್‌ಚೇಂಜ್‌ಗಳನ್ನು ಸದ್ಯದಲ್ಲೇ ತಯಾರಿಸುವ ನಿರೀಕ್ಷೆ ಇದೇಯೆಂದೂ ಕಮ್ಯೂನಿಕೇಷನ್ಸ್ ಮಂತ್ರಿ ಶ್ರೀ ಜಗಜೀವನರಾಮ್ ರವರು ಪತ್ರಿಕಾ ಪ್ರತಿನಿಧಿಗಳಿಗಿತ್ತ ಭೇಟಿಯೊಂದರಲ್ಲಿ ತಿಳಿಸಿದ್ದಾರೆ.

ಇನ್ನು ಎರಡೂವರೆ ವರ್ಷಗಳಲ್ಲಿ ಟೆಲಿಫೋನ್ ಸಮಸ್ಯೆ ಬಗೆಹರಿಯುವುದೆಂದೂ ಆಗ ಇಷ್ಟಬಂದವರೆಲ್ಲ ಟೆಲಿಫೋನ್ ಹೊಂದಬಹುದೆಂದೂ ಮಂತ್ರಿಗಳು ಹೇಳಿದ್ದಾರೆ.

ಬಳ್ಳಾರಿ 'ಪ್ರಭಾತ್' ಟಾಕೀಸ್
ನಲ್ಲಿ
ಬೆಗನೆ ಬರಲಿದೆ
ಜಯರಾಜ ಫಿಲಿಂ ರವರ
ನಟ ಶೇಖರ
(ಅಭ್ಯುತ ಕನ್ನಡ ಚಿತ್ರ)
ನಿರ್ಮಾಪಕ-ನಿರ್ದೇಶಕ
ಪಿ. ವಿ. ರಾಜು

ನವಭಾರತಕ್ಕೆ
ಚಂದಾದಾರರಾಗಿರಿ.

ಬಳ್ಳಾರಿ 'ಪ್ರಭಾತ' ದಲ್ಲಿ 'ನೋಡಿರಿ, ಆನಂದಪಡಿರಿ,

ಮನರಂಜನೆಯ್ಯ ಕ್ರಿನೇ ವಾರ
ಪ್ರತಿದಿನವು ಎರಡು ಆಟಗಳು ಸಾ॥ 6-10, ರಾ॥ 9-30
ಎ. ವಿ. ಯಂ ರವರ
'ಸಂಗಂ'
[ಸುಪ್ರಸಿದ್ಧ ತೆಲುಗು - ಚಿತ್ರ]
ಇನರಲ್ಲಿ ನಾಗಯ್ಯ, ಯಸ್. ಟಿ. ರಾಮರಾವ್, ಯಸ್. ವಿ. ರಂಗರಾವ್
ವೈಜಯಂತಿಮಾಲ, ಅಂಜಲಿದೇವಿ ನಟಿಸಿದ್ದಾರೆ:—
.... ಸಂಗೀತ ರಸಭರಿತ ಚಿತ್ರ ....
.... ಶೀಘ್ರವಾಗಿ ಬರಲಿದೆ .... ಜನತಾರವರ ....
ಪರಿವರ್ತನ

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
೬ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾವ್ಯೀಕರಿಸುವುದಿಲ್ಲ.	Subscription will not be accepted for less than 6 months

To 2-8-54

Sri.

Edited Printed & Published by T. B. Keshava Rao, at Nava Bharat Printing Press, Bellary

ನವಚೈತನ್ಯ

ಸೋಮವಾರ
ಆಗಷ್ಟು
೯, ೧೯೫೫ಳ

ವರ್ಷ 17 | ಬಳ್ಳಾರಿಯ ಶೋಷಿತರ ಕಾಸ್ತ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 46 | ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಬಿ. ಕೇಶವರಾವ್

ಬಳ್ಳಾರಿ ಜಿಲ್ಲಾ ಹರಿಜನರ ಸಮಸ್ಯೆಗಳು

[ಈ ವರ್ಷದ ಮಾರ್ಚ್ ತಿಂಗಳಲ್ಲಿ ಕುರುಗೋಡು, ಸಿರಿಗುಪ್ಪೆ–ಹೊಸಪೇಟೆಗಳಲ್ಲಿ ಹರಿಜನರ ವಿಳಿಗೆಯ ಉದ್ದೇಶವನ್ನಿಟ್ಟು ಕೊಂಡು ಸರ್ಕಾರದ ಆಶ್ರಯದಲ್ಲಿ ಮೂರು ಸಭೆಗಳಾದವು! ಈ ಸಭೆಗಳಲ್ಲಿ ಅವರ ಸಮಸ್ಯೆಗಳು ಚರ್ಚಿತವಾಗಿ ಕೆಳಿಗೆ ಕಾಣಿಸಿದ ತೀರ್ಮಾನಗಳಾದವು. ಇವೂ ಅಲ್ಲದೆ ವ್ಯಕ್ತಿಗಳಿಂದು ಕೊರತೆಗಳ ನಿವಾರಣೆಗಾಗಿ ಸದರಿ ಸಭೆಗಳಲ್ಲಿ ನೂರಾರು ಅರ್ಜಿಗಳು ಬಂದ -ಅಧಿಕಾರಿಗಳಿಗೆ ಅರ್ಪಿಸಲಾದವು **ಸರ್ಕಾರವು ಇವುಗಳನ್ನು ದುರ್ಲಕ್ಷಿಸದೆ ಇನ್ನು ಮೇಲಾದರೂ ತಾರ್ಯೋ ಪ್ರವೃತ್ತರಾಗಲು ನಮ್ಮ ನಮ್ಮ ಸೂಚನೆ.**

ಕಾರ್ಯದರ್ಶಿ
ಜಿಲ್ಲಾ ಹರಿಜನ ಸೇವಕ ಸಂಘ,

I. ಆರ್ಥಿಕ.

1) ಭೂಮಿಗಳಿಲ್ಲದ ಹರಿಜನರ ಕುಟುಂಬ ಒಂದಕ್ಕೆ 10 ಹತ್ತು ಎಕರೆ ಖುಷ್ಕಿ ಮತ್ತು ತರಿಯಾದರೆ 5ಐದು ಎಕರೆವರಿಗೆ ಭೂಮಿ ಕೊಡಿಸಲು ತಕ್ಕ ಭೂ ಸುಧಾರಣಾ ಕಾಯ್ದೆಮಾಡಿ (Land Reform) ಸರ್ಕಾರವು ಈ ದಿಶೆಯಲ್ಲಿ ತೀವ್ರೋಚರ್ಯೆಗಳಿಗೆದುಕೊಳ್ಳಬೇಕು.

2) ನಾಗುವಳಿಗೆ ಯೋಗ್ಯವಾದ ಒಳ್ಳೆಯ ಭೂಮಿಯು ಹರಿಜನರಿಗೆ ಅನೇಕ ಕಾರಣಗಳಿಂದ ದೊರೆಯದೆ, ಅವರು ಸರ್ಕಾರದ ದೃಷ್ಟಿಯಿಂದ ಆಕ್ಷೇಪಕರವಾದ ಭೂಮಿ (ವಂಕ, ಕಸ್ತಾ ಮತ್ತು ಇತರ ಪೊರಂಬೋಕು ಭೂಮಿ) ಯನ್ನು ಆಕ್ರಮಿಸಿ ಜೀವನ ಸಾಗಿಸಿರುವರು. ಇದರಿಂದ ನೆನಾಲ್ಟಿ, ಎವಿಕ್ಷನ್ ಮತ್ತು ಒಬ್ಬರಿಂದೊಬ್ಬರಿಗೆ ಭೂಮಿಯ ಪರಿವರ್ತನೆ ಆಗಿ ಹರಿಜನರು ಕಷ್ಟನಷ್ಟಗಳಿಗೆ ಪಾತ್ರರಾಗುತ್ತಿರುವರು ಇದನ್ನು ಪರಿಶೀಲಿಸಿ ಹರಿಜನರ ಸಾಗುವಳಿಯಲ್ಲಿರುವ ಭೂಮಿಗಳನ್ನು ಆಕ್ಷೇಪಕರವಾದ ಪಟ್ಟಿಯಿಂದ ತೆಗೆದು ಪಟ್ಟಾ ದಯವಾಲಿಸಬೇಕೆಂದು ಈ ಸಭೆಯ ಜಿಲ್ಲಾಧಿಕಾರಿಗಳನ್ನು ಪ್ರಾರ್ಥಿಸುತ್ತದೆ.

3) ಹರಿಜನರ ಬಹಳ ಅಲ್ಪಾಂಶ ಜನರಿಗೆ ಆಕ್ಷೇಪಣೆ ಇಲ್ಲದೆ ಭೂಮಿಯು ದೊರತು ಬಹಳ ಸ್ವಲ್ಪ ಜನರಿಗೆ ಪೈಸಲ್ ಪಟ್ಟಾ, ಮದ್ರಾಸ್ ಸರ್ಕಾರದಿಂದ ದೊರೆತಿದೆ. ಇನ್ನೂ ಬಹಳ ಜನರು 3 ರಿಂದ 30 ವರ್ಷಗಳವರಿಗೆ ಸ್ವಾಧೀನಾನುಭವ, ಸಾಗುವಳಿ ಇದ್ದರೂ ಪಟ್ಟಾ ದೊರೆತಿಲ್ಲ. ಈ ಕಾರಣ ಆಕ್ಷೇಪಣೆ ಇಲ್ಲದ ಭೂಮಿಗಳಿಗೆಲ್ಲ ಶೀಘ್ರವಾಗಿ ಪಟ್ಟಾಕೊಟ್ಟು ಇತರ ರೈತರಿಗೆ ದೊರೆಯುವಶಕಾವಿ ಸಾಲ ಮೈರೆ ಎಲ್ಲ ಸೌಲಭ್ಯಗಳನ್ನು ಹರಿಜನರಿಗೂ ಕೊಡಿಸಬೇಕೆಂದೂ ಈ ವಿಷಯದ ಅರ್ಜಿಗಳನ್ನು (Quick disposal) ಶೀಘ್ರವಿಚಾರಿಸಿ ಇತ್ಯರ್ಥ ಪಡಿಸಬೇಕೆಂದೂ ಈ ಸಭೆಯು ಸೂಚಿಸುತ್ತದೆ.

4) ಬಳ್ಳಾರಿ ಜಿಲ್ಲೆಯ ಬಹು ಸಂಖ್ಯಾಕ ಗ್ರಾಮಗಳಲ್ಲಿ ಹರಿಜನರು ಕಶ್ಮಲಯುಕ್ತವಾದ ಮತ್ತು ಇಕ್ಕಟ್ಟಾದ ಸ್ಥಳಗಳಲ್ಲಿ ವಾಸಿಸುತ್ತಿರುವ ಕಾರಣ ಮತ್ತು ಕಳೆದ 20 ವರ್ಷಗಳಲ್ಲಿ ನಿವೇಶನಗಳನ್ನು ಕೊಂಡು, ಕೊಡುವ ಕಾರ್ಯದಲ್ಲಿ (Acquisition Proceedings) ಏನೂ ಪ್ರಗತಿಯಾಗಿಲ್ಲದೆ ಡಿಪಾಜಿಟ್ ಕಟ್ಟಿದ ಅನೇಕ ಹಳ್ಳಿಗಳವರು ವರ್ಷಗಟ್ಟಿ ಜಪ ಮಾಡಬೇಕಾಗಿರುವದರಿಂದ, ಈ ವಿಧಾನದಲ್ಲಿ ಶೀಘ್ರಗತಿ ಮಾಡಬೇಕೆಂದೂ ಹರಿಜನರಿಗೆಲ್ಲ ಉಚಿತ ನಿವೇಶನಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಹಳೆಯ ಕೇರಿಯ ಸಮೀಪದಲ್ಲೇ ಕೊಡಿಸಬೇಕೆಂದೂ ಈ ಸಭೆಯು ಸರ್ಕಾರಕ್ಕೆ ಸೂಚಿಸುತ್ತದೆ.

5) ಮನೆ ಕಟ್ಟಿಸಿಕೊಳ್ಳುವ ಹರಿಜನರಿಗೆ ಮೈಸೂರು ಸರ್ಕಾರವು ತಲಾ 300 ರೂ ಗಳಂತೆ ಸಹಾಯವನ್ನು ಒದಗಿಸುತ್ತಿರುವುದಕ್ಕೆ ಈ ಸಭೆಯು ತನ್ನ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತದೆ. ಹರಿಜನರು ಕಡು ಬಡವರಿದ್ದು ಸರ್ಕಾರದ ಪ್ಲಾನಿನ ಪ್ರಕಾರಕ್ಕೆ ಮನೆಕಟ್ಟಿಸಿಕೊಳ್ಳಲು ಅಸಮರ್ಥರಿರುವ ಕಾರಣ ಸರ್ಕಾರದ ಸಹಾಯ ದ್ರವ್ಯನ ಜೊತೆಗೆ ಅವರಿಗೆ ರೂ. 500 ಗಳಿಂದ 1000 ವರೆಗೆ ಸಾಲ ದೊರೆಯುವಂತೆ ಸಹಕಾರ ಸಂಘಗಳಿಂದ ಏರ್ಪಡಿಸಬೇಕೆಂದೂ (House Building Co operative Societies) ಅಗಲೇ ಯೋಜನೆಯು ಅಳವಡಿಸಿಯೋಗಬಲ್ಲದೆಂದೂ ಈ ಸಭೆಯು ಸರ್ಕಾರಕ್ಕೆ ಸಲಹೆ ಕೊಡುತ್ತದೆ.

ಬಳ್ಳಾರಿ ಜಿಲ್ಲಾ

ಹರಿಜನರ ಸಮಸ್ಯೆಗಳು

ಹಿಂದಿನ ಪುಟದಿಂದ

ಮುಂದುವರಿದುದು

6) ಹರಿಜನರು ಬಹುಮಟ್ಟಿಗೆ ಸಾಲ ವಂದಿಗರಿದ್ದಾರೆ. ಬಹುತೇಕ ಸಾಲವು ತೀರಿಸಲ್ಪಟ್ಟಿದ್ದರೂ ಅವರು ಋಣಮುಕ್ತರಾಗಿಲ್ಲ. ಈ ಕಾರಣ ಸರ್ಕಾರವು ಜಿಲ್ಲಾಧಿಕಾರಿಗಳಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯೋಜಿಸಿ ಪ್ರತಿಯೊಂದು ಸಂದರ್ಭಗಳಲ್ಲಿ ನ್ಯಾಯವಾದ ಸಾಲವಿಷ್ಟೆಂದು ನಿರ್ಧರಿಸಿ ನ್ಯಾಯ-ನೀತಿಗಳ ಬಲುಮೆಯಿಂದ ಹರಿಜನರನ್ನು ಋಣಮುಕ್ತರಾಗಿ ಮಾಡಲು ಈ [illegible] ಸರ್ಕಾರಕ್ಕೆ ಸೂಚಿಸುತ್ತದೆ.

7) ನಿರುದ್ಯೋಗೀ ಹರಿಜನರಿಗೆ ಕೆಲಸಗಳು ದೊರೆಯುವಂತಿಲ್ಲ. ಈ ಕಾರಣ ಕೆಲವರ್ಷಗಳವರೆಗಾದರೂ ಸರ್ಕಾರೀ ಇಲಾಖೆಗಳಲ್ಲಿ ಹರಿಜನರಿಗೆ ಸ್ಥಾನಗಳನ್ನು ಕಾಯಿರಿಸಬೇಕೆಂದು ಈ ಸಭೆಯು ಸರ್ಕಾರವನ್ನು ಬೇಡುತ್ತದೆ.

8) ವಿವಿಧ ವೃತ್ತಿಗಳನ್ನವಲಂಬಿಸಿ ಸಾಕಷ್ಟು ಭೂಮಿಯಿಲ್ಲದೆ ಜೀವನದಲ್ಲಿ ಕೊಳಲಿ ಬಳ್ಳಾರಿ [illegible] ಸ್ಥಾಪಿಸಲ್ಪಟ್ಟಿದ್ದು [illegible] ಕೈಹೋ ದ್ಯೋಗಗಳಿಗೆ (Cottage Industries) ಸಹಾಯ ವಿದ್ಯಾರ್ಥಿವೇತನ ಮೊದಲಿಸಬೇಕೆಂದು ಈ ಸಭೆಯು ಕೋರುತ್ತದೆ.

II ಸಾಮಾಜಿಕ

ಹರಿಜನರಿಗೆ ಸಮಾಜದಲ್ಲಿ ಗೌರವವಾದ ಮತ್ತು ಸಮಾನವಾದ ಸ್ಥಾನವನ್ನು ದೊರೆಯಬೇಕಾದರೆ **ದೇವಸ್ಥಾನ** (ಬಸವ) **ನಿರೋಧ, ದೇವಸ್ಥಾನ ಪ್ರವೇಶ ಸಹೋಪ ಸಾಮಾಜಿಕ ಚಳುವಳಿಗಳು** ವಗೈರೆ ಸರ್ಕಾರದ ಶಾಸನಗಳ ಅಮಲಿಗೆ ಸವರ್ಣೀಯರು ಸಹಕರಿಸಬೇಕು. ಇಲ್ಲವಾದರೆ ಬಹಳ ಗೊಂದಲವಾಗುತ್ತದೆ. ಈ ಕಾರಣ ಈ ಕ್ರಾಂತಿಯುಗದ ಮಹಿಮೆಯನ್ನರಿತಾದರೂ (Time Spirit) ಸವರ್ಣೀಯರು ಹರಿಜನರನ್ನು ಆತ್ಮೀಯರನ್ನಾಗಿ ಮಾಡಿಕೊಳ್ಳಬೇಕೆಂದೂ, ಈ ವಿಷಯದಲ್ಲಿ ಬಳ್ಳಾರಿ ಜಿಲ್ಲೆ ಮಹಾಜನರು ಹಿಂದುಳಿಯಬಾರದೆಂದೂ ಈ ಸಭೆಯು ಎಲ್ಲರನ್ನೂ ಸವಿನಯವಾಗಿ ಪ್ರಾರ್ಥಿಸುತ್ತದೆ.

III ರಾಜಕೀಯ ಹಕ್ಕು

7) ಬಳ್ಳಾರಿ ಜಿಲ್ಲೆಯು ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳು ಆಂಧ್ರದಲ್ಲಿ ಸೇರಿದ ನಂತರ ಬಳ್ಳಾರಿ ಜಿಲ್ಲೆಯ 7 ತಾಲೂಕುಗಳಿಗೆ ಮೈಸೂರು ರಾಜ್ಯ ಸಭೆಯಲ್ಲಿ ಹರಿಜನರ ಪ್ರತಿನಿಧಿಯೇ ಇಲ್ಲ. ಮುಂದಿನ ಚುನಾವಣೆಗೆ ಇನ್ನು 3-4 ವರ್ಷಗಳು ಬೇಕು. [illegible] ಕನಿಷ್ಠ ಪಕ್ಷ ಒಬ್ಬರಿಗಾದರೂ ಪ್ರಾತಿನಿಧ್ಯ ಕೊಡಿಸಲು ಮೈಸೂರು ಮುಖ್ಯ ಮಂತ್ರಿಗಳು ಯತ್ನಿಸಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

ಉಡಿಯುವ ತೀರಿನ ಸೌಲಭ್ಯ

[illegible] ಬಳ್ಳಾರಿ ಜಿಲ್ಲೆಯು ಅನೇಕ ಸ್ಥಾನಗಳಲ್ಲಿ ಗಣಿಗಳಿಂದ ನಿರಂತರ [illegible] ಆಗಬೇಕು. ಈ ಕಡೆ ಸರ್ಕಾರವು ಹೆಚ್ಚು ಗಮನ ಕೊಡಲು ಈ ಸಭೆಯು ಪ್ರಾರ್ಥಿಸುತ್ತದೆ.

IV ವಿದ್ಯಾಭ್ಯಾಸ

ಶಾಲೆಗಳಿಲ್ಲದಿರುವ ಗ್ರಾಮಗಳಲ್ಲೆಲ್ಲಾ ಪ್ರಾಥಮಿಕ ಶಾಲೆಗಳನ್ನು [illegible] ತಾಲೂಕಿಗೊಂದಾದರೂ ಸರ್ಕಾರದ ನೇತೃತ್ವದಲ್ಲಿ ಉಚಿತ ವಿದ್ಯಾರ್ಥಿ ನಿಲಯವು ಸ್ಥಾಪಿಸಲ್ಪಡಬೇಕು. **ಬೋರ್ಡಿಂಗ್ ಗ್ರಾಂಟ್** [illegible] **ಮಿಡ್‌ಡೇ ಮೀಲ್** [illegible] ವರಿಸಬೇಕೆಂದು ಈ ಸಭೆಯು ಮೈಸೂರು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತದೆ.

ನೈತಿಕ.

1) ವೈಯಕ್ತಿಕ [illegible] ಮೂಢ ರೂಢಿಗಳಿಂದ ಹರಿಜನರು ಪಾರಾಗಬೇಕಾದರೆ ಸಮಾಜದ ಹೆಚ್ಚು ಮುಟ್ಟದಲ್ಲಿರುವವರ ಸಹಾಯವು ಅಪೇಕ್ಷಿಸಬೇಕು. ಈ ಕಾರಣ ಸವರ್ಣೀಯರು ಹರಿಜನಕೇರಿಗಳನ್ನು ಆಗಾಗ್ಗೆ ಸಂದರ್ಶಿಸಬೇಕು. ಧರ್ಮ ಕಾರ್ಯಗಳಲ್ಲಿ ಪ್ರೋತ್ಸಾಹಿಸಬೇಕು. ಸ್ವಚ್ಛತೆ, ನೈರ್ಮಲ್ಯ, ದೇವಭಕ್ತಿಗಾಗಿ ಭಜನ ಮಂದಿರಗಳ ಸ್ಥಾಪನೆಮಾಡಲು ಸವರ್ಣರಿಗೂ ವಿಜ್ಞಾಪಿಸುತ್ತದೆ.

2) ಎಲ್ಲ ಜಾತಿಯ ಬಾಲಬಾಲೆಯರು ಒಂದೆಡೆಯಲ್ಲಿ ಭಿನ್ನಭೇದಗಳಿಲ್ಲದೆ ಕಲೆತು ವಿನೋದ ಕೂಟ, ಆಟಪಾಟಾದಿಗಳಲ್ಲಿ ಮಗ್ನರಾಗುವುದರಿಂದ ಅಸ್ಪೃಶ್ಯತಾ ನಿವಾರಣೆಯು ಸುಲಭವೂ ಶಾಶ್ವತವೂ ಆಗುತ್ತದೆ. ಆಗಾಗ್ಗೆ ಇಂಥಕೂಟ, ಭೋಜನ ಸಮಾರಂಭಗಳನ್ನು ಏರ್ಪಡಿಸಬೇಕೆಂದು ಈ ಸಭೆಯು ಎಲ್ಲರಿಗೂ ಸಲಹೆ ಕೊಡುತ್ತದೆ.

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ

ಕೋರ್ಟ್‌ನಲ್ಲಿ

S. C. 222/1954

ವಾದಿ

ಭಾವಿಕಟ್ಟೆ ವೆಂಕಮ್ಮ ತಂದೆ ಮುತಾಲಿಕ ಭೀಮರಾವ್ ಬ್ರಾಹ್ಮಣ 60 ವರ್ಷ

ಜರಂಯ್ತಿ ಹಡ್ಡೋಳ್ಳಿ ಗ್ರಾಮ ಸಿರಗುಪ್ಪೆ ತಾಲೂಕು

Vs

ಪ್ರತಿವಾದಿಗಳು

1 ಸುಲ್ತಾನ್ ಸಾಬ್ ವಯಸ್ಸು 48 ವರ್ಷ

2 ಖಾಜ ಸಾಬ್ ,, 40 ,,

ಈ ಇಬ್ಬರು ಅಲ್ಲಿಸಾಬರ ಮಕ್ಕಳು ಜರಾಯ್ತಿ ಹಡ್ಡೋಳ್ಳಿಗ್ರಾಮ ಸಿರಗುಪ್ಪೆ ತಾಲೂಕು

ಪ್ರತಿವಾದಿಗಳಿಗೆ ಜಾರಿಯಾಗಿ

ನೋಟೀಸು

ಮೇಲ್ಕಾಣಿಸಿದ ನಂಬರಿನಲ್ಲಿ ವಾದಿಗೆ ಪ್ರತಿವಾದಿಗಳು ಪ್ರೋನೋಟ್ ಮೂಲಕ ಬರೆದುಕೊಟ್ಟ ರೂ. 306-0-0 ಗಳನ್ನು ಪಡೆಯಲು ವಾದಿಯಿಂದ ದಾವೆಯಾಗಿದ್ದು ವಿಚಾರಣೆಗಾಗಿ 12-8 54 ಕ್ಕೆ ವಾಯ್ದೆ ಬಿದ್ದಿದೆ ಆ ದಿನದೀವತ್ತು ಖುದ್ದಾಗಲಿ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದಲ್ಲಿ ದಾವೆಯು ಏಕಪಕ್ಷ ವಿಚಾರಣೆಯು ಸಾಗಿ [illegible] ಆಜ್ಞೆಯು [illegible] ತಿಳಿಸಿದೆ.

ಯು. ಗುರುರಾಜರಾವ್.

ವಾದಿಯ ಅಡ್ವೋಕೇಟ್

ಟೆಲಿಫೋನ್ ಅಭಾವದ ನಿವಾರಣೆ

"ನಿಮ್ಮ ಸ್ವಂತ ಟೆಲಿಫೋನ್ ಹೊಂದಿರಿ" ಯೆಂಬ [illegible] ಆಸ್ಪದವು ಬೇಗನೆ ಬರುವ ನೀರೀಕ್ಷೆಯಿದೆ.

ಆಟೊಮ್ಯಾಟಿಕ್ ಟೆಲಿಫೋನುಗಳನ್ನು ಹೆಚ್ಚು ಹೆಚ್ಚಾಗಿ ಅಮದು ಮಾಡಿಕೊಳ್ಳಲಾಗುತ್ತಿದೆಯೆಂದೂ, ಬೆಂಗಳೂರಿನಲ್ಲಿಯೇ ಟೆಲಿಫೋನ್ ಕಾರ್ಖಾನೆ ಶೀಘ್ರದಿಂದ ೧೦೦ ಕನೆಕ್ಷೇಷನ್‌ಗಳನ್ನು ಳ ಎಕ್ಸ್‌ಚೇಂಜ್ ಗಳನ್ನು [illegible] ತಯಾರಿಸುವ ನೀರೀಕ್ಷೆ ಇದೆಯೆಂದೂ ಕಮ್ಯೂನಿಕೇಷನ್ಸ್ ಮಂತ್ರಿ ಶ್ರೀ ಜಗಜೀವನರಾಮ್‌ರವರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಭೇಟಿಯೊಂದರಲ್ಲಿ ತಿಳಿಸಿದ್ದಾರೆ.

ಇನ್ನು ಎಷ್ಟೊವರೆ ವರ್ಷಗಳಲ್ಲಿ ಟೆಲಿಫೋನ್ ಸಮಸ್ಯೆ ಬಗೆಹರಿಯುವುದೆಂದೂ ಆಗ ಅಭ್ಯರ್ಥಿ ದಯಪಟ್ಟಿಲ್ಲ ಟೆಲಿಫೋನ್ ಹೊಂದಬಹುದೆಂದೂ ಮಂತ್ರಿಗಳು ಹೇಳಿದ್ದಾರೆ.

Sri Asundi Tirumala Rao, Rejoining Congress.

He writes as follows:—

"After serving the congress and the country for nearly 19 years without a break I joined the Socialist Party, started by Sri. Javaprakash Naravan and other leaders in 1948 in the hope, that it would give a better twist and tone to the administration and policies, and that it would adopt a more progressive and constructive out look. But it is sad to find that Jayaprakash Naravan almost founder of the party, devoting himself exclusively to Bhoodan work, Acharya Narendra Dev taking up University Educational activities, Kamaladevi Chatopadhyava to Rehabilitation and all India Handi crafts association work and Achut Patvardan retiring from politics, and the rank and file of the party is left almost leaderless.

It is regrettable also to find that Socialist Party has been persuing barren and negative policies often with unhelpful criticism if not destructive.

The recent call of Ram Manohar Lohia to his party, to start direct action anywhere and every where and on any issue is to say the least destructive of any good and orderly Government. I myself add that it is some what irresponsible. When there is need to conserve forces of stability and order such speaches and activities like Satyagraha in U. P. undermine what little faith the people have in orderly Government Further the party's flirting with Communist Party in election period, ill-faits it policy of non-violent and with the constructive approach to theproblems. It was my hope that Socialist party would develop into on opposition party with healthy, positive, constructive and enlightened criticisms. But it seems to be otherwise.

Hence after staying in Socialist party for nearly six years working earnestly for the above objectives I am reluctantly tendering my resignation to the party. I have joined the congres as a party I need hardly add that any party to be useful to the Country, there must be at least a minimum standard of earnestness and sincerity.

A. Tirumala Rao,
HOSPET

ಬಳ್ಳಾರಿ

ಮದ್ರಾಸ್ ವೀರಶೈವ ವಿದ್ಯಾಪರ್ಧಕ ಸಂಘ

ಸಂಘದ ೫೩ನೆಯ ವಾರ್ಷಿಕೋತ್ಸವವು ಶ್ರೀ ಶ್ರೀ. ಮಹಾಬಲೇಶ್ವರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಹೀರೆಮಗಳೂರು ಪೈಯರ್ ಎಲಿಮೆಂಟರಿ ಶಾಲೆಯಲ್ಲಿ 1-8-54 ನೆಯ ಸಮಾವೇಶವಾಗಿ ವಾರ್ಷಿಕ ವರದಿ ಲೆಕ್ಕಗಳು ಮುಂಜೂರಾಪವು ಬರುವ ವರ್ಷಕ್ಕಾಗಿ ಶ್ರೀ ಡಿ. ವಿ. ಸರೋವರರ ಸ್ಥಾನದಲ್ಲಿ ಶ್ರೀ ಹಾ. ಬಸಣ್ಣನವರು ಲೆಕ್ಕಪರಿಶೋಧಕರಾಗಿ ಚುನಾಯಿಸಲ್ಪಟ್ಟರು ಕರ್ನಾಟಕ ಪ್ರಿಂಟಿಂಗ್ ಪ್ರೆಸ್‌ನ್ನು ಹಣಾಜಿನ ದ್ವಾರಾ ವಿಕ್ರಯಿಸಿ ಅದರ ಮೊತ್ತವನ್ನು ಹೀರೆಮಗಳೂರಿನವರ ಎಂಡೋಮೆಂಟ್‌ಗೆ ಸೇರಿಸಬೇಕೆಂಬ ನಿರ್ಣಯವಾಯಿತು.

ಕಳೆದ ತಿಂಗಳು 19-20 ನೆಯ ತಾ. ಸಂಘದ ವ್ಯವಸ್ಥಾಪಕ ಸಮಿತಿಗೆ ಆರಿಸಲ್ಪಟ್ಟ 30 ಜನಸದಸ್ಯರ ಪೈಕಿ ಈ ಕೆಳಗಿನ 11 ಮಹಾಶಯರು ಕಾರ್ಯಕಾರೀ ಸಮಿತಿಯ ಅಧಿಕಾರ ವರ್ಗಕ್ಕೆ ಆಯ್ಕೆ ಹೊಂದಿದರು

ಶ್ರೀ ಬಿ. ಜೂಗಪ್ಪ ಬಿಜ್ಜೈರ್ ಕಲೆಕ್ಟರ್— (ಅಧ್ಯಕ್ಷರು)
,, ಹೆ. ಷಣ್ಣಬಸವನಗೌಡ—ಉಪಾಧ್ಯಕ್ಷ
,, ಜೆ. ಗಾದಿಲಿಂಗಪ್ಪ—ಟ್ರೆಜರರ್
,, ಗಡಿಗಿ ಮರಿಸ್ವಾಮಪ್ಪ—ಕಾರ್ಯದರ್ಶಿ
,, ಯಸ್. ಬಿ. ಕರಣಿಪ್ಪ—ಸಹ ಕಾರ್ಯದರ್ಶಿ
,, ಟಿ. ವೀರಮಲ್ಲಪ್ಪ—ಕಾಲೇಜ್ ಮ್ಯಾನೇಜರ್-ಕರೆಸ್ಪಾಂಡೆಂಟ್
,, ಪಿ. ವೀರಭದ್ರಪ್ಪ ಬಿ. ಎ. S. G. ಹೈಸ್ಕೂಲ್ ಮ್ಯಾನೇಜರ್
,, ಬಿ. ಎಂ. ಮರುಳಸಿದ್ದಯ್ಯ ಎಲಿಮೆಂಟರಿಶಾಲೆ ಕರೆಸ್ಪಾಂಡೆಂಟ್
,, ಎಸ್. ತಾಳಕೆರಪ್ಪ — ಪ್ರಿಂಟಿಂಗ್ ಪ್ರೆಸ್ ಮ್ಯಾನೇಜರ್
,, ಕೊ. ದೊಡ್ಡಲಿಂಗಪ್ಪ, ಹಾಸ್ಪಿಟಲ್ ಸೂಪರಿಂಟೆಂಡೆಂಟ್
,, ಹೆಚ್. ಹನುಮಂತಪ್ಪ

ವೀರಶೈವ ಕಾಲೇಜ್ ವ್ಯವಸ್ಥಾಪಕ ಸಮಿತಿಯಲ್ಲಿ ಅಧ್ಯಕ್ಷರನ್ನೊಳಗೊಂಡು 6 ಸದಸ್ಯರಿದ್ದಾರೆ. ಪ್ರಿನ್ಸಿಪಾಲರು ಕನ್ವೀನರಾಗಿದ್ದಾರೆ. ಹೈಸ್ಕೂಲ್ ಸಮಿತಿಯಲ್ಲಿ ನಾಲ್ವರಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಶ್ರೀ ವೈ ಮಹಾಬಲೇಶ್ವರಪ್ಪನವರು ಅಧ್ಯಕ್ಷರಾಗಿ ಸಂಘಕ್ಕೆ ಅಮೋಘವಾದ ಸೇವೆ ಸಲ್ಲಿಸಿರುವರು.

ಕಾಲೇಜ್ ಕಟ್ಟಡಕ್ಕೆ ಸರ್ಕಾರದ ಗ್ರಾಂಟು ಪಡೆಯಲು ಅಧ್ಯಕ್ಷರನ್ನೊಳಗೊಂಡ ಪಂಚರ ಸಮಿತಿ ಏರ್ಪಾಟಾಗಿ ಮೈಸೂರು ವಿದ್ಯಾಮಂತ್ರಿ ಮತ್ತು ವಿಶ್ವವಿದ್ಯಾಲಯದ ವೈಸ್‌ಛಾನ್ಸಲರನ್ನು ಕಾಣಬೇಕೆಂದು ನಿಶ್ಚಿತವಾಯಿತು. ಸದಸ್ಯರಿಗೆಲ್ಲ ಶ್ರೀ ವೈ. ಮಹಾಬಲೇಶ್ವರಪ್ಪನವರು ಉಪಾಹಾರ ವನ್ನೇರ್ಪಡಿಸಿದ್ದರು.

ನವಭಾರತಕ್ಕೆ
ಚಂದಾದಾರರಾಗಿ

The Purest Gingelly Oil

For Cooling effect, for the taste and can be used for pickles to keep it for long duration Guaranteed against all adulteration.

SEE THE SEAL & PURCHASE



ಶುದ್ಧವಾದ ಮತ್ತು ಸ್ವಚ್ಛ ಎಳ್ಳೆಣ್ಣೆ

ಮೆದುಳಿನ ತಂಪಿಗಾಗಿ, ಅಭ್ಯಂಜನದಲ್ಲಿ, ರುಚಿಯಾಗಿ ಆಹಾರದಲ್ಲಿ ಕೆಡದಿರಲು ಉಪ್ಪಿನಕಾಯಿಗಾಗಿ - ಉಪಯೋಗಿಸಿರಿ. ಗ್ಯಾರಂಟಿ ಕೊಡುತ್ತೇವೆ. ನಮ್ಮ ಸೀಲು A. S. BRAND ನೋಡಿ ಕೊಳ್ಳಿರಿ ಚಿಲ್ಲರೆಯಾಗಿಯೂ, ಬಾಟಲುಗಳಲ್ಲಿಯೂ. ಮಾರಲ್ಪಡುತ್ತದೆ.

Ambati Subbanna & Co'
Samalakot.

ಅಂಬಾಟಿ ಸುಬ್ಬಣ್ಣ ಅಂಡ್ ಕೊ
ಶಾಮಲಕೋಟ್

ನಮ್ಮ ಬಳ್ಳಾರಿ ಏಜೆಂಟರು

೧) ಮೆಸರ್ಸ ಎಂ. ಹುಸೇಂಜಿರಾವ್, ಎಂ. ವೆಂಕೋಜಿರಾವ್
೨) ದಿ ಪಾಪುಲರ್ ಗಿರಿ ಸ್ಟೋರ್ಸ್
೩) ವಿ. ಎಂ. ಗಿರಿ ಅಂಡ್ ಸನ್ಸ್
೪) ದಿ ಪ್ರಾಯಮರಿ ಕೊ-ಆಪರೇಟಿವ್ ಸ್ಟೋರ್ಸ

ಬಳ್ಳಾರಿ 'ಪ್ರಭಾತ, ದಲ್ಲಿ 'ನೋಡಿರಿ, ಆನಂದಪಡಿರಿ,

ಮನರಂಜನೆಯ ಶ್ರೀನೇ ವಾರ

ಪ್ರತಿದಿನವು ಎರಡು ಆಟಗಳು ಸಾ|| 6-10, ರಾ|| 9-30

ಎ. ವಿ. ಯಂ ರವರ

★ 'ಸಂಗಂ' ★

[ಸುಪ್ರಸಿದ್ಧ ತೆಲುಗು - ಚಿತ್ರ]

ಇವರಲ್ಲಿ ನಾಗಯ್ಯ, ಯನ್. ಟಿ. ರಾಮರಾವ್, ಯಸ್. ವಿ. ರಂಗರಾವ್ ವೈಜಯಂತಿಮಾಲ, ಅಂಜಲಿದೇವಿ ನಟಿಸಿದ್ದಾರೆ.—

.... ಸಂಗೀತ ರಸವತ್ತರ ಚಿತ್ರ ....

ಬಳ್ಳಾರಿ 'ಪ್ರಭಾತ್, ಟಾಕೀಸ್

ನಲ್ಲಿ

ಬೆಗನೆ ಬರಲಿದೆ

ಜಯರಾಜ ಫಿಲಿಂ ರವರ

ನಟ ಶೇಖರ

(ಅದ್ಭುತ ಕನ್ನಡ ಚಿತ್ರ)

ನಿರ್ಮಾಪಕ-ನಿರ್ದೇಶಕ

ಪಿ. ವಿ. ರಾಜು

.... ಶೀಘ್ರವಾಗಿ ಬರಲಿದೆ....

ಜನಕಾರವರ

ಪರಿವರ್ತನ

ತೆಲುಗು ಚಿತ್ರ

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)
ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
೬ ತಿಂಗಳಿಗೆ	3—8—0	Six months	3—8—0
೬ ತಿಂಗಳ ಕಡಿಮೆ		Subscription will not be	
ಸ್ವೀಕರಿಸುವುದಿಲ್ಲ.		accepted for less than 6 months	

To 9-8-54

Sri.

lited Printed & Published by T. B. Keshava Rao, at Nava Bharat Printing Press, Bellary

ಗಡಿನಾಡ

ಸೋಮವಾರ
ಡಿಸೆಂಬರ್
20-12-54

ವರ್ಷ 18
ಸಂಚಿಕೆ 18

ಬಳ್ಳಾರಿ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇತವರಾವ್

ಬಳ್ಳಾರಿ "ಪ್ರಭಾತದಲ್ಲಿ"

24-12-54 ರಿಂದ

ವಾಹಿನೀ ಯವರ

ಮಲ್ಲೀಶ್ವರಿ

[ಅದ್ಭುತ ತೆಲುಗು ಚಿತ್ರ]

ತಪ್ಪದೆ ನೋಡಿರಿ

ಬಳ್ಳಾರಿ.

ಮೈಸೂರು ಬ್ಯಾಂಕ್ ಶಾಖೆಯು

ಬಳ್ಳಾರಿಯಲ್ಲಿ ಸೆಂಟ್ರಲ್ ಸ್ಟೋರ್ಸ್ ಕಟ್ಟಡದ ಬಲಭಾಗದಲ್ಲಿ 18-12-54ರ ದಿನಾಂಕ ಪ್ರಾರಂಭವಾಯಿತು. ಬೆಂಗಳೂರಿನ ಶ್ರೀ ಪಿ. ಸುಬ್ಬರಾಮಶೆಟ್ಟರು ಭಾಷಣಮಾಡಿದರು

ಬಳ್ಳಾರಿ ಜಿಲ್ಲಾ ಛೇಂಬರ್ ಆಫ್ ಕಾಮರ್ಸ್- ನ ಪ್ರಥಮ ವಾರ್ಷಿಕೋತ್ಸವವು 19-12-54ನೇ ದಿನಾಂಕ ಮೈಸೂರು ಶಾಸನ ಸಭೆ ವಿರೋಧಿ ಪಕ್ಷದ ನಾಯಕರಾದ ಜೆ. ಯಂ. ಇನಾಂದಾರ ಅಧ್ಯಕ್ಷತೆಯಲ್ಲಿ ನೆರವೇರಿತು. ದಿ ಕ್ಯಾನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟಿದ ಜನರಲ್ ಮ್ಯಾನೇಜರ್ ಶ್ರೀ ಟಿ. ಎ. ಪೈರವರು ಉದ್ಘಾಟನೆ ನಡೆಸಿ ಕೈಗಾರಿಕಾ, ವಾಣಿಜ್ಯ ಪ್ರಗತಿಯ ಅವಶ್ಯಕತೆಯು ರಾಷ್ಟ್ರ ನಿರ್ಮಾಣದಲ್ಲಿ ಅಗತ್ಯವಾಗಿದೆಯೆಂಬಂಶವನ್ನು ಸೂಚಿಸಿದರು.

ಬಳ್ಳಾರಿ ಡೆಪ್ಯುಟಿ ಕಮೀಷನರ್‌ರವರು ಜಿಲ್ಲಾ ಅಸ್ಪೃಶ್ಯತಾ ನಿವಾರಣಾ ಸಮಿತಿಯಲ್ಲಿ ಹರಿಜನಾಭಿವೃದ್ಧಿ ಕಾರ್ಯಗಳನ್ನು ಪ್ರೆಸ್ ಕಾನ್ಫರೆನ್ಸ್‌ದಲ್ಲಿ ಜಿಲ್ಲಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನೂ ತಿಳಿಸಿದರು.

ಭಾರತಕ್ಕೆ ಟೀಟೋರವರ ಆಗಮನ

ಯುಗೊಸ್ಲಾವಿಯಾ ಫೆಡರಲ್ ಪೀಪಲ್ಸ್ ರಿಪಬ್ಲಿಕ್ಕಿನ ಅಧ್ಯಕ್ಷರಾದ ಮಾರ್ಷಲ್ ಟೀಟೋರು 16ನೆಯ ಪ್ರಾತಃಕಾಲ ಭಾರತಕ್ಕೆ ಆಗಮಿಸಿದರು.

ಟೀಟೋರವರು ಬೆಳಿಗ್ಗೆ 9-25 ಗಂಟೆಗೆ ಸರಿಯಾಗಿ ಬೊಂಬಾಯಿಯ ಬಂದರಿನಲ್ಲಿ 'ಭಾರತದ ಮುಖ ದ್ವಾರ' (ಗೇಟ್ ವೇ ಆಫ್ ಇಂಡಿಯಾ) ದಲ್ಲಿ ಹಡಗಿನಿಂದ ಇಳಿದ ತಕ್ಷಣ ಸಂಭ್ರಮದ ಸ್ವಾಗತ ನೀಡಲಾಯಿತು.

ಟೀಟೋರವರು 14 ದಿನಗಳ ಕಾಲ ಭಾರತದಲ್ಲಿ ಅಧಿಕೃತ ಪ್ರವಾಸ ಮಾಡಲಿರುವರು.

ಚರ್ಮದ ಕೈಗಾರಿಕೆಯಲ್ಲಿ ಹೊಸ ವಿಧಾನಗಳು.

ಮದರಾಸಿನಲ್ಲಿರುವ ಕೇಂದ್ರ ಸಂಶೋಧನಾ ಸಂಸ್ಥೆಯ ಕಾರ್ಯಕ್ರಮ.

ಚರ್ಮದ ವಸ್ತುಗಳ ಉಪಯೋಗ ಈಗ ಬಹಳ ಹೆಚ್ಚುತ್ತಿದೆ. ಆದ್ದರಿಂದ ಮದರಾಸಿನಲ್ಲಿರುವ ಕೇಂದ್ರದ ಚರ್ಮ ಸಂಶೋಧನಾ ಸಂಸ್ಥೆಯವರು, ಚರ್ಮವನ್ನು ಇನ್ನೂ ಹೆಚ್ಚಾಗಿ ಹಾಗೂ ವೈಜ್ಞಾನಿಕ ರೀತಿಯಲ್ಲಿ ಉಪಯೋಗಿಸುವ ಸಂಬಂಧವಾಗಿ ಹೊಸ ಸಂಶೋಧನೆಗಳನ್ನು ನಡೆಸಿದ್ದಾರೆ.

ಈ ಸಂಸ್ಥೆಯವರು ನಿಯೋಜಿಸಿರುವ ಹೊಸ ವಿಧಾನ ಮತ್ತು ತಂತ್ರ ಕೌಶಲ್ಯಗಳಿಂದ ಭಾರತದಲ್ಲಿ ಚರ್ಮದ ಕೈಗಾರಿಕೆಯ ಉತ್ಪತ್ತಿ ಹೆಚ್ಚುವುದಲ್ಲದೆ ಸಿದ್ಧವಸ್ತುಗಳ ಗುಣಾಂಶ ಮತ್ತು ವೈನಿಧ್ಯತೆಗಳೂ ಹೆಚ್ಚುವುವು. ಉದಾಹರಣೆಗೆ ಅಚ್ಚಿಯು ಚರ್ಮದ ಹದಮಾಡುವುದಕ್ಕೆ 3-4 ತಿಂಗಳ ಕಾಲ ಬೇಕಾಗುತ್ತಿದ್ದುದು ಈಗ ಹಲವು ವಾರಗಳು ಹಿಡಿಯುತ್ತವೆ. ಅದರಂತೆ ಮೇಜು ಕುರ್ಚಿ ಮತ್ತು ಇತರ ಆಸನಗಳಿಗೆ ಉಪಯೋಗಿಸುವ ಚರ್ಮ, ಕ್ರೀಡಾ ವಸ್ತುಗಳಿಗೆ ಮತ್ತು ಬೂಟಿನ ಮೇಲ್ಭಾಗಗಳಿಗೆ ಉಪಯೋಗಿಸುವ ಚರ್ಮಗಳನ್ನು ಹದಮಾಡುವುದಕ್ಕೆ ಉತ್ತಮವಾದ ಹೊಸ ವಿಧಾನವನ್ನು ಕಂಡು ಹಿಡಿಯಲಾಗಿದೆ. ವಿದೇಶಗಳಲ್ಲಿ ಚರ್ಮದ ಕೈಗಾರಿಕೆಗಳಲ್ಲಿ ಅನುಸರಿಸುತ್ತಿರುವ ರೀತಿ ನೀತಿಗಳನ್ನು ಭಾರತದ ಪರಿಸ್ಥಿತಿಗಳಿಗೆ ಹಾಗು ಕಚ್ಚಾ ವಸ್ತುಗಳಿಗೆ ಅನ್ವಯ ಗೊಳಿಸುವ ಬಗ್ಗೆ ಪ್ರಯೋಗಗಳನ್ನು ಈ ಸಂಸ್ಥೆಯಲ್ಲಿ ನಡೆಸುತ್ತಿರಲಾಗಿದೆ.

1953ರ ಜನವರಿಯಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಪಂಚವಾರ್ಷಿಕ ಯೋಜನೆಯ ಪ್ರಕಾರ, ಕೈಗಾರಿಕೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸುವುದಕ್ಕಾಗಿ ಸ್ಥಾಪಿಸಲಾದ ಹನ್ನೊಂದು ಸಂಸ್ಥೆಗಳಲ್ಲಿ ಈ ಸಂಸ್ಥೆಯೂ ಒಂದು. ಚರ್ಮದ ಕೈಗಾರಿಕೆಯನ್ನು ಉತ್ತಮಪಡಿಸುವುದಕ್ಕೆ ಹಾಗೂ ಆಧುನಿಕ ರೀತಿಯಲ್ಲಿ ತಯಾರಿಕೆ ಪಡಿಸುವುದಕ್ಕೆ ಹೊಸ ವಿಧಾನಗಳನ್ನು ಕಂಡು ಹಿಡಿಯುವ ಕೆಲಸವಲ್ಲಿ ಈ ಸಂಸ್ಥೆ ನಿರತವಾಗಿರುವುದು. ಈ ಸಂಸ್ಥೆಯಲ್ಲಿ ಸಂಶೋಧನೆ ಶಿಕ್ಷಣ ಮತ್ತು ವಿಷಯಗಳ ಪ್ರಸಂಗ ಈ ಕೆಲಸಗಳು ನಡೆಯುತ್ತಿವೆ.

ಸಂಶೋಧನೆ

ಭಾರತದ ಚರ್ಮದ ಗುಣಾಂಶವನ್ನು ಉತ್ತಮವಡಿಸುವುದು, ಹಾಗೂ ಚರ್ಮ ಹದಮಾಡುವುದಕ್ಕೆ ಸ್ವದೇಶಿ ವಸ್ತುಗಳನ್ನು ಹೆಚ್ಚು ಉಪಯೋಗಿಸುವ ಬಗ್ಗೆ ಸಂಶೋಧನೆ ಮಾಡುವುದು. ಇವು ಮುಖ್ಯವಾಗಿ ಈ ಸಂಸ್ಥೆಯ ಸಂಶೋಧನಾ ವಿಭಾಗವು ಮಾಡುತ್ತಿರುವ ಕೆಲಸಗಳು ಈಗ ಚರ್ಮ ಹದಮಾಡುವ ಕೈಗಾರಿಕೆಯು ಹೆಚ್ಚಾಗಿ ಹೊಸದೇಶಗಳಿಂದ ಬರುವ ಪದಾರ್ಥಗಳನ್ನು (ನ್ಯಾಟಲ್ ಬರ್ಮತ್ತು ಅದರ ಭಟ್ಟಿಯನ್ನು) ಅವಲಂಬಿಸಿದೆ. ಈ ಸಂಸ್ಥೆಯು ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸಿ ಕೊಂಚಮಟ್ಟಿಗೆ ಯಶಸ್ವಿಯಾಗಿದೆ. ಇದೇ ರೀತಿ ಆಧುನಿಕ ಚರ್ಮದ ಕೈಗಾರಿಕೆಗೆ ಸಂಬಂಧಿಸಿದ ರಾಸಾಯನಿಕ, ಭೌತಿಕ ಇತ್ಯಾದಿ ಎಲ್ಲಾ ವಿಭಾಗಗಳಲ್ಲಿಯೂ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಪ್ರಯೋಗ ಶಾಲೆಗೆ ಹೊಂದಿಕೊಂಡಂತೆ ಚರ್ಮ ಹದಮಾಡುವ ವಿಭಾಗವು ಇದೆ. ಈ ಸಂಸ್ಥೆಯಲ್ಲಿ ನಿಯೋಜಿಸಲಾದ ವಿಧಾನವನ್ನು ಕುರಿತಾದ ಆರ್ಥಿಕ ಪರಿಣಾಮವನ್ನು ಅಂದಾಜು ಮಾಡುವುದಕ್ಕಾಗಿ ಒಂದು ಸಣ್ಣ ಕಾರ್ಖಾನೆಯೂ ಇದೆ.

ಶಿಕ್ಷಣ

ಚರ್ಮದ ಕೈಗಾರಿಕೆಯಲ್ಲಿ ತಂತ್ರಜ್ಞರ ಅಭಾವವನ್ನು ಪೂರೈಸುವ ದೃಷ್ಟಿಯಿಂದ ಈ ಸಂಸ್ಥೆಯು ಚರ್ಮದ ಕೈಗಾರಿಕೆಗೆ ಸಂಬಂಧಿಸುವ ಎಲ್ಲಾ ವಿಷಯಗಳನ್ನೂ ಮದರಾಸು ವಿಶ್ವ ವಿದ್ಯಾನಿಲಯದ ಬಿ. ಎಸ್. ಸಿ. (ಲೆದರ್) ದಿಗ್ರಿಗಾಗಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೂ ಬೋಧಿಸುವುದರ ಜೊತೆಗೆ ಪ್ರಾಯೋಗಿಕ ಶಿಕ್ಷಣವನ್ನು ಕೊಡಲಾಗುವುದು. ಎಂ. ಎಸ್. ಸಿ ಅಥವಾ ಪಿ. ಹೆಚ್. ಡಿ. ಪದವಿಗಳಿಗಾಗಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೂ ಈ ಸಂಸ್ಥೆಯಲ್ಲಿ ಶಿಕ್ಷಣವೀಯಲಾಗುವುದು.

ತಾಂತ್ರಿಕ ಸಲಹೆ ವಿಚಾರ ಪ್ರಸಾರ

ಸಂಸ್ಥೆಯ ಅಂಕಿ ಅಂಶಗಳ ಮತ್ತು ವಾರ್ತಾ ವಿಭಾಗವು ಚರ್ಮದ ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಕಟಿಸುತ್ತದೆ. "ಕೇಂದ್ರದ ಚರ್ಮದ ಸಂಶೋಧನೆ ಸಂಸ್ಥೆ" ಎಂಬ ಮಾಸಿಪತ್ರಿಕೆಯು ಚರ್ಮದ ಕೈಗಾರಿಕೆಯವರಿಗೆ ತಾಂತ್ರಿಕರಿಗೆ ಮತ್ತು ರಸಾಯನ ಶಾಸ್ತ್ರಜ್ಞರಿಗೆ ಚರ್ಮ ವಿಜ್ಞಾನದ ಕ್ಷೇತ್ರದಲ್ಲಿ ಸಾಧಿಸಲಾದ ಪ್ರಗತಿಯನ್ನು ತಿಳಿಸುತ್ತದೆ. ಆಗಾಗ್ಗೆ ವಿಚಾರ ಗೋಷ್ಠಿಗಳನ್ನು ಈ ಸಂಸ್ಥೆಯು ನಡಿಸುವುದರ ಜೊತೆಗೆ ವೈಯಕ್ತಿಕವಾದ ಪತ್ರ ವ್ಯವಹಾರಗಳಿಗೂ ಗಮನಕೊಡುತ್ತದೆ.

ಈ ಸಂಸ್ಥೆಯ ಎಂಜಿನಿಯರಿಂಗ್ ವಿಭಾಗ ಅಗತ್ಯವಾದ ನಕ್ಷೆಗಳನ್ನು ರಚಿಸಿ ಯಂತ್ರೋಪಕರಣಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು.

ಭಾರತದಲ್ಲಿ ಗೋವು ಸಂಪತ್ತು ಅಧಿಕವಾಗಿದ್ದರೂ ಅವುಗಳಿಂದ ಪೂರೈಯುವ ಚರ್ಮ ಕಡಿಮೆ ಗುಣಾಂಶವುಳ್ಳದಾಗಿರುವುದರಿಂದ ಗೋವುಗಳ ತಳಿಗಳನ್ನು ಉತ್ತಮಪಡಿಸುವ ಕಾರ್ಯದಲ್ಲಿ ಪಶು ಸಂಸ್ಥೆಗಳೊಂದಿಗೆ ಈ ಸಂಸ್ಥೆಯೂ ಸಹಕರಿಸಿ ಕೆಲಸಮಾಡುತ್ತಿದೆ. ಚರ್ಮ ಹದಮಾಡುವುದಕ್ಕೆ ಬೇಕಾದ ಸಸ್ಯಗಳನ್ನು ಈ ಸಂಸ್ಥೆಯ ತನ್ನ 84 ಎಕರೆಗಳ ಜಮೀನಿನಲ್ಲಿ ಬೆಳೆಯುವುದು.

ಭಾರತದಲ್ಲಿ ಚರ್ಮದ ವಸ್ತುಗಳ ಉತ್ಪತ್ತಿಯಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸುತ್ತಿರುವುದರ ಜೊತೆಗೆ ಭಾರತದ ರಫ್ತು ವ್ಯಾಪಾರವನ್ನು ಈ ಸಂಸ್ಥೆ ಉತ್ತಮಪಡಿಸುತ್ತಿದೆ. ಇಂದು ಸುಮಾರು ನಿಕೋಟಿ ರೂ.ಗಳಷ್ಟು ಚರ್ಮದ ವಸ್ತುಗಳನ್ನು ಭಾರತದಿಂದ ರಫ್ತು ಮಾಡಲಾಗುತ್ತಿದೆ.

ಪಶುಸಂರಕ್ಷಣೆ.

ತಮ್ಮ ಭೂಮಿಗಳನ್ನು ಸುಧಾರಿತ ರೀತಿಯಿಂದ ಉತ್ತು ಬಿತ್ತುವುದು ಮಾತ್ರವಲ್ಲದೆ, ತಮ್ಮ ಪಶುಗಳನ್ನೂ ಒಳ್ಳೆಯ ರೀತಿಯಿಂದ ಪೋಷಿಸುವವನೇ ನಿಜವಾದ ರೈತನಾಗಿರುತ್ತಾನೆ.

2. ದನವು ಧಾರಾಳವಾಗಿ ಕೊಡಬಲ್ಲ ನಿಮಗೆ ಬೇಕಾದ ಹಾಲು, ನಿಮ್ಮ ಗದ್ದೆಗಳಿಗೆ ಬೇಕಾದ ಗೊಬ್ಬರ ಮತ್ತು ನಿಮ್ಮ ಭೂಮಿಗೆ ಹೂಡಲಿಕ್ಕೂ ಗಾಡಿ ಎಳೆಯಲಿಕ್ಕೂ ಬೇಕಾದ ಎತ್ತುಗಳನ್ನು ಅದು ಕೊಡುವುದು.

3. ದನಗಳನ್ನು ಜೆನ್ನಾಗಿ ಸಾಕಿರಿ. ಮುಖ್ಯವಾಗಿ ಗರ್ಭವಿರುವಾಗ ಅವುಗಳನ್ನು ಅಲಕ್ಷಿಸದೆ ಜೆನ್ನಾಗಿ ಸಾಕಿದರೆ ಉತ್ತಮವಾದ ದೊಡ್ಡ ಕರಗಳು ಹುಟ್ಟುವವು.

4. ನಿಮ್ಮ ಕರುಗಳನ್ನು ಜಾಕಿರಿ. ಅವೇ ನಿಮ್ಮ ಮುಂದಿನ ದನಗಳೂ, ಎತ್ತುಗಳೂ.

5. ಜಾನುವಾರುಗಳಿಗೆ ಹುಲ್ಲು ಮತ್ತು ನೀರೇ ನೇವಲ್ಲ. ಅವುಗಳಿಗೆ ಹಿಂಡಿ, ತೌಡು ಮತ್ತು ಪಸಿ ಹುಲ್ಲೂ ಆಗತ್ಯ. ಉಪ್ಪನ್ನು ಮಿತವಾಗಿ ಬಿಡಲೇಬಾರದು ಎಲ್ಲಾ ಜಾತಿಯ ಪಶುಗಳಿಗೂ ಕ್ರಮಪ್ರಕಾರವಾಗಿ ನಾವು ತಿನ್ನುವ ಉಪ್ಪನ್ನು ಕೊಡುವುದರಿಂದ ಹೆಚ್ಚಿನ ಪ್ರಯೋಜನವಿದೆ.

6. ಜಾನುವಾರಗಳ ಮೇವುಗಳಿಗೆ ಬೇರೆ ಧಾತುವರ್ಧಕ ಪುಡಿಗಳನ್ನು ಮಿಶ್ರಮಾಡಿ ಕೊಡುವುದರ ಪ್ರಯೋಜನವು ನಿಮಗೆ ತಿಳಿದಿರುವುದೇ? ಇವನ್ನು ಉಪಯೋಗಿಸಿ ಅದರ ಫಲಿತಾಂಶವನ್ನು ನೀವೇ ನೋಡಿ

7. ಸಾಧ್ಯವಾದ ಮಟ್ಟಿಗೆ ಪಸಿ ಹುಲ್ಲುಗಳ ಪೈರುಗಳನ್ನು ನೀವೇ ಬೆಳೆಯಲು ಪ್ರಯತ್ನಿಸಿರಿ. ಸಣ್ಣ ಮಕ್ಕಳಿಗೆ ತಾಯಿಯ ಹಾಲು ಎಷ್ಟು ಪ್ರಯೋಜನಕಾರಿಯೋ ಹಾಗೆಯೇ ದನಕರುಗಳಿಗೆ ಹಸಿ ಹುಲ್ಲಿನ ಪ್ರಯೋಜನವಾಗಿದೆ.

8. ನಿಮ್ಮ ಗ್ರಾಮದಲ್ಲಿ ಒಂದು ಒಳ್ಳೆಯ ಜಾತಿಯ ಬೀಜದ ಹೋರಿ ಇದೆಯೇ? ನಿಮ್ಮ ದನಗಳನ್ನು ಸಣ್ಣ ಜಾತಿಯ ಊರಹೋರಿಗಳು ದಾಟಲು ಬಿಡಬೇಡಿರಿ.

9. ಈ ಸಂಸ್ಥಾನದ ಅನೇಕ ಕಡೆಗಳಲ್ಲಿ ಸರ್ಕಾರದ ಸಹಾಯದಿಂದ ಖೈತರ ಮತ್ತು ಜಿಲ್ಲಾ ಬೋರ್ಡುಗಳ ಒಳ್ಳೆಯ ಬೀಜದ ಎತ್ತುಗಳು ಇಡಲ್ಪಟ್ಟಿವೆ. ಈ ಎತ್ತುಗಳನ್ನೇ ಉಪಯೋಗಿಸಿರಿ. ಅವುಗಳೇ ನಿಮ್ಮ ಮುಂದಿನ ಎತ್ತುಗಳನ್ನೂ ದನಗಳನ್ನೂ ಕೊಡಲಿ. ಆದರೆ ನಿಮ್ಮ ಗ್ರಾಮಕ್ಕೇನೇ ಒಂದು ಒಳ್ಳೆಯ ಎತ್ತನ್ನು ತರಿಸಲು ಪ್ರಯತ್ನಿಸುವುದು ಇನ್ನೂ ಉತ್ತಮ.

10. ನಿಮ್ಮ ದನಗಳನ್ನು ಹಾಲು ಕೊಡುವಾಗಲೇ ಮೊದಲಕರೆಗೆನೆ, ಹೋರಿ ಹಿಡಿಸಿ ದಾಟಿಸಿರಿ. ಇದರಿಂದ ಅದು ಬತ್ತಿ ಉಳಿಯುವ ಕಾಲವು ಕಡಿಮೆ ಮಾಡಬಹುದಾಗುತ್ತದೆ.

11. ನಿಮ್ಮ ಊರಿನಲ್ಲಿರುವ ನಿಷ್ಪ್ರಯೋಜನವಾದ ಸಣ್ಣ ಎತ್ತುಗಳನ್ನೆಲ್ಲಾ ಬೀಜ ಹೊಡಿಸಿರಿ. ನಿಮ್ಮ ತಾಲೂಕಿನ ಪಶು ಡಾಕ್ಟರರು ಈ ಕೆಲಸವನ್ನು ನುಲಭವಾಗಿ ನಿಮಗಾಗಿ ಮಾಡುವರು. ಅವರ ಸಹಾಯವನ್ನು ಕೂಡಲೇ ಕೇಳಿ ಪಡೆಯಿರಿ.

12. ನಿಮ್ಮ ಜಾನುವಾರುಗಳನ್ನು ಕ್ರಮವಾಗಿ ಮೈತೊಳೆದು, ಜೆನ್ನಾಗಿ ಗಾಳಿ ಬೆಳಕಿರುವ, ತ್ಯಾವಪಿಲ್ಲದ ಕೊಟ್ಟಿಗೆಗಳಲ್ಲಿ ಕಟ್ಟಿರಿ. ಅವುಗಳಿಗೆ ಕ್ರಮವಾಗಿ ಹೊತ್ತು ಪ್ರಕಾರ ನೀರನ್ನೂ ಆಹಾರವನ್ನೂ ಕೊಡಿರಿ. ಈ ಕೆಲಸಗಳಿಗೆ ಗಮನ ಕೊಟ್ಟರೆ ನಿಮ್ಮ ಜಾನುವಾರುಗಳು ಪುಷ್ಟಿಯಾಗಿ ಆರೋಗ್ಯದಿಂದಿರುವುವು.

13. ಜಾನುವಾರುಗಳಿಗೆ ಸಂಭವಿಸುವ ಸಾಮಾನ್ಯ ಅಂಟು ರೋಗಗಳೆಂದರೆ "Rinderpest" ಗೋವುಗಳ ಪ್ಲೇಗ್ "Anthrax" ದೊಮ್ಮೆ ರೋಗ, "Black – quarter" ತೊಡೆ ಭುಜ ವಾಯು, "Haemorrhagic Septicamia"ಗಂಟ್ಲು ಬಾಯ ಅಥವಾ ಎಮ್ಮೆ ಕೋಣಗಳ ಪ್ಲೇಗ್ ಮತ್ತು "Foot and mouth disease" ಕಾಲು ಬಾಯಿ ರೋಗ.

14. ನಿಮ್ಮ ಗ್ರಾಮಗಳಲ್ಲಿ ಈ ಯಾವ ರೋಗಗಳು ಕಾಣಿಸಿಕೊಂಡರೆ ಕೂಡಲೇ ನಿಮ್ಮ ಪಟೇಲರಿಗೂ ನಿಮ್ಮ ತಾಲೂಕಿನ ಪಶು ಡಾಕ್ಟರಿಗೂ ತಿಳಿಸಿರಿ. ಒಂದು ನಿಮಿಷವೂ ವಿಳಂಬ ಮಾಡಬೇಡಿರಿ.

15. ಈ ಗೋವು ಡಾಕ್ಟರರು ನಿಮ್ಮ ಬಾಕಿ ಎಲ್ಲಾ ಜಾನುವಾರುಗಳಿಗೂ ರೋಗ ಬರದಂತೆ ಫಲಾರ್ಥವಾಗಿ ಇಂಜೆಕ್ಷನ್ ಕೊಟ್ಟು ಕಾಪಾಡುವರು. ಹೀಗೆ ನಿಮ್ಮ ಎಲ್ಲಾ ಜಾನುವಾರುಗಳಿಗೂ ಇಂಜಕ್ಷನ್ ಕೊಡಿಸಿ ಸಾವಿನಿಂದ ತಪ್ಪಿಸಿರಿ.

16. "Anthrax" ದೊಮ್ಮೆ ರೋಗವು ಮನುಷ್ಯರಿಗೂ ತಗಲುವ ರೋಗವೆಂಬುದು ನಿಮಗೆ ತಿಳಿದಿರುವುದೇ? ಯಾವ ಮನುಷ್ಯನು ದೊಮ್ಮೆ ರೋಗದಿಂದ ಸತ್ತ ಪ್ರಾಣಿಯನ್ನು ಕೊಯ್ಯುವನೋ ಅಥವಾ ಕೊಯ್ಯುವಾಗ ಯಾರಿಗೆ ಸಣ್ಣ ಗಾಯವಾಗುತ್ತದೋ ಅಥವಾ ಆ ಪ್ರಾಣಿಯ ಮಾಂಸವನ್ನು ತಿನ್ನುತ್ತಾನೋ ಅವನು ದೊಮ್ಮೆ ರೋಗ ಬಂದು ಸಾಯುವ ಸಂಭವವಿದೆ. ಯಾವಾಗಲಾದರೂ ಒಂದು ಪ್ರಾಣಿಯು ಅಕಸ್ಮಾತ್ತಾಗಿ ಸತ್ತರೆ ಜಾಗ್ರತ್ತೆಯಾಗಿರಿ. ಆ ಸತ್ತ ಪ್ರಾಣಿಯನ್ನು ಕೂಡಲೇ ಸುಟ್ಟುಬಿಡಿರಿ. ಇಲ್ಲವಾದರೆ ದೊಡ್ಡ ಹೊಂಡಮಾಡಿ ಹುಗಿದುಬಿಟ್ಟು ನಿಮ್ಮ ಮತ್ತು ನಿಮ್ಮ ಜಾನುವಾರುಗಳ ಪ್ರಾಣಗಳನ್ನು ಕಾಪಾಡಿರಿ. ಆ ಪ್ರಾಣಿಯನ್ನು ನಿಜವಾಗಿಯೂ ಕೊಯ್ಯಬೇಡಿರಿ.

(4 ನೇ ಪುಟ ನೋಡಿರಿ)

ಪಶು ಸಂರಕ್ಷಣೆ.

(ಕಳೆದ ಪುಟದಿಂದ)

17. ಯಾವ ಪ್ರಾಣಿಯಾದರೂ ಅಂಟು ರೋಗದಿಂದ ಸತ್ತರೆ ಅದನ್ನು ಕೂಡಲೇ ಸುಟ್ಟುಬಿಡಿರಿ. ಇಲ್ಲವೆ ದೊಡ್ಡ ಹೊಂಡ ಮಾಡಿ ಹುಗಿದು ಬಿಡಿರಿ. ಅವನ್ನು ತುಂಡುಮಾಡಲು, ಅಥವಾ ಚರ್ಮ ತೆಗೆಯಲು ಬಿಡಬೇಡಿರಿ, ಬಟ್ಟರಿಯ ರೋಗವು ಖಂಡಿತವಾಗಿ ಹಬ್ಬುವುದು.

18. ನಿಮ್ಮ ಜಾನುವಾರುಗಳಿಗೆ ರೋಗಬಂದಲ್ಲಿ, ಊನ ಔಷಧಿ ಮಾಡಿಕೊಂಡು ಕಾಲವಿಳಂಬ ಮಾಡಬೇಡಿರಿ. ತಡಮಾಡಿದಲ್ಲಿ ನಿಮ್ಮ ದನಕರುಗಳು ನಿಷ್ಪ್ರಯೋಜನವಾಗುವ ಸಂಭವವಲ್ಲದೆ ಸತ್ತುಹೋಗಲೂ ಬಹುದು. ಹತ್ತಿರ ವಿರುವ ಪಶುಗಳ ಆಸ್ಪತ್ರೆಗೆ ಕೂಡಲೇ ಹೋಗಿರಿ.

19. ನಿಮ್ಮ ದನಗಳು ಜಾಸ್ತಿ ಹಾಲು ಕೊಡಬೇಕೆಂದು ನಿಮಗೆ ಇಚ್ಛೆ ಇದೆಯೋ ಒಳ್ಳೆಯ ರಸವತ್ತಾದ ಆಹಾರವೂ ಶುಚಿತ್ವವಾದ ಕೊಟ್ಟಿಗೆಗಳೂ, ಪ್ರೀತಿಪೂರ್ವಕವಾದ ನಮ್ಮ ನಡತೆಯೂ ಇವುಗಳೇ ಹಾಲನ್ನು ಹೆಚ್ಚು ಮಾಡುವ ಸಾಧನೆಗಳೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ.

20. ಇನ್ನೂ ಕೊನೆಯದಾಗಿ, ಲಾಭದಾಯಕವಾದ ಜಾನುವಾರು ಸಾಕಣೆಗೆ, ಒಳ್ಳೆಯ ಬೀಜದ ಎತ್ತುಗಳ ಉಪಯೋಗವನ್ನೂ, ಉತ್ತಮವಾದ ಆಹಾರವನ್ನು ಶುಭ್ರವಾದ ಹಟ್ಟಿ, ಜೋಪಾಸನೆಗಳನ್ನು ಯೋಗ್ಯವಾದ ರೋಗ ನಿರ್ಬಂಧತೆಯನ್ನೂ ಸದಾ ನೋಡಿ ಅನುಸರಿಸುತ್ತಿರಬೇಕಾಗಿದೆ. ಸರ್ಕಾರಿ ಪಶು ವೈದ್ಯ ಇಲಾಖೆಯು ಈ ಎಲ್ಲಾ ವಿಷಯಗಳಲ್ಲಿ ನಿಮಗೆ ಬೇಕಾದ ಸಹಾಯಕೊಡುವುದು. ಬೇಕಾದಗಲೆಲ್ಲಾ ಅವರ ಸಹಾಯವನ್ನೂ ಅನುಭವಗಳನ್ನೂ ಕೇಳಿ ಪಡೆಯಿರಿ.

(ಕೃಷಿಕರಬಂಧು)

ಬಳ್ಳಾರಿ ಜಿಲ್ಲೆಯ ಪ್ರಜಾ ಸಮಾಜವಾದಿ ಪಕ್ಷದ ಸಂಘಟನೆ

ಮೈಸೂರು ಪ್ರದೇಶ ಪ್ರಜಾ ಸಮಾಜವಾದಿ ಪಕ್ಷದ ಜನರಲ್ ಸೆಕ್ರಟರಿಗಳಾದ ಶ್ರೀ ಕೆಂಚಪ್ಪನವರು ಜಿಲ್ಲಾ ಪ್ರಜಾವಾದಿ ಪಕ್ಷದ ಜನರಲ್ ಸೆಕ್ರಟರಿಗಳಾದ ಶ್ರೀ ಅಂಗಡಿ ಚನ್ನಬಸಪ್ಪ ಬಿ. ಎ. ಯಲ್‌ಲ್‌ಬಿ. ಮತ್ತು ಮುರಾರಿ ಶ್ರೀರಾಮುಲು ಇವರೊಂದಿಗೆ ಇಡೀ ಜಿಲ್ಲೆಯಲ್ಲಿ ಪ್ರವಾಸದ ಪ್ರಚಾರವನ್ನು ಕೈಕೊಂಡರು. ಬಳ್ಳಾರಿಗೂ ಸಹ ಭೇಟಿ ಇತ್ತು ಅಲ್ಲಿಯ ಪ್ರಮುಖ ಕಾರ್ಯಕರ್ತರೊಂದಿಗೆ ಮಾತಾಡಿ ಸಿರುಗುಪ್ಪೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಮರುದಿನ ಹಡಗಲಿ ತಾಲೂಕಿನ ಹಂಪಸಾಗರದಲ್ಲಿ ಒಂದು ಸಾರ್ವಜನಿಕ ಭಾಷಣ ಮಾಡಿದರು. ಅಧಿಕಾರ ಸೂತ್ರಹಿಡಿದ ಕಾಂಗ್ರೆಸ್ ಜನತೆಯ ಅಭೀಪ್ಸವನ್ನು ಪೂರೈಸಲು ಕೈಲಾಗದಾಗಿದೆ. ತುಂಗಭದ್ರಾ ಯೋಜನೆಯ ಮಟ್ಟವನ್ನು ಪುನಃ ಏದು ಅಡಿ ಹೆಚ್ಚಿಸಲು ನಿರ್ಧರಿಸಿ ನಿಮ್ಮಗಳಿಗೆಲ್ಲ ಬಹಳ ತೊಂದರೆ ಕೊಟ್ಟಿದೆ. ನೀವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಪಕ್ಷಕ್ಕೆ ಸೇರಿ ಪ್ರೀತ್ಸಾಹ ಕೊಟ್ಟುದಾದರೆ ನಿಮ್ಮ ಅಭೀಪ್ಸಗಳಿಗಾಗಿ ಪ್ರಯತ್ನಿಸಬಹುದು. ನಮ್ಮ ಪ್ರಜಾ ಸಮಾಜವಾದಿ ಪಕ್ಷವು ತಿರುಕೊಚ್ಚಿಯಲ್ಲಿ ಸೂತ್ರಹಿಡಿದು ಈಗ್ಗೆ ಸುಮಾರು 8, 9 ತಿಂಗಳಾಗಿದೆ. ಕಾಂಗ್ರೆಸ್ 7, 8 ವರ್ಷದ ತನ್ನ ಅಧಿಕಾರಾವಧಿಯಲ್ಲಿ ಸಾಧಿಸಲಾಗದ ಕಾರ್ಯಗಳನ್ನು ಸಾಧಿಸಿ ಜನಸೇವೆಗೈದಿದೆ. ಸುಮಾರು 6000 ರಷ್ಟು ಬೇಸಿಕ್ ಶಾಲೆಗಳನ್ನು ತೆರೆದಿದೆ ಮುಂತಾಗಿ ಹೇಳಿದರು. ಇದರಂತೆಯೇ ಹೂವಿನಹಡಗಲಿಯಲ್ಲಿಯೂ ಸಹ ಸಾರ್ವಜನಿಕ ಸಭೆಯನ್ನು ಜರುಗಿಸಲಾಯ್ತು. ಮುಂದೆ ಹೀರೇ ಹಡಗಲಿ ಹೊಳಲು, ಹರಪನಹಳ್ಳಿ ನೋಡಿಕೊಂಡು ಕೊಟ್ಟೂರಲ್ಲಿ ರಾತ್ರೆ ಇದ್ದು ಕಾರ್ಯಕರ್ತರೊಂದಿಗೆ ಸಂಘಟಿಸಿ ಸೊಂಡೂರಲ್ಲಿ ಪ್ರಜೆಗಳಿಗೆ ಆಗುತ್ತಿರುವ ತೊಂದರೆಗಳ ಪರಿಚಯ ಮಾಡಿಕೊಂಡು ಬಂದರು.

ಭಾರತ ಯುವಕರಿಗೆ ಪ್ರಧಾನಿ ನೆಹರೂರ ಉಪದೇಶ.

ಇನ್ನೂ ಹೆಚ್ಚು ಬಲಶಾಲಿಯಾದ ಸಂಪತ್ಯ ಮೃದ್ಧವಾದ ಭಾರತವನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊರಲು ದೇಶದ ಯುವ ಜನರು ದೈಹಿಕವಾಗಿ, ನೈತಿಕವಾಗಿ ಮತ್ತು ಮಾನಸಿಕವಾಗಿ ಶಿಸ್ತಿನಿಂದ ಕೂಡಿರಬೇಕೆಂದು ಪ್ರಧಾನಿ ನೆಹರೂರವರು ತಿಳಿಸಿದರು.

ಅಂತರ ವಿಶ್ವ ವಿದ್ಯಾನಿಲಯದ ಯುವಕ ಸಮ್ಮೇಳನದ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದಾಗಲೇ ಪ್ರಧಾನಿ ನೆಹ್ರೂ ಹಾಗೆ ತಿಳಿಸಿದ್ದು. ಈ ಸಮ್ಮೇಳನ ಕಾಂಗ್ರೆಸ್ ಪಕ್ಷದ ಆಶ್ರಯದಲ್ಲಿ ನಡೆಯಿತು.

ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ದೆಸೆಯನ್ನು ಸದುಪಯೋಗಪಡಿಸಿಕೊಳ್ಳದೆ ಹೋದರೆ, ಆನಂತರ ಸ್ಥಿತಿಗತಿಗಳಿಗೆ ಹೊಂದಿಕೊಳ್ಳಲು ಅವರಿಗೆ ಕಷ್ಟವಾಗುವುದೆಂದು ನೆಹ್ರೂ ಹೇಳಿದರು.

ಒಂದು ದೇಶದ ಸ್ಥಾನಮಾನವನ್ನು ಅದರ ಸುಶಿಕ್ಷಿತರ ಸಂಖ್ಯಾ ಬಲದಮೇಲೆ ನಿರ್ಧರಿಸಲಾಗುವುದೆಂದು ನೆಹ್ರೂ ಹೇಳಿದರು.

ಈಗ ನಮ್ಮ ದೇಶಕ್ಕೆ ಸುಶಿಕ್ಷಿತರು ಅತ್ಯಗತ್ಯವಾಗಿರುವುದಾಗಿ ನೆಹ್ರೂ ಹೇಳಿದರು. "ವಿವಿಧ ಸಾಧನೋಪಾಯಗಳಿಂದ ಹಣ ಉತ್ಪತ್ತಿ ಮಾಡಬಹುದು. ಆದರೆ ಸುಶಿಕ್ಷಣವಿಲ್ಲದೆ ಸುಶಿಕ್ಷಿತರನ್ನು ತಯಾರಿಸಲಾಗದು" ಎಂಬುದಾಗಿಯೂ ಅವರು ಹೇಳಿದರು.

ಚೀನಾದಲ್ಲೂ ಸುಶಿಕ್ಷಿತರ ಅಭಾವ ವಿರುವುದಾಗಿ ನೆಹ್ರೂ ಹೇಳಿದರು. ಭಾರತದ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿದೆಶೆಯಲ್ಲಿ ಮಾನಸಿಕವಾಗಿ ಮತ್ತು ನೈತಿಕವಾಗಿ ಪೂರ್ಣ ಅರ್ಹತೆಗಳಿಸಲು ಶ್ರಮಿಸಬೇಕೆಂದೂ, ಯಾವುದಾದರೊಂದು ಟೆಕ್ನಿಕಲ್ ಶಿಕ್ಷಣ ಪಡೆಯಲು ಪ್ರಯತ್ನಿಸಬೇಕೆಂದೂ ನೆಹ್ರೂ ಹೇಳಿದರು.

ಹತ್ತು ಸಾವಿರ ಮುಂದಿ ಓವರ್‌ಸೀಯರುಗಳಿಗೆ ಕೆಲಸ ಕೊಡುವುದು ಸುಲಭ. ಆದರೆ, ಆರ್ಟ್ಸ್ ಗ್ರಾಜುಯೇಟುಗಳಿಗೂ ಸೋಸ್ಶ್ ಗ್ರಾಜುಯೇಟುಗಳಿಗೂ ಕೆಲಸ ಕೊಡುವುದು ಕಷ್ಟ ಎಂಬುದಾಗಿಯೂ ಅವರು ಹೇಳಿದರು.

ಜ್ಞಾನಕ್ಕೆ ಸ್ವಾತಂತ್ರ್ಯವಿಲ್ಲ

ಕಳೆದವಾರದಿಂದ

ಮುಂದುವರಿದುದು

ಈ ಜಗತ್ತಿನಲ್ಲಿಯ ಸರ್ವಧಾಗಗಳನ್ನು ಅವರು ಅಭ್ಯಾಸಮಾಡಿ ಮುಗಿಸಿದ್ದಾರೆ. ಈಗ ಭಿನ್ನ ಭಿನ್ನ ಲೋಕಗಳ ಕಡೆಗೆ ಲಕ್ಷ್ಯವು ಹೋಗಹತ್ತಿದೆ.

ಈ ಪ್ರಗತಿಯು ಮನುಷ್ಯನ ಹಿತಸಾಧಿಸುವಂತೆ ಅಹಿತವನ್ನೂ ಸಾಧಿಸುವಂತಹ ಪರಿಸ್ಥಿತಿಯು ಇಂದು ಹುಟ್ಟಿದೆ. ಸಂಘಟಿತರಾಗಿ ಹೊರಟ ಮನುಷ್ಯನು ತನ್ನಲ್ಲಿ ಪರಿಣಾಮಕಾರಿಯಾದ ಸಂಘಟನೆಯನ್ನು ಮಾಡಿಕೊಳ್ಳಹತ್ತಿರುವ ನಪೆಚ್ಚು ಸಂಘಟನೆಯಾದ ಮತ್ತು ಬದಲಯುಕ್ತವಾದ ಪಕ್ಷವು, ತನಗಿಂತ ಕಡಿಮೆ ಶಕ್ತಿಯುಳ್ಳ ಪಕ್ಷದ ಮೇಲೆ ತನ್ನ ಅಧಿಕಾರ ನಡೆಸಬಹುದು. ಜ್ಞಾನದ ಪ್ರಯೋಜನವು ಸ್ವಾರ್ಥಸಾಧನೆಗಾಗಿ ಆಗಹತ್ತಿದ್ದರಿಂದ ಜಗತ್ತಿನ ತಿಕ್ಕಾಟಕ್ಕೆ ಆರಂಭವಾಯಿತು. ಅಪರ ಫಲಗಳೇ ಸಾಮ್ರಾಜ್ಯವಾದ, ಯುದ್ಧ, ಪ್ರತಿಭಟನೆ ಮೊದಲಾದವು ಆಗಿ ನಯೆಂಬುದನ್ನು ನಾವು ಹೆಜ್ಜೆ ಹೆಜ್ಜೆಗೆ ನೋಡುತ್ತಿದ್ದೇನೆ.

ಆದೇ ಜ್ಞಾನದ ಪ್ರಗತಿಯ ಮೂಲಕ ಇಂದು ಸಮ್ಮನ್ನು ಬಾಯಿ ಬಾಯಿ ಬಿಡಹಚ್ಚಿವ ಅಣುಬಾಂಬು ಉದಯವಾಗಿದೆ ಅದರ ಬಗ್ಗೆ ನಡೆದ ಕಾರಸ್ಥಾನ, ಗೌಪ್ಯರಕ್ಷಣೆದೆ. ಹಾಂತ ತಿಕ್ಷ್ಣವೆನಿಸಲಾವುದು ಮತ್ತಿಷ್ಟು ಭಯಾನಕತೆಯನ್ನು ಹುಟ್ಟಿಸುತ್ತಿದೆ. ಆ ಬಾಂಬನ್ನು ಒಗೆದುವರಿಂದ ಆಗುವ ವ್ಯಾಪಕತ್ಯೆಯ ಮಾತಂತೂ ಇರಲಿ, ಅದನ್ನು ಗೊತ್ತುಹಚ್ಚಿದ ಶಾಸ್ತ್ರಜ್ಞರಿಗೇ ಉಳಿಗಾಲವಿಲ್ಲ ಎಂಬ ಪರಿಸ್ಥಿತಿಯುಂಟಾಗಿದೆ.

ಇಂದು ಆಲ್ಬರ್ಟ್ ಐನ್‌ಸ್ಟೀನರು, ಜರ್ಮನಿಯಿಂದ ಕೆತ್ತಿಕೊಂಡು ಬಂದು ಅಮೇರಿಕೆಯಲ್ಲಿ ನೆಲೆಸುವಂತಾಗಿದೆ. ಹಿರಿ ಶಾಸ್ತ್ರಜ್ಞರು ವಿಶ್ವಾಸಘಾತರೆಂದು ಪದಬ್ಯುತವಾಗುತ್ತಿದ್ದಾರೆ, ಹೊರಗಿನವನಿಗೆ ಅದರ ಗೌಪ್ಯವನ್ನು ತಿಳಿಸಿದರೆಂದು ದೇಹಾಂತ ಶಿಕ್ಷೆಯನ್ನು ಹೊಂದುತ್ತಿದ್ದಾರೆ. ಇಷ್ಟಾದರೂ ಆ ಗೌಪ್ಯವನ್ನು ಭೇದಿಸಿ ಅದರ ವಿವರಗಳನ್ನು ಹೊರಕೆಸುವಕಾರಸ್ಥಾನಗಳು ಇದ್ದೇ ಇವೆ.

ಇಷ್ಟೇ ಅಲ್ಲದೆ ಆ ಜ್ಞಾನವು ಅಪಕ್ವಾಗಿದುದ್ದು ಸುರಿದನರ ಇಚ್ಛೆಯುಂತೆ ನಡೆದು ಕೊಳ್ಳಬೇಕಾಗಿದೆ. ನಾವಾಂಕಿತರಾದ ಶಾಸ್ತ್ರಜ್ಞರಿಗೆ ತಾವು ಕಂಡಿದ್ದನ್ನು ಕಂಡಹಾಗೆ ಜಗತ್ತಿಗೆ ಹೇಳುವ ಸ್ವಾತಂತ್ರ್ಯವಿಲ್ಲ ಹಲಕೆಲವು ವೇಳೆ ವಿನರ್ಮಸ್ತ ಸಂಗತಿಗಳನ್ನು ಕೂಡ ಅವರು ಮೇಳಬೇಕಾದುದುಂಟು.

ಯಾವುದೊಂದು ವಿಶಿಷ್ಟ ಜ್ಞಾನವನ್ನು ಕಂಡು ಹಿಡಿದವರಿಗೆ ಅದರ ಬಗ್ಗೆ ಕೀರ್ತಿ ದೊರೆತೀತೆಂದು ಹೇಳಲು ಬರಲಾರದು. ಯಾರ ಪರಿಶ್ರಮದ ಕೀರ್ತಿಯು ಯಾರಿಗೋ ಸಿಗುವುದುಂಟು. ಈ ವಿಷಯದಲ್ಲಿ ಕೂಡ ದುಡ್ಡು, ಅಧಿಕಾರಗಳಿದ್ದವರ ಕೈವಾಡವು ನಡೆಯುತ್ತಿದೆ. ವರ್ಣ, ದೇಶಗಳ ತಾರತಮ್ಯವು ಅದರಲ್ಲಿ ಗಣಿಸಲ್ಪಡುತ್ತಿದೆ.

ಪೇನಸಿಲಿಗನು ಗೌರೀಶಂಕರ ಮುಟ್ಟಿದ ವಿಷಯದಲ್ಲಿ ಎಷ್ಟು ಕೈವಾಡ ನಡೆಯಿತೆಂಬುದನ್ನು ನಾವು ನೋಡಿದೆವು ಭಾರತವು ಇಂದು ಸ್ವತಂತ್ರ ರಾಷ್ಟ್ರವಾಗುವರಿಂದ ಆ ವಸ್ತುವಿಗೆ ಸಲ್ಲತಕ್ಕ ಕೀರ್ತಿಯನ್ನು ಇತರರು ಹಾರಹೊಡೆಯಲು ಸಾಧ್ಯವಾಗಲಿಲ್ಲ. ತೇನಸಿಂಗನೂ ಆ ವಿಷಯದಲ್ಲಿ "ಹಾಗಾದರೆ ಎಲ್ಲ ವಿವರಗಳನ್ನು ಬೈಲಿಗಿಟ್ಟು ಬಿಡುವೆನು" ಎಂದು ಹೇಳಿದ. ಆಗ ಹಿಲರಿಯು ಮತ್ತು ಅವನಿಗೆ ಆ ಕೀರ್ತಿಯನ್ನು ಕೊಡಬೇಕೆಂದು ಯತ್ನಿಸುತ್ತಿದ್ದವರು ಸುಮ್ಮನಾದರು. ಇಲ್ಲದಿದ್ದರೆ ಆ ಕೀರ್ತಿಯು ಹಿಲರಿಗೆ ಹೋಗಿ ತೇನಸಿಂಗನು ಅವನೊಂದಿಗಿದ್ದ ಓವರ್‌ಕೂಲಿ ಎಂದು ಆಗಿ ಹೋಗುತ್ತಿತ್ತು.

ಇಂದು ಶಾಸ್ತ್ರಜ್ಞರು ಪ್ರಸಂಗ ಬಂದಾಗಲೆಲ್ಲ. "ಈ ಸಂಶೋಧನೆ ಶಾಸ್ತ್ರೀಯ ವಿಷಯವು ಅನಿಯಂತ್ರಿತವಾಗಿ ನಡೆಯತಕ್ಕದ್ದು. ಅವರ ಮೇಲೆ ಯಾವುದೇ ತರಹದ ಅಡ್ಡಿ ಆತಂಕಗಳನ್ನು ಒಡ್ಡುವುದೆಂದರೆ ಅದರ ಪ್ರಗತಿಯನ್ನು ಕುಂಠಿಸಿದಂತೆಯೇ ಸರಿ, ಮತ್ತು ಅದರ ಪ್ರಯೋಜನವು ಜಗತ್ತಿಗೆ ಆಗದಂತೆ ಮಾಡುವುದೇ ಸರಿ" ಎಂದು ಅನ್ನುತ್ತಿದ್ದಾರೆ.

ಆದರೆ ಈ ಅವರ ಮನೋಭಾವನೆಯು ಈ ದೇಶವನ್ನು ಎಂತಹ ಮಾತೋ ಏನೋ! ಸದ್ಯಕ್ಕೆಂತೂ ಆ ತರಹದ ಪರಿಸ್ಥಿತಿಯು ಇಲ್ಲ. ಯಾವ ಅಧಿಕಾರಕ್ಕೂ ಒಳಪಡದ ಎಲ್ಲ ರಾಷ್ಟ್ರಗಳನ್ನು ನಿಯಂತ್ರಿಸಬಲ್ಲ ಒಂದು ಅಂತರರಾಷ್ಟ್ರೀಯ ಮತ್ತು ಮಧ್ಯಸ್ಥ ಶಕ್ತಿಯ ಕೈಯಲ್ಲಿ ಈ ಸಂಶೋಧನಾ ವಿಭಾಗವು ಕೊಡಲ್ಪಟ್ಟರೆ ಮಾತ್ರ ಆ ತರಹದ ನಿರಂತಂಕ ಸಂಶೋಧನೆಯು ನಡೆದು ಅದರ ಪ್ರಯೋಜನವು ಜಗತ್ತಿಗೆ ಸರ್ವ ಸಾಮಾನ್ಯವಾಗಿ ದೊರೆಯುವ ಸಂಭವ ವಿದೆ.

ನಿಜವಾಗಿ ನೋಡಿದರೆ ರಾಷ್ಟ್ರಸಂಘವು ಆದೇ ತರಹದ ಕಲ್ಪನೆಯಿಂದ ಕಟ್ಟಲ್ಪಟ್ಟಿಂಗಧದೆ. ಆದರೆ ಅದರ ಕೈಯಲ್ಲಿ ಅಂತಹ ಶಕ್ತಿಯಿಲ್ಲ ಅದ್ದರಿಂದ ಅದು ಇಂದಿನ ಜಗತ್ತಿನ ಅಶಾಂತಿಯನ್ನು, ಅವ್ಯವಸ್ಥೆಯನ್ನು ನಿವಾರಿಸಲು ಶಕ್ತವಾಗಿಲ್ಲ. ಅದನ್ನು ಸಬಲಗೊಳಿಸುವ ಯತ್ನವೇನೋ ನಡೆದಿದೆ. ಆದರಲ್ಲಿ ಯಶಸ್ಸು ಸಿಕ್ಕರೆ ಮಾತ್ರ ಆ ತರಹದ ಒಂದು ನಿರಾತಂಕ ಅಂತರರಾಷ್ಟ್ರೀಯ ಕೇಂದ್ರವು ಹುಟ್ಟಬಹುದೇನೋ ನೋಡಬೇಕು.

ಬಳ್ಳಾರಿ

ಬಳ್ಳಾರಿ ಜಿಲ್ಲಾ ಟೌನ್‌ಬರ್ ಆಫ್ ಕಾಮರ್ಸಿನ ವಾರ್ಷಿಕೋತ್ಸವವು ಮೈಸೂರು ವಿರೋಧಿನಕ್ಷಪ ನಾಯಕರಾದ ಜನಾಬ್ ಜಿ ಇಮಾಂಸಾಹೇಬರವರ ಅಧ್ಯಕ್ಷತೆಯಲ್ಲಿ 19ನೆಯ ತಾ. ನೆರವೇರಿತು.

At 'PRABHAT'

FROM **15-12-54**

DAILY 2 SHOWS 6-20 & 9-20 P. M

CHANDRAKALA PICTURES PRESENT.

SHIV-KANYA.

(HINDI)

Feat:— Nirupa Roy, Trilok Kapoor, Lalita Pawar, Shakuntala Niranjan Sarma, Anjali Devi, Vivek.

Directed by: DHIRUBHAI DESAI.

Music by: MANNA DEY.

Play back Singers:— LATA MANGESHKAR.

A branch of the

MYSORE BANK Ltd.,

Opened in Bellary.

on 18-12-54 at B. C. C. Stores Building

Rightwing:- Ground Hall

All Banking transactions conducted.

ಮೈಸೂರು ಬ್ಯಾಂಕ್ ಲಿಮಿಟೆಡ್

ಬಳ್ಳಾರಿ ಶಾಖೆಯು

ಬಳ್ಳಾರಿ ಶಾಂಪ್ಪಿಂಗ್ ಸೆಂಟರ್ ಕಟ್ಟಡದ ಬಲಭಾಗದಲ್ಲಿ

18—12—54 ನೆಯ ಶುಕ್ರವಾರ ಪ್ರಾರಂಭವಾಯಿತು.

ಎಲ್ಲ ವಿಧವಾದ ಬ್ಯಾಂಕಿಂಗ್ ವ್ಯವಹಾರಗಳು ನಡೆಯುತ್ತವೆ.

ಎಲ್ಲವನ್ನೂ ಶುದ್ಧ

ಪಡಿಸಲು

ಉತ್ತಮವಾದುದು

ಮೈಸೂರು

ಸೋಪ್

ತಯಾರಿಸುವವರು

ಗವರ್ನಮೆಂಟ್

ಸೋಪ್ ಫ್ಯಾಕ್ಟರಿ,

ಬೆಂಗಳೂರು.

"ಮೊಂಬಥ್, ಐ.ಎಸ್.ಟಿ.ಎಂ.ಎ"

ಸಕ್ಕರೆ ಆಮದಿಗೆ ಅವಕಾಶ

ಭಾರತದಲ್ಲಿ ಬಳಕೆಗೆ ಅಗತ್ಯವಾಗಿ ಇರುವ ಸಕ್ಕರೆ ಪ್ರಮಾಣಕ್ಕೂ, ಆಹುದೊಲೆಯುತ್ತಿರುವ ಪ್ರಮಾಣಕ್ಕೂ ಇರುವ ಅಂತರವನ್ನು ನಿವಾರಿಸಲು ಹೊರಗಡೆಯಿಂದ ಸ್ವಲ್ಪ ಕಚ್ಚಾ ಸಕ್ಕರೆಯನ್ನು ಆಮದುಮಾಡಿಕೊಳ್ಳುವುದಕ್ಕೆ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ಕೊಡಲು ಭಾರತ ಸರ್ಕಾರ ನಿರ್ಧರಿಸಿದೆ.

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	5—0—0	One Year	5—0—0
೬ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

NAVA BHARAT, BELLARY.

(Regd.M.No. 4746)

To 20-12-54

Sri._____

_____

_____

Edited Printed & Published by T. B. Keshava Rao, at Nava Bharat Printing Press, Bellary

ಸಹಕಾರಿ

ಸೋಮವಾರ
ಡಿಸೆಂಬರ್
27-12-54

ವರ್ಷ 18
ಸಂಚಿಕೆ 19

ಬಳ್ಳಾರಿ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ಹಿಂದೂಸ್ಥಾನ್ ಕೇಬಲ್ಸ್ ಕಾರ್ಖಾನೆಯಲ್ಲಿ

ಟೆಲಿಫೋನ್ ಕೇಬಲ್‌ಗಳ ತಯಾರಿಕೆ.

ಡಿಸೆಂಬರ್ 26ನೇ ತಾ. ಪ್ರಾರಂಭ

ದಾಮೋದರ ಕಣಿವೆಯ ಕೈಗಾರಿಕಾ ಕ್ಷೇತ್ರದಲ್ಲಿ ಕಲ್ಕತ್ತಾಕ್ಕೆ 140 ಮೈಲಿಗಳ ದೂರದಲ್ಲಿ ಮತ್ತು ಚಿತ್ತರಂಜನದ ಬಳಿ ಇರುವ ರೂಪನಾರಾಯಣ ಪುರದಲ್ಲಿ ಇಂದು (ಡಿಸೆಂಬರ್ 26, 1954) ಭಾರತದ ಕೇಬಲ್ಸ್ ಕಾರ್ಖಾನೆಯು ಉತ್ಪನ್ನಕ್ಕೆ ಪ್ರಾರಂಭಿಸುತ್ತದೆ. 110 ಲಕ್ಷ ರೂ.ಗಳ ಖರ್ಚಿನಲ್ಲಿ ಕಟ್ಟಲಾಗಿರುವ ಈ ಕಾರ್ಖಾನೆಯು ಭಾರತದ ವಿಸ್ತರಿಸುತ್ತಿರುವ ಸಂಸರ್ಗದ ಅವಶ್ಯಕತೆಗಳನ್ನು ಒಂದು ಸರದಿಯ ಕೆಲಸದಲ್ಲಿ ಪ್ರತಿ ವರ್ಷವೂ ಒಂದು ಕೋಟಿ ರೂ.ಗಳ ಬೆಲೆ ಬಾಳುವ 500 ಮೈಲಿಗಳಷ್ಟು ಕೇಬಲ್‌ಗಳನ್ನು ತಯಾರಿಸುವ ನಿರೀಕ್ಷಣೆಯಿದೆ. ಭಾರತದ $1\frac{1}{2}$ ಕೋಟಿ ರೂ.ಗಳ ಕೇಬಲ್‌ನ ಅಗಿನ ಅವಶ್ಯಕತೆಗಳು ಸಂಪೂರ್ಣವಾಗಿ ಆಮದನ್ನು ಅವಲಂಬಿಸಿರುತ್ತದೆ.

ಭಾರತದ ಅವಶ್ಯಕತೆಗಳು

ಭಾರತದಲ್ಲಿ ಕೇಬಲ್‌ಗಳನ್ನು ತಯಾರಿಸುವ ಅವಶ್ಯಕತೆಯು ಇದ್ದು ಪಂಚವಾರ್ಷಿಕ ಯೋಜನೆಯಲ್ಲಿ ಸಂಸರ್ಗ ವ್ಯವಸ್ಥೆಯ ವಿಸ್ತರಣೆಯನ್ನು ನಿರೂಪಿಸಿದಾಗ ಅವಶ್ಯಕತೆಯು ತೀವ್ರವಾಗಿ ಕಂಡು ಬಂದಿತು. ವಿದೇಶೀಯ ತಯಾರಿಕಾಗಾರರ ಪಾರಿಭಾಷಿಕ ಸಹಾಯದಿಂದ ಕಾರ್ಖಾನೆಯ ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು.

ಭಾರತ ಸರ್ಕಾರವು ಕೇಬಲ್ ತಯಾರಿಕೆಯಲ್ಲಿ ಪ್ರಖ್ಯಾತವಾದ ಬ್ರಿಟಿಷ್ ಸಂಸ್ಥೆಯೊಂದರೊಡನೆ ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದದ ಪ್ರಕಾರ 1954ರಲ್ಲಿ ಕಾರ್ಖಾನೆಯು ಕಾರ್ಯಾಚರಣೆಗೆ ಪ್ರಾರಂಭ ಮಾಡಬೇಕೆಂಬುದಾಗಿದ್ದಿತು.

1953 ನೇ ಸೆಪ್ಟೆಂಬರ್ ವೇಳೆಗೆ ಹೆಚ್ಚು ಕಡಿಮೆ ಕಟ್ಟಡವನ್ನು ಕಟ್ಟಲಾಗಿತ್ತು.

ಕಾರ್ಖಾನೆಗಾದ ಖರ್ಚು

ಮೊದಲು ಈ ಕಾರ್ಖಾನೆಗೆ 110 ಲಕ್ಷ ರೂ.ಗಳು ಖರ್ಚಾಗುವುದೆಂದು ಅಂದಾಜು ಮಾಡಲಾಗಿದ್ದು, ಭಾರತ ಸರ್ಕಾರದ ಸ್ಥಾಯಿ ಆರ್ಥಿಕ ಸಮಿತಿಯ ಒಪ್ಪಿಗೆಯೊಂದಿಗೆ ಯೋಜನಾ ಆಯೋಗವು ಈ ಕಾರ್ಖಾನೆಯ ಅವಶ್ಯಕತೆಯನ್ನು 130 ಲಕ್ಷ ರೂ. ಗಳಿಗೇರಿಸಿತು. ಯೋಜನಾ ಆಯೋಗವು 130 ಲಕ್ಷ ರೂ.ಗಳನ್ನು ಮಂಜೂರು ಮಾಡಿದಾಗ್ಯೂ ಈ ಕಾರ್ಖಾನೆಗೆ 110 ಲಕ್ಷ ರೂಪಾಯಿಗಳ ಪರಿಮಿತಿಯಲ್ಲಿಯೇ ಖರ್ಚಾಗಿದೆ.

1952 ಆಗಸ್ಟ್ ತಿಂಗಳಿನಲ್ಲಿ ಭಾರತ ಸರ್ಕಾರವು "ಹಿಂದೂಸ್ಥಾನ್ ಕೇಬಲ್ಸ್ ಲಿಮಿಟೆಡ್" ಎಂಬ ಸಂಸ್ಥೆಯನ್ನು ರಚಿಸಿತು. ಈ ಸಂಸ್ಥೆಗೆ ಸಂಪೂರ್ಣವಾಗಿ ಭಾರತ ಸರ್ಕಾರವು ಆರ್ಥಿಕ ಸಹಾಯವನ್ನು ನೀಡುವುದು. ಈ ಕಾರ್ಖಾನೆಯು ಪ್ರಾರಂಭದ ವರ್ಷದಲ್ಲಿ ಮಾತ್ರ ಒಟ್ಟು ಹೂರಿಕೆಯಲ್ಲಿ ನೂರಕ್ಕೆ 75ರಷ್ಟನ್ನು ತಯಾರಿಸುವುದು.

ಸಿಬ್ಬಂದಿಗೆ ತರಬೇತು

ಕಾರ್ಖಾನೆಯು ಉತ್ಪಾದನೆಗೆ ಪ್ರಾರಂಭಿಸುವುದಕ್ಕೆ ಮೊದಲು ಭಾರತೀಯರಿಗೆ ತರಬೇತನ್ನು ಕೊಡಿಸುವುದು ಅವಶ್ಯಕವಾಗಿದ್ದಿತು. ಆದಕಾರಣ ಆರು ನುಂದಿ ಪಾರಿಭಾಷಿಕ ಸ್ವರಿಶ್ರಮವುಳ್ಳವರನ್ನು 1952ರ ಆದಿಯಲ್ಲಿ ಚುನಾಯಿಸಿ ಇಂಗ್ಲೆಂಡಿನಲ್ಲಿನ ಸಲಹಾಗಾರರ ಕಾರ್ಖಾನೆಯಲ್ಲಿ ಒಂದು ವರ್ಷದವರೆಗೂ ತರಬೇತನ್ನು ಕೊಡಿಸಲಾಯಿತು. ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರಾಗಿರುವವರು, ಅಂಜೆ ಮತ್ತು ಶಂತಿ ಇಲಾಖೆಯಲ್ಲಿ ದೆಟ್ಟಿನ ಅನುಭವ ಪಡೆದಿದ್ದು ಇಂಜಿನಿಯರಿಂಗ್‌ನಲ್ಲಿ ಉನ್ನತ ಶಿಕ್ಷಣ ಪಡೆದಿರುವವರಾಗಿರುತ್ತಾರೆ.

ಕಾರ್ಖಾನೆಯನ್ನು ಅತಿನಾವೀನ್ಯದ ರೀತಿಯಲ್ಲಿ ಕಟ್ಟಿದ್ದು ಯಂತ್ರಗಳು ಏಕಮುಖ ಪ್ರವಾಹದಲ್ಲಿ ಚಲಿಸುವಂತೆ ಮಾಡಲಾಗಿದೆ. ಅತ್ಯಾಧುನಿಕ ಯಂತ್ರೋಪಕರಣಗಳಿಂದ ಕಾರ್ಖಾನೆಯನ್ನು ಸಿದ್ಧಪಡಿಸಲಾಗಿದೆ. ಕಾರ್ಖಾನೆಯು ಏಳು ವಿಧದ ಕೇಬಲ್‌ಗಳನ್ನು ತಯಾರಿಸುವುದು.

ಶ್ರೀ ಡಿ. ಯಸ್. ಪನುಮಂತ ರಾಯರ ಷಷ್ಟಿ ಪೂರ್ತಿ ಸಮಾರಂಭ

19—12—54ನೆಯ ತಾ. ಬಳ್ಳಾರಿ ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡರಲ್ಲೊಬ್ಬರಾದ ಶ್ರೀ ಡಿ. ಯಸ್. ಪನುಮಂತರಾಯರ ಷಷ್ಟಿಪೂರ್ತಿ ಸಮಾರಂಭವು ಗಾಂಧಿನಗರದ ಅವರ ಸ್ವಗೃಹದಲ್ಲಿ ನೆಂವೇರಿತು. ಈ ಸಮಾರಂಭಕ್ಕೆ ಅವರ ಹಿತೇಚ್ಛುಗಳಾದ ಕಾಂಗ್ರೆಸ್‌ನವರೂ, ವಕೀಲ ವರ್ಗವೂ, ಜಿಲ್ಲಾ ಜಡ್ಜರವರೂ, ಡಿಸ್ಟ್ರಿಕ್ಟ್ ಮುನ್ಸಿಫ್, ಸಬ್ ಜಡ್ಜರವರೂ ದಯಮಾಡಿಸಿ ಅವರ ದೀರ್ಘಾಯುವನ್ನು ಕೋರಿದರು. ಅತಿಥಿಗಳಿಗೆ ಭೂರಿ ಭೋಜನವಾಯಿತು.

ಬಳ್ಳಾರಿ ವಾಣಿಜ್ಯ ಸಂಘದ ಪ್ರಥಮ ವಾರ್ಷಿಕೋತ್ಸವವು

19-12-54ನೆಯ ಭಾನುವಾರ ಸಾಯಂಕಾಲ ಬಿ. ಶಿ. ಶಿ. ಸ್ಟೋರ್ಸಿನ ಭವ್ಯ ಭವನದಲ್ಲಿ ಜನಾಬ್ ಮಹಮದ್ ಇಮಾಂ ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ಮೈಸೂರು ಅಸೆಂಬ್ಲಿಯಲ್ಲಿ ವಿರೋಧಿ ಪಕ್ಷದ ನಾಯಕರು. ಅವರು ಭಾಷಣವಾದರೂ ಸರ್ಕಾರೀ ಕೃತಿಗಳ ಟೀಕೆಯಾಗಿದ್ದಿತು.

ಪ್ರಾರ್ಥನೆಯಾಗಿ ಕಾರ್ಯದರ್ಶಿಗಳಾದ ಶ್ರೀ ಬಿ. ವಿ. ಶೇಷಗಿರಿರಾಯರು ಕಳೆದ ವರ್ಷದ ಸಾದ್ಯಂತ ವರದಿಯ ಮುದ್ರಣ ಪುಸ್ತಕಗಳನ್ನು ಹಂಚಿ ತಾವು ಸಾಧಿಸಿದ ಕಾರ್ಯಗಳನ್ನು ವೇದ್ಯ ಮಾಡಿದರು. ಸಂಘವು ವಾಣಿಜ್ಯ ಸುಧಾರಣೆಗಷ್ಟೇ ಅಲ್ಲದೆ ನಗರಹಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಕೃಷಿಮಾಡಿದೆ. ನೀರಿನ ಸರಬರಾಯಿ, ವಿದ್ಯಾ ಸೌಲಭ್ಯ, ಸಾರಿಗೆಯ ಸೌಕರ್ಯ ವಗೈರೆ ಎಲ್ಲ ರಂಗಗಳಲ್ಲಿ ಸಂಘದ ಪ್ರತಿಭೆಯು ಬೀರಲಾಗಿದೆ.

ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶ್ರಿ ಟಿ. ಎ. ಪೈರವರು ತಮ್ಮ ಉಜ್ವಲ ಭಾಷಣದಲ್ಲಿ ಜನತೆಯು ರಾಷ್ಟ್ರೀಯ ಸರಕಾರಕ್ಕೆ ಯಾವ ರೀತಿಯಲ್ಲಿ ಬೆಂಬಲಕೊಡಬೇಕೆಂಬ ಬಗ್ಗೆ ಪ್ರಕಾಶ ಹಾಕಿದರು.

ಮನುಷ್ಯನು ಭಯದ ವಾತಾವರಣವನ್ನು ಆಶ್ರಯಿಸಿ ದಿಗ್ಮೂಢನಾಗುತ್ತಿರುವನು. ಭಾಷೆ, ಜಾತಿ, ಪಂಗಡಭೇದಗಳು ಅವನನ್ನು ಬಾಧಿಸಹತ್ತಿವೆ. ಈ ಪ್ರವೃತ್ತಿಯು ಪಶುತ್ವಕ್ಕೆ ಸೇರಿದ್ದು. ಇದರಿಂದ ಅನುಮಾನ, ಅವಿಶ್ವಾಸಗಳುತ್ಪನ್ನವಾಗಿ ಸಾಮಾಜಿಕ ರಂಗವೇ ವಿಷಮಯವಾಗುತ್ತಿದೆ. ಜನತಂತ್ರ ತತ್ವವು ಅಸಾರ್ಥಕವಾಗುತ್ತಿದೆ. ವಾಣಿಜ್ಯವರ್ಗದವರಿಗೆ 'ನೀವು ತೋಷಕರು, ಕಳ್ಳ ಸಂತೆಯ ಜಾಲಕರೆಂದೂ, ಸರ್ಕಾರಕ್ಕೆ' ಲಂಚಕೋರರೆಂದೂ ಅನ್ನುತ್ತಾ ಹೋದರೆ, ಪಾರಸ್ಪರಿಕ ಸುಧಾರಣೆ ಹೇಗಾದೀತು? ಪರಸ್ಪರ ತಿಳಿವಳಿಕೆಗೆ, ಸಾಮರಸ್ಯಬೇಕು. ವರ್ತಕ ವಾಣಿಜ್ಯ ವರ್ಗಕ್ಕೆ ಲಾಭೋದ್ದೇಶ ಇರುವುದೂ ತಪ್ಪಲ್ಲ. ಸರ್ಕಾರಕ್ಕೆ ತೆರಿಗೆ ಪೇರುವ ಹಕ್ಕು ಇರುವುದೂ ತಪ್ಪಲ್ಲ. ಲಾಭದ ಎಲ್ಲೆಯು ಮೀರಬಾರದು. ತೆರಿಗೆಗಳ ಸದ್ವಿನಿಯೋಗವಾಗಲೇ ಬೇಕು. ತೆರಿಗೆಗಳಿಂದರೆ ವಾಣಿಜ್ಯ ವರ್ಗಕ್ಕೆ ಅನಿಷ್ಟ, ಅದರೆ ವಿರೋಧವಾಗಿ ಯಾವಾಗಲೂ ಅಂದೋಲನ ಸಾಗಿಯೇ ಇರುತ್ತದೆ.

"ಈಗಿನ ಕಾಲದಲ್ಲಿ 'ಛೇಂಬರ್' ದಂಥ ಸಂಘಗಳಿಂದ ವಾಣಿಜ್ಯ ವರ್ಗಕ್ಕೆ ಅಗಣಿತ ಲಾಭಗಳಾಗುತ್ತವೆ. ನಮಗೆ ಬೇಕಾದುದನ್ನು ಹೇಳಲು ಅಂದೋಳನ ಮಾಡಿ ಸಾಧಿಸಲು ನಮಗೆ ಹಕ್ಕುಂಟು ಎಂಥ ಟೀಕಾಕಾರರಾಗಲಿ, ಪ್ರಥಮ ಪಂಚವಾರ್ಷಿಕ ಪ್ರಣಾಲಿಯಲ್ಲಿ ಸಾಧಿಸಿದ ಮಹತ್ಕಾರ್ಯಗಳನ್ನು ಅಲ್ಲಗಳೆವಂತಿಲ್ಲ. ಈಗ ದ್ವಿತೀಯ ಪಂಚವಾರ್ಷಿಕ ಕಾರ್ಯಕ್ರಮಕ್ಕಾಗಿ 5½ ಸಹಸ್ರ ಕೋಟಿ ರೂ.ಗಳು ವೆಚ್ಚವಾಗಲಿದೆ. ಇದರಲ್ಲಿ ಶ್ರಮದಾನದ ಬೆಲೆಯನ್ನೇ ನಾವು ಇಚ್ಚಿಸಿದರೆ ಅರ್ಧಕ್ಕೆ ತರಬಹುದು."

"ನಮ್ಮ ಜಿಲ್ಲೆಯಲ್ಲಿ ಹತ್ತಿಯು ವಿಶೇಷವಾಗಿ ಬೆಳೆಯುತ್ತಲಿದ್ದು ವಾಣಿಜ್ಯ ಪ್ರಪಂಚದಲ್ಲಿ ಮುಖ್ಯ ಸ್ಥಾನವನ್ನು ಪಡೆಯಲು ಅರ್ಹತೆ ಕೊಟ್ಟಿದೆ. ವರ್ತಕ ವರ್ಗದ ಸುಖವೆಂದರೆ ರಾಷ್ಟ್ರೀಯ ಸಂಪತ್ತು ಬೆಳೆದಂತೆ, ವರ್ತಕ ವರ್ಗದ ಹಿತವೆಂದರೆ ರಾಷ್ಟ್ರದ ಹಿತ.

ನನ್ನ ಮೇಲೆ ಕೃಪೆಯಿಟ್ಟು, ಉದ್ಘಾಟನೆ ಮಾಡಲು ಆಹ್ವಾನ ಕೊಟ್ಟದ್ದಕ್ಕಾಗಿ ನಿಮಗೆಲ್ಲರುಣಿಯರುವೆ. ನಿಮ್ಮನ್ನು ಹಾರ್ದಿಕವಾಗಿ ವಂದಿಸುತ್ತ ನಿಮ್ಮ ಯಶಸ್ಸನ್ನು ಕೋರುವೆನೆಂದು ಶ್ರಿ ಟಿ. ಎ. ಪೈರವರು ಮುಗಿಸಿದರು

ಶ್ರಿ ಜಿ. ಯಂ. ಇಮಾಂರವರು

'ನಿಮ್ಮ ಸಂಘವು ಉತ್ತರೋತ್ತರ ಅಭಿವೃದ್ಧಿಯಾಗಲಿ. ಈಗಿರುವ 300 ಸದಸ್ಯರ ಸಂಖ್ಯೆಯು 500 ಕ್ಕೆ ಬೆಳೆಯಲಿ. ನಿಮ್ಮದಾದ ಭವನವು ಸೃಷ್ಟಿಯಾಗಲಿ ಎಂದು ಹಾರೈಸಿದರು.

ನಿಮ್ಮ ಜಿಲ್ಲೆಯಲ್ಲಿ ಟೆಕ್ಸ್‌ಟಾಯಲ್, ಐರನ್, ಸ್ಟೀಲ್, ಮೈನಿಂಗ್, ಮತ್ತು ಸಕ್ಕರೆ ಕಾರ್ಖಾನೆಗಳು ಆರಂಭವಾಗಲು ಅವಕಾಶವುಂಟು. ಅನುಕೂಲ ಸನ್ನಿವೇಶಗಳುಂಟು ಸರ್ಕಾರ ಮತ್ತು ಪ್ರಜೆಗಳ ಸಹಕಾರದಿಂದ ಇವು ಸಾಧ್ಯವಾದೀತೆಂದು ನನ್ನ ವಿಶ್ವಾಸ,

1930ಕ್ಕಿಂತ ಹಿಂದೆ ಮೈಸೂರು ದೇಶವು ಬಳ್ಳಾರಿ ಜಿಲ್ಲೆಗಿಂತಲೂ ಹಿಂದುಳಿದಿತ್ತು. ಕೃಷ್ಣರಾಜ ಸಾಗರದ ನಿರ್ಮಾಣದ ನಂತರ ವಿದ್ಯುದುತ್ಪಾದನೆಯೂ ಹೆಚ್ಚಿತು ಬಳಕೆಯೂ ಸಹ 14 ಸಾವಿರ ಕಿಲೋವ್ಯಾದಿಂದ 64 ಸಾವಿರಕ್ಕೇರಿತು. 1930 ರಿಂದ 1946ರ ವರೆವಿಗೆ ಮೈಸೂರಲ್ಲಿ ಅನೇಕ ಉದ್ಯಮಗಳು ಬೆಳೆದವು. ನಾವು ಕೇಳಿದಕ್ಕಿಂತಲೂ ಹೆಚ್ಚಿನ ಸೌಕರ್ಯಗಳು, ಯಾವ ಉದ್ಯಮಕ್ಕಾದರೂ ಸಂಗ್ರಹವಾಗುತ್ತಿದ್ದವು. 1946 ರಿಂದ ಸ್ವಾತಂತ್ರ್ಯಲಭಿಸಿದ ಮೇಲೆ ಸರ್ಕಾರದಲ್ಲಿ ಜನತೆಗೆ ವಿಶ್ವಾಸ ಕಡಿಮೆಯಾಗಹತ್ತಿದೆ. ಇದಕ್ಕೆ ಜನತೆಯಲ್ಲಿ ಅಪ್ರಮಾಣೀಕರಿರುವುದೂ **(Dishonest Elements)** ಒಂದು ಕಾರಣವಿರಬಹುದು. ಎಷ್ಟೋ ಉದ್ಯಮಗಳು ಸಾಕಷ್ಟು ಭಂಡವಲವಿಲ್ಲದೆ ಅಳುತ್ತಿವೆ. ಎಷ್ಟೋ ಉದ್ಯಮಗಳು ನಾಶವಾಗಿವೆ. ಸರ್ಕಾರದವರ ನೀತಿಯಲ್ಲಿ ಸ್ಥಾಯಿತ್ವವೇ ಇಲ್ಲ. ಈಗ ಹೇಳಿದುದನ್ನು ಮರಿಯೊಂದು ಕ್ಷಣಕ್ಕೆ ಬದಲಾಯಿಸುತ್ತಾರೆ. ಜನರಲ್ಲಿ ವಿಶ್ವಾಸ ಹೇಗೆ ಹುಟ್ಟಬೇಕು? ಕೊಡುವ ಶಕ್ತಿ ಇದೆಯೇ ಇಲ್ಲವೇ ಎಂಬ ಪರಿಜ್ಞಾನವಿಲ್ಲದೆ ತೆರಿಗೆಯಹೇರೋಣವಾದರೆ ವರ್ತಕ ವಾಣಿಜ್ಯದ ಅಭಿವೃದ್ಧಿ ಎಂತಾಗಬೇಕು.

ನೀವು ಸಾವಕಾಶವಾಗಿ ಎಲ್ಲವನ್ನೂ ಸಾಧಿಸಿರಿ. ಕರ್ನಾಟಕ ಏಕೀಕರಣವು ದೂರವಿಲ್ಲ. ಬಳ್ಳಾರಿಯಾದರೂ ಮಂಡ್ಯ ಜಿಲ್ಲೆಯಂತೆ ಸಮೃದ್ಧವಾಗುವುದರಲ್ಲಿ ಸಂಶಯವಿಲ್ಲೆಂದರು.

ಶ್ರಿ ಬಿ. ಎಂ. ರೇವಣಸಿದ್ದಯ್ಯನವರು ವಂದನಾರ್ಪಣೆ ಮಾಡಿದರು.

ಸಮಾರಂಭವು ಯಶಸ್ವಿಯಾಗಲೆಂದು ಶ್ರೀಗಳಾದ ಕಡಿದಾಳ್ ಮಂಜಪ್ಪ ಭಾವ್ಯಂ. ಡೆಲ್ಲಿಯಿಂದ ಕರ್ಮರ್ಕರ್, ಕೆ. ಶಿ. ರೆಡ್ಡಿಯವರು ಸಂದೇಶ ಕಳುಹಿಸಿದ್ದರು.

ಆನಂದದಲ್ಲಿ ಅತಿದೊಡ್ಡ ಹಾಲಿನ ಕೇಂದ್ರ

ರಾಷ್ಟ್ರಪತಿಗಳ ಹಸ್ತದಿಂದ ಶಂಕುಸ್ಥಾಪನೆ

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಕಳೆದ ನವೆಂಬರ 15 ರಂದು ಆನಂದದಲ್ಲಿ ಖೇಡಾ ಜಿಲ್ಲಾ ಹಾಲಿನುತ್ಪಾದಕರ ಸಹಕಾರಿ ಸಂಘದವರು ಕಟ್ಟಲಿರುವ ಹೊಸ ಡೇರಿ ಕಟ್ಟಡಗಳ ಅಡಿಗಲ್ಲನ್ನಿಟ್ಟರು. ಭಾರತದಲ್ಲಿಯೇ ಅತಿ ಬೊಡ್ಡದಾಗುವ ಈ ಹಾಲಿನ ಹಟ್ಟಿ (ಡೇರಿ) ಯು ಪೂರ್ಣಗೊಂಡ ನಂತರದಿನಾಲು 3ಲಕ್ಷ ಪೌಂಡು ಹಾಲು ಪಾಶ್ಚರೀಕರಿಸುವದು, 10 ಸಾವಿರ ಪೌಂಡು ಬೆಣ್ಣೆ-ತುಪ್ಪಗಳನ್ನು ತಯಾರಿಸುವದು ಹಾಗು ಭಾರತದಲ್ಲಿಯೇ ಮೊಟ್ಟಮೊದಲನೆಯ ಬಾರಿಗೆ ಹಾಲಿನ ಪುಡಿ ಮುಂತಾದ ಹಲವಾರು ಬಗೆಯ ಹಾಲಿನ ಸರಕುಗಳ ಉತ್ಪಾದನೆಯನ್ನು ಪ್ರಾರಂಭಿಸುವದು.

ನಮ್ಮ ದೇಶದಲ್ಲಿಯ ಒಕ್ಕಲುತನದ ಪ್ರಗತಿಯು ಎಷ್ಟೋ ಮಟ್ಟಿಗೆ ಪಶು ಸಂಪತ್ತಿನ ಸುಯೋಗ್ಯ ಉಪಯೋಗದ ಮೇಲೆ ಅವಲಂಬಿಸಿದೆ ಎಂದು ರಾಷ್ಟ್ರಪತಿಗಳು ನುಡಿದರು. ನಮ್ಮ ಒಕ್ಕಲುತನದ ದುಡಿಮೆಯ ಬಹುಭಾಗ ಎತ್ತುಗಳ ಮೇಲೆ ಅವಲಂಬಿಸಿದೆಯಷ್ಟೇ ಅಲ್ಲದೆ ಭೂಮಿಗೆ ಬೆಲೆಯುಳ್ಳ ಗೊಬ್ಬರವು ಕೂಡ ದನಗಳಿಂದಲೇ ದೊರೆಯುತ್ತದೆ. ಗೋವನ್ನು ಗೌರವಿಸುವ ನಿಜವಾದ ರೀತಿಯೆಂದರೆ ಅದರ ತಳಿಯನ್ನು ಸುಧಾರಿಸುವುದು ಹಾಗು ಅದನ್ನು ಚೆನ್ನಾಗಿ ಸಾಕುವದು ಎಂಬುದನ್ನು ನಮ್ಮ ಜನತೆ ಅರಿಯುತ್ತಿರುವದು ಸಂತೋಷದ ಸಂಗತಿ. ನಮ್ಮ ಜನರು ಗೋ ಪೂಜೆಯ ಪರಂಪರೆಯನ್ನು ಉಳಿಸಿಕೊಂಡು ಬಂದಿರೇ ವಿನಹ ಅದರ ನಿಜವಾದ ಅರ್ಥವನ್ನು ಅವರು ಅರಿಯುತ್ತಿರಲಿಲ್ಲವೆಂದು ರಾಷ್ಟ್ರಪತಿಗಳು ಹೇಳಿದರು.

ಖೇಡಾ ಹಾಲಿನುತ್ಪಾದಕರ ಸಹಕಾರಿ ಸಂಘವು ಸಾಧಿಸಿದ ಯಶಸ್ಸಿಗಾಗಿ ರಾಷ್ಟ್ರಪತಿಗಳು ಅದನ್ನು ಹೊಗಳಿದರಲ್ಲದೆ ಈ ಯಶಸ್ಸಿಗೆ ನೆರವಾದ ಅಂತರಾಷ್ಟ್ರೀಯ ಜಿಕ್ಕ ಮಕ್ಕಳ ಅವಸರದ ನಿಧಿ (ಯುನಿಸೆಫ್) ಮತ್ತು ನ್ಯೂಝಿಲ್ಯಾಂಡ ಸರಕಾರ ಇವನ್ನೂ ಸಂಘದ ಉತ್ತಮ ಆಡಳಿತಗಾರರನ್ನು ಅಭಿನಂದಿಸಿದರು.

ಪ್ರಧಾನ ಮಂತ್ರಿಗಳ ಸಂದೇಶ

ಹೊಸ ಡೇರಿಯ ಕೋನಶಿಲಾ ಸಮಾರಂಭಕ್ಕೆ ಭಾರತದ ಪ್ರಧಾನ ಮಂತ್ರಿಗಳು ಈ ಕೆಳಗಿನಂತೆ ಸಂದೇಶ ಕಳಿಸಿದ್ದರು.

"ಆನಂದದಲ್ಲಿ ನಡೆಯುತ್ತಿರುವ ರೀತಿಯಲ್ಲಿ ಹಾಲು ಹಾಗು ಹಾಲಿನ ಸರಕುಗಳ ಉತ್ಪಾದನೆಗೆ ನಾನು ವಿಶೇಷ ಮಹತ್ವವನ್ನೀಯುತ್ತೇನೆ. ಪಶುಸಂರಕ್ಷಣೆಯ ಮತ್ತು ಒಳ್ಳೆಯ ಹಾಲಿನ ಉತ್ಪಾದನೆಯ ಸಮಸ್ಯೆಗಳೆರಡಕ್ಕೂ ಇದು ತೀರ ಸರಿಯಾದ ಪರಿಹಾರ ಮಾರ್ಗವಾಗಿದೆ.

"ಹಾಲಿನ ಮಹತಿಯನ್ನು ಅರಿತಿರುವ ಹಾಗು ಅಕಳನ್ನು ಪರಮ ಗೌರವದಿಂದ ನೋಡುವ ಭಾರತದಂಥ ದೇಶದಲ್ಲಿಯೇ ಹಾಲಿನ ಪ್ರಮಾಣ ಹಾಗು ಗುಣಗಳೆರಡು ಕೀಳು ಮಟ್ಟದಲ್ಲಿರುವದು ಮತ್ತು ದನಗಳ ಮಸ್ಥಿತಿಗೀಡಾಗಿರುವದು ಒಂದು ನಿಚಿತ್ರವಾದ ವಿಷಯವಾಗಿದೆ. ಯುರೋಪು ಅಮೇರಿಕೆಗಳಲ್ಲಿ ಎಲ್ಲಿ ನೋಡಿದರೂ ತುಂಬ ಹಾಲುಕೊಡುವ ದೊಡ್ಡ ದೊಡ್ಡ ಆಕಳುಗಳು ಕಣ್ಣಿಗೆ ಬೀಳುತ್ತವೆ. ಅತ್ಯಂತಿಕ ದಕ್ಷತೆ ವಹಿಸಿ ಅವನ್ನು ಅವರು ನೋಡಿಕೊಳ್ಳುತ್ತಾರೆ. ಒಳ್ಳೆಯ ಹಾಲು ಅಗ್ಗದರದಿಂದ ದೊರೆಯುತ್ತದೆ. ಭಾರತದ ಪೂರ್ವಕ್ಕೆ ಆಂದರೆ ಬ್ರಹ್ಮದೇಶ, ಮಲಾಯಾ, ಚೀನ ಇತ್ಯಾದಿ ಕೆಲವು ದೇಶಗಳಲ್ಲಿಯ ಜನರು ಹಾಲನ್ನು ಹಾಗು ಹಾಲಿನ ವಸ್ತುಗಳನ್ನು ಉಪಯೋಗಿಸುವದೇ ಇಲ್ಲ, ಇಷ್ಟೇ ಅಲ್ಲ, ಅವರಿಗೆ ಅವು ಸೇರುವದೇ ಇಲ್ಲ. ಆ ದೇಶಗಳಲ್ಲಿ ಏದೇ ಶೀಯರು ಮಾತ್ರ ಹಾಲನ್ನು ಬಳಸುತ್ತಾರೆ.

ಮೂಲಭೂತ ದೋಷ

"ಭಾರತದಲ್ಲಿ ದನಗಳು ಒಳ್ಳೆಯ ಸ್ಥಿತಿಯಲ್ಲಿರಬಹುದು ಹಾಗು ಅವುಗಳಿಗೆ ವಿಶೇಷ ಆರೈಕೆ ದೊರೆಯುತ್ತಿರಬಹುದೆಂದು ಹೊರಗಿನವರು ಭಾವಿಸಬಹುದು. ಶುದ್ಧವಾದ ಹಾಲು ಅಗ್ಗದರದಿರಂದ ಎಷ್ಟುಬೇಕಮ್ಮು ಇಲ್ಲಿ ದೊರೆಯುತ್ತಿರಬೇಕೆಂಬ ಕಲ್ಪನೆಯೂ ಅವರಿಗುಂಟಾಗಬಹುದು. ಆದರೆ ವಸ್ತುಸ್ಥಿತಿ ವಿಪರೀತವಾಗಿದೆ. ಇಷ್ಟೆಲ್ಲ ಗೋವಾಲೆ ಹಾಗು ಪಾಂಡರ ಪೋಳಗಳಿದ್ದೂ ನಮ್ಮಲ್ಲಿಯಷ್ಟು ದನಗಳು ನಿರ್ಲ

(1 ನೇ ಪುಟ ನೋಡಿ)

ಆನಂದದಲ್ಲಿ ಅತಿದೊಡ್ಡ ಹಾಲಿನ ಕೇಂದ್ರ

ಕಳೆದ ಪುಟದಿಂದ

ಕ್ಷಿಸಲ್ಪಡುತ್ತಿರುವ ದೇಶವು ಜಗತ್ತಿನಲ್ಲಿ ಬೇರೊಂದಿರಲಾರದು ಹಾಲಿನ ಬಳಕೆಯ ಪ್ರಮಾಣವೂ ನಮ್ಮಲ್ಲಿ ತೀರ ಕಡಿಮೆಯಿದೆ. ಬಹುಶಃ ಪಂಜಾಬೊಂದನ್ನು ಹೊರತುಪಡಿಸಿ ಉದ್ದಿಂದ ಈ ಸಮಸ್ಯೆಯತ್ತ ನಾವು ನೋಡುತ್ತಿರುವ ದೃಷ್ಟಿಕೋನದಲ್ಲಿಯೇ ಎನೋ ಮೂಲಭೂತ ದೋಷವಿರಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಗೋ ಹತ್ಯೆಯನ್ನು ನಿಲ್ಲಿಸುವ ಕುರಿತ ಆಂದೋಲನಗಳಿಗೆ ಭಾವನಾತ್ಮಕ ಜೆಲೆಯಿದ್ದಿಶೇ ಹೊರತು ಇತರ ಯಾವ ಅರ್ಥವೂ ಅವಕ್ಕಿಲ್ಲ. ಬದಲಿಗೆ ಸಮಸ್ಯೆಯತ್ತ ರಚನಾತ್ಮಕ ದೃಷ್ಟಿಯಿಂದ ನೋಡಿದರೆ ಇಂಥ ಆಂದೋಲನಗಳು ಅಪಾಯಕಾರಿಯಾಗಿವೆಂನೆನಿಸಬಹುದು. ಇಪ್ಪಿಲ್ಲದರ ಪರಿಣಾಮವೆಂದರೆ ನಮ್ಮ ಪಶು ಸಂಪತ್ತಿನ ಸ್ಥಿತಿ ಬರುಬರುತ್ತ ಕೊಡುತ್ತಲೇ ನಡೆದಿದೆ. ದೇಶದ ದೃಷ್ಟಿಯಿಂದ ಇದು ದೊಡ್ಡ ಕೇಡು.

"ಈ ಸಂಬಂಧದಲ್ಲಿ ದೋಷದ ಅತಿ ದೊಡ್ಡ ಪಾಲು ಮುಂಬಯಿ, ಕಲಕತ್ತೆಗಳಂಥ ದೊಡ್ಡ ನಗರಗಳಿಗೆ ಮತ್ತು ಇತರ ಕೆಲವು ನಗರಗಳಿಗೆ ನೇರಿನೆ. ಆದ್ದರಿಂದ ಈ ಪ್ರಶ್ನೆಯನ್ನು ನಾವು ಸಮಾಧಾನಚಿತ್ತದಿಂದ, ನಿರ್ವಿಕಾರ ದೃಷ್ಟಿಯಿಂದ ಹಾಗು ಸುಧಾರಣೆಯನ್ನು ಸಾಧಿಸುವ ಉದ್ದೇಶದಿಂದ ಬಿಡಿಸಲೆತ್ನಿಸಬೇಕು.

"ಮುಂಬಯಿಯಲ್ಲಿ ಆರಿ ಹೈನಿನ ವ ಸಾಹತು ಇಂಥ ರಚನಾತ್ಮಕ ವಿಧಾನದ ಒಂದು ಮಾದರಿಯಾಗಿದ್ದು ಅದು ಆತ್ಯಂತ ಮನೋವೇಧಕವಾಗಿದೆ. ಕೆಲವು ದಿನಗಳ ಹಿಂದೆ ಪಶ್ಚಿಮ ಬಂಗಾಲದಲ್ಲಿಯು ಒಂದು ಡೇರಿ ಫಾರ್ಮಿಗೆ ನಾನು ಭೆಟ್ಟಿ ಕೊಟ್ಟೆ. ಅದೂಕೂಡ ನನಗೆ ಚಿತ್ತಾಕರ್ಷಕವೆನಿಸಿತು. ನಮ್ಮ ಒಂದು ಮಹತ್ವದ ಸಮಸ್ಯೆಯತ್ತ ನೋಡುವ ಈ ವಿಧಾಯಕ ದಾರಿಯ ಉದಾಹರಣೆಗಳು ಇತರರಿಗೂ ಮಾರ್ಗದರ್ಶಿಯಾಗುವವೆಂದು ನಾನು ಆಶಿಸುತ್ತೇನೆ. ಆದರಲ್ಲಿಯೂ ವಿಶೇಷವಾಗಿ ರೈತರು ಈ ಸಹಕಾರಿ ಮುನ್ನೋಟ್ಟದಕ ಸಂಘವನ್ನು ಕಟ್ಟಿಕೊಂಡದ್ದು ನೋಡಿ ನನಗೆ ಸಂತೋಷವೆನಿಸುತ್ತದೆ.

ಪ್ರಧಾನ ಮಂತ್ರಿ ಶ್ರೀ ನೆಹರೂ ಅವರ ಈ ಸಂದರ್ಭದಲ್ಲಿ ಕಳಿಸಿದ ಸಂದೇಶದಲ್ಲಿ ಆನಂದ ಹಾಗು ಮುಂಬಯಿ ಹಾಲಿನ ಪೂರೈಕೆ ಯೋಜನೆಗಳನ್ನು ಶ್ಲಾಘಿಸುತ್ತ ಹೀಗೆ ಹೇಳಿವ್ವಾರೆ. "ನಮ್ಮಲ್ಲಿ ಎಷ್ಟೋ ಗೋಶಾಲೆ ಹಾಗು ಪಾಂಜರ ಪೋಳಗಳಿದ್ದು ಕೂಡ, ದನಕರುಗಳನ್ನು ಭಾರತವು ದುರ್ಲಕ್ಷಿಸಿದಷ್ಟು ಜಗತ್ತಿನ ಮತ್ತಾವ ದೇಶವೂ ದುರ್ಲಕ್ಷಿಸಿಲ್ಲ ಹಾಲಿನ ಸರಾಸರಿ ಬಳಕೆಯ ಪ್ರಮಾಣವೂ ಇಲ್ಲಿಯ ಪುಟಪತ್ತಿಲ್ಲಿಯೂ ಕೀಳು ಮಟ್ಟದಲ್ಲಿಲ್ಲ."

ಆನಂದ ಯೋಜನೆ.

ಆನಂದದಲ್ಲಿ ಈ ಹೊಸ ಪೈನಪ ಯೋಜನೆಗೆ ಒಟ್ಟು 40ಲಕ್ಷ ರೂ. ವೆಚ್ಚತಗಲಿದೆ ಇದರಲ್ಲಿಯ ನೆಟ್ಟಿನ ಭಾಗವು ಅಂದರೆ ಸುಮಾರು 16,00,000 ರೂಗಳು ಡೇರಿ ಯಂತ್ರೋಪಕರಣಗಳಿಗಾಗಿ ವೆಚ್ಚವಾಗುವುದು. ಸುಮಾರು 12,00,000 ರೂಗಳು ಡೇರಿಕಟ್ಟಡಗಳಿಗಾಗಿ ತಗಲುವವು.

ಈ ಯೋಜನೆಯ ವೆಚ್ಚವನ್ನು ನಾಲ್ಕು ಭಿನ್ನ ಭಿನ್ನ ಸಾಧನಗಳ ಮುಖಾಂತರ ಒದಗಿಸಲಾಗುವದು. ಸಹಕಾರಿ ಸಂಘವು ಸುಮಾರು 19,40,000 ರೂ.ಗಳನ್ನು ಇದಕ್ಕಾಗಿ ಕೂಡಿಸಿದೆ. ಇದಲ್ಲದೆ ಮುಂಬಯಿ ಸರಕಾರವು ಸಂಘಕ್ಕೆ 10,00,000 ರೂ.ಗಳ ಸಾಲನೀಡುವದು. ಸಂಯುಕ್ತ ರಾಷ್ಟ್ರ ಸಂಘದ ಅಂತರರಾಷ್ಟ್ರೀಯ ಮಕ್ಕಳ ಅವಸರದ ನಿಧಿಯು 8,00,000 ರೂ. ಗಳನ್ನು ಈ ಯೋಜನೆ ಒದಗಿಸಲಿದೆಯಲ್ಲದೆ ನ್ಯೂಝಿಲ್ಯಾಂಡ ಸರಕಾರದವರು ಡೇರಿ ಉಪಕರಣಗಳನ್ನು ಪೂರೈಸುವುದರ ಮೂಲಕ ಸುಮಾರು 2,00,000 ರೂ. ಗಳವರೆಗೆ ಸಹಾಯನೀಡಲಿದ್ದಾರೆ. ಡೇರಿ ಯಂತ್ರೋಪಕರಣಗಳ ವೆಚ್ಚದ ಅರ್ಧದಷ್ಟನ್ನು ಆ ಸರಕಾರವು ಸಂಘಕ್ಕೆ ಪುಕ್ಕಟೆಯಾಗಿ ಕೊಡಲಿದ್ದು ಉಳಿದರ್ಧವನ್ನು ಬಡ್ಡಿಯಿಲ್ಲದ ಸಾಲವಾಗಿ ನೀಡುವುದು.

ಯಂತ್ರೋಪಕರಣಗಳೆಲ್ಲ ಪೂರ್ಣ ಸಿದ್ಧವಾದನಂತರ ಈ ಡೇರಿಯು ಪ್ರತಿದಿನ 3,00,000 ಪೌಂಡು ಹಾಲನ್ನು ವಾಶ್ಚರೀಕರಿಸುವದು, 10,000 ಪೌಂಡು ಬೆಣ್ಣೆ ಹಾಗು ತುಪ್ಪಗಳನ್ನು ತಯಾರಿಸುವದು ಹಾಗು 12,500 ಪೌಂಡು ಹಾಲಿನ ಪುಡಿಯನ್ನೂ 1,200 ಪೌಂಡು ಕ್ಯಾಸೀನನ್ನೂ (ಹಾಲು ಗಿಣ್ಣದ ಸತ್ವ) ಸಿದ್ಧಗೊಳಿಸುವದು. ಇದಲ್ಲದೆ ಗಟ್ಟಿ ಗೊಳಿಸಿದ ಹಾಲು, ಕೆಡದಂಥ ಕೆನೆ, ಮತ್ತು ಮಕ್ಕಳ ಆಹಾರ ವಸ್ತುಗಳನ್ನು ತಯಾರಿಸುವ ವ್ಯವಸ್ಥೆಯನ್ನೂ ಈ ಕಾರಖಾನೆಯಲ್ಲಿ ಮಾಡಲಾಗುವದು. ಭಾರತವಲ್ಲಿ ಇಂಥ ಹಾಲಿನ ಪದಾರ್ಥಗಳು ತಯಾರಾಗುವದು ಇದೇ ಮೊದಲನೆಯ ಸಲವಾಗಿದೆ.

ಅಂತರರಾಷ್ಟ್ರೀಯ ಮಕ್ಕಳ ನಿಧಿಯಿಂದ ಪೊರೆಯುವ 8,00.000 ರೂ ಆರ್ಥಿಕ ಸಹಾಯಕ್ಕೆ ಪ್ರತಿಯಾಗಿ ಸಂಘವು ಖೇಡಾ ಜಿಲ್ಲೆಯಲ್ಲಿಯ ಬಾಲಕರಿಗೆ ಹಾಗು ಗರ್ಭಿಣಿಯರಿಗೆ 12,00,000 ರೂ. ಬೆಲೆಯ ಹಾಲನ್ನು ಪುಕ್ಕಟೆಯಾಗಿ ಪೂರೈಸುವ ಹೊಣೆಯನ್ನು ಹೊತ್ತುಕೊಂಡಿದೆ.

ಖೇಡಾ ಜಿಲ್ಲಾ ಹಾಲಿನುತ್ಪಾದಕರ ಸಹಕಾರಿ ಸಂಘವು 1947 ರಲ್ಲಿ ದಿವಂಗತ ಸರದಾರ ವಲ್ಲಭಭಾಯ ಪಟೇಲರ ಪ್ರೇರಣೆಯಿಂದ ಜನ್ಮತಾಳಿತು. ಹಾಲಿನ ವ್ಯವಹಾರದಲ್ಲಿಯ ಮಧ್ಯಸ್ಥರನ್ನು ದೂರಗೊಳಿಸುವ ಉದ್ದೇಶದಿಂದ ಹುಟ್ಟಿ ಈ ಸಂಘವು 1948ರಲ್ಲಿ ಹಾಲನ್ನು ಉಪಚರಿಸುವ (ಪ್ರೊಸೆಸಿಂಗ) ಕಾರ್ಯವನ್ನು ಪ್ರಾರಂಭಿಸಿತು. ಅಂದಿನಿಂದ ಈ ವರೆಗಿನ ಆರು ವರುಷಗಳ ಅವಧಿಯಲ್ಲಿ ಸಂಘದ ಹಾಲಿನ ವ್ಯವಹಾರವು ದಿನಕ್ಕೆ 500 ಪೌಂಡಿನಿಂದ 1,00,000 ಪೌಂಡುಗಳಿಗೇರಿದೆ. ಅದರಂತೆಯೇ ಸಂಘದ ಸದಸ್ಯರ ಸಂಖ್ಯೆಯು 900 ರಿಂದ 18,000 ಕ್ಕೂ ಹೆಚ್ಚಾಗಿ ಬೆಳೆದಿದೆಯಲ್ಲದೆ ಅದರ ಆಸ್ತಿಯು 40,000 ರೂ. ಯಿಂದ 22,00,000 ರೂ. ಗಳಗೇರಿದೆ.

ಚಿಕ್ಕಮಗಳೂರು ಜಿಲ್ಲಾ ಹರಿಜನ ಸಮ್ಮೇಳನ

ಚಿಕ್ಕಮಗಳೂರು ಜಿಲ್ಲೆಯ ಹರಿಜನರ ಎಂಟನೇ ವಾರ್ಷಿಕ ಅಧಿವೇಶನವು 24 ರಂದು ಶುಕ್ರವಾರ ಕ್ಯಾಟೆಲ್ ಪೋಪೆಂ ಡಾಲಿನಲ್ಲಿ ಶಾಸನ ಸಭಾ ಸದಸ್ಯ ಶ್ರಿ ಬಿ. ಎಂ. ಶೀನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ದೆವಿನ್ಯೂ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪನವರು ಈ ಸಮಾರಂಭವನ್ನು ಉದ್ಘಾಟಿಸುವರು.

ಬಳ್ಳಾರಿ

ಡೆ. ಕ. ರವರ ಪ್ರೆಸ್ ಕಾನ್ಫರೆನ್ಸ್

ಬಳ್ಳಾರಿ ಡೆಪುಟಿ ಕಮೀಶನರ್ ಶ್ರಿ ಕೆ. ವೇಪಗಿರಿರಾಯರು ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಈ ಕೆಳಗಿನಂಶಗಳನ್ನು ತಿಳಿಸಿದರು.

"ಜಿಲ್ಲೆಯ ರುತುಮಾನ ಪರಿಸ್ಥಿತಿಯು ಚನ್ನಾಗಿದೆ. ಮಾರ್ಕೆಟ್‌ಗಳಲ್ಲಿ ಧಾನ್ಯದ ಕೊರತೆಯಾಗಲಿ, ಏರಿಳಿತಗಳಾಗಲಿ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ 162 ಭಾವಿಗಳನ್ನು ಮುಂಜೂರು ಮಾಡಲಾಗಿದೆ. ಈ ವರ್ಷದವು 115 ಭಾವಿಗಳು, ಇವುಗಳಲ್ಲಿ 17 ಭಾವಿಗಳು ಹರಿಜನರಿಗಾಗಿವೆ. ಒಟ್ಟಿನಲ್ಲಿ 3,31,600 ರೂ. ಈ ವರ್ಷಕ್ಕಾಗಿ ವೆಚ್ಚವಾಗಿದೆ. ಈ ಹಿಂದಿನ ವರ್ಷದ ಅಂದಾಜು ಪಟ್ಟಿಗಳನ್ನು ಹೋಲಿಸಿದರೆ ಇದು ಹೆಚ್ಚಿನದೆಂಬುದು ವ್ಯಕ್ತಪಡುತ್ತದೆ.

ಇತರ ಅಭಿವೃದ್ಧಿ ಕಾರ್ಯಗಳಿಗಾಗಿ, 1,49,350 ರೂ. ಈ ವರ್ಷ ವೆಚ್ಚವಾಗಲಿದೆ. ಕೊಟ್ಟೂರಿನಲ್ಲಿ ಪ್ರಸೂತಿ ಕೇಂದ್ರದ ಕಟ್ಟಡಕ್ಕೆ 20 ಸಾವಿರ ರೂ. ಕೊಟ್ಟೂರಿನ ಓವರ್ ಹೆಡ್ ಟ್ಯಾಂಕಿಗೆ 10 ಸಾವಿರ ರೂ. ಉಜ್ಜಿನಿ ಬಸ್ ಸ್ಟ್ಯಾಂಡ್‌ಗಾಗಿ 10 ಸಾವಿರ, ಹಡಗಲಿ ಪ್ರಸೂತಿ ಕೇಂದ್ರದ ಕಟ್ಟಡಕ್ಕೆ 10 ಸಾವಿರ ರೂ. ಪಾಪಿನಾಯಕನಹಳ್ಳಿ ವಾಚನಾಲಯಕ್ಕೆ 5 ಸಾವಿರ ರೂ. ಕಾಮಲಾಪುರದಲ್ಲಿ 3 ಕಲ್ವರ್ಟ್‌ಗಳಿಗಾಗಿ 4350/-. ಸಿರುಗುಪ್ಪೆ ವೆಟರ್ನರಿ ಕಟ್ಟಡಕ್ಕೆ 10 ಸಾವಿರ ರೂ. ಕಂಪ್ಲಿಯಲ್ಲಿ ರಸ್ತೆಗಳಿಗಾಗಿ 5 ಸಾವಿರ ರೂ. ಹಜ್ಜೂಳ್ಳಿ ನಿಡಲ್ ಸ್ಕೂಲಿಗೆ 20 ಸಾವಿರ, ಕುಡಿತಿನಿ ಆಸ್ಪತ್ರೆಗೆ 15 ಸಾವಿರ ರೂ ಸಂಗನಕಲ್ ರೀಡಿಂಗ್ ರೂಂಗೆ 10 ಸಾವಿರ, ಬಳ್ಳಾರಿ ಶ್ರೀರಾಂಪುರದಲ್ಲಿ ಪ್ರಾಥಮಿಕ ಶಾಲಾ ಕಟ್ಟಡಕ್ಕೆ 14 ಸಾವಿರ ರೂ.ಗಳು ವೆಚ್ಚವಾಗಲಿದೆ.

ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಶಾಖೆಯು ತೆರ್ಪಾಟಾಗಿ, 76 ಸಾವಿರ ರೂ. ತೆಗೆದಿಡಲಾಗಿದೆ. ಪ್ರತಿಯೊಂದು ಹೋಬಳಿಗೆ ಒಂದು ಕೋ ಆಪರೇಟಿವ್ ಸೊಸೈಟಿಯಂತೆ 29 ಫಿರ್ಕಾಗಳಲ್ಲಿ 3 ಸಾವಿರ ರೂ. ಶೇರುದಾರರ ಮೊತ್ತ ಮತ್ತು 3 ಸಾವಿರ ರೂ. ಸರ್ಕಾರದ ಸಾಲದಿಂದ ಪ್ರಾರಂಭಿಸಲಾಗುತ್ತೆ. ಈಗಾಗಲೇ ಶೇರ್ ಮೊತ್ತವು 10426 ಗಳಿಗೆ ಬಂದಿದೆ.

ಹರಿಜನಾಭಿವೃದ್ಧಿಗಾಗಿ 41 ಮನೆಗಳಿಗಾಗಿ 300/- ಪ್ರಕಾರ ಕೊಡಲಾಗಿದೆ. ಗೃಹನಿವೇಶನಗಳನ್ನು 37 ಗ್ರಾಮಗಳಲ್ಲಿ ಒದಗಿಸಲಾಗುವ ಪ್ರಯತ್ನ ನಡೆದಿದೆ ಅಸ್ಪೃಶ್ಯತಾ ನಿವಾರಣೆಗಾಗಿ ಸಭೆ, ಅಂತರ್ಜಾತೀಯ ಭೋಜನ, ಶ್ರೀಡೆ ಜಾಥಾ ವಗೈರೆ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸಂಸ್ಕೃತಿ ಪ್ರಚಾರಕ್ಕಾಗಿ 10 ಸಾವಿರ ರೂ. ತೆಗೆದಿಡಲಾಗಿದೆ. 900/- ರೂ. ವೆಚ್ಚವಾಗಿದೆ. ಭಾರತದ ಸ್ವಾತಂತ್ರ್ಯ ಪಡೆದವರು ಕ್ಯಾಸನಕೆರೆಯಿಂದ ಕಾನಾವುಡುಗುವರೆವಿಗೆ ಸುಮಾರು 50 ಸಾವಿರ ರೂ. ಬೆಲೆ ಬಾಳುವ ರಸ್ತೆ ತಯಾರಿಸಿದ್ದಾರೆ.

ಬಳ್ಳಾರಿ ಜಿಲ್ಲೆಗೆ ಖಾದಿ ಮಂಡಿಗಳ ಪಾಲಾಟದ ನಿಗದಿಯು 30ಸಾವಿರ ರೂ. ಇದ್ದು, ಈಗಾಗಲೇ 25 ಸಾವಿರ ವ್ಯಾಪಾರವಾಗಿದೆ. ಖಾದಿಯ ಮಾರಾಟಕ್ಕಾಗಿ ಬೆಂಗಳೂರಿನಿಂದ ವ್ಯಾನ್ ಬರಲಿದೆ. ಜಿಲ್ಲಾ ಬೋರ್ಡಿನವರು ಈ ವರ್ಷ 12 ಪ್ರಾಥಮಿಕ ಶಾಲೆಗಳನ್ನು ಹೊಸದಾಗಿ ಆರಂಭಿಸಿದ್ದಾರೆ.

ಕೈಗಾರಿಕೆಯ ಮುಖಾಂತರ ಶಿಕ್ಷಣ.

ಯಾವದಾದರೊಂದು ಕೈಗಾರಿಕೆ ಅಥವಾ ಉದ್ಯಮದ ಮುಖಾಂತರವೇ ಸಮಗ್ರ ಶಿಕ್ಷಣವನ್ನು ಸಾಗಿಸಬೇಕೆಂದು ನನ್ನ ಬಯಕೆ, ಮಧ್ಯಯುಗದಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಕೈಗಾರಿಕೆಗಳನ್ನೇ ಕಲಿಸಲಾಗುತ್ತಿತ್ತೆಂದು ಕೆಲವರು ಇದಕ್ಕೆ ಆಕ್ಷೇಪಿಸಬಹುದು. ಆದರೆ ಆಗಿನ ವೃತ್ತಿ ತರಬೇತಿಯು ಯಾವದೇ ವೈಪ್ರಜ್ಞಿಕ ಉದ್ದೇಶವನ್ನು ಸಾಧಿಸುತ್ತಿರಲಿಲ್ಲ. ಕೇವಲ ವೃತ್ತಿಗಾಗಿ ವೃತ್ತಿ ಶಿಕ್ಷಣವಿತ್ತೇ ಹೊರತು ಬುದ್ಧಿಯ ವಿಕಾಸವನ್ನೂ ಸಾಧಿಸುವ ಪ್ರಯತ್ನ ಅವರಲ್ಲಿರಲಿಲ್ಲ. ಇಂದಿನ ಯುಗದಲ್ಲಿ ಕೆಲವೊಂದು ವೃತ್ತಿಗಳಿಗಾಗಿಯೇ ಹುಟ್ಟಿದವರು ಕೂಡ ಅವನ್ನು ಮರೆತುಬಿಟ್ಟು ಕಾರಕೂನಿಕೆಗೆ ಇಳಿದಿದ್ದಾರೆ. ಇದು ಗ್ರಾಮೀಣ ಭಾಗಕ್ಕೆ ದೊಡ್ಡ ಹಾನಿ. ಪ್ರತಿಯೊಂದು ಕೈಗಾರಿಕೆಯ ಕಲೆ ಹಾಗು ವಿಜ್ಞಾನವನ್ನು ಪ್ರತ್ಯಕ್ಷ ತರಬೇತಿಯ ಮುಖಾಂತರವೇ ಕಲಿಸಿ ಅನ್ಯೂನ್ಯ ಸಂಪೂರ್ಣ ಶಿಕ್ಷಣವನ್ನು ನೀಡುವಂತೆ ವ್ಯವಸ್ಥಿಸುವದೇ ಇದಕ್ಕೆ ಪರಿಹಾರವಾಗಿದೆ.

ಶಿಕ್ಷಕನ ವೈಚ್ಛವನ್ನು ಆವನ ವಿದ್ಯಾರ್ಥಿಗಳ ದುಡಿಮೆಯ ಉತ್ಪಾದನೆಯಿಂದಲೇ ಬಾಯಿಗೂಡಿಸುವಂತಾಗಬೇಕೆಂಬದು ನನ್ನ ಸ್ಪಷ್ಟಮತ. ಏಕೆಂದರೆ ನಮ್ಮ ನಾಡಿನ ಕೋಟ್ಯವಧಿ ಬಾಲಕರಿಗೆ ಶಿಕ್ಷಣನೀಡಲು ಇವರ ಹೊರತು ಬೇರಾವ ದಾರಿಯೂ ಇಲ್ಲ.

ನನ್ನ ಕಲ್ಪನೆಯ ಇಂಥ ಮೂಲಭೂತ ಶಿಕ್ಷಣದಲ್ಲಿ ಆರೋಗ್ಯ, ಸ್ವಚ್ಛತೆ, ತಮ್ಮ್ಮ ಕೆಲಸ ತಾವೇ ಮಾಡುವದು, ಮನೆಯಲ್ಲಿ ತಾಯಿತಂದೆಗಳಿಗೆ ನೆರವಾಗುವದು ಇತ್ಯಾದಿಗಳ ಪ್ರಾರಂಭಿಕ ತತ್ವಗಳೆಲ್ಲ ಒಳಗೊಂಡಿವೆಯೆಂಬದನ್ನು ನೀವು ಲಕ್ಷಿಸಬೇಕು. ಇಂದಿನ ಹೀಳಿಗೆಯ ಬಾಲಕರಿಗೆ ಸ್ವಚ್ಛತೆ ಸ್ವಾವಲಂಬನೆಗಳ ಅರಿವಿಲ್ಲ, ದೇಹದಿಂದಲೂ ಅಶಕ್ತರಾಗಿದ್ದಾರೆ. ಆದ್ದರಿಂದ ಕವಾಯಿತಿನ ಮುಖಾಂತರ ಕಡ್ಡಾಯವಾಗಿ ಶಾರೀರಕ ಶಿಕ್ಷಣವನ್ನು ಕೊಡಬೇಕೆಂದು ನನ್ನ ಮತ.

.... ಮಹಾತ್ಮಾ ಗಾಂಧಿ ....

ಬಳ್ಳಾರಿ ರೈತರ ಸಂಘ

ಈ ಸಭೆಯು 19-12-54ರ ದಿನ ಏರ್ಪಟ್ಟಿತ್ತು, ಮೆರವಣಿಗೆಯನಂತರ ಸಾಂಬಮೂರ್ತಿ ಮೈದಾನದಲ್ಲಿ ಸಭೆ ಸೇರಿ ಕೆಲ ನಿರ್ಣಯಗಳಾದವು. ಗುಡ್‌ವಿಲ್ ಶ್ಯಾನಿಟೋರಿಯಿಂದ ಡಾಕ್ಟರರಾದ ನಾರಾಯಣರಾಯರು, ಕಾಳ ಬಜಾರದ ಪೋಲೀಸ್‌ರೊಂದಿಗೆ ಕಲೆತು ರೈತರಮೇಲೆ ದೌರ್ಜನ್ಯನಡೆಸಿದುದನ್ನು ವಿಚಾರಿಸಬೇಕು. ಸರ್ಕಾರವು ಬಂಜರು ಭೂಮಿಗಳನ್ನು ಭೂಮಿ ಇಲ್ಲದವರಿಗೆ ಹಂಚಬೇಕು. ಮೈಸೂರು ವಿರೋಧಿ ಪಕ್ಷದ ನಾಯಕರಾದ ಶ್ರೀ ಇಮಾಂರವರಿಗೆ ಈ ಸಮಾಚಾರ ತಿಳಿಸಲು ಒಂದು ಸಮಿತಿಯನ್ನು ರಚಿಸಲಾಯಿತು.

At 'PRABHAT'

FROM **26-12-54**

DAILY 2 SHOWS 6-20 & 9-20 P. M.

Rajkamal Picture Presents.

SUBAH-KA-TARA.

(HINDI)

Starring:— JAYA SHREE, PRADEEP KUMAR, NEELAM, BABY RAJASHREE.

Directed by: V. SHANTMARAM.

Music by: C. RAMACHANDRA.

A branch of the

BANK OF MYSORE LTD.,

Opened in Bellary.

on 18-12-54 at B. C. C. Stores Building
Right wing:- Ground Hall

All Banking transactions conducted.

ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟಿಡ್

ಬಳ್ಳಾರಿ ಶಾಖೆಯು
ಬಳ್ಳಾರಿ ಕೆಂಟ್ರೆಟ್ ಸ್ಟೋರ್ಸ ಕಟ್ಟಡದ ಬಲಭಾಗದಲ್ಲಿ
18—12—54 ನೆಯ ಶುಕ್ರವಾರ ಪ್ರಾರಂಭವಾಯಿತು.
ಎಲ್ಲ ವಿಧವಾದ ಬ್ಯಾಂಕಿಂಗ್ ವ್ಯವಹಾರಗಳು ನಡೆಯುತ್ತವೆ.

ಎಲ್ಲವನ್ನೂ ಶುದ್ಧ
ಪಡಿಸಲು
ಉತ್ತಮವಾದುದು

ಮೈಸೂರು ಸೋಪ್

ತಯಾರಿಸುವವರು
ಗವರ್ನಮೆಂಟ್
ಸೋಪ್ ಫ್ಯಾಕ್ಟರಿ,
ಬೆಂಗಳೂರು.

"ಮೆಂಬರ್, ಐ.ಎಸ್.ಟಿ.ಎಂ.ಎ"

ಚೀಣಾದಲ್ಲಿ ಅಮೇರಿಕನ್ ನಿಯೋಗ ಪ್ರವಾಸಮಾಡಲಿ

ಚೀಣಾ – ಅಮೇರಿಕಾ ಸಂಬಂಧ ಉತ್ತಮಗೊಳಿಸುವ ಸಲುವಾಗಿ ಖಾಸಗಿ ಅಮೇರಿಕನ್ ಪರಿಣೀಲನಾ ನಿಯೋಗವೊಂದು ಚೀಣಾದಲ್ಲಿ ಪ್ರವಾಸ ನಡೆಸಲು ಚೌ-ಎನ್-ಲೈ ಅನುಕೂಲರಾಗಿದ್ದಾರೆ. ಎಂದು ಚೀಣಾ ಭೇಟಿಯಿಂದ ಹಿಂತಿರುಗಿರುವ ಬರ್ಮಾ ಪ್ರಧಾನಿ ಯೂನು ಹೇಳಿದ್ದಾರೆ.

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

NAVA BHARAT, BELLARY.
(Regd.M.No. 4746)

To 27-12-54

Sri._____

Edited Printed & Published by T. B. Keshava Rao, at Nava Bharat Printing Press, Bellary